ಸೋಮವಾರ, ಜುಲೈ 26, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಾರ್ಥನೆ

ಹಿಂದೂ ಕ್ಯಾಲೆಂಡರ್‌ನ ಐದನೇ ತಿಂಗಳಾದ ಶ್ರಾವಣದ (ಸಾವನ್) ಮೊದಲ ದಿನವಾದ ಭಾನುವಾರ ಭಕ್ತರೊಬ್ಬರು ವಾರಾಣಸಿಯ ಗಂಗಾನದಿ ದಡದಲ್ಲಿ ಪ್ರಾರ್ಥನೆ ಸಲ್ಲಿಸಿದರು



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ದಕ್ಷ ಆಡಳಿತಗಾರ ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ನೀಡಿದ ಸಹಕಾರ ಮತ್ತು ಸಮರ್ಥ ಮಾರ್ಗದರ್ಶನದಲ್ಲಿ ಧೀಮಂತ ಹಾಗೂ ಕ್ರಿಯಾಶೀಲ ನಾಯಕರಾದ ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದ ಕರ್ನಾಟಕ ಸರ್ಕಾರವು ಕಳೆದ ಎರಡು ವರ್ಷಗಳ ಅವಧಿಯಲ್ಲಿ ರಾಜ್ಯದ ಪ್ರಗತಿಗೆ ಮತ್ತು ಜನರ ಜೀವನ ಸುಧಾರಣೆಗೆ ಶ್ರಮಿಸುತ್ತಿದ್ದು, ಹಿಂದೆಂದೂ ಕಂಡರಿಯದ ಅತಿವೃಷ್ಟಿ ಮತ್ತು ಜಾಗತಿಕ ಮಹಾಮಾರಿ ಕೋವಿಡ್–19 ಸವಾಲುಗಳ ನಡುವೆ ಅಭಿವೃದ್ಧಿಯನ್ನು ಕಡೆಗಣಿಸದೆ ಆರ್ಥಿಕತೆಯನ್ನು ಉತ್ತಮವಾಗಿ ನಿರ್ವಹಿಸಿ ಎಲ್ಲಾ ಕ್ಷೇತ್ರದಲ್ಲೂ ಗಣನೀಯ ಸಾಧನೆ ಮಾಡಿದೆ.

ಕೋವಿಡ್ ನಿಯಂತ್ರಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಮಾದರಿ ರಾಜ್ಯ:

- ಕೋವಿಡ್ ಸೋಂಕಿತರ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗಳ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಿ, 2150 ವೈದ್ಯರು/ಸಿಬ್ಬಂದಿಗಳ ನೇಮಕ.
- ಕೋವಿಡ್ ನಿಯಂತ್ರಣಕ್ಕಾಗಿ ಗ್ರಾಮ ಮಟ್ಟದಲ್ಲಿ ಕಾರ್ಯಪಡೆ ರಚನೆ.
- ಜಿಲ್ಲಾ ಆಸ್ಪತ್ರೆಗಳಲ್ಲಿ ಕೋವಿಡ್ ಪರೀಕ್ಷಾ ಪ್ರಯೋಗಾಲಯ ಸ್ಥಾಪನೆ, ಆಕ್ಸಿಜನ್ ಉತ್ಪಾದನೆ ಮತ್ತು ಕೋವಿಡ್ ಪರೀಕ್ಷಾ ಸಾಮರ್ಥ್ಯ ಹೆಚ್ಚಳ.
- ಕೋವಿಡ್–19ರ 1ನೇ ಮತ್ತು 2ನೇ ಅಲೆ ಸಂತ್ರಸ್ತರಿಗೆ ರೂ.7422 ಕೋಟಿ ವಿಶೇಷ ಪರಿಹಾರ ಪ್ಯಾಕೇಜ್.
- ಕೋವಿಡ್‌ನಿಂದ ಬಿಪಿಎಲ್ ಕುಟುಂಬದ ಸದಸ್ಯ ಮೃತಪಟ್ಟಲ್ಲಿ ಆ ಕುಟುಂಬಕ್ಕೆ ರೂ.1.00 ಲಕ್ಷ ನೆರವು.
- ಕೋವಿಡ್–19ರ ವಿಷಮ ಪರಿಸ್ಥಿತಿಯಲ್ಲಿಯೂ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿ ರಾಜ್ಯವು ದೇಶದಲ್ಲೇ ಮಾದರಿಯಾಗಿದೆ.
- ರಾಜ್ಯದಲ್ಲಿ ಇಲ್ಲಿಯವರೆಗೆ 2.50 ಕೋಟಿ ಡೋಸ್ ಕೋವಿಡ್ ಲಸಿಕೆ ಉಚಿತವಾಗಿ ನೀಡಲಾಗಿದೆ.
- ರಾಜ್ಯದಲ್ಲಿ ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಸರ್ಕಾರಿ ಆಸ್ಪತ್ರೆಗಳ ಉನ್ನತೀಕರಣ ಹಾಗೂ ಹೊಸ ಆಸ್ಪತ್ರೆಗಳ ನಿರ್ಮಾಣ.
- ಆರೋಗ್ಯ ಕರ್ನಾಟಕ ಯೋಜನೆಯಡಿ 10 ಲಕ್ಷಕ್ಕಿಂತ ಹೆಚ್ಚಿನ ಜನರಿಗೆ ನಗದುರಹಿತ ಚಿಕಿತ್ಸೆ.
- ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಹಾವೇರಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ನೂತನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಪ್ರಾರಂಭ

ಕೃಷಿ ಪ್ರವರ್ಧನೆಗೆ ನೆರವು:

- ಕೃಷಿಕರ ಆದಾಯ ಹೆಚ್ಚಳಕ್ಕೆ ಹಲವು ಉಪಕ್ರಮಗಳು.
- ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ಕ್ಕೆ ತಿದ್ದುಪಡಿ ಮೂಲಕ "ತನ್ನ ಬೆಳೆ ತನ್ನ ಹಕ್ಕು ತನ್ನ ಬೆಲೆ" ತತ್ವದಂತೆ ರೈತರು ತಾವು ಬೆಳೆದ ಬೆಳೆಗಳನ್ನು ಮುಕ್ತವಾಗಿ ಮಾರಾಟ ಮಾಡಲು ಅವಕಾಶ.
- ರಾಜ್ಯದ ಬಂದರುಗಳ ನಿರ್ಮಾಣಕ್ಕೆ ಆದ್ಯತೆ ಹಾಗೂ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ಡೆಲಿವರಿ ಪಾಯಿಂಟ್‌ನಲ್ಲೇ ಕರರಹಿತ ದರದಲ್ಲಿ ಡೀಸೆಲ್ ವಿತರಣೆಗೆ ಕ್ರಮ.

ಆರ್ಥಿಕ ಬಲವರ್ಧನೆಗೆ ಒತ್ತು:

- ಸಮೃದ್ಧ ಕರ್ನಾಟಕ ನಿರ್ಮಾಣಕ್ಕೆ ಸಂಕಲ್ಪ, ಹೂಡಿಕೆದಾರರ ಸ್ನೇಹಿ ವಾತಾವರಣ ನಿರ್ಮಾಣ.
- ಬಂಡವಾಳ ಆಕರ್ಷಣೆಯಲ್ಲಿ 2020ನೇ ಸಾಲಿನಲ್ಲಿ ಕರ್ನಾಟಕಕ್ಕೆ 1ನೇ ಸ್ಥಾನ, "ನೂತನ ಕೈಗಾರಿಕಾ ನೀತಿ 2020–25" ಜಾರಿ. ಕೈಗಾರಿಕೆಗಳಿಗೆ ರೂ.1.62 ಲಕ್ಷ ಕೋಟಿ ಬಂಡವಾಳ ಹೂಡಿಕೆಯ ಪ್ರಸ್ತಾವನೆಗಳ ಅನುಮೋದನೆ.
- ರಾಷ್ಟ್ರದಲ್ಲಿ Startup Ranking ನಲ್ಲಿ ಸತತ ಎರಡನೇ ಬಾರಿ ಅತ್ಯುತ್ತಮ ಕಾರ್ಯನಿರ್ವಹಣೆಯ ರಾಜ್ಯ ಎಂದು ಘೋಷಣೆ.
- ಕೇಂದ್ರ ಸರ್ಕಾರದ NITI ಆಯೋಗದಿಂದ ಬಿಡುಗಡೆ ಮಾಡಲಾಗಿರುವ India Innovation Index 2019 ಹಾಗೂ 2020ರಲ್ಲಿ ಕರ್ನಾಟಕ ರಾಜ್ಯ ಪ್ರಥಮ ಸ್ಥಾನ.

ಕರ್ನಾಟಕ ಸಮಗ್ರ ಅಭಿವೃದ್ಧಿ:

- ರಾಜ್ಯದ ವಿಮಾನಯಾನದಲ್ಲಿ ಕ್ರಾಂತಿ, ಕಲಬುರಗಿ ಹಾಗೂ ಬೀದರ್ ವಿಮಾನ ನಿಲ್ದಾಣದಲ್ಲಿ ಸೇವೆ ಆರಂಭ. ಶಿವಮೊಗ್ಗ ಹಾಗೂ ವಿಜಯಪುರ ವಿಮಾನ ನಿಲ್ದಾಣಗಳ ಕಾಮಗಾರಿ ಪ್ರಗತಿಯಲ್ಲಿದೆ.
- ಬೆಂಗಳೂರು ಉಪನಗರ ರೈಲು ಯೋಜನೆ ಹಾಗೂ ನಮ್ಮ ಮೆಟ್ರೋ ಹಂತ–2ಎಗೆ ಚಾಲನೆ.
- ಬೆಂಗಳೂರು ಸಮಗ್ರ ಅಭಿವೃದ್ಧಿಗಾಗಿ "ಬೆಂಗಳೂರು ಮಿಷನ್–2022" ಯೋಜನೆಗೆ ಚಾಲನೆ.
- ಅತ್ಯುತ್ತಮ ವಾಸಯೋಗ್ಯ ನಗರಗಳಲ್ಲಿ ಬೆಂಗಳೂರು ದೇಶದಲ್ಲೇ ನಂಬರ್ 1.
- ಬೆಂಗಳೂರು ಸೇರಿದಂತೆ ಇತರೆ ನಗರಗಳ ಸ್ಮಾರ್ಟ್ ಸಿಟಿ ಯೋಜನೆ ಅನುಷ್ಠಾನದಲ್ಲಿ ಆರನೇ ಸ್ಥಾನಕ್ಕೇರಿದ ಕರ್ನಾಟಕ.
- ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ 500 ಕೋಟಿ ರೂಪಾಯಿ ವೆಚ್ಚದಲ್ಲಿ "ಅನುಭವ ಮಂಟಪ" ನಿರ್ಮಾಣಕ್ಕೆ ಚಾಲನೆ.
- ಶ್ರೀ ಶಿವಕುಮಾರ ಸ್ವಾಮೀಜಿ ಹಾಗೂ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಹುಟ್ಟೂರುಗಳ ಸಮಗ್ರ ಅಭಿವೃದ್ಧಿಗೆ ಕ್ರಮ.
- ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಪ್ರತಿಮೆ ಹಾಗೂ ಥೀಮ್ ಪಾರ್ಕ್ ನಿರ್ಮಾಣ ಹಂತದಲ್ಲಿವೆ.
- ಹಿಂದುಳಿದ ಸಮುದಾಯಗಳ ಸರ್ವತೋಮುಖ ಅಭಿವೃದ್ಧಿಗಾಗಿ ಒಕ್ಕಲಿಗ, ವೀರಶೈವ ಲಿಂಗಾಯತ, ಕರ್ನಾಟಕ ಕಾಡುಗೊಲ್ಲ, ಮರಾಠ ಅಭಿವೃದ್ಧಿ ನಿಗಮಗಳ ಸ್ಥಾಪನೆ.
- ಕೇಂದ್ರದ ರಾಷ್ಟ್ರೀಯ ಜಲಜೀವನ್ ಮಿಷನ್ ಯೋಜನೆಯಡಿ ರಾಜ್ಯದಲ್ಲಿ 25.17 ಲಕ್ಷ ಮನೆಗಳಿಗೆ ನೀರು ಸಂಪರ್ಕ ವ್ಯವಸ್ಥೆಯ ಗುರಿ.
- ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಫಲಾನುಭವಿಗಳಿಗೆ ಕೇಂದ್ರ ಸರ್ಕಾರದ ರೂ.6,000 ನೆರವಿನೊಂದಿಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿ ರೂ.4,000 ಸೇರಿ ಒಟ್ಟು ರೂ.10,000 ನೆರವು. 2019, 20 ಮತ್ತು 21ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ರೂ.2849.06 ಕೋಟಿ ಮತ್ತು ಕೇಂದ್ರದಿಂದ ರೂ.7103 ಕೋಟಿ ವಿತರಣೆ.
- ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ಆಶ್ರಯದಲ್ಲಿ 2.2 ಮನೆಗಳ ನಿರ್ಮಾಣ ಪೂರ್ಣ. ಮುಂದಿನ 2ವರ್ಷಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ 4 ಲಕ್ಷ ಮನೆಗಳು ಮತ್ತು ನಗರ ಪ್ರದೇಶದಲ್ಲಿ 1 ಲಕ್ಷ ಮನೆಗಳನ್ನು ರೂ.800 ಕೋಟಿಗಳ ವೆಚ್ಚದಲ್ಲಿ ನಿರ್ಮಾಣ.
- ಶಿವಮೊಗ್ಗ–ಶಿಕಾರಿಪುರ–ರಾಣೆಬೆನ್ನೂರು ಹೊಸ ರೈಲು ಮಾರ್ಗ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.
- ಕೆ–ರೈಡ್‌ರಿಂದ ಎರಡು ವಿಭಾಗದ (ಬೈಯಪ್ಪನಹಳ್ಳಿ–ಹೊಸೂರು ಮತ್ತು ಯಶವಂತಪುರ–ಚನ್ನಸಂದ್ರ) ದ್ವಿಪಥ ರೈಲು ಮಾರ್ಗ ಯೋಜನೆಗೆ ಚಾಲನೆ.
- ಪೊಲೀಸ್ ಇಲಾಖೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ 16,397 ವಿವಿಧ ಹುದ್ದೆಗಳಿಗೆ ನೇಮಕಾತಿ ಕ್ರಮ.
- ಪೊಲೀಸ್ ಗೃಹ 2020 ಯೋಜನೆ ಪೂರ್ಣ; ಪೊಲೀಸ್ ಗೃಹ 2025ರಡಿ ರೂ.2,000 ಕೋಟಿ ವೆಚ್ಚದಲ್ಲಿ 10 ಸಾವಿರ ವಸತಿ ಗೃಹ ನಿರ್ಮಾಣಕ್ಕೆ ಚಾಲನೆ.
- ಪೊಲೀಸ್ ವ್ಯವಸ್ಥೆ ಆಧುನೀಕರಣಕ್ಕೆ ಆದ್ಯತೆ; ತುರ್ತು ಸ್ಪಂದನ 112 ಯೋಜನೆಗೆ 625 ವಾಹನಗಳ ಸೇರ್ಪಡೆ.

ಸರ್ಕಾರದ ಸಾರ್ಥಕ ಸೇವೆಯ 2 ವರ್ಷಗಳು

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
–ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸೋಮವಾರ, ಜುಲೈ 26, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 207 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಶಿಕ್ಷಣ
ಮಷೀನ್ ಲರ್ನಿಂಗ್ ವಿಷಯದಲ್ಲಿ ಪರಿಣತಿ ಪಡೆಯಲು ಗಣಿತ ಕೂಡ ಅಗತ್ಯ. ಆದರೆ ಗಣಿತದಲ್ಲಿ ಯಾವ ವಿಷಯ ಆಯ್ಕೆ ಮಾಡಿಕೊಳ್ಳುತ್ತೀರಿ ಎಂಬುದೂ ಮುಖ್ಯವಾಗುತ್ತದೆ.

ಅನುಭವ ಮಂಟಪ ಬಂಡವಾಳ ಕೇಂದ್ರಿತ ಖಾಸಗೀಕರಣದತ್ತ...
‘ಪುಸ್ತಕ ಪ್ರಕಟಣೆ ನಿಲ್ಲಿಸಿ, ಜಿಲ್ಲೆಗಳಲ್ಲಿ ಮಾರಾಟ ವ್ಯವಸ್ಥೆ ಮಾಡಿ’ 7
ಟಿ20 ಸರಣಿಯ ಮೊದಲ ಪಂದ್ಯ: ಭುವನೇಶ್ವರ ಕುಮಾರ್‌ಗೆ 4 ವಿಕೆಟ್
ಕೃಷ್ಣಾ, ತುಂಗಭದ್ರಾ: ಒಳಹರಿವು ಭಾರಿ ಹೆಚ್ಚಳ 6
ಬೆಳಗಿದ ಸೂರ್ಯ: ಭಾರತ ಜಯಭೇರಿ 18

ಪೆಗಾಸಸ್ ‘ಸುಪ್ರೀಂ’ಗೆ ಅರ್ಜಿ

ನವದೆಹಲಿ (ಪಿಟಿಐ): ಪೆಗಾಸಸ್ ಗೂಢಚರ್ಯೆ ಕುರಿತು ಸುಪ್ರೀಂ ಕೋರ್ಟ್ ನೇತೃತ್ವದಲ್ಲಿ ತನಿಖೆಗೆ ಆದೇಶಿಸಬೇಕು ಎಂದು ಕೋರಿ ಸಿಪಿಎಂ ರಾಜ್ಯಸಭಾ ಸದಸ್ಯ ಜಾನ್ ಬ್ರಿಟಾಸ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

‘300 ಭಾರತೀಯರು ಗೂಢ ಚರ್ಯೆಯ ಗುರಿಯಾಗಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. ರಾಜಕಾರಣಿಗಳು, ಸಚಿವರು, ಪತ್ರಕರ್ತರು, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು, ಚುನಾವಣಾ ಆಯುಕ್ತರ ಮೇಲೆ ಗೂಢಚರ್ಯೆ ನಡೆಸಲಾಗಿದೆ ಎನ್ನಲಾಗಿದೆ. ಇದು ಜನರ ಖಾಸಗಿತನದ ಹಕ್ಕು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆ. ಹೀಗಾಗಿ ತನಿಖೆಗೆ ಆದೇಶಿಸಿ’ ಎಂದು ಅವರು ಕೋರಿದ್ದಾರೆ.

ಇನ್ನಷ್ಟು ಸುದ್ದಿಗಳು 10

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ

‘ಇರಿ ಎಂದರೆ ಮುಂದುವರೆಯುತ್ತೇನೆ, ಹೋಗಿ ಎಂದರೆ ರಾಜೀನಾಮೆ ಕೊಡ್ತೇನೆ’

ಸಂದೇಶದ ಸುತ್ತ ಸಂದೇಹದ ಹುತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಬಿಜೆಪಿ ವರಿಷ್ಠರು ಭಾನುವಾರ ತಡ ರಾತ್ರಿಯ ವರೆಗೂ ಯಾವುದೇ ಸಂದೇಶ ರವಾನಿಸಿಲ್ಲ. ವರಿಷ್ಠರ ಸೂಚನೆಗಾಗಿ ಕಾಯುತ್ತಿರುವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ‘ಯಾವುದೇ ಸಂದೇಶ ಬಂದರೂ ತಕ್ಷಣವೇ ಪಾಲಿಸಲು ಸಜ್ಜಾಗಿದ್ದೇನೆ’ ಎಂದು ಪುನರುಚ್ಚರಿಸಿದ್ದಾರೆ.

ಯಡಿಯೂರಪ್ಪ ನೇತೃತ್ವದ ಸರ್ಕಾರ ಇದೇ 26ಕ್ಕೆ ಎರಡು ವರ್ಷಗಳನ್ನು ಪೂರೈಸಲಿದೆ. ನಾಯಕತ್ವಕ್ಕೆ ಸಂಬಂಧಿಸಿದಂತೆ ಭಾನುವಾರ (ಜುಲೈ 25) ವರಿಷ್ಠರಿಂದ ಸಂದೇಶ ಬರಲಿದೆ ಎಂದು ಅವರು ಈ ಹಿಂದೆಯೇ ಹೇಳಿಕೆ ನೀಡಿದ್ದರು. ಹಾಗಿದ್ದರೂ ಭಾನುವಾರ ಬೆಳಿಗ್ಗೆಯಿಂದಲೇ ಬೆಳಗಾವಿ ಜಿಲ್ಲಾ ಪ್ರವಾಸ ಕೈಗೊಂಡು, ಪ್ರವಾಹ ಪರಿಸ್ಥಿತಿ ಅವಲೋಕಿಸಿದ್ದರು. ವರಿಷ್ಠರ ಸಂದೇಶವನ್ನು ಪಾಲಿಸುವುದಾಗಿ ಅಲ್ಲಿಯೂ ಹೇಳಿದ್ದರು.

‘ನಾಯಕತ್ವ ಬದಲಾವಣೆ ಕುರಿತು ಪಕ್ಷದ ವರಿಷ್ಠರಿಂದ ಸಂದೇಶ ಬಂದಿಲ್ಲ’ ಎಂಬುದನ್ನು ಮಾಧ್ಯಮಗಳ ಜತೆ ಹಂಚಿಕೊಳ್ಳುತ್ತಲೇ, ‘ಯಾವ ಬಗೆಯ ಸಂದೇಶ ಬಂದರೂ ಶಿರಸಾವಹಿಸಿ ಪಾಲಿಸಲು ಸಿದ್ಧ’ ಎಂಬುದಾಗಿ ಯಡಿಯೂರಪ್ಪ ಪದೇ ಪದೇ ಹೇಳಿದ್ದು, ಆ ಮೂಲಕ ಮುಖ್ಯಮಂತ್ರಿ ಬದಲಾವಣೆ ಕುರಿತ ಕುತೂಹಲವನ್ನು ಜೀವಂತವಾಗಿ ಇರಿಸಿದ್ದಾರೆ.

ಈ ಎಲ್ಲ ಬೆಳವಣಿಗೆಗಳ ಮಧ್ಯೆಯೇ ಗೋವಾದಲ್ಲಿ ಹೇಳಿಕೆ ನೀಡಿರುವ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು, ಯಡಿಯೂರಪ್ಪ ಕಾರ್ಯವೈಖರಿ ಶ್ಲಾಘಿಸಿದ್ದಾರೆ. ನಾಯಕತ್ವ ಬದಲಾವಣೆಯ ಚರ್ಚೆಯ ನಡುವೆಯೇ ನಡ್ಡಾ ಅವರ ಹೇಳಿಕೆ ನಾನಾ ಬಗೆಯ ವಿಶ್ಲೇಷಣೆ, ವಿಮರ್ಶೆಗೆ ಎಡೆ ಮಾಡಿದೆ.

ಬೆಳಗಾವಿ ಪ್ರವಾಸ ಮುಗಿಸಿ ನಗರಕ್ಕೆ ಹಿಂದಿರುಗಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಯಡಿಯೂರಪ್ಪ, ‘ಭಾನುವಾರ ರಾತ್ರಿ ಅಥವಾ ಸೋಮವಾರ ಬೆಳಿಗ್ಗೆ ಸಂದೇಶ ಬರಬಹುದು ಎಂಬ ನಿರೀಕ್ಷೆ ಇದೆ. ಸಂದೇಶ ಬಂದ ಬಳಿಕ ವರಿಷ್ಠರು ಹೇಳಿದಂತೆ ನಡೆದುಕೊಳ್ಳುವೆ. ಅಧಿಕಾರದಲ್ಲಿ ಮುಂದುವರಿಯಿರಿ ಎಂದರೆ ಮುಖ್ಯಮಂತ್ರಿಯಾಗಿ ಕೆಲಸ ನಿರ್ವಹಿಸಿಕೊಂಡು ಹೋಗುವೆ. ರಾಜೀನಾಮೆಗೆ ಸೂಚಿಸಿದರೆ ತಕ್ಷಣವೇ ಹುದ್ದೆಯಿಂದ ಕೆಳಗೆ ಇಳಿಯುತ್ತೇನೆ ಎಂದರು.

‘ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವ ಕ್ಷಣದವರೆಗೂ ಕೆಲಸ ಮುಂದುವರಿಸುತ್ತೇನೆ. ಸೋಮವಾರಕ್ಕೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳಾಗುತ್ತಿವೆ. ಈ ಸಂಬಂಧ ಒಂದು ಕಾರ್ಯಕ್ರಮ ಆಯೋಜಿಸಲಾಗಿದೆ. ಆ ಕಾರ್ಯಕ್ರಮದಲ್ಲಿ ನಮ್ಮ ಸರ್ಕಾರದ ಸಾಧನೆಗಳ ಕುರಿತು ಮಾತನಾಡುತ್ತೇನೆ. ನಂತರ ಉಳಿದ ಸಂಗತಿಗಳು ನಿಮಗೆ ಗೊತ್ತಾಗುತ್ತವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಿಎಸ್‌ವೈ ಶ್ಲಾಘಿಸಿದ ನಡ್ಡಾ

ಪಣಜಿ (ಪಿಟಿಐ): ‘ಕರ್ನಾಟಕದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಉತ್ತಮ ಕೆಲಸ ಮಾಡಿದ್ದಾರೆ’ ಎಂದಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ರಾಜ್ಯದಲ್ಲಿ ರಾಜಕೀಯ ಬಿಕ್ಕಟ್ಟು ಇದೆ ಎಂಬುದನ್ನು ತಳ್ಳಿಹಾಕಿದ್ದಾರೆ.

‘ಯಡಿಯೂರಪ್ಪ ಅವರು ಉತ್ತಮವಾಗಿ ಕೆಲಸ ಮಾಡಿದ್ದಾರೆ. ಕರ್ನಾಟಕ ಸರ್ಕಾರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಯಡಿಯೂರಪ್ಪ ಅವರು ತಮ್ಮದೇ ಆದ ರೀತಿಯಲ್ಲಿ ವಿಷಯಗಳನ್ನು ನೋಡಿಕೊಳ್ಳುತ್ತಿದ್ದಾರೆ’ ಎಂದು ಅವರು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

ವಿರೋಧಿ ಬಣದಲ್ಲಿ ದೃಢ ವಿಶ್ವಾಸ

ಬಿಜೆಪಿ ವರಿಷ್ಠರು ರಾಜ್ಯದಲ್ಲಿನ ಬೆಳವಣಿಗೆಗಳ ಕುರಿತು ಯಾವುದೇ ಸಂದೇಶ ರವಾನಿಸದೆ ಮುಗುಂ ಆಗಿದ್ದಾರೆ. ಆದರೂ, ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆ ಆಗುವುದು ನಿಶ್ಚಿತ ಎಂಬ ದೃಢ ವಿಶ್ವಾಸದಲ್ಲಿದ್ದಾರೆ ಯಡಿಯೂರಪ್ಪ ವಿರೋಧಿ ಬಣದವರು.

‘ವರಿಷ್ಠರಿಂದ ಸಂದೇಶ ಬರುವುದು ತಡವಾಗುತ್ತಿದೆ. ಅದನ್ನು ನಾಯಕತ್ವ ಬದಲಾವಣೆ ಇಲ್ಲ ಎಂದು ಅರ್ಥೈಸಲಾಗದು. 10 ರಿಂದ 15 ದಿನಗಳಲ್ಲಾದರೂ ಮುಖ್ಯಮಂತ್ರಿ ಬದಲಾವಣೆ ಆಗುವುದು ಖಚಿತ’ ಎಂದು ಕೆಲವು ಶಾಸಕರು ಹೇಳುತ್ತಾರೆ.

‘ಮುಖ್ಯಮಂತ್ರಿ ರಾಜೀನಾಮೆ ನೀಡಿದರೆ ಅವರನ್ನು ಕೆಲವು ದಿನಗಳ ಕಾಲ ಉಸ್ತುವಾರಿ ಮುಖ್ಯಮಂತ್ರಿ ಆಗಿ ಮುಂದುವರಿಸಲಾಗುತ್ತದೆ. ಬಳಿಕ ಶಾಸಕಾಂಗ ಪಕ್ಷದ ಸಭೆ ಕರೆದು ನಾಯಕನ ಆಯ್ಕೆ ಮಾಡಲಾಗುತ್ತದೆ’ ಎಂಬ ಮಾತು ಕೇಳಿ ಬಂದಿದೆ.

‘ಹೈಕಮಾಂಡ್‌ನಿಂದ ಮಾಹಿತಿ ಬಂದಿಲ್ಲ’

ಉಡುಪಿ: ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಹೈಕಮಾಂಡ್‌ನಿಂದ ಯಾವುದೇ ಸೂಚನೆಯಾಗಲಿ ಹಾಗೂ ಮಾಹಿತಿಯಾಗಲಿ ಬಂದಿಲ್ಲ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಭಾನುವಾರ ಹೇಳಿದರು. ‘ಈಚೆಗೆ ಜಾಲತಾಣಗಳಲ್ಲಿ ಹರಿದಾಡಿದ ಆಡಿಯೋ ವಿರುದ್ಧ ಠಾಣೆಗೆ ದೂರು ನೀಡಲಾಗಿದ್ದು, ತನಿಖೆ ನಡೆಯುತ್ತಿದೆ. ಆಡಿಯೋ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ’ ಎಂದರು.

‘ಬಿಎಸ್‌ವೈಗೆ ಹೆಚ್ಚು ಅವಕಾಶ ನೀಡಿದ್ದೇ ಬಿಜೆಪಿ’

‘ಯಡಿಯೂರಪ್ಪ ಅವರಿಗೆ ಬಿಜೆಪಿ ಸಾಕಷ್ಟು ಅವಕಾಶಗಳನ್ನು ನೀಡಿದೆ. ಅವರು ಬೇರೆ ಯಾವುದೇ ಪಕ್ಷದಲ್ಲಿದ್ದರೂ ಇಷ್ಟು ಅವಕಾಶಗಳು ಸಿಗುತ್ತಿರಲಿಲ್ಲ’ ಎಂದು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಗೋವಾದಲ್ಲಿ ಸುದ್ದಿಗಾರರಿಗೆ ಹೇಳಿದ್ದಾರೆ.

ರಾಜ್ಯ ಕಂಡ ಅತ್ಯುತ್ತಮ ಜನಪ್ರಿಯ ನಾಯಕ ಯಡಿಯೂರಪ್ಪ ಎಂಬುದರಲ್ಲಿ ಸಂಶಯವಿಲ್ಲ. ಪಕ್ಷವು ಸಾಮಾನ್ಯ ಕಾರ್ಯಕರ್ತನನ್ನು ನಾಯಕನನ್ನಾಗಿ ಬೆಳೆಸಿ ನಾಯಕತ್ವ ನೀಡುತ್ತದೆ. ಅದೇ ರೀತಿ ಯಡಿಯೂರಪ್ಪ ಅವರಿಗೆ ಎಲ್ಲ ಹಂತಗಳಲ್ಲೂ ಅವಕಾಶ ನೀಡಿದೆ. ಪಕ್ಷದಲ್ಲಿ, ಸರ್ಕಾರದಲ್ಲಿ ಮತ್ತು ವಿರೋಧ ಪಕ್ಷ ನಾಯಕರಾಗಿ ಹಲವು ಬಾರಿ ಅವಕಾಶ ನೀಡಿದೆ ಎಂದು ತಿಳಿಸಿದರು.

ರಾಜಭವನಕ್ಕೆ ಮರಳಿದ ರಾಜ್ಯಪಾಲ

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮಧ್ಯಪ್ರದೇಶಕ್ಕೆ ತೆರಳಿದ್ದರು. ಭಾನುವಾರ ಸಂಜೆಯೇ ರಾಜಭವನಕ್ಕೆ ಮರಳಿದ್ದಾರೆ.

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಮಠಾಧೀಶರ ಸಮಾವೇಶವನ್ನು ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ತಿಗಳರ ಲಕ್ಷ್ಮೀ ಪೀಠದ ಜ್ಞಾನಪ್ರಕಾಶ ಸ್ವಾಮೀಜಿ, ನೊಳಂಬ ಪುಷ್ಪಗಿರಿ ಸಂಸ್ಥಾನದ ಸೋಮಶೇಖರ ಸ್ವಾಮೀಜಿ, ತಿಪಟೂರು ಷಡಾಕ್ಷರಿ ಮಠದ ರುದ್ರಮುನಿ ಸ್ವಾಮೀಜಿ, ಚಿಕ್ಕತೊಟ್ಟಲಕೆರೆಯ ಶಿವಲಿಂಗ ಸ್ವಾಮೀಜಿ ಮತ್ತು ಧಾರವಾಡದ ಮುರುಘಾ ಮಠದ ಮಲ್ಲಿಕಾರ್ಜುನ ಸ್ವಾಮೀಜಿ ಇದ್ದರು

ಅಖಾಡಕ್ಕಿಳಿದ ಮಠಾಧೀಶರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈವರೆಗೂ ಗುಂಪು ಗುಂಪಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಬೆಂಬಲ ವ್ಯಕ್ತಪಡಿಸುತ್ತಿದ್ದ ಮಠಾಧೀಶರು, ಭಾನುವಾರ ಬಹಿರಂಗ ಸಮಾವೇಶದ ಮೂಲಕ ನೇರವಾಗಿ ಅಖಾಡಕ್ಕೆ ಇಳಿದು ಬಲ ಪ್ರದರ್ಶನ ನಡೆಸಿದರು.

‘ವರ್ತಮಾನದ ಸಮಸ್ಯೆಗಳು ಮತ್ತು ಪರಿಹಾರ’ ಎಂಬ ವಿಷಯದ ಕುರಿತು ಚರ್ಚೆಗಾಗಿ ನಗರದ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಸಮಾವೇಶದಲ್ಲಿ ರಾಜ್ಯದ ವಿವಿಧೆಡೆಯಿಂದ ಬಂದಿದ್ದ 450 ಕ್ಕೂ ಹೆಚ್ಚು ಮಠಾಧೀಶರು ಪಾಲ್ಗೊಂಡಿದ್ದರು. ಸಮಾವೇಶದುದ್ದಕ್ಕೂ ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆಯ ಕುರಿತೇ ಹೆಚ್ಚು ಚರ್ಚೆಯಾಯಿತು. ‘ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಾವಣೆ ಮಾಡಬಾರದು’ ಎಂದು ಹಲವು ಮಠಾಧೀಶರು ಸಮಾವೇಶದ ವೇದಿಕೆಯಿಂದಲೇ ಬಿಜೆಪಿ ವರಿಷ್ಠರನ್ನು ಆಗ್ರಹಿಸಿದರು.

7ನೇ ಪುಟ ನೋಡಿ

‘ಯಡಿಯೂರಪ್ಪನವರೇ ಮುಖ್ಯಮಂತ್ರಿ ಆಗಿ ಮುಂದುವರಿಯಲಿ’

ಬೆಂಗಳೂರು: ‘ಜಾತಿ, ಮತ ಎಲ್ಲವನ್ನೂ ಮೀರಿದ ನಾಯಕ ಬಿ.ಎಸ್. ಯಡಿಯೂರಪ್ಪ. ಅವರು ಕೇವಲ ಲಿಂಗಾಯತ ನಾಯಕರಾಗಲಿಲ್ಲ. ಸರ್ವ ಜನಾಂಗದ ಪ್ರೀತಿ ವಿಶ್ವಾಸ ಗಳಿಸಿದ್ದಾರೆ. ಕನಿಷ್ಠ ಆರು ತಿಂಗಳವರೆಗಾದರೂ ಅವರನ್ನು ಮುಖ್ಯಮಂತ್ರಿಯಾಗಿ ಮುಂದುವರಿಸಿ, ನಂತರ ನಿಮ್ಮ ಇಚ್ಛೆಯಂತೆ ನಡೆದುಕೊಳ್ಳಿ’ ಎಂದು ನಿಡುಮಾಮಿಡಿ ವೀರಭದ್ರ ಚನ್ನಮಲ್ಲ ಸ್ವಾಮೀಜಿಯವರು ಬಿಜೆಪಿ ವರಿಷ್ಠರಿಗೆ ಸಂದೇಶ ರವಾನಿಸಿದರು. 7

ಆ. 2ರಿಂದ ಆರಂಭಿಸಲು ಕಾರ್ಯಪಡೆಯಿಂದ ಶಿಫಾರಸು

ಪ್ರಾಥಮಿಕ ಹಂತದಿಂದಲೇ ಶಾಲೆ ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತ ಶಿಕ್ಷಣ ಸಂಸ್ಥೆಗಳನ್ನು ತೆರೆಯುತ್ತಿರುವ ಬೆನ್ನಲ್ಲೆ, ಆಗಸ್ಟ್ 2 ರಿಂದ ಪ್ರಾಥಮಿಕ ಹಂತದಿಂದಲೇ ಶಾಲೆಗಳನ್ನೂ ಆರಂಭಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತ ಅನ್ಬುಕುಮಾರ್ ನೇತೃತ್ವದ ಕಾರ್ಯಪಡೆ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಎಲ್ಲ ಸರ್ಕಾರಿ, ಅನುದಾನಿತ, ಅನುದಾನರಹಿತ, ಸಿಬಿಎಸ್‌ಇ, ಐಸಿಎಸ್‌ಇ, ಅಂತರ ರಾಷ್ಟ್ರೀಯ ಪಠ್ಯಕ್ರಮ ಬೋಧಿಸುವ ಶಾಲೆಗಳು ತರಗತಿಗಳನ್ನು ಆರಂಭಿಸಿ, ಕಾರ್ಯಾಚರಿಸಲು ಒಂದೇ ಮಾದರಿಯ ಪ್ರಮಾಣಿತ ಕಾರ್ಯಾಚರಣಾ ವಿಧಾನ (ಎಸ್‌ಒಪಿ) ಅನುಸರಿಸಬೇಕು ಎಂದು ಕಾರ್ಯಪಡೆ ಸಲಹೆ ನೀಡಿದೆ.

10ನೇ ಪುಟ ನೋಡಿ

ಪದವಿ ಕಾಲೇಜು ಇಂದಿನಿಂದ ಆರಂಭ

ಬೆಂಗಳೂರು: ಕೋವಿಡ್ ಕಾರಣ ಮುಚ್ಚಿದ್ದ ಪದವಿ, ಸ್ನಾತಕೋತ್ತರ ಪದವಿ ಹಾಗೂ ಎಂಜಿನಿಯರಿಂಗ್ ಕಾಲೇಜುಗಳು ಸೋಮವಾರದಿಂದ (ಜುಲೈ 26) ಪುನರಾರಂಭಗೊಳ್ಳಲಿವೆ. 7

ಕೊರೊನಾ ಯೋಧರನ್ನು ಗೌರವಿಸಿದ ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ

‘ಸಂಕಷ್ಟದಿಂದ ಹೊರಬಂದಿಲ್ಲ ದುಡಿಯುವ ವರ್ಗ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಕಾಣಿಸಿಕೊಂಡ ಬಳಿಕ ಒಂದೆಡೆ ಕುಟುಂಬದ ಸದಸ್ಯರು ರೋಗಿಗಳಾಗಿ ಆಸ್ಪತ್ರೆ ಸೇರಿದರೆ, ಇನ್ನೊಂದೆಡೆ ಕಾರ್ಮಿಕರು ಸೇರಿದಂತೆ ವಿವಿಧ ವರ್ಗದವರು ದುಡಿಮೆ ಇಲ್ಲದೆಯೇ ಸಂಕಷ್ಟ ಎದುರಿಸಿದ್ದಾರೆ. ಅಂತಹವರಿಗೆ ಉಳ್ಳವರು ನೆರವಿನ ಹಸ್ತ ನೀಡಬೇಕು’ ಎಂದು ಶಾಸಕ ದಿನೇಶ್ ಗುಂಡೂರಾವ್ ಹೇಳಿದರು.

ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಕೊರೊನಾ ಯೋಧರನ್ನು ಅಭಿನಂದಿಸಲಾಯಿತು.

‘ಕೋವಿಡ್‌ನಿಂದ ದೇಶದ ಶೇ 95ರಷ್ಟು ಜನತೆ ಸಮಸ್ಯೆ ಎದುರಿಸಿದ್ದಾರೆ. ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡಾಗ ಇಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಈ ವೇಳೆ ಸಮಾಜದಲ್ಲಿ ಉತ್ತಮ ಸ್ಥಿತಿಯಲ್ಲಿರುವವರು ಹೃದಯ ಶ್ರೀಮಂತಿಕೆ ಮೆರೆದು, ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕು’ ಎಂದರು.

‘ನಿಷ್ಕಾಳಜಿಯಿಂದಾಗಿ ಎರಡನೇ ಅಲೆಯಲ್ಲಿ ಸಮಸ್ಯೆ ಎದುರಿಸಬೇಕಾಯಿತು. ಔಷಧ ಕೊರತೆ ಸೇರಿದಂತೆ ವಿವಿಧ ಸವಾಲುಗಳ ನಡುವೆ ವೈದ್ಯರು ರೋಗಿಯ ಜೀವ ಉಳಿಸಲು ಹಗಲಿರುಳು ಶ್ರಮಿಸಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸೊಸೈಟಿಯ ಸದಸ್ಯರಿಗೆ ಲಸಿಕೆ ವಿತರಣಾ ಶಿಬಿರ ಏರ್ಪಡಿಸಲು ಸಹಕಾರ ನೀಡುವಂತೆ ನಿರ್ದೇಶಕರು ಮನವಿ ಮಾಡಿಕೊಂಡರು. ಇದಕ್ಕೆ ಸ್ಪಂದಿಸಿದ ದಿನೇಶ್ ಗುಂಡೂರಾವ್, ‘ಸಾಧ್ಯವಾದಷ್ಟು ಮಂದಿಗೆ ಲಸಿಕೆ ಒದಗಿಸಲು ಕ್ರಮಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

ಕೋವಿಡ್ ಮೂರನೇ ಅಲೆ– ನಿರ್ಲಕ್ಷ್ಯ ಬೇಡ: ಬಿಬಿಎಂಪಿ ಪಶ್ಚಿಮ ವಲಯದ ಗಾಂಧಿನಗರದ ಆರೋಗ್ಯ ವೈದ್ಯಾಧಿಕಾರಿ ಡಾ. ನಂದಕುಮಾರ್, ‘ನಗರದಲ್ಲಿ ಒಂದೂವರೆ ವರ್ಷದ ಹಿಂದೆ ಕೋವಿಡ್ ಕಾಣಿಸಿಕೊಂಡಾಗ ಈ ಸೋಂಕು ಇಷ್ಟರ ಮಟ್ಟಿಗೆ ಕಾಡಲಿದೆ ಅಂದುಕೊಂಡಿರಲಿಲ್ಲ. ಮೊದಲನೇ ಅಲೆಯಲ್ಲಿ ಸಾವು–ನೋವುಗಳು ಅಷ್ಟಿರಲಿಲ್ಲ. ಆಸ್ಪತ್ರೆಗೆ ದಾಖಲಾದ 5ರಿಂದ 6 ದಿನಗಳಲ್ಲಿ ಸೋಂಕಿತರು ಚೇತರಿಸಿಕೊಳ್ಳುತ್ತಿದ್ದರು. ಆದರೆ, ಎರಡನೇ ಅಲೆಯಲ್ಲಿ ಕೆಲವರು ಆಸ್ಪತ್ರೆಗೆ ದಾಖಲಾದ ಅರ್ಧ ಗಂಟೆಯಲ್ಲಿಯೇ ಕೊನೆಯುಸಿರೆಳೆದಿದ್ದಾರೆ. ಸೋಂಕಿನ ತೀವ್ರತೆ ಹೆಚ್ಚಳವಾಗಿರುವುದೇ ಇದಕ್ಕೆ ಕಾರಣ. ಹಾಗಾಗಿ, ಮೂರನೇ ಅಲೆ ಬಗ್ಗೆ ನಿರ್ಲಕ್ಷ್ಯ ಮಾಡಬಾರದು’ ಎಂದರು.

ಸೊಸೈಟಿಯ ಅಧ್ಯಕ್ಷೆ ಎಚ್‌.ಸಿ. ಸ್ವಯಂಪ್ರಭಾ, ‘ಕೋವಿಡ್‌ನಿಂದ ಹಲವು ಕುಟುಂಬಗಳು ಯಜಮಾನರನ್ನು ಹಾಗೂ ಸಹಸದಸ್ಯರನ್ನು ಕಳೆದುಕೊಂಡಿವೆ. ತಂದೆ–ತಾಯಿಯನ್ನು ಕಳೆದುಕೊಂಡು ಮಕ್ಕಳು ಅನಾಥರಾಗಿದ್ದಾರೆ. ಎರಡನೇ ಅಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಧ್ಯ ವಯಸ್ಕರು ಕೂಡ ಮೃತಪಟ್ಟಿದ್ದಾರೆ. ಅಗಲಿದ ತಮ್ಮ ಆಪ್ತರು, ಕುಟುಂಬ ಸದಸ್ಯರ ಅಂತಿಮ ದರ್ಶನವನ್ನು ಮಾಡಲು ಕೂಡ ಎಷ್ಟೋ ಜನರಿಗೆ ಸಾಧ್ಯವಾಗಲಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಕೊರೊನಾ ಯೋಧರಾದ (ಕುಳಿತವರು ಎಡದಿಂದ) ಮಗಜಿ ಸುಬ್ರಮಣಿ, ಎಸ್‌.ಆರ್‌. ಮಂಜುನಾಥ್, ಡಾ. ನಂದಕುಮಾರ್, ಶಂಕರ್ ಖೋಡೆ, ಸತೀಶ್ ಸುಲೆಗಾಯಿ ಹಾಗೂ ಎಚ್‌.ಕೆ. ವಿನಾಯಕ್ ಅವರನ್ನು ಕಾರ್ಯಕ್ರಮದಲ್ಲಿ ಅಭಿನಂದಿಸಲಾಯಿತು. (ನಿಂತಿರುವವರು ಎಡದಿಂದ) ಸೊಸೈಟಿಯ ನಿರ್ದೇಶಕ ಮಗಜಿ ಬಾದ್ ಕೆ. ಸೋಮಶೇಖರ್, ಉಪಾಧ್ಯಕ್ಷ ಸತೀಶ್ ಈ. ವಾಗೆಲೆ, ಸತ್ಯಚರಣ ವಾಗೆಲೆ, ನಿರ್ದೇಶಕ ಎಸ್‌. ಅನಂತ್, ಸಹಜಾನಂದ ಕಬಾಡಿ, ಅಧ್ಯಕ್ಷೆ ಎಚ್‌.ಸಿ. ಸ್ವಯಂಪ್ರಭ, ಡಾ. ನಾಗಭೂಷಣ್, ಎಸ್‌ ಧೋಂಡೂಸಾ ಧರ್ಮಸಂಸ್ಥೆಯ ಎಸ್‌.ಎನ್‌. ಶ್ರೀನಿವಾಸಮೂರ್ತಿ ಹಾಗೂ ಡಾ.ಕೆ. ಶ್ರೀಧರ್ ಇದ್ದರು – ಪ್ರಜಾವಾಣಿ ಚಿತ್ರ

‘₹ 20 ಲಕ್ಷ ಸಹಾಯ ಧನ ವಿತರಣೆ’

ಕೋವಿಡ್ ಪೀಡಿತರಿಗೆ ಚಿಕಿತ್ಸೆ ಒದಗಿಸಿದ ವೈದ್ಯರು ಹಾಗೂ ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿದವರಿಗೆ ನೆರವಿನ ಹಸ್ತ ನೀಡಿದ ಸ್ವಯಂಸೇವಕರನ್ನು ಸೊಸೈಟಿ ವತಿಯಿಂದ ಗೌರವಿಸಲಾಯಿತು. ರಾಘವ್ ಎಸ್.ಎ., ನೀಲಕಂಠಸಾ ಧೊಂಡಾಳೆ, ಡಾ. ವಸುಮತಿ, ಡಾ.ಎಂ.ಜಿ. ಶಂಕರಸಾ, ಕೆ.ಎಸ್. ವಿವೇಕ್, ಕೆ.ಆರ್. ವಸಂತ್ ಕುಮಾರ್, ಎಚ್.ಕೆ. ವಿನಾಯಕ, ಎಸ್.ಆರ್. ಮಂಜುನಾಥ್, ಎಂ.ಬಿ. ಮುರಳಿ, ಡಿ.ಎಂ. ರಾಮ್, ಜೆ.ಕೆ. ಸುರೇಶ್, ಭರತ್ ಕುಮಾರ್, ಗೋವಿಂದ್ ಕಬಾಡಿ, ವಾಗಲೆ ರಾಜೇಂದ್ರ, ಸತೀಶ್ ಸುಲೆಗಾಯಿ, ಸತೀಶ್ ಈ. ವಾಗೆಲೆ, ಕಲಬುರ್ಗಿ ವೆಂಕಟೇಶ್, ಡಿ.ಎ. ಆಶಾ, ಎಸ್.ಆರ್. ಕೃಷ್ಣ, ವಿನಾಯಕ ಸುಲೇಗಾಯಿ, ಶಂಕರ ಖೋಡೆ, ಅಮಿತ್ ಅಮರನಾಥ್, ಧೋಂಡಾಳೆ ಮುನಿರಾಜ್ ಹಾಗೂ ಮಗಜಿ ಸುಬ್ರಮಣಿ ಅವರನ್ನು ಕೊರೊನಾ ಯೋಧರು ಎಂದು ಗುರುತಿಸಿ, ಅಭಿನಂದಿಸಲಾಯಿತು.

ಕೋವಿಡ್ ಜಯಿಸಿದ ಸೊಸೈಟಿಯ 365 ಸದಸ್ಯರಿಗೆ ಒಟ್ಟು ₹ 20 ಲಕ್ಷ ಸಹಾಯ ಧನ ನೀಡಲಾಯಿತು. ಆಸ್ಪತ್ರೆ ಚಿಕಿತ್ಸೆ ಪಡೆದು ಚೇತರಿಸಿಕೊಂಡವರಿಗೆ ತಲಾ ₹ 10 ಸಾವಿರ ಹಾಗೂ ಮನೆ ಆರೈಕೆಗೆ ಒಳಗಾದವರಿಗೆ ತಲಾ ₹ 5 ಸಾವಿರ ವಿತರಿಸಲಾಯಿತು.

₹ 10 ಲಕ್ಷಕ್ಕೆ ಬೇಡಿಕೆ ಇಟ್ಟು, ₹ 5 ಲಕ್ಷ ಸುಲಿಗೆ ಮಾಡಿರುವ ಆರೋಪ

ಇನ್‌ಸ್ಪೆಕ್ಟರ್, ಪಿಎಸ್‌ಐ ಸೇರಿ ನಾಲ್ವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರೊಬ್ಬರು ನೀಡಿದ್ದ ದೂರನ್ನೇ ಬಳಸಿಕೊಂಡು ಒಳಾಂಗಣ ವಿನ್ಯಾಸಕಾರರೊಬ್ಬರಿಂದ ₹ 10 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟು, ₹ 5 ಲಕ್ಷ ಸುಲಿಗೆ ಮಾಡಿರುವ ಆರೋಪದ ಮೇಲೆ ನಗರದ ವೈಟ್ ಫೀಲ್ಡ್ ವಿಭಾಗದ ಸೈಬರ್ ಅಪರಾಧ ಠಾಣೆಯ ಮಹಿಳಾ ಇನ್‌ಸ್ಪೆಕ್ಟರ್, ಇಬ್ಬರು ಸಬ್ ಇನ್‌ಸ್ಪೆಕ್ಟರ್ ಮತ್ತು ಕಾನ್‌ಸ್ಟೆಬಲ್ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಎಫ್‌ಐಆರ್ ದಾಖಲಿಸಿದೆ.

ಸುದೀಪ್‌ವಿ.ವಿ.ಎಂಬುವವರುನೀಡಿರುವ ದೂರನ್ನು ಆಧರಿಸಿ ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಯ ಸಬ್ ಇನ್‌ಸ್ಪೆಕ್ಟರ್ ನವೀನ್, ಇನ್‌ಸ್ಪೆಕ್ಟರ್ ರೇಣುಕಾ, ಸಬ್ ಇನ್‌ಸ್ಪೆಕ್ಟರ್ ಗಣೇಶ್ ಮತ್ತು ಕಾನ್‌ಸ್ಟೆಬಲ್ ಹೇಮಂತ್ ವಿರುದ್ಧ ಇದೇ 20ರಂದು ಎಸಿಬಿ ಬೆಂಗಳೂರು ನಗರ ಘಟಕದಲ್ಲಿ ಎಫ್‌ಐಆರ್ ದಾಖಲಾಗಿದೆ.

ಜುಲೈ 16ರಂದು ಮನೆಯ ಬಳಿ ಬಂದ ನಾಲ್ವರು ಪೊಲೀಸರು, ಹಣ ಪಡೆದು ಒಳಾಂಗಣ ವಿನ್ಯಾಸ ಕಾಮಗಾರಿ ಪೂರ್ಣಗೊಳಿಸಿಲ್ಲ ಎಂದು ಶ್ವೇತಾ ಸಿಂಗ್ ಎಂಬುವವರು ತಮ್ಮ ವಿರುದ್ಧ ದೂರು ನೀಡಿದ್ದು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದರು. ಪತ್ನಿಯೊಂದಿಗೆ ತಮ್ಮನ್ನು ಬಲವಂತವಾಗಿ ಠಾಣೆಗೆ ಕರೆದೊಯ್ದಿದ್ದರು. ಬಾಕಿ ಇರುವ ಕೆಲಸ ಪೂರ್ಣಗೊಳಿಸಲು ಕಾಲಾವಕಾಶ ನೀಡುವಂತೆ ಆಗ ಮನವಿ ಮಾಡಲಾಗಿತ್ತು ಎಂದು ಸುದೀಪ್ ಎಸಿಬಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

‘ಶ್ವೇತಾ ಸಿಂಗ್ ಅವರಿಗೆ ನೀಡಬೇಕಿರುವ ₹ 5 ಲಕ್ಷ ಮತ್ತು ₹ 10 ಲಕ್ಷ ಲಂಚ ನೀಡಿದರೆ ಬಂಧಿಸುವುದಿಲ್ಲ ಎಂದು ನವೀನ್ ತಿಳಿಸಿದ್ದರು. ಬಳಿಕ ಸಂಬಂಧಿ ಚಂದ್ರನ್ ಅವರ ಬಳಿ ಮನವಿ ಮಾಡಿ ₹ 10 ಲಕ್ಷ ಹಣ ನನ್ನ ಪತ್ನಿಯ ಖಾತೆಗೆ ವರ್ಗಾವಣೆ ಮಾಡಿಸಿಕೊಂಡಿದ್ದೆ.ಬ್ಯಾಂಕ್‌ಗೆ ಹೋಗಿ ₹ 5 ಲಕ್ಷವನ್ನು ಶ್ವೇತಾಸಿಂಗ್ ಖಾತೆಗೆ ವರ್ಗಾವಣೆ ಮಾಡಿದ್ದೆ. ₹ 5 ಲಕ್ಷ ನಗದನ್ನು ತಂದು ಪಿಎಸ್‌ಐ ನವೀನ್ ಅವರಿಗೆ ನೀಡಿದ್ದೆ. ಹಣ ಡ್ರಾ ಮಾಡಲು ಹೋಗಿದ್ದಾಗ ಪೊಲೀಸರು ಮಂಜು ಎಂಬಾತನನ್ನು ಜತೆಗೆ ಕಳಿಸಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಬಾಕಿ ₹ 5 ಲಕ್ಷ ತರುವಂತೆ ಪೊಲೀಸರು ಸೂಚಿಸಿದ್ದರು. ಜುಲೈ 17ರಂದು ಠಾಣೆಗ ಹೋಗಿ ಹಣ ಹೊಂದಿಸಲು ಆಗಿಲ್ಲವೆಂದು ತಿಳಿಸಿ ಬಂದಿದ್ದೆ. ಜುಲೈ 19ರಂದು ಪುನಃ ಮೊಬೈಲ್‌ಗೆ ಕರೆಮಾಡಿ ಹಣ ತರುವಂತೆ ಸೂಚಿಸಿದ್ದರು. ಠಾಣೆಗೆ ಹೋಗಿ ನವೀನ್ ಅವರನ್ನು ಭೇಟಿಮಾಡಿದ್ದೆ. ₹ 5 ಲಕ್ಷವನ್ನು ಮೇಡಂ ಮನೆಗೆ ಕೊಂಡೊಯ್ದರು. ನಮಗೆ ಒಂದು ರೂಪಾಯಿಯನ್ನೂ ಕೊಡಲಿಲ್ಲ. ಇವತ್ತು ₹ 2 ಲಕ್ಷ ಕೊಡು. ನಾಳೆ ₹ 2 ಲಕ್ಷ ತಂದು ಕೊಡು ಎಂದು ಸೂಚಿಸಿದ್ದರು. ಎಲ್ಲವನ್ನೂ ಆಡಿಯೊ ರೆಕಾರ್ಡ್ ಮಾಡಿಕೊಂಡು ಬಂದಿದ್ದೇನೆ’ ಎಂದು ತಿಳಿಸಿರುವ ಸುದೀಪ್, ಆಡಿಯೊ ರೆಕಾರ್ಡಿಂಗ್ ಅನ್ನು ಸಲ್ಲಿಸಿದ್ದಾರೆ.

ಕಾನ್‌ಸ್ಟೆಬಲ್ ವಿರುದ್ಧ ಎಫ್‌ಐಆರ್

ಬಟ್ಟೆ ವ್ಯಾಪಾರಿ ಮತ್ತು ಅವರ ಸ್ನೇಹಿತರನ್ನು ಠಾಣೆಗೆ ಕರೆತಂದು ಗಾಂಜಾ ಪ್ರಕರಣದಲ್ಲಿ ಸಿಲುಕಿಸುವುದಾಗಿ ಬೆದರಿಸಿ ₹ 4 ಲಕ್ಷ ಲಂಚ ಪಡೆದು, ಇನ್ನೂ ₹ 3 ಲಕ್ಷಕ್ಕೆ ಬೇಡಿಕೆ ಇಟ್ಟಿರುವ ಆರೋಪದ ಮೇಲೆ ಕೋಣನಕುಂಟೆ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಮೊಹಮ್ಮದ್ ಹನೀಫ್ ವಿರುದ್ಧ ಎಸಿಬಿ ಬೆಂಗಳೂರು ನಗರ ಘಟಕ ಜುಲೈ 19ರಂದು ಎಫ್‌ಐಆರ್ ದಾಖಲಿಸಿದೆ.

‘ಜುಲೈ 7ರಂದು ನಮ್ಮ ಕೊಠಡಿಯ ಶೋಧನೆ ಮಾಡಿದ್ದ ಕಾನ್‌ಸ್ಟೆಬಲ್ ಮೊಹಮ್ಮದ್ ಹನೀಫ್, ಗೆಳೆಯರಾದ ಆದರ್ಶ್ ಮತ್ತು ಅನಿರುದ್ಧ್ ಅವರನ್ನು ಠಾಣೆಗೆ ಕರೆದೊಯ್ದಿದ್ದರು. ಕಾರನ್ನೂ ಕೊಂಡೊಯ್ದಿದ್ದರು. ಗೆಳೆಯರನ್ನು ಬಿಡುಗಡೆ ಮಾಡಲು ₹ 4 ಲಕ್ಷ ಪಡೆದಿದ್ದರು. ಕಾರು ವಾಪಸ್ ನೀಡಲು ₹ 3 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಹಣ ನೀಡದಿದ್ದರೆ 144 ಗಾಂಜಾ ಪತ್ತೆ ಪ್ರಕರಣದಲ್ಲಿ ಸಿಲುಕಿಸುವ ಬೆದರಿಕೆ ಹಾಕಿದ್ದರು. ಕೊಠಡಿಯಲ್ಲಿದ್ದ 12 ಗ್ರಾಂ. ಚಿನ್ನದ ಸರವೂ ಪೊಲೀಸರ ಭೇಟಿ ವೇಳೆ ಕಾಣೆಯಾಗಿದೆ’ ಎಂದು ಸುಧಿನ್ ಎಂಬುವವರು ದೂರು ನೀಡಿದ್ದಾರೆ.

ಕದ್ದ ಲಾಕರ್ ಪತ್ತೆ ಮಾಡಿದ ‘ಲಕ್ಷ್ಮಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯಲ್ಲಿರುವ ಅಮೆಜಾನ್ ಕಂಪನಿ ಗೋದಾಮಿನಿಂದ ಕಳವು ಮಾಡಲಾಗಿದ್ದ ಲಾಕರನ್ನು ಶ್ವಾನದಳ ಪತ್ತೆ ಮಾಡಿದೆ.

‘ಜುಲೈ 17ರ ರಾತ್ರಿ ಗೋದಾಮಿಗೆ ನುಗ್ಗಿದ್ದ ಕಳ್ಳರು, ಲಕ್ಷಾಂತರ ರೂಪಾಯಿ ಹಣವಿದ್ದ ಲಾಕರ್ ಕದ್ದುಕೊಂಡು ಹೋಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿಗಳ ಪತ್ತೆಗಾಗಿ ಶ್ವಾನದಳದ ನೆರವು ಪಡೆಯಲಾಗಿತ್ತು. ಘಟನಾ ಸ್ಥಳಕ್ಕೆ ‘ಲಕ್ಷ್ಮಿ’ ಹೆಸರಿನ ಶ್ವಾನದ ಜೊತೆ ಬಂದಿದ್ದ ಸಿಬ್ಬಂದಿ, ಹಲವೆಡೆ ಹುಡುಕಾಡಿದರು. ಗೋದಾಮು ಸಮೀಪದಲ್ಲಿದ್ದ ಪೊದೆಯಲ್ಲಿ ಬಿಸಾಕಿದ್ದ ಲಾಕರನ್ನು ಶ್ವಾನ ಪತ್ತೆ ಮಾಡಿತು’ ಎಂದೂ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಠಾಣೆಯಲ್ಲಿ ಬೇರೂರಿದ್ದ 999 ಹೆಡ್ ಕಾನ್‌ಸ್ಟೆಬಲ್‌ಗಳ ವರ್ಗಾವಣೆ

ಬೆಂಗಳೂರು: ಸುಮಾರು 10 ವರ್ಷಗಳಿಂದ ಒಂದೇ ಠಾಣೆಯಲ್ಲಿ ಬೇರೂರಿದ್ದ 999 ಹೆಡ್‌ಕಾನ್‌ಸ್ಟೆಬಲ್‌ಗಳನ್ನು ಶನಿವಾರ ವರ್ಗಾವಣೆ ಮಾಡಲಾಗಿದ್ದು, ಈ ಮೂಲಕ ನಗರದ ಪೊಲೀಸ್ ವ್ಯವಸ್ಥೆ ಸುಧಾರಣೆಗೆ ಪೊಲೀಸ್ ಕಮಿಷನರ್ ಕಮಲ್ ಪಂತ್ ಕ್ರಮ ಕೈಗೊಂಡಿದ್ದಾರೆ.

ನಗರದ ಠಾಣೆಗಳಲ್ಲಿನ 999 ಸಿಬ್ಬಂದಿಯನ್ನು ಏಕಕಾಲದಲ್ಲಿ ವರ್ಗಾವಣೆ ಮಾಡಿರುವುದು ಇತಿಹಾಸದಲ್ಲಿ ಇದೇ ಮೊದಲು ಎನ್ನಲಾಗಿದೆ. ನಗರದ ಒಂದೇ ಠಾಣೆಯಲ್ಲಿ ಸುಮಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳನ್ನೂ ಸದ್ಯದಲ್ಲೇ ವರ್ಗಾವಣೆ ಮಾಡಲು ಸಿದ್ಧತೆ ನಡೆಯುತ್ತಿದೆ.

‘ಒಂದೇ ಠಾಣೆಯಲ್ಲಿ ಠಿಕಾಣಿ ಹೂಡಿದ್ದ ಹೆಡ್ ಕಾನ್‌ಸ್ಟೆಬಲ್‌ಗಳು, ಸ್ಥಳೀಯ ಅಪರಾಧಿಗಳ ಜೊತೆ ಒಡನಾಟ ಇಟ್ಟುಕೊಂಡಿದ್ದರು. ಅವರ ಆಮಿಷಗಳಿಗೆ ಒಳಗಾಗುತ್ತಿದ್ದರು. ಅಪರಾಧ ಎಸಗಿದವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿರಲಿಲ್ಲ. ಕೆಲವರು, ಗ್ರಾಮೀಣ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸಲು ಹಿಂದೇಟು ಹಾಕುತ್ತಿದ್ದರು. ಇವೆಲ್ಲ ಅಂಶಗಳನ್ನು ಗಮನಿಸಿ ವರ್ಗಾವಣೆ ಮಾಡಲಾಗಿದೆ’ ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

‘ಸರ್ವಧರ್ಮೀಯರು ಆಚರಿಸುವ ಹಬ್ಬ ಗುರುಪೂರ್ಣಿಮೆ’

ಗುರುಪೂರ್ಣಿಮೆ ಉದ್ಘಾಟನೆ ಸಮಾರಂಭದಲ್ಲಿ ಡಾ.ಸಿ.ಎನ್‌.ಕೃಷ್ಣ ಗುರೂಜಿ, ಡಾ. ಯೋಗಿ ದೇವರಾಜು, ಯೋಗ ಶಿಕ್ಷಕ ಅಮರಪ್ಪ, ಮುನಿಸ್ವಾಮಯ್ಯ, ಪಾರ್ವತಿ, ಯೋಗೇಶ್ ಇದ್ದರು

ರಾಜರಾಜೇಶ್ವರಿ ನಗರ: ‘ಭಾರತೀಯ ಸಂಸ್ಕೃತಿ, ಪರಂಪರೆಯಲ್ಲಿ ಹಲವು ಹಬ್ಬಗಳಿವೆ. ವಿವಿಧ ಜನಾಂಗದಲ್ಲಿ ಪ್ರತ್ಯೇಕ ಆಚರಣೆಗಳಿವೆ. ಆದರೆ ಎಲ್ಲ ಧರ್ಮೀಯರೂ ಆಚರಿಸುವ ಹಬ್ಬ ಗುರುಪೂರ್ಣಿಮೆ’ ಎಂದು ಓಂಸೇವಾ ಕೇಂದ್ರದ ಸಂಸ್ಥಾಪಕ ಡಾ.ಸಿ.ಎನ್.ಕೃಷ್ಣ ಗುರೂಜಿ ಹೇಳಿದರು.

ಹೇರೋಹಳ್ಳಿಯ ಸಿಂಡಿಕೇಟ್ ಬ್ಯಾಂಕ್ ಕಾಲೊನಿಯಲ್ಲಿ ಗುರುಪೂರ್ಣಿಮೆ ನಿಮಿತ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಗುರುವಿಗೆ ಧರ್ಮ,ಜಾತಿ, ಮತಗಳ ಸಂಕೋಲೆಯಿಲ್ಲ. ಶಿಷ್ಯನ ಕಲ್ಯಾಣಕ್ಕಾಗಿ ಜ್ಞಾನಸುಧೆಯನ್ನು ಹರಿಸುವ ಗುರುವಿನ ಸ್ಥಾನ ಅತ್ಯಂತ ಮಹತ್ವದ್ದಾಗಿದೆ’ ಎಂದರು.

ಅಮೆರಿಕ ಯೋಗ ವಿಶ್ವವಿದ್ಯಾಲಯದ ಕುಲಪತಿ ಡಾ. ಯೋಗಿ ದೇವರಾಜು, ‘ಯೋಗವೇ ಜೀವನ, ಯೋಗದ ಜ್ಞಾನವನ್ನು ಸಾವಿರಾರು ಜನ ಬೇರೆ ರಾಜ್ಯ ಮತ್ತು ದೇಶಗಳಲ್ಲಿ ಬಳಸಿಕೊಂಡಿದ್ದಾರೆ. ಆದರೆ, ನಾವು ಹಿತ್ತಲ ಗಿಡ ಮದ್ದಲ್ಲ ಎಂಬಂತೆ ಮಾಡಿಕೊಂಡಿದ್ದೇವೆ. ಯೋಗದ ಸದುಪಯೋಗಪಡಿಸಿಕೊಳ್ಳಿ, ಯೋಗ ಪ್ರತಿಯೊಬ್ಬರ ಜೀವನ ಶೈಲಿಯಾಗಬೇಕು. ಪ್ರತಿ ಮನೆಯಲ್ಲಿಯೂ ಒಬ್ಬ ಯೋಗ ಅಭ್ಯಾಸಿಗಳು ಇದ್ದರೆ ಕುಟುಂಬದ ಅರೋಗ್ಯ ಸುಧಾರಣೆಯಾಗುತ್ತದೆ’ ಎಂದರು.





ಮಯೂರ ನಡಿಗೆ

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಭಾನುವಾರ ಕಂಡು ಬಂದ ನವಿಲು – ಪ್ರಜಾವಾಣಿ ಚಿತ್ರ

ಆನ್‌ಲೈನ್ ಹೂಡಿಕೆ: ₹ 8.69 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಪ್ಪಟ್ಟು ಲಾಭದ ಆಮಿಷವೊಡ್ಡಿ ಆನ್‌ಲೈನ್ ಮೂಲಕ ನಗರದ ನಿವಾಸಿಗಳಿಬ್ಬರಿಂದ ₹ 8.69 ಲಕ್ಷ ಹೂಡಿಕೆ ಮಾಡಿಸಿಕೊಂಡು ವಂಚಿಸಲಾಗಿದೆ. ನಗರದ ಪೂರ್ವ ವಿಭಾಗ ಹಾಗೂ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

‘ಎಚ್‌ಬಿಆರ್ ಲೇಔಟ್‌ನ 35 ವರ್ಷದ ಮಹಿಳೆ, ಕೆನರಾ ಬ್ಯಾಂಕ್ ಶಾಖೆಯಲ್ಲಿ ಖಾತೆ ಹೊಂದಿದ್ದಾರೆ. ಇತ್ತೀಚೆಗೆ ಅವರಿಗೆ ಕರೆ ಮಾಡಿದ್ದ ಆರೋಪಿಗಳು, ‘ಆನ್‌ಲೈನ್ ಮೂಲಕ ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ನೀಡಲಾಗುವುದು’ ಎಂದಿದ್ದರು. ಅದನ್ನು ನಂಬಿದ್ದ ಮಹಿಳೆ, ಆರೋಪಿಗಳು ಹೇಳಿದ್ದ ಖಾತೆಗಳಿಗೆ ಹಂತ ಹಂತವಾಗಿ ₹ 3.69 ಲಕ್ಷ ಜಮೆ ಮಾಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹಣ ಪಡೆದು ವರ್ಷವಾದರೂ ಆರೋಪಿಗಳು ಯಾವುದೇ ಲಾಭಾಂಶ ನೀಡಿಲ್ಲ. ಹೂಡಿಕೆ ಹಣವನ್ನೂ ವಾಪಸು ಕೊಟ್ಟಿಲ್ಲ. ನೊಂದ ಮಹಿಳೆ ಠಾಣೆಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಯೂಟ್ಯೂಬ್ ಜಾಹೀರಾತು ನಂಬಿ ಹೂಡಿಕೆ: ‘ಎಲೆಕ್ಟ್ರಾನಿಕ್ ಸಿಟಿ ಬಳಿಯ ಮಂಜುನಾಥ ನಗರದ 33 ವರ್ಷದ ನಿವಾಸಿ, ಹಣ ಹೂಡಿಕೆ ಬಗ್ಗೆ ಯೂಟ್ಯೂಬ್ ವಿಡಿಯೊದಲ್ಲಿ ಜಾಹೀರಾತು ನೋಡಿದ್ದರು. ಜಾಹೀರಾತು ನೀಡಿದ್ದ ಆರೋಪಿ ಸಚಿನ್ ಕಪೂರ್ ಎಂಬಾತನಿಗೆ ಕರೆ ಮಾಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಎಚ್‌ಆರ್ ಟೆಕ್ನೊಲಾಜೀಸ್ ಕಂಪನಿಯಲ್ಲಿ ಹೂಡಿಕೆ ಮಾಡಿದರೆ ಒಳ್ಳೆಯ ಲಾಭ ಬರುವುದಾಗಿ ಆರೋಪಿ ಹೇಳಿದ್ದ. ಆತನ ಮಾತು ನಂಬಿದ್ದ ದೂರುದಾರ, ಆತ ಹೇಳಿದ್ದ ಖಾತೆಗಳಿಗೆ ಹಂತ ಹಂತವಾಗಿ ₹ 5 ಲಕ್ಷ ಹಾಕಿದ್ದರು. ಅದಾದ ನಂತರ ಕಂಪನಿಯಿಂದ ಯಾವುದೇ ಲಾಭಾಂಶ ಬಂದಿಲ್ಲ. ಈ ಸಂಗತಿ ದೂರಿನಲ್ಲಿದೆ. ಸಚಿನ್ ಕಪೂರ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದೂ ತಿಳಿಸಿವೆ.

ಗಣೇಶ ವಿಗ್ರಹ ನುಂಗಿದ ಬಾಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮೂರು ವರ್ಷದ ಬಾಲಕ ಗಣೇಶ ವಿಗ್ರಹ ನುಂಗಿದ ಘಟನೆ ನಡೆದಿದ್ದು, ಮಣಿಪಾಲ್ ಆಸ್ಪತ್ರೆಯ ವೈದ್ಯರು ಶಸ್ತ್ರಚಿಕಿತ್ಸೆಯ ಮೂಲಕ ವಿಗ್ರಹವನ್ನು ಹೊರತೆಗೆದಿದ್ದಾರೆ.

ಬಾಲಕ ನುಂಗಿದ್ದ ವಿಗ್ರಹ

ವಿಗ್ರಹದೊಂದಿಗೆ ಆಟವಾಡುತ್ತಿದ್ದ ಬಾಲಕ ಅರಿವಿಲ್ಲದೆಯೇ ಅದನ್ನು ನುಂಗಿ, ಆಹಾರ ಸೇವಿಸಲು ಕಷ್ಟಪಡುತ್ತಿದ್ದ. ಎದೆ ಮತ್ತು ಕುತ್ತಿಗೆ ಭಾಗದ ಎಕ್ಸ್‌-ರೇ ನಡೆಸಿ, ವಿಗ್ರಹ ಇರುವ ಜಾಗವನ್ನು ಪತ್ತೆ ಮಾಡಲಾಯಿತು. ಎಂಡೋಸ್ಕೊಪಿಕ್ ವಿಧಾನದ ಮೂಲಕ ವಿಗ್ರಹವನ್ನು ಹೊರತೆಗೆಯಲಾಯಿತು. ಮೂರು ಗಂಟೆಗಳ ಬಳಿಕ ಆಹಾರ ಸೇವಿಸಲು ಅವಕಾಶ ನೀಡಲಾಯಿತು. ಬಾಲಕ ಪೂರ್ಣ ಪ್ರಮಾಣದಲ್ಲಿ ಚೇತರಿಸಿಕೊಂಡಿದ್ದಾನೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಆಸ್ಪತ್ರೆಯ ಮಕ್ಕಳ ತಜ್ಞ ಡಾ. ಶ್ರೀಕಾಂತ್ ಕೆ.ಪಿ., ‘ಆಸ್ಪತ್ರೆಗೆ ದಾಖಲಾದ ಸಂದರ್ಭದಲ್ಲಿ ಮಗು ಅಸ್ವಸ್ಥವಾಗಿತ್ತು. ಒಂದು ಗಂಟೆಯ ಅವಧಿಯಲ್ಲಿ ವಿಗ್ರಹವನ್ನು ಹೊರತೆಗೆಯಲಾಯಿತು. ಇಲ್ಲವಾದಲ್ಲಿ ಅನ್ನ ನಾಳಕ್ಕೆ ತೊಂದರೆಯಾಗುವ ಸಾಧ್ಯತೆಯಿತ್ತು’ ಎಂದು ವಿವರಿಸಿದರು.

ದುಬಾರಿ ವೆಚ್ಚ: ಫೇಮ್–2 ಯೋಜನೆ ಅನುಷ್ಠಾನ ಅನುಮಾನ

ಇ–ಬಸ್: ಬಿಳಿಯಾನೆ ಭಯದಲ್ಲಿ ಬಿಎಂಟಿಸಿ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕೇಂದ್ರ ಸರ್ಕಾರದ ಫೇಮ್ ಇಂಡಿಯಾ–2(ಫಾಸ್ಟರ್ ಅಡಾಪ್ಷನ್ ಆ್ಯಂಡ್ ಮ್ಯಾನುಫ್ಯಾಕ್ಚರಿಂಗ್ ಆಫ್ ಎಲೆಕ್ಟ್ರಿಕ್ ವೆಹಿಕಲ್) ಕಾರ್ಯಕ್ರಮದಡಿ ಸಿಲಿಕಾನ್ ಸಿಟಿಗೆ ಎಲೆಕ್ಟ್ರಿಕ್ ಬಸ್ ಪರಿಚಯಿಸುವ ಬಿಎಂಟಿಸಿ ಪ್ರಯತ್ನ ಸದ್ಯಕ್ಕೆ ಸಾಕಾರವಾಗುವ ಲಕ್ಷಣ ಇಲ್ಲ. ಪ್ರಯಾಣಿಕರಿಲ್ಲದೆ ಮೊದಲೇ ಬಡವಾಗಿರುವ ಬಿಎಂಟಿಸಿ, ಈ ಎಲೆಕ್ಟ್ರಿಕ್ ಬಸ್‌ಗಳು ಬಿಳಿಯಾನೆಯ ಆಗಲಿವೆಯೇನೋ ಎಂಬ ಭಯವನ್ನು ಎದುರಿಸುತ್ತಿದೆ.

ಡೀಸೆಲ್ ಬಸ್‌ಗಳಿಗೆ ಬದಲಾಗಿ ಎಲೆಕ್ಟ್ರಿಕ್ ಬಸ್‌ಗಳನ್ನು ಪರಿಚಯಿಸುವ ಪ್ರಯತ್ನ ಇಂದು–ನಿನ್ನೆಯದಲ್ಲ. 2015ರಿಂದಲೂ ಈ ವಿಷಯ ಪ್ರಸ್ತಾಪವಾಗುತ್ತಲೇ ಇದೆ. 2015ರ ಏಪ್ರಿಲ್‌ನಲ್ಲಿ ಕೇಂದ್ರ ಸರ್ಕಾರದ 'ಫೇಮ್–1' ಯೋಜನೆ ಆರಂಭವಾಯಿತು. 80 ಬಸ್‌ಗಳನ್ನು ರಸ್ತೆಗಿಳಿಸಲು ₹14.95 ಕೋಟಿ, ಚಾರ್ಜಿಂಗ್ ಸ್ಟೇಷನ್‌ಗಳಿಗೆ ₹3.73 ಕೋಟಿ ಒಳಗೊಂಡಂತೆ ಒಟ್ಟಾರೆ ಸುಮಾರು ₹18.68 ಕೋಟಿ ನೆರವನ್ನು ನೀಡಿತ್ತು. ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಬೇಕೋ, ಗುತ್ತಿಗೆ ಆಧಾರದಲ್ಲಿ ಪಡೆಯಬೇಕೋ ಎಂಬ ಕಗ್ಗಂಟಿನಲ್ಲೇ ಬಿಎಂಟಿಸಿ ಕಾಲ ತಳ್ಳಿತು.

ಕೇಂದ್ರ ಸರ್ಕಾರ ಎರಡನೇ ಹಂತದ ಫೇಮ್–2 ಯೋಜನೆ ಜಾರಿಗೊಳಿಸಲು ಮುಂದಾಯಿತು. ಆದರೆ, ಬಸ್‌ಗಳ ಖರೀದಿಗೆ ಬದಲು ಅವುಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆಯಬೇಕು ಎಂದು ಕೇಂದ್ರ ಸರ್ಕಾರ ಷರತ್ತು ವಿಧಿಸಿತು. ಗುತ್ತಿಗೆ ಆಧಾರದಲ್ಲಿ ಎಲೆಕ್ಟ್ರಿಕ್ ಬಸ್ ಪಡೆದರೆ ಮಾತ್ರ ಸಬ್ಸಿಡಿ ನೀಡಲಾಗುವುದು ಎಂಬ ಮಾರ್ಗಸೂಚಿ ರೂಪಿಸಿತು. ಆದರೆ, ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆಯುವುದು ಬೇಡ, ಖರೀದಿ ಮಾಡಬೇಕು ಎಂದು ಈ ಹಿಂದಿನ ಸಾರಿಗೆ ಸಚಿವರು ಪಟ್ಟು ಹಿಡಿದಿದ್ದರಿಂದ ಯೋಜನೆ ಒಂದಷ್ಟು ಕಾಲ ನನೆಗುದಿಗೆ ಬಿದ್ದಿತ್ತು.

ಮುಂಗಡವಾಗಿ ಹಣ ಬಿಡುಗಡೆ ಮಾಡಿದ್ದ ಕೇಂದ್ರ ಸರ್ಕಾರ, ಬಡ್ಡಿ ಸಹಿತ ಹಣ ವಾಪಸ್ ನೀಡುವಂತೆ ತಾಕೀತು ಮಾಡಿತು. ಬಳಿಕ 300 ಬಸ್‌ಗಳನ್ನು ಗುತ್ತಿಗೆ ಆಧಾರರಲ್ಲಿ ಪಡೆದುಕೊಳ್ಳಲು ಕೆಎಸ್‌ಆರ್‌ಟಿಸಿ ಮೂಲಕ ಟೆಂಡರ್ ಪ್ರಕ್ರಿಯೆ ಆರಂಭಿಸಲಾಯಿತು. 2019ರ ಸೆಪ್ಟೆಂಬರ್‌ನಲ್ಲಿ ಆರಂಭವಾದ ಟೆಂಡರ್ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ.

ಇದರ ನಡುವೆ ದುತ್ತೆಂದು ಎದುರಾದ ಕೋವಿಡ್ ಬಿಎಂಟಿಸಿಯ ಧೈರ್ಯ ಕುಂದುವಂತೆ ಮಾಡಿದೆ. ಮೊದಲೇ ಪ್ರಯಾಣಿಕರಿಲ್ಲದೆ ಬಸ್‌ಗಳು ಖಾಲಿ ಸಂಚರಿಸುತ್ತಿವೆ. ಕೋವಿಡ್ ಪೂರ್ವದಲ್ಲೂ ಇಪಿಕೆಎಂ (ಪ್ರತಿ ಕಿ.ಮೀ.ಗೆ ಬರುವ ಆದಾಯದ ಪ್ರಮಾಣ) ₹60 ಇದ್ದರೆ ಸಿಪಿಕೆಎಂ (ಪ್ರತಿ ಕಿ.ಮೀ.ಗೆ ತಗಲುವ ವೆಚ್ಚ) ₹84 ಇತ್ತು. ಈ ಅಂತರ ಈಗ ಇನ್ನಷ್ಟು ಹೆಚ್ಚಾಗಿದೆ.

ಎಲೆಕ್ಟ್ರಿಕ್ ಬಸ್‌ಗೆ ಫೇಮ್–2ರಲ್ಲಿ ಪ್ರತಿ ಕಿಲೋ ಮೀಟರ್‌ಗೆ ₹89 ದರ ನಿಗದಿ ಮಾಡಲಾಗಿದೆ. ದಿನಕ್ಕೆ ಕನಿಷ್ಠ 200 ಕಿಲೋ ಮೀಟರ್‌ನಷ್ಟು ಬಾಡಿಗೆ ಕೊಡಲೇಬೇಕು. ಅಂದರೆ ಒಂದು ದಿನಕ್ಕೆ ಪ್ರತಿ ಬಸ್‌ಗೆ ₹17,800 ಪಾವತಿಸಲೇಬೇಕು. ಅಷ್ಟು ಪ್ರಮಾಣದ ವರಮಾನ ಆ ಬಸ್‌ಗಳಿಂದ ಬರಲಿದೆಯೇ ಎಂಬ ಪ್ರಶ್ನೆಯೂ ಉದ್ಭವವಾಗಿದೆ. ನೌಕರರ ವೇತನ ಕೊಡಲು ಸಾಧ್ಯವಾಗದ ಸ್ಥಿತಿಯಲ್ಲಿರುವ ಬಿಎಂಟಿಸಿ, ಈ ಕಷ್ಟದ ಸ್ಥಿತಿಯಲ್ಲಿ ಎಲೆಕ್ಟ್ರಿಕ್ ಬಸ್‌ಗಳನ್ನು ಗುತ್ತಿಗೆಗೆ ಪಡೆದು ಏನು ಮಾಡುವುದು ಎಂಬ ಚಿಂತೆಯಲ್ಲಿದೆ.

ವಿಮಾನ ನಿಲ್ದಾಣಕ್ಕೆ ಈಗ ಸಂಚರಿಸುತ್ತಿರುವ ವೋಲ್ವೊ ಬಸ್‌ಗಳ ಬದಲಿಗೆ ಎಲೆಕ್ಟ್ರಿಕ್ ಬಸ್‌ಗಳನ್ನು ಪರಿಚಯಿಸುವ ಉದ್ದೇಶವನ್ನು ಬಿಎಂಟಿಸಿ ಹೊಂದಿತ್ತು. ಆದರೆ, ಕೋವಿಡ್ ಕಾರಣದಿಂದ ಈ ಮಾರ್ಗದಲ್ಲೂ ಪ್ರಯಾಣಿಕರ ಕೊರತೆ ಇರುವ ಕಾರಣ ಸದ್ಯಕ್ಕೆ ಫೇಮ್–2 ಯೋಜನೆಯಡಿ ಬಸ್‌ಗಳನ್ನು ಗುತ್ತಿಗೆಗೆ ಪಡೆಯುವ ಬಗ್ಗೆಯೇ ಸಂಸ್ಥೆ ನಿರಾಸಕ್ತಿ ಹೊಂದಿದೆ ಎಂದು ಮೂಲಗಳು ತಿಳಿಸಿವೆ.

ಅಂಕಿ–ಅಂಶ

6 ಸಾವಿರ — ಬಿಎಂಟಿಸಿಯಲ್ಲಿ ಇರುವ ಬಸ್‌ಗಳ ಸಂಖ್ಯೆ

300 ಬಸ್‌ಗಳು — ಫೇಮ್–2 ಖರೀದಿಸಲು ಉದ್ದೇಶಿಸಿದ್ದ ಬಸ್‌ಗಳು

90 ಬಸ್‌ಗಳು — ಸ್ಮಾರ್ಟ್ ಸಿಟಿ ಯೋಜನೆಯಡಿ ನಗರಕ್ಕೆ ಬರಲಿರುವ ಬಸ್‌ಗಳು



ಪರೀಕ್ಷಾರ್ಥ ಸಂಚಾರಕ್ಕೆ ಸಿದ್ಧವಾಗಿರುವ ಎಲೆಕ್ಟ್ರಿಕ್ ಬಸ್

ಆಗಸ್ಟ್‌ನಲ್ಲಿ ಬರಲಿವೆ ಮಿನಿ ಬಸ್

ಫೇಮ್ ಇಂಡಿಯಾ–2 ಯೋಜನೆಯಡಿ ಬಿಎಂಟಿಸಿಗೆ 300 ಎಲೆಕ್ಟ್ರಿಕ್ ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆಯಲು ವಿಳಂಬವಾಗುತ್ತಿರುವ ಬೆನ್ನಲ್ಲೇ, ಸ್ಮಾರ್ಟ್‌ಸಿಟಿ ಯೋಜನೆಯಡಿ 90 ಎಲೆಕ್ಟ್ರಿಕ್ ಬಸ್‌ಗಳ ಕಾರ್ಯಾಚರಣೆ ಆಗಸ್ಟ್‌ನಿಂದ ಆರಂಭವಾಗುವ ನಿರೀಕ್ಷೆ ಇದೆ.

2020 ಫೆಬ್ರುವರಿಯಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು. ಅದರ ಪ್ರಕಾರ ಆರು ತಿಂಗಳಲ್ಲೇ ಬಸ್‌ಗಳು ರಸ್ತೆಗೆ ಇಳಿಯಬೇಕಿತ್ತು. ಕೋವಿಡ್ ಕಾರಣದಿಂದ ಟೆಂಡರ್ ಪ್ರಕ್ರಿಯೆ ವಿಳಂಬವಾಗಿ 2021ರ ಫೆಬ್ರುವರಿಯಲ್ಲಿ ಎನ್‌ಟಿಪಿಸಿ–ಜೆಬಿಎಂ ಕಂಪನಿಗೆ ಕಾರ್ಯಾದೇಶ ನೀಡಲಾಗಿದೆ. ಗುತ್ತಿಗೆ ಆಧಾರದಲ್ಲಿ 12 ವರ್ಷಗಳ ಅವಧಿಗೆ ಬಸ್‌ಗಳನ್ನು ಪಡೆಯಲಾಗುತ್ತಿದೆ.

30ರಿಂದ 35 ಸೀಟುಗಳನ್ನು ಹೊಂದಿರುವ 9 ಮೀಟರ್ ಉದ್ದದ ಈ ಬಸ್‌ಗಳನ್ನು ಪ್ರತಿ ಕಿಲೋ ಮೀಟರ್‌ಗೆ ₹51 ದರದಲ್ಲಿ ಪಡೆಯಲಾಗುತ್ತಿದೆ. ಒಂದು ಬಾಗಿಲನ್ನು ಹೊಂದಿರುವ ಈ ಬಸ್‌ಗಳು ಎಲ್ಲಾ ಮೆಟ್ರೊ ನಿಲ್ದಾಣಗಳಿಂದ ಫೀಡರ್ ಸೇವೆಗಳಾಗಿ ಮಾತ್ರ ಸಂಚರಿಸಲಿವೆ.

'ಮೊದಲ ಹಂತದಲ್ಲಿ ಆಗಸ್ಟ್‌ನಲ್ಲಿ ಕೆಲ ಬಸ್‌ಗಳು ರಸ್ತೆಗೆ ಇಳಿಯಲಿವೆ. ನಂತರ ಹಂತ–ಹಂತವಾಗಿ 90 ಬಸ್‌ಗಳು ಬಿಎಂಟಿಸಿ ಸೇರಿಕೊಳ್ಳಲಿವೆ' ಎಂದು ನಿಗಮದ ಸಾರ್ವಜನಿಕ ಸಂಪರ್ಕಾಧಿಕಾರಿ ಅಜಿತ್ ಬಿ.ತೋರಗಲ್ ತಿಳಿಸಿದರು.

ಮೆಟ್ರೊ ಫೀಡರ್ ಸೇವೆಗೆ ಬರಲಿರುವ ಬಸ್‌ಗಳ ಮಾದರಿ

'ಬಿಎಂಟಿಸಿ ಖಾಸಗೀಕರಣದ ಹುನ್ನಾರ'

'ಖಾಸಗಿ ಕಂಪನಿಗಳಿಂದ ಎಲೆಕ್ಟ್ರಿಕ್ ಬಸ್‌ಗಳನ್ನು ಗುತ್ತಿಗೆ ಪಡೆದು ಬಳಿಕ ಬಿಎಂಟಿಸಿ ಸಂಸ್ಥೆಯನ್ನೇ ಖಾಸಗೀಕರಣ ಮಾಡುವ ಉದ್ದೇಶದಿಂದ ಫೇಮ್ ಇಂಡಿಯಾ ಯೋಜನೆ ರೂಪಿಸಲಾಗಿದೆ' ಎಂದು ಆರೋಪಿಸುತ್ತಾರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್(ಸಿಐಟಿಯು) ಕಾರ್ಯದರ್ಶಿ ಎಚ್.ಎಸ್. ಮಂಜುನಾಥ್.

'ಎಲೆಕ್ಟ್ರಿಕ್ ಬಸ್‌ಗಳನ್ನು ಒದಗಿಸುವ ಖಾಸಗಿ ಕಂಪನಿಗಳಿಗೆ ಹಣ ನೀಡಲು ಪ್ರಯಾಣಿಕರ ಮೇಲೆ ಬರೆ ಹಾಕುವ ಸಾಧ್ಯತೆ ಇದೆ. ಈಗಾಗಲೇ ಸಂಸ್ಥೆಯ ಆಸ್ತಿಗಳನ್ನು ಅಡಮಾನ ಇಡಲಾಗಿದೆ. ಸಂಸ್ಥೆಯನ್ನು ನಷ್ಟದ ಮೇಲೆ ನಷ್ಟಕ್ಕೆ ದೂಡಿ ಬಳಿಕ ಆಸ್ತಿಗಳನ್ನು ಮಾರಾಟ ಮಾಡುವ ಸಾಧ್ಯತೆಯೂ ಇದೆ' ಎಂದರು.

'ನಷ್ಟ ಸರಿದೂಗಿಸಿಕೊಳ್ಳಲು ಕ್ರಮೇಣ ಆ ಕಂಪನಿಗಳಿಗೆ ಕೆಲ ಮಾರ್ಗಗಳನ್ನು ಬಿಟ್ಟುಕೊಡುವುದು, ಡಿಪೊಗಳನ್ನು ಬಿಟ್ಟುಕೊಡುವುದು ಮುಂತಾದ ಕ್ರಮ ಅನುಸರಿಸಿ ಮಾಡಿ ಮುಂದೊಂದು ದಿನ ಸಂಸ್ಥೆಯನ್ನೇ ಬಿಟ್ಟುಕೊಡುವ ಉದ್ದೇಶ ಇದ್ದಂತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ಈ ಹುನ್ನಾರದ ವಿರುದ್ಧ ಜನರು ಹೋರಾಟ ನಡೆಸಬೇಕು. ಇಲ್ಲದಿದ್ದರೆ ಬಿಎಂಟಿಸಿ ಖಾಸಗಿ ಪಾಲಾಗಲಿದೆ' ಎಂದು ಎಚ್ಚರಿಸಿದರು.

ವಾಯು ಮಾಲಿನ್ಯ ಕಡಿಮೆಯಾಗದು

ಬಿಎಂಟಿಸಿಗೆ ಎಲೆಕ್ಟ್ರಿಕ್ ಬಸ್‌ಗಳನ್ನು ಪರಿಚಯಿಸುವ ಒಂದೇ ಕಾರಣದಿಂದ ನಗರದಲ್ಲಿ ವಾಯು ಮಾಲಿನ್ಯ ಕಡಿಮೆ ಆಗುವುದು ಕಷ್ಟ ಎಂದು ಬಸ್ ಪ್ರಯಾಣಿಕರ ವೇದಿಕೆ ಸದಸ್ಯೆ ಶಾಹೀನ್ ಶಾಸಾ ಹೇಳಿದರು.

'ನಗರದಲ್ಲಿ 85 ಲಕ್ಷಕ್ಕೂ ಹೆಚ್ಚು ವಾಹನಗಳಿವೆ. ಬಿಎಂಟಿಸಿಯಲ್ಲಿ ಕೇವಲ 6 ಸಾವಿರ ಬಸ್‌ಗಳಿವೆ. ಅದರಲ್ಲಿ 300 ಎಲೆಕ್ಟ್ರಿಕ್ ಬಸ್‌ಗಳನ್ನು ಓಡಿಸುವುದರಿಂದ ನಗರದ ವಾಯು ಮಾಲಿನ್ಯ ನಿಯಂತ್ರಣ ಸಾಧ್ಯವೇ' ಎಂದು ಅವರು ಪ್ರಶ್ನಿಸಿದರು.

'ಆಟೋಮೊಬೈಲ್ ಉದ್ಯಮವನ್ನು ಉತ್ತೇಜಿಸಲು ಸರ್ಕಾರ ಎಲೆಕ್ಟ್ರಿಕ್ ವಾಹನಗಳಿಗೆ ಸಬ್ಸಿಡಿ ನೀಡುತ್ತಿದೆ. ಖಾಸಗಿ ಸಹಭಾಗಿತ್ವದಲ್ಲಿ ಈ ಯೋಜನೆ ಪರಿಚಯಿಸುತ್ತಿರುವ ಕಾರಣ ನಿರ್ವಹಣೆಗೆ ಮುಂದಿನ ದಿನಗಳಲ್ಲಿ ತೊಂದರೆ ಆಗುವ ಸಾಧ್ಯತೆ ಇದೆ. ಪ್ರಾಯೋಗಿಕವಾಗಿ ಎಲೆಕ್ಟ್ರಿಕ್ ಬಸ್‌ಗಳನ್ನು ಪರಿಚಯಿಸಲು ಬಿಎಂಟಿಸಿ ಹೊರಟಿದೆ. ಒಮ್ಮೆ ಬಸ್‌ಗಳು ರಸ್ತೆಗಿಳಿದ ಬಳಿಕ ಸಾಧಕ–ಬಾಧಕ ತಿಳಿಯಲಿದೆ' ಎಂದರು.

'ಬಸ್ ಪ್ರಯಾಣಿಕರ ಸಂಖ್ಯೆ ಹೆಚ್ಚಳ ಮಾಡುವತ್ತ ಬಿಎಂಟಿಸಿ ಮೊದಲು ಆದ್ಯತೆ ನೀಡಬೇಕು. ವೇಗ ಹೆಚ್ಚಿಸಲು ಬಸ್ ಆದ್ಯತಾ ಪಥಗಳನ್ನು ಎಲ್ಲೆಡೆ ಸಮರ್ಪಕವಾಗಿ ಜಾರಿಗೆ ತರಬೇಕು. ಬಸ್‌ನಲ್ಲಿ ದಟ್ಟಣೆ ಆಗದಂತೆ ನೋಡಿಕೊಳ್ಳಲು ಟ್ರಿಪ್‌ಗಳ ಸಂಖ್ಯೆ ಹೆಚ್ಚಿಸಬೇಕು. ಕೊನೆಯ ತಾಣಕ್ಕೂ ಬಸ್ ಸಂಪರ್ಕ ಕಲ್ಪಿಸುವುದು ಮುಖ್ಯ' ಎಂದು ಅವರು ವಿವರಿಸಿದರು.

ಉಚಿತ ಆರೋಗ್ಯ ಶಿಬಿರ: ಔಷಧಿ ವಿತರಣೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ : ವಿಕಾಸ ಚಾರಿಟಬಲ್ ಟ್ರಸ್ಟ್ ವತಿಯಿಂದ ಮಾಗಡಿ ರಸ್ತೆಯ ಸುಂಕದಕಟ್ಟೆ ಸಮೀಪದ ರಾಜೀವ್ ಗಾಂಧಿ ನಗರದ ಎಂ.ಇ.ಎಸ್ ಪಬ್ಲಿಕ್ ಶಾಲೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. 62 ಜನ ರಕ್ತದಾನ ಮಾಡಿದರೆ, 112 ಜನರಿಗೆ ಕಣ್ಣಿನ ಪರೀಕ್ಷೆ ಮಾಡಲಾಯಿತು. 997 ಜನರಿಗೆ ಔಷಧ ವಿತರಿಸಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಶಾಸಕ ಮುನಿರತ್ನ, 'ಟ್ರಸ್ಟ್‌ನ ಅಧ್ಯಕ್ಷ ಕೆ.ಎಸ್.ಯೋಗೇಶ್ ಅವರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಔಷಧಿ ವಿತರಣೆ, ಶಸ್ತ್ರಚಿಕಿತ್ಸೆ ಮಾಡಿಸುವ ಮೂಲಕ ಸಮಾಜಮುಖಿ ಕೆಲಸ ಮಾಡಿದ್ದಾರೆ' ಎಂದು ಪ್ರಶಂಸಿಸಿದರು.

ಯುನಿಟಿ ಲೈಫ್‌ಲೈನ್ ಹಾಸ್ಪಿಟಲ್, ಮೆಡಿಸ್ಕೋಪ್ ಬ್ಲಡ್ ಬ್ಯಾಂಕ್, ಬೆಂಗಳೂರು ಲಯನ್ಸ್ ಪಶ್ಚಿಮ ಕಣ್ಣಾಸ್ಪತ್ರೆ ಸಹಯೋಗದೊಂದಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ತಜ್ಞ ವೈದ್ಯರಾದ ಡಾ.ಚಂದ್ರಶೇಖರ್ ಸಾಲಿಮಠ, ಡಾ.ಪವನ್ ಕುಮಾರ್ ಯಾದವ್, ಡಾ.ಕಾಂತೇಶ್.ಆರ್. ಚೌಧರಿ, ಡಾ.ಡೆಲ್ವಿ, ಡಾ.ಶ್ರುತಿ, ಡಾ.ಹೇಮಲತಾ, ಡಾ.ದೀಪಿಕಾ, ಡಾ.ಚಂದನಾ, ಡಾ.ಸಹಜಾ ಖಾನ್ ನೇತೃತ್ವದಲ್ಲಿ ಆರೋಗ್ಯ ತಪಾಸಣೆ ನಡೆಯಿತು.

ಶಾಸಕ ಮುನಿರತ್ನ ಅವರು ರಕ್ತದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಟ್ರಸ್ಟ್‌ನ ಅಧ್ಯಕ್ಷ ಕೆ.ಎಸ್.ಯೋಗೇಶ್, ತಜ್ಞ ವೈದ್ಯರಾದ ಡಾ.ಚಂದ್ರಶೇಖರ್ ಸಾಲಿಮಠ, ಡಾ.ಪವನ್ ಕುಮಾರ್ ಯಾದವ್ ಇದ್ದಾರೆ

ಫೀನಿಕ್ಸ್ ರಿಕ್ರಿಯೇಷನ್ ಕ್ಲಬ್ ಮೇಲೆ ದಾಳಿ; ಕಟ್ಟಡದಿಂದ ಹಣ ಎಸೆದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರದ ಫೀನಿಕ್ಸ್ ರಿಕ್ರಿಯೇಷನ್ ಕ್ಲಬ್ ಮೇಲೆ ಪೊಲೀಸರು ದಿಢೀರ್ ದಾಳಿ ಮಾಡಿದ್ದು, ಕೆಲ ಆರೋಪಿಗಳು ಕಟ್ಟಡದಿಂದ ಹೊರಗೆ ಹಣದ ಕಂತೆಗಳನ್ನು ಎಸೆದು ಪರಾರಿಯಾಗಿದ್ದಾರೆ.

'ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ರಾಜ್ಯ ಸರ್ಕಾರ ಮಾರ್ಗಸೂಚಿಗಳನ್ನು ರೂಪಿಸಿದೆ. ಕೆ.ಟಿ. ರಸ್ತೆಯಲ್ಲಿರುವ ಕ್ಲಬ್‌ನಲ್ಲಿ ಗುಂಪು ಸೇರುತ್ತಿದ್ದ ಜನ, ನಿಯಮ ಉಲ್ಲಂಘಿಸಿದ್ದರು. ಅಕ್ರಮವಾಗಿ ಜೂಜಾಟದಲ್ಲಿ ತೊಡಗಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಶನಿವಾರ ದಾಳಿ ಮಾಡಲಾಯಿತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಜೂಜಾಟದಲ್ಲಿ ತೊಡಗಿದ್ದ ಆರೋಪದಡಿ 57 ಮಂದಿಯನ್ನು ಬಂಧಿಸಲಾಗಿದೆ. ₹ 2.34 ಲಕ್ಷ ನಗದು ಹಾಗೂ 3 ಸ್ವೈಪಿಂಗ್ ಉಪಕರಣ ಜಪ್ತಿ ಮಾಡಲಾಗಿದೆ. ಈ ಬಗ್ಗೆ ಇಂದಿರಾನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದರು.

'ವ್ಯವಸ್ಥಿತವಾಗಿ ಜೂಜು ಆಡಿಸುತ್ತಿದ್ದ ಆರೋಪಿಗಳು, ಸ್ವೈಪಿಂಗ್ ಉಪಕರಣದ ಮೂಲಕ ಹಣ ವರ್ಗಾವಣೆ ಮಾಡಿಸಿಕೊಳ್ಳುತ್ತಿದ್ದರು. ಈ ಕೃತ್ಯ ಹಲವು ದಿನಗಳಿಂದ ನಡೆಯುತ್ತಿದ್ದ ಬಗ್ಗೆ ಮಾಹಿತಿ ಇದೆ' ಎಂದೂ ತಿಳಿಸಿದರು.

ಕ್ಲಬ್ ಕಟ್ಟಡದಿಂದ ಎಸೆದ ಹಣದ ಕಂತೆಗಳನ್ನು ಹಿಡಿಯುತ್ತಿದ್ದ ಪ್ರಮುಖ ಆರೋಪಿ

ವಿಡಿಯೊ ಸೆರೆ: ಪೊಲೀಸರ ದಾಳಿ ನಡೆಯುತ್ತಿದ್ದಂತೆ ಕೆಲ ಆರೋಪಿಗಳು ಕ್ಲಬ್‌ನ ಬಹುಮಹಡಿ ಕಟ್ಟಡದಿಂದ ಪೈಪ್ ಮೂಲಕ ಇಳಿದು ಪರಾರಿಯಾಗಿದ್ದಾರೆ. ಈ ದೃಶ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ.

ಪ್ರಮುಖ ಆರೋಪಿ ಎನ್ನಲಾದ ವ್ಯಕ್ತಿ ಕಟ್ಟಡದಿಂದ ಮೊದಲಿಗೆ ಹೊರಗೆ ಬಂದಿದ್ದ. ಕಟ್ಟಡದ ಮಹಡಿ ಹಾಗೂ ಕಿಟಕಿ ಬಳಿ ನಿಂತಿದ್ದ ಕೆಲವರು, ಹಣದ ಕಂತೆಗಳನ್ನು ಆತನಿಗೆ ಎಸೆದಿದ್ದರು. ಹಣದ ಕಂತೆಗಳ ಸಮೇತ ಆರೋಪಿ ಪರಾರಿಯಾಗಿದ್ದಾನೆ. ನಂತರ, ಉಳಿದ ಆರೋಪಿಗಳು ಕಟ್ಟಡದಿಂದ ಇಳಿದು ಓಡಿಹೋಗಿದ್ದಾರೆ. ಈ ದೃಶ್ಯ ವಿಡಿಯೊದಲ್ಲಿದೆ.

ಪೊಲೀಸರ ವೈಫಲ್ಯ: ಸ್ಥಳೀಯರ ಆರೋಪ

'ದಾಳಿ ನಡೆದಾಗಲೇ ಆರೋಪಿಗಳು ಕಟ್ಟಡದಿಂದ ತಪ್ಪಿಸಿಕೊಂಡು ಹೋಗಿದ್ದಾರೆ. ಇದಕ್ಕೆ ಪೊಲೀಸರ ವೈಫಲ್ಯ ಕಾರಣ. ತಪ್ಪಿತಸ್ಥ ಪೊಲೀಸರ ವಿರುದ್ಧ ಕಮಿಷನರ್ ಅವರು ಕ್ರಮ ಕೈಗೊಳ್ಳಬೇಕು' ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಗೃಹ ರಕ್ಷಕ ದಳದಿಂದ ಸಸಿ ನೆಡುವ ಕಾರ್ಯಕ್ರಮ

ಬೆಂಗಳೂರು: 'ನಗರದಲ್ಲಿ ಗೃಹ ರಕ್ಷಕ ದಳದಿಂದ ಈ ವರ್ಷ 1 ಲಕ್ಷ ಗಿಡಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಸ್ತೆ ಬದಿಯ, ಸರ್ಕಾರಿ ಕಚೇರಿಗಳು, ಆಸ್ಪತ್ರೆಗಳ ಆವರಣ, ಶಾಲೆಗಳ ಪ್ರಾಂಗಣಗಳಲ್ಲಿನ ಖಾಲಿ ಜಾಗಗಳಲ್ಲಿ ಪ್ರತಿಯೊಬ್ಬ ಗೃಹಕ್ಷಕ ಸಿಬ್ಬಂದಿ ನಾಲ್ಕರಿಂದ ಐದು ಗಿಡಗಳನ್ನು ನೆಡಲಿದ್ದಾರೆ' ಎಂದು ಬೆಂಗಳೂರು ಉಪವಿಭಾಗದ ಸಹಾಯಕ ಪೊಲೀಸ್ ಕಮಿಷನರ್ ಗೋಪಾಲಕೃಷ್ಣ ಬಿ.ಗೌಡರ್ ತಿಳಿಸಿದರು.

ಕರ್ನಾಟಕ ರಾಜ್ಯ ಗೃಹ ರಕ್ಷಕ ದಳವು ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯ ಸಹಯೋಗದಲ್ಲಿ ಭಾನುವಾರ ಏರ್ಪಡಿಸಿದ್ದ ವನಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಿಇಎಲ್ ಸಂಸ್ಥೆಯ ಆವರಣದಲ್ಲಿ ಸಂಸ್ಥೆಯ ಹಿರಿಯ ಉಪ ಪ್ರಧಾನ ವ್ಯವಸ್ಥಾಪಕಿ ಹೇಮಾ ಆರ್.ರಾವ್ ಮತ್ತು ಗೋಪಾಲಕೃಷ್ಣ ಬಿ.ಗೌಡರ್ ಅವರು ಗಿಡಗಳನ್ನು ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಿಇಎಲ್ ಆವರಣದಲ್ಲಿ 400 ಗಿಡಗಳನ್ನು ನೆಡಲಾಯಿತು.

'ಬಿಇಎಲ್ ನಮ್ಮ ದೇಶದ ಹೆಮ್ಮೆ. ಬಿಇಎಲ್ ಟೌನ್ ಶಿಪ್‌ನಲ್ಲಿ ಹಸಿರು ನೋಡಿದರೆ ಮನೋಲ್ಲಾಸವಾಗುತ್ತದೆ. ಇಲ್ಲಿ ವರ್ಷವಿಡೀ ಸಸಿ ನೆಡುವ ಕಾರ್ಯ ನಡೆಯುತ್ತಿರುತ್ತದೆ. ಈ ಸಂಸ್ಥೆ 30 ವರ್ಷಗಳಿಂದಲೂ ಗೃಹರಕ್ಷಕ ದಳಕ್ಕೆ ಸಹಕಾರ ನೀಡುತ್ತಿದೆ' ಎಂದು ಗೋಪಾಲಕೃಷ್ಣ ಬಿ. ಗೌಡರ್ ತಿಳಿಸಿದರು.

ಹೇಮಾ ಆರ್. ರಾವ್, 'ಗೃಹರಕ್ಷಕ ದಳದ ಮಹಿಳೆಯರ ಘಟಕವು ಬಿಇಎಲ್‌ನಲ್ಲಿ ಪ್ರಥಮವಾಗಿ ಆರಂಭವಾಗಿದ್ದು ನಮಗೆ ಹೆಮ್ಮೆ ತರುವ ವಿಷಯ. ರಾಜ್ಯದಲ್ಲಿ ಪೊಲೀಸ್ ಸಿಬ್ಬಂದಿಗೆ ಸರಿಸಮನಾಗಿ ಗೃಹರಕ್ಷಕ ದಳದ ಸಿಬ್ಬಂದಿ ಸೇವೆ ಸಲ್ಲಿಸುತ್ತಿದ್ದಾರೆ.' ಎಂದರು.

ಜಾಗೃತಿ ಕಾರ್ಯಕ್ರಮ

ಪಾದಚಾರಿ ಸ್ನೇಹಿ ರಸ್ತೆಗಳ ಬಗ್ಗೆ ಜಾಗೃತಿ ಮೂಡಿಸಲು ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ, ನಗರ ಭೂಸಾರಿಗೆ ನಿರ್ದೇಶನಾಲಯ, 'ಸ್ಟ್ರೀಟ್ಸ್ ಫಾರ್ ಪೀಪಲ್ ಚಾಲೆಂಜ್' ಸಂಸ್ಥೆ ಹಾಗೂ ವಿಲ್ಸನ್ ಗಾರ್ಡನ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಜಂಟಿಯಾಗಿ ವಿಲ್ಸನ್ ಗಾರ್ಡನ್‌ನ ಸಿದ್ದಯ್ಯ ರಸ್ತೆಯಲ್ಲಿ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಹಿಳೆಯರು ಉತ್ಸಾಹದಿಂದ ಭಾಗವಹಿಸಿದ್ದರು– ಪ್ರಜಾವಾಣಿ ಚಿತ್ರ

ಆನ್‌ಲೈನ್ ಜೂಜು ನಿಷೇಧಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ಜೂಜಾಟ ಹೆಚ್ಚಾಗುತ್ತಿದ್ದು, ಸಾವಿರಾರು ಮಂದಿ ಹಣ ಕಳೆದುಕೊಳ್ಳುತ್ತಿದ್ದಾರೆ. ಇಂಥ ಜೂಜಾಟ ನಿರ್ಬಂಧಿಸುವಂತೆ ಒತ್ತಾಯಿಸಿ ಸಾಮಾಜಿಕ ಜಾಲತಾಣದಲ್ಲಿ ಅಭಿಯಾನ ಶುರುವಾಗಿದೆ.

ಫೇಸ್‌ಬುಕ್ ಹಾಗೂ ಟ್ವಿಟರ್‌ನಲ್ಲಿ ಪೋಸ್ಟ್‌ಗಳನ್ನು ಹರಿಬಿಡುತ್ತಿರುವ ಸಾರ್ವಜನಿಕರು, 'ಆನ್‌ಲೈನ್ ಜೂಜಾಟ ಬೇಡವೇ ಬೇಡ' ಎಂದು ಆಗ್ರಹಿಸುತ್ತಿದ್ದಾರೆ.

'ಆನ್‌ಲೈನ್ ಗ್ಯಾಂಬ್ಲಿಗ್, ಘನ ಸರ್ಕಾರಕ್ಕಿದು ತರವಲ್ಲ ನೋಡ !', 'ಆನ್‌ಲೈನ್‌ನಲ್ಲಿ ಗ್ಯಾಂಬ್ಲಿಗ್, ಬದುಕು ಆಫ್‌ಲೈನ್' ಮುಂತಾದ ಬರಹಗಳನ್ನು ತಮ್ಮ ಸಾಮಾಜಿಕ ಜಾಲತಾಣಗಳ ಖಾತೆಗಳಲ್ಲಿ ಪ್ರಕಟಿಸುತ್ತಿದ್ದಾರೆ.

'ಮನರಂಜನೆ ಹಾಗೂ ಸಮಯ ಕಳೆಯುವ ಹೆಸರಿನಲ್ಲಿ ಶುರುವಾದ ಆನ್‌ಲೈನ್ ಜೂಜು, ಇಂದು ವಿಭಿನ್ನ ಆಯಾಮ ಪಡೆಯುತ್ತಿದೆ. ಸುಲಭವಾಗಿ ಹಣ ಗಳಿಸುವ ಆಸೆಯಿಂದ ಹಲವರು ಲಕ್ಷಗಟ್ಟಲೇ ಹಣ ಕಟ್ಟಿ ಕೆಲವರು ಜೂಜು ಆಡುತ್ತಿದ್ದಾರೆ. ಆ ಪೈಕಿ ಬಹುತೇಕರು ಹಣ ಕಳೆದುಕೊಳ್ಳುತ್ತಿದ್ದಾರೆ. ಅವರೆಲ್ಲರ ಕುಟುಂಬಗಳು ಬೀದಿಗೆ ಬರುತ್ತಿವೆ' ಎಂದು ಈ ಅಭಿಯಾನದಲ್ಲಿ ತೊಡಗಿಸಿಕೊಂಡವರು ದೂರುತ್ತಿದ್ದಾರೆ.

ಆನ್‌ಲೈನ್ ಜೂಜು ನಿಷೇಧಕ್ಕೆ ಕಾಯ್ದೆ: ಆನ್‌ಲೈನ್ ಜೂಜು ಹಾಗೂ ಇತರೆ ಆಟಗಳ ನಿಷೇಧದ ಬಗ್ಗೆ ರಾಜ್ಯ ಸರ್ಕಾರ ಚಿಂತನೆ ನಡೆಸುತ್ತಿದೆ. ಶೀಘ್ರವೇ ಕಾಯ್ದೆ ಜಾರಿಗೆ ಸಿದ್ಧತೆ ನಡೆಸಿದೆ. ಈ ಬಗ್ಗೆ ರಾಜ್ಯ ಸರ್ಕಾರವೇ ಇತ್ತೀಚೆಗೆ ಹೈಕೋರ್ಟ್‌ಗೆ ಮಾಹಿತಿ ನೀಡಿದೆ.

'ಮಸೂದೆ ಸಿದ್ಧವಾಗಿದೆ. ಅದರಲ್ಲಿ ಕೆಲ ಬದಲಾವಣೆಗಳಿದ್ದು, ಅವುಗಳನ್ನು ತಿದ್ದುವ ಕೆಲಸ ನಡೆದಿದೆ. ಮಸೂದೆ ಹೇಗಿರಬೇಕು, ಯಾವೆಲ್ಲ ಆಟಗಳನ್ನು ನಿಷೇಧಿಸಬೇಕು, ನಿಯಮ ಉಲ್ಲಂಘನೆಗೆ ಶಿಕ್ಷೆ ಏನು... ಮೊದಲಾದ ಅಂಶಗಳನ್ನು ಚರ್ಚಿಸಲಾಗುತ್ತಿದೆ' ಎಂದು ಗೃಹ ಇಲಾಖೆಯ ಮೂಲಗಳು ಹೇಳಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

Business to Business

Business

WANTED BUSINESS Partner, Lahab Veg Hotel, Investment Rs 5 Lakhs, Income 50:50. Contact: 8892501007/ 9606701007

JOB OPPORTUNITIES

Marketing & Sales

WANTED MARKETING Executives For Private Limited Company Bangalore, Age Below 40 with Good Communication Skill fluent In English, Kannada, Hindi Contact: 9108458798/ 23384085

Call Centre

JOBS FOR-WOMEN (Reliance) Age above 30 years (Degree) Fixed Salary - 18,000/- Contact: 9343349670

REAL ESTATE BUYING

Farm House/ Land/ Resorts

Tumkur Road

REQUIREMENT OF 15 to 20 Acers LAND on TUMKUR ROAD with Road-Approach 60ft. 9663224353/ 9845417487

PUBLIC NOTICE

PUBLIC NOTICE
Public are hereby informed that SYED KHALEEL S/o SYED ABBAS age about 30 years Residing at: No.6 East Street Neelasandra Bangalore-560047. has LOST below mentions documents
1. SALE DEED which registered as document No. 1022/(1969-70)Book-1, volume 68, pages 163-166 Dated: 28/7/1969
2. FAMILY PARTITION DEED (triplicate) dated 08/11/1965 Registered as document No.2249 in book -1 volume 1393 pages 21 to 24 in office of the Sub-Registrar, Jayanagar, Bangalore.
3. APPROVAL HOUSE PLAN presented with documents No.2249/ 65-66 volume No 31 page 306 dated 12/11/1965.
A Police complaint also lodge in this regard on 07/07/2021
If any person finds the same may kindly delivered to the above address

PERSONAL

Change of Name

I, MANJUNATH Bangalore, Residing at #180, 5th Cross, GKW Layout, Vijayanagar, Bengaluru-560040. Have Changed My Name to Manjunath Bakshi, Vide affidavit dated 22-05-2019, before Notary H.S.Sakalesh Aradhya, Bangalore.

I, ROYAL Sr Rebello D/O, Pascal Rebello R/o Flat-C, Prakruti Royal Shulters, Ganganagar, Bangalore-32 have changed my name to Aditi Royal Rebello for all purposes.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

CONNECT

NIIT ICICI Bank
BECOME A BANKING PROFESSIONAL AT ICICI BANK
With a PG Diploma in Sales and Relationship Banking
Eligibility:
19-25 years of age with min. 50% in X, XII and Graduation.
Call Now: 1800 200 7261

SS ACHARYA INSTITUTE OF ALLIED HEALTH SCIENCE
Paramedical Diploma & Paramedical Degree In All Courses
SSLC/PUC Pass
100% JOB
ADMISSION OPEN 2021-22
New BEL ISRO Road, Bangalore-94
Call us: 63640 61616

ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನಲ್ಲಿ ಕೃಷ್ಣಾ ನದಿ ಪ್ರವಾಹದಿಂದ ಜಲಾವೃತಗೊಂಡಿರುವ ದರೂರ ಗ್ರಾಮದ ಜನರು ಜಾನುವಾರುಗಳೊಂದಿಗೆ ಸುರಕ್ಷಿತ ಪ್ರದೇಶಗಳಿಗೆ ತೆರಳುತ್ತಿದ್ದಾರೆ

ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ನಾರಾಯಣಪುರ ಬಸವಸಾಗರ ಜಲಾಶಯದ 30 ಗೇಟ್‌ಗಳ ಮೂಲಕ ಭಾನುವಾರ 3.34 ಲಕ್ಷ ಕ್ಯುಸೆಕ್ ನೀರನ್ನು ಕೃಷ್ಣಾ ನದಿಗೆ ಹರಿಬಿಡಲಾಯಿತು - ಪ್ರಜಾವಾಣಿ ಚಿತ್ರ/ ಭೀಮಶೇನರಾವ ಕುಲಕರ್ಣಿ

ಚಿಕ್ಕೋಡಿ ತಾಲ್ಲೂಕಿನಲ್ಲಿ ಕೃಷ್ಣಾ ನದಿ ದಂಡೆಯಲ್ಲಿರುವ ಕಲ್ಲೋಳ ಗ್ರಾಮಸ್ಥರು ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುತ್ತಿರುವ ಚಿತ್ರ.

ಚಿಕ್ಕೋಡಿ ತಾಲ್ಲೂಕಿನ ಹಲವು ಹಳ್ಳಿಗಳು ಜಲಾವೃತ • ದ್ವೀಪಗಳಂತಾದ ಗೋಕಾಕ, ಘಟಪ್ರಭಾ • ಕಾಳಜಿ ಕೇಂದ್ರಗಳಿಗೆ ಜನರ ಸ್ಥಳಾಂತರ

ಕೃಷ್ಣಾ, ತುಂಗಭದ್ರಾ: ಒಳಹರಿವು ಭಾರಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಳಗಾವಿ: ರಾಜ್ಯದಲ್ಲಿ ಭಾನುವಾರ ಮಳೆಯ ಬಿರುಸು ಕಡಿಮೆಯಾಗಿದೆ. ಆದರೆ ನದಿಗಳಲ್ಲಿ ನೀರಿನ ಒಳಹರಿವು ಹೆಚ್ಚಿನ ಪ್ರಮಾಣದಲ್ಲೇ ಇದೆ. ಕೃಷ್ಣಾ, ತುಂಗಭದ್ರಾ ಜಲಾಶಯದ ಒಳಹರಿವು ಭಾರಿ ಹೆಚ್ಚಳವಾಗಿದೆ.

ಘಟಪ್ರಭಾ, ಮಲಪ್ರಭಾ, ಕೃಷ್ಣಾ ನದಿಗಳೂ ಉಕ್ಕಿ ಹರಿಯುತ್ತಿವೆ. ಮಹಾರಾಷ್ಟ್ರದಿಂದ ಕೃಷ್ಣಾ ನದಿಗೆ ಬರುತ್ತಿರುವ ನೀರಿನ ಪ್ರಮಾಣ ಹೆಚ್ಚಾಗಿರುವುದರಿಂದಾಗಿ ಚಿಕ್ಕೋಡಿ ತಾಲ್ಲೂಕಿನ ಹಲವು ಹಳ್ಳಿಗಳು ಜಲಾವೃತಗೊಂಡಿವೆ.

ನಿಪ್ಪಾಣಿ ತಾಲ್ಲೂಕಿನ ಯಮಗರ್ಣಿ ಬಳಿ ವೇದಗಂಗಾ ನದಿಯಿಂದ ಮುಳುಗಡೆಯಾಗಿರುವ ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ-4ರಲ್ಲಿ ಮೂರು ದಿನಗಳಾದರೂ ನೀರಿನ ಪ್ರಮಾಣ ಕಡಿಮೆಯಾಗಿಲ್ಲ.

ಮಹಾರಾಷ್ಟ್ರದ ರಾಜಾಪುರ ಬ್ಯಾರೇಜ್‌ನಿಂದ 3,02,348 ಮತ್ತು ದೂಧ್‌ಗಂಗಾ ನದಿಯಿಂದ 54,738 ಸೇರಿ ಒಟ್ಟು 3,57,086 ಕ್ಯುಸೆಕ್ ನೀರು ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣೆಗೆ ಬಂದು ಸೇರುತ್ತಿದೆ. ಇದರಿಂದಾಗಿ ನದಿ ತೀರದಲ್ಲಿ ಪ್ರವಾಹದ ಆತಂಕ ಹೆಚ್ಚಾಗಿದೆ. ಚಿಕ್ಕೋಡಿ ತಾಲ್ಲೂಕಿನ ಮಾಂಜರಿ, ಯಡೂರ, ಚಂದೂರ, ಯಡೂರವಾಡಿ, ಇಂಗಳಿ ಗ್ರಾಮಗಳನ್ನು ನೀರು ಆವರಿಸಿದೆ. ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗುತ್ತಿದೆ. ಕಾಳಜಿ ಕೇಂದ್ರಗಳಲ್ಲಿ ತಾತ್ಕಾಲಿಕವಾಗಿ ಆಶ್ರಯ ಕಲ್ಪಿಸಲಾಗಿದೆ.

ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ಯಾವಗಲ್ ಸಮೀಪದಲ್ಲಿ ಬೆಣ್ಣೆ ಹಳ್ಳದ ಸೇತುವೆ ಮೇಲೆ ಲಾರಿಯೊಂದು ಭಾನುವಾರ ಸಾಗುತ್ತಿದ್ದಾಗ ನೀರಿನ ರಭಸಕ್ಕೆ ಮಗುಚಿ ಬಿದ್ದಿದೆ

ಅಥಣಿ ತಾಲ್ಲೂಕಿನಲ್ಲಿ ಜತ್ತ-ಜಾಂಬೋಟಿ ಹೆದ್ದಾರಿಯ ಸೇತುವೆ ಮೇಲೆ ನೀರು ಹರಿಯುತ್ತಿದೆ. ಜನರು ಅಪಾಯವನ್ನೂ ಲೆಕ್ಕಿಸದೆ ಅದರಲ್ಲೇ ಸಂಚರಿಸುತ್ತಿದ್ದಾರೆ. ಆ ತಾಲ್ಲೂಕಿನ ದರೂರ, ಸಪ್ತಸಾಗರ, ತೀರ್ಥ, ನದಿಇಂಗಳಗಾವ ಸೇರಿದಂತೆ 12 ತೋಟದ ವಸತಿಗಳು ಮತ್ತು ಗ್ರಾಮಗಳಲ್ಲಿ ಮುಳುಗಡೆ ಭೀತಿ ಎದುರಾಗಿದ್ದು,ಜನರು ಮತ್ತು ಜಾನುವಾರುಗಳನ್ನು ಸಮೀಪದ ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ.

ಸತ್ತಿ, ರಡ್ಡೇರಹಟ್ಟಿ, ಹುಲಗಬಾಳಿ, ಶೇಗುಣಸಿ ಸೇರಿದಂತೆ 22 ಕಡೆಗಳಲ್ಲಿ ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದ್ದು, ಜನರನ್ನು ಅಲ್ಲಿಗೆ ಸ್ಥಳಾಂತರಿಸುವ ಕಾರ್ಯ ನಡೆದಿದೆ. ಈ ಹಳ್ಳಿಗಳು 2019ರಲ್ಲೂ ನೆರೆ ಬಾಧಿತವಾಗಿದ್ದವು.

ದ್ವೀಪಗಳಂತಾಗಿರುವ ಪಟ್ಟಣಗಳು: ಹಿರಣ್ಯಕೇಶಿ ನದಿ ಪ್ರವಾಹದಿಂದ ಸಂಕೇಶ್ವರ ಪಟ್ಟಣದ ವಿವಿಧ ಗಲ್ಲಿಗಳು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳು ಜಲಾವೃತ ಸ್ಥಿತಿಯಲ್ಲೇ ಇವೆ. ಘಟಪ್ರಭಾ ಉಕ್ಕಿ ಹರಿಯುತ್ತಿರುವುದರಿಂದ ಗೋಕಾಕ, ಘಟಪ್ರಭಾ ಪಟ್ಟಣಗಳು ದ್ವೀಪಗಳಂತಾಗಿವೆ.

ಮಹಾರಾಷ್ಟ್ರದ ಕಾಗಲ್ ಬಳಿಯ ರಸ್ತೆ ಮುಳುಗಿದೆ. ಪರಿಣಾಮ, ಕರ್ನಾಟಕ-ಮಹಾರಾಷ್ಟ್ರ ಸಂಪರ್ಕ ಕಡಿತಗೊಂಡಿದೆ. ಅಲ್ಲಿಂದ ಇಲ್ಲಿಗೆ ಮತ್ತು ಇಲ್ಲಿಂದ ಅಲ್ಲಿಗೆ ತೆರಳಬೇಕಿದ್ದ ಗೂಡ್ಸ್ ಮೊದಲಾದ ಲಾರಿಗಳು ಸೇವಾ ರಸ್ತೆಗಳಲ್ಲಿ ಸಾಲು ಸಾಲಾಗಿ ನಿಂತಿವೆ.

ಹೊಸಪೇಟೆಯ ತುಂಗಭದ್ರಾ ಜಲಾಶಯದ ಒಳಹರಿವು ಭಾರಿ ಹೆಚ್ಚಳವಾಗಿರುವುದರಿಂದ ಜಲಾಶಯದ ಒಟ್ಟು 33 ಕ್ರಸ್ಟ್‌ಗೇಟ್‌ಗಳ ಪೈಕಿ 20 ಗೇಟ್‌ಗಳನ್ನು ಎರಡು ಅಡಿ ಮೇಲೆ ತೆಗೆದು ಒಂದು ಲಕ್ಷ ಕ್ಯುಸೆಕ್ ನೀರು ನದಿಗೆ ಹರಿಸಲಾಗುತ್ತಿದೆ. ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನದ ತುಂಗಭದ್ರಾ ನದಿ ಸ್ನಾನಘಟ್ಟ, ಚಕ್ರತೀರ್ಥ, ಪುರಂದರ ಮಂಟಪ ಭಾಗಶಃ ಮುಳುಗಿದೆ. ಹೂವಿನಹಡಗಲಿ ತಾಲ್ಲೂಕಿನ ನದಿ ತೀರ ಗ್ರಾಮಗಳ ಸಂಪರ್ಕ ಕಡಿತವಾಗಿದೆ. ಇಲ್ಲಿನ ಸುಕ್ಷೇತ್ರ ಮದಲಗಟ್ಟಿ ಆಂಜನೇಯ ದೇವಸ್ಥಾನ ಜಲಾವೃತವಾಗಿದೆ.

ನೀರಿನ ರಭಸಕ್ಕೆ ಮಗುಚಿದ ಲಾರಿ: ಗದಗ ಜಿಲ್ಲೆ ನರಗುಂದ-ರೋಣ ರಸ್ತೆ ಮಧ್ಯೆ ಇರುವ ಯಾವಗಲ್ ಸಮೀಪದಲ್ಲಿನ ಬೆಣ್ಣೆ ಹಳ್ಳದಲ್ಲಿ ಪ್ರವಾಹ ಪರಿಸ್ಥಿತಿ ಭಾನುವಾರವೂ ಮುಂದುವರಿದಿದೆ. ಆಂಧ್ರದ ಗೂಡ್ಸ್ ಲಾರಿಯೊಂದು ರೋಣ ಕಡೆಗೆ ತೆರಳಲು ತುಂಬಿ ಹರಿಯುವ ಸೇತುವೆ ದಾಟುವ ವೇಳೆ ನೀರಿನ ರಭಸಕ್ಕೆ ಸಿಕ್ಕಿ ಮಗುಚಿಕೊಂಡಿತು. ಲಾರಿ ಕಿರು ಸೇತುವೆಯ ರಕ್ಷಣಾ ಕಲ್ಲುಗಳಿಗೆ ಸಿಕ್ಕಿಹಾಕಿಕೊಂಡಿದ್ದರಿಂದ ಚಾಲಕ, ಕ್ಲೀನರ್ ಅಪಾಯದಿಂದ ಪಾರಾಗಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	110.10	37,048	10,034
ಹಾರಂಗಿ	2,859	2,854.29	12,485	12,722
ಕಬಿನಿ	2284.00	2,280	28,000	25,000
ಹೇಮಾವತಿ	2,922	2,916.29	27,054	2,770
ಲಿಂಗನಮಕ್ಕಿ	1,819	1,803.85	39,086	-
ಸೂಪಾ (ಮೀ)	564	549.70	38,617	2,595
ಮಾಣಿ	594	580.36	5,957	-
ತುಂಗಭದ್ರಾ	1,633	1,629.35	2,05,762	36,217
ಮಲಪ್ರಭಾ	2079.5	2076.30	54,474	18,394
ಘಟಪ್ರಭಾ	2175	2,169.10	65,019	47,907
ಭದ್ರಾ	186	177.6	33,431	106
ಆಲಮಟ್ಟಿ (ಮೀ)	519.6	515.87	2,34,935	3,50,408
ನಾರಾಯಣಪುರ (ಮೀ)	492.25	489.41	3,10,000	2,88,300

* ನೆಲಮಟ್ಟದಿಂದ

ಘೋಷಣೆಯಾಗದ ಪರಿಹಾರ ಪ್ಯಾಕೇಜ್

ಬೆಳಗಾವಿ: ಜಿಲ್ಲೆಯಲ್ಲಿ ನೆರೆಪೀಡಿತವಾದ ಕೆಲವು ಪ್ರದೇಶಗಳಿಗೆ ಭಾನುವಾರ ಭೇಟಿ ನೀಡಿ ಪರಿಶೀಲನಾ ಕಾರ್ಯವನ್ನು ಕೆಲವೇ ನಿಮಿಷಗಳಲ್ಲಿ ತರಾತುರಿಯಲ್ಲಿ ಮುಗಿಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು, ನೆರೆ ಸಂತ್ರಸ್ತರ ಅಳಲು ಆಲಿಸಲು ಆದ್ಯತೆ ನೀಡಲಿಲ್ಲ ಮತ್ತು ಪರಿಹಾರಕ್ಕಾಗಿ ಆರ್ಥಿಕ ಪ್ಯಾಕೇಜ್ ಘೋಷಿಸಲಿಲ್ಲ.

ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರದಲ್ಲಿ ಹಿರಣ್ಯಕೇಶಿ ನದಿ ಪ್ರವಾಹದಿಂದ ಬಾಧಿತವಾಗಿರುವ ಗಲ್ಲಿಗಳ ಜನರ ಅಹವಾಲು ಕೇಳಲಿಲ್ಲ. ಮಹಾಲಕ್ಷ್ಮಿ ದೇವಸ್ಥಾನದ ಎದುರು ಉಕ್ಕಿ ಹರಿಯುತ್ತಿರುವ ಹಳ್ಳವನ್ನಷ್ಟೆ ವೀಕ್ಷಿಸಿ ತೆರಳಿದರು.

‘ಮಠ ಗಲ್ಲಿ, ನದಿ ಗಲ್ಲಿ, ಕುಂಬಾರ ಗಲ್ಲಿ, ಹರಗಾಪುರ ಗಲ್ಲಿ, ಹೊಸ ಓಣಿ, ಸುತಾರ ಗಲ್ಲಿ, ಪಿಂಜಾರ ಗಲ್ಲಿಯಲ್ಲಿ ಮನೆಗಳು ಜಲಾವೃತವಾಗಿವೆ. ಮುಖ್ಯಮಂತ್ರಿ ಬಂದು ಅಹವಾಲು ಆಲಿಸುತ್ತಾರೆ; ಪರಿಹಾರ ಕಲ್ಪಿಸುತ್ತಾರೆ ಎಂಬ ನಿರೀಕ್ಷೆಯಲ್ಲಿದ್ದೆವು. ಆದರೆ, ಅವರು ತಣ್ಣೀರು ಎರಚಿದರು. ನಮ್ಮ ಸಮಸ್ಯೆಗಳನ್ನು ಕೇಳಬೇಕಿತ್ತು’ ಎಂದು ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸಿದರು.

ಮನೆ ಕಟ್ಟಿಕೊಡಲು ನಿರ್ಧಾರ: ಬಳಿಕ, ಶಂಕರಲಿಂಗ ಕಾರ್ಯಾಲಯದಲ್ಲಿ ಆರಂಭಿಸಿರುವ ಕಾಳಜಿ ಕೇಂದ್ರದಲ್ಲಿ ಸಂತ್ರಸ್ತರನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ, ‘ಪಟ್ಟಣದಲ್ಲಿ ಪ್ರತಿ ವರ್ಷ ಪ್ರವಾಹದಿಂದ ಬಾಧಿತಗೊಳ್ಳುವ ಮನೆಗಳ ಸ್ಥಳಾಂತರಕ್ಕೆ 50 ಎಕರೆ ಜಾಗ ಲಭ್ಯವಿದೆ. ಮನೆಗಳನ್ನು ನಿರ್ಮಿಸಿಕೊಡಲು ನಿರ್ಧರಿಸಲಾಗಿದೆ’ ಎಂದು ಭರವಸೆ ನೀಡಿದರು.

ಉಪ ಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳ, ಲಕ್ಷ್ಮಣ ಸವದಿ, ಸಚಿವರಾದ ಆರ್. ಅಶೋಕ, ಉಮೇಶ ಕತ್ತಿ ಇದ್ದರು.

ಹಿರಣ್ಯಕೇಶಿ ನದಿ ಪ್ರವಾಹದಿಂದಾಗಿ ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಪಟ್ಟಣದಲ್ಲಿ ಮಹಾಲಕ್ಷ್ಮಿ ದೇವಸ್ಥಾನ ಎದುರು ಹಳ್ಳ ಉಕ್ಕಿ ಹರಿಯುತ್ತಿರುವುದನ್ನು ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಭಾನುವಾರ ವೀಕ್ಷಿಸಿದರು. ಸಚಿವರಾದ ಉಮೇಶ ಕತ್ತಿ, ಲಕ್ಷ್ಮಣ ಸವದಿ, ಆರ್. ಅಶೋಕ ಹಾಗೂ ಗೋವಿಂದ ಕಾರಜೋಳ ಇದ್ದಾರೆ / ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

‘ಹಣ ಕೋರಿ ಕೇಂದ್ರಕ್ಕೆ ಪತ್ರ’

‘ನೆರೆ ಪರಿಹಾರ ಕಾರ್ಯ ಕೈಗೊಳ್ಳಲು ಹಣಕಾಸಿನ ಸಮಸ್ಯೆ ಇಲ್ಲ. ತಾತ್ಕಾಲಿಕ ರಿಪೇರಿಗೆ ಕ್ರಮ ವಹಿಸಲಾಗುವುದು. ಹಣ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗುವುದು’ ಎಂದು ಯಡಿಯೂರಪ್ಪ ಸುದ್ದಿಗಾರರಿಗೆ ತಿಳಿಸಿದರು.

ಬಾಗಲಕೋಟೆ–ಮುಧೋಳ ಸಂಪರ್ಕ ಕಡಿತ

ಕಣ್ಣು ಹಾಯಿಸಿದಷ್ಟು ದೂರ ನೀರ ಹಾದಿ

• ವೆಂಕಟೇಶ್ ಜಿ.ಎಚ್

ಬಾಗಲಕೋಟೆ: ಮಹಾರಾಷ್ಟ್ರ ಹಾಗೂ ಬೆಳಗಾವಿ ಜಿಲ್ಲೆಯ ಜಲಾನಯನ ಪ್ರದೇಶದಲ್ಲಿ ಕುಂಭದ್ರೋಣ ಮಳೆ ನಿಂತು 40 ಗಂಟೆ ಕಳೆದ ನಂತರವೂ ಬಾಗಲಕೋಟೆ ಜಿಲ್ಲೆಯಲ್ಲಿ ಕೃಷ್ಣಾ, ಘಟಪ್ರಭಾ ಹಾಗೂ ಮಲಪ್ರಭಾ ನದಿಗಳು ಅರ್ಭಟ ಹೆಚ್ಚುತ್ತಿದೆ.

ನದಿ ತೀರದ ಗ್ರಾಮಗಳು ಪ್ರವಾಹದ ನೀರಿನಿಂದ ಆವೃತವಾಗಿದ್ದು, ಕಣ್ಣು ಹಾಯಿಸಿದಷ್ಟು ದೂರ ನೀರ ಹಾದಿಯೇ ಗೋಚರವಾಗುತ್ತಿದೆ. ನೆತ್ತಿಯ ಮೇಲೆ ಸೂರ್ಯನ ಬಿಸಿಲು ಪ್ರಖರವಾಗಿದ್ದರೂ ಎದೆ ಎತ್ತರ ಆವರಿಸಿರುವ ನೀರ ರಾಶಿ ದಾಟಿಕೊಂಡು ಹಳ್ಳಿಗರು ಸುರಕ್ಷಿತ ಸ್ಥಳಗಳತ್ತ ತೆರಳಿದರು. ಬೋಟ್‌ಗಳ ಮೂಲಕವೂ ಜನ-ಜಾನುವಾರು ಸ್ಥಳಾಂತರಿಸಲಾಯಿತು. ಮೂರು ನದಿಗಳ ದಂಡೆಯಲ್ಲಿ ಬೆಳೆದು ನಿಂತಿರುವ ಸಾವಿರಾರು ಎಕರೆ ಕಬ್ಬು, ಗೋವಿನ ಜೋಳ, ಹೆಸರು ಹಾಗೂ ತೊಗರಿ ಬೆಳೆ ನೀರು ಪಾಲಾಗಿದೆ.

ಮುಧೋಳ ಸಮೀಪದ ಚಿಚಖಂಡಿ ಸೇತುವೆ ಘಟಪ್ರಭಾ ನದಿ ಪ್ರವಾಹದಿಂದ ಮುಳುಗಡೆ ಆಗಿದ್ದು, ಬಾಗಲಕೋಟೆ ಹಾಗೂ ಮುಧೋಳ ನಡುವಿನ ನೇರ ರಸ್ತೆ ಸಂಪರ್ಕ ಕಡಿತಗೊಂಡಿದೆ.

ಕೃಷ್ಣೆಯ ಪ್ರವಾಹಕ್ಕೆ ಸಿಲುಕಿ ಜಮಖಂಡಿ ತಾಲ್ಲೂಕಿನ ಮುತ್ತೂರು, ಕಂಕಣವಾಡಿ, ಕೆ.ಡಿ.ಜಂಬಗಿ, ತಮದಡ್ಡಿ, ಅಸ್ಕಿ, ಘಟಪ್ರಭೆಯ ಸೆಳವಿನ ನಡುವೆ ಮುಧೋಳ ತಾಲ್ಲೂಕಿನ ನಂದಗಾಂವ, ಮಾರಾಪುರ ಸಂಪೂರ್ಣ ನಡುಗಡ್ಡೆಯಾಗಿ ಬದಲಾಗಿವೆ. ಪ್ರವಾಹ ಬಾಧಿತ ಕುಟುಂಬಗಳನ್ನು ಸಮೀಪದ ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ. ಘಟಪ್ರಭಾ ನದಿಯಲ್ಲಿ 11 ಸೇತುವೆ ಮುಳುಗಡೆಯಾಗಿವೆ. 40ಕ್ಕೂ ಹೆಚ್ಚು ಗ್ರಾಮಗಳು ತಾಲ್ಲೂಕು ಕೇಂದ್ರ ಮುಧೋಳದಿಂದ ನೇರ ಸಂಪರ್ಕ ಕಳೆದುಕೊಂಡಿವೆ. ಮುಧೋಳ ನಗರಕ್ಕೂ ಪ್ರವಾಹದ ನೀರು ನುಗ್ಗಿದೆ. ಎರಡು ಕಾಳಜಿ ಕೇಂದ್ರಗಳಲ್ಲಿ ಬಾಧಿತರಿಗೆ ಆಶ್ರಯ ನೀಡಲಾಗಿದೆ.

ಮಲಪ್ರಭಾ ನದಿ ಪ್ರವಾಹದಿಂದ ಬಾದಾಮಿ ತಾಲ್ಲೂಕಿನ ಗೋವನಕೊಪ್ಪ ಹಾಗೂ ಗದಗ ಜಿಲ್ಲೆ ಕೊಣ್ಣೂರು ಸಂಪರ್ಕಿಸುವ ಹುಬ್ಬಳ್ಳಿ-ವಿಜಯಪುರ ರಾಷ್ಟ್ರೀಯ ಹೆದ್ದಾರಿ 218ರ ಹಳೆಯ ಸೇತುವೆ ಮುಳುಗಡೆ ಆಗಿದೆ. ಬಾದಾಮಿ ತಾಲ್ಲೂಕಿನ ತಳಕವಾಡ, ಎಸ್.ಕೆ.ಆಲೂರು, ಹಾಗನೂರು ಗ್ರಾಮಗಳಿಗೆ ನೀರು ನುಗ್ಗಿದೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಮುತ್ತೂರು ಕೃಷ್ಣಾ ನದಿ ಪ್ರವಾಹದಿಂದ ಆವೃತವಾಗಿದ್ದು, ಅಲ್ಲಿನ ನಿವಾಸಿಗಳು ಭಾನುವಾರ ಸಾಮಾನು–ಸರಂಜಾಮು ಸಮೇತ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಗೊಂಡರು

ಊರು ಬಿಡಲು ಒಪ್ಪುತ್ತಿಲ್ಲ..

‘ಎಲ್ಲರೂ ಊರು ಬಿಟ್ಟರೆ ತುಡುಗು (ಕಳ್ಳತನ) ಆಗ್ತಾವ ಅಂತಾ ಕೆಲವರು ಬರೋಕೆ ಒಪ್ಪೊವಲ್ರಿ. ಅವರನ್ನ ಒಪ್ಪಿಸಾಕತ್ತೇವ್ರಿ’ ಎಂದು ಜಮಖಂಡಿ ತಾಲ್ಲೂಕಿನ ಕೆ.ಡಿ.ಜಂಬಗಿ ಗ್ರಾಮ ಪಂಚಾಯ್ತಿ ಸದಸ್ಯ ರವಿ ಐಗಳಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಕೆ.ಡಿ.ಜಂಬಗಿ ಕೃಷ್ಣೆಯ ಪ್ರವಾಹದಿಂದ ನಡುಗಡ್ಡೆಯಾಗಿದೆ. ಪ್ರತಿ ಗಂಟೆಗೂ ನದಿಯಲ್ಲಿ ನೀರಿನ ಮಟ್ಟ ಹೆಚ್ಚುತ್ತಿದೆ. ಭಾನುವಾರ ಸಂಜೆಯ ವೇಳೆಗೆ ರಾಜ್ಯ ವಿಪತ್ತು ನಿರ್ವಹಣಾ ತಂಡದ ಸದಸ್ಯರು ಊರಿನ 300ಕ್ಕೂ ಹೆಚ್ಚು ಜನರನ್ನು ಬೇರೆಡೆಗೆ ಸ್ಥಳಾಂತರಿಸಿದ್ದರು. 'ಇನ್ನೂ ಅಷ್ಟೇ ಸಂಖ್ಯೆಯ ಜನರು ಊರಲ್ಲಿ ಇದ್ದಾರೆ. ಹೊರಗೆ ಬರಲು ಒಪ್ಪುತ್ತಿಲ್ಲ. ಮನವೊಲಿಸುತ್ತಿದ್ದೇವೆ' ಎಂದು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಮಲ್ಲಿಕಾರ್ಜುನಪ್ಪ ತಿಳಿಸಿದರು.

ಎರಡೇ ವರ್ಷದಲ್ಲಿ ನೆರೆಯ ಮರು ಏಟು

ಕದ್ರಾ ಜಲಾಶಯದಿಂದ ಹರಿದ ನೀರಿನ ಹೊಡೆತಕ್ಕೆ ಕೊಚ್ಚಿಹೋದ ಬದುಕು

• ಸದಾಶಿವ ಎಂ.ಎಸ್

ಕಾರವಾರ: ‘ಡ್ಯಾಂನಿಂದ ನೀರು ಬಿಡ್ತಾರೆ ಅಂತ ಹೇಳ್ಲೇ ಇಲ್ಲ. ನೋಡ ನೋಡ್ತಿದ್ದಂತೆ ಎದೆಮಟ್ಟ ನೀರು ಬಂತು. ಮನೆಯಲ್ಲಿದ್ದ ಯಾವುದನ್ನೂ ಹೊರಗೆ ತರಲಾಗ್ಲಿಲ್ಲ. ಜೀವ ಉಳಿಸ್ಕೊಂಡಿದ್ದೇ ದೊಡ್ಡದು. ಏನೂ ತಗೊಳ್ಳೋದಕ್ಕೆ ಆಗ್ಲಿಲ್ಲ. ಪಾತ್ರೆ ಸಾಮಾನು, ಟಿ.ವಿ ಎಲ್ಲ ಅಲ್ಲೇ ಬಿದ್ದಿವೆ..’

ಕದ್ರಾ ಜಲಾಶಯದ ಪ್ರವಾಹದಿಂದ ಸಂಪೂರ್ಣ ಕುಸಿದು ಹೋದ ತಮ್ಮ ಮನೆಯ ಮುಂದೆ ನಿಂತು ಲೇಬರ್ ಕಾಲೊನಿ ನಿವಾಸಿ ಗಣೇಶ ತುಂಬಿ ಬಂದಿದ್ದ ಕಣ್ಣೊರೆಸಿಕೊಂಡರು. ಕೂಲಿ ಕಾರ್ಮಿಕರಾಗಿರುವ ಅವರ ಮನೆ 2019ರ ಪ್ರವಾಹದಲ್ಲೂ ಕುಸಿದಿತ್ತು. ಬಳಿಕ ಅಲ್ಲೇ ಸಮೀಪದಲ್ಲಿ ಮತ್ತೊಂದು ಮನೆ ನಿರ್ಮಿಸಿಕೊಂಡಿದ್ದರು. ಈ ಬಾರಿ ಅದೂ ನೆರೆಯ ಪಾಲಾಗಿದೆ.

ಜಲಾಶಯದಿಂದ ಕಾಳಿ ನದಿಗೆ ಜುಲೈ 23ರಂದು ಸುಮಾರು 2 ಲಕ್ಷ ಕ್ಯುಸೆಕ್ ನೀರನ್ನು ಹರಿಸಲಾಗಿತ್ತು. ಅದರ ಪರಿಣಾಮ ಈ ಭಾಗದಲ್ಲಿ ನೂರಾರು ಮನೆಗಳು ನೆಲಸಮವಾಗಿವೆ. ಎರಡು ವರ್ಷಗಳ ಹಿಂದಿನ ಆಘಾತದಿಂದ ಚೇತರಿಸಿಕೊಳ್ಳುವಷ್ಟರಲ್ಲಿ ಅದಕ್ಕಿಂತ ದೊಡ್ಡ ಪ್ರಮಾಣದಲ್ಲಿ ನೀರು ಸರ್ವಸ್ವವನ್ನೂ ಆಪೋಷನ ಪಡೆದಿದೆ.

ಕದ್ರಾ, ಕೆ.ಪಿ.ಸಿ ಲೇಬರ್ ಕಾಲೊನಿ, ಗಾಂಧಿನಗರ, ಕುರ್ನಿಪೇಟೆ, ಮಲ್ಲಾಪುರ, ಕ್ರಿಶ್ಚಿಯನ್ ವಾಡ, ಬೊಳ್ವೆ –ಹೀಗೆ ಜಲಾಶಯದ ಕೆಳಭಾಗದಲ್ಲಿ ಎಲ್ಲೆಲ್ಲೂ ಕುಸಿದ ಮನೆಗಳು, ಮುರಿದ ಚಾವಣಿ, ಕೆಸರು ಮೆತ್ತಿದ ಮನೆಗಳ ಜಗುಲಿ, ವಾಹನಗಳೇ ಕಾಣಿಸುತ್ತವೆ.

ಭಾನುವಾರ ನೆರೆ ಸಂಪೂರ್ಣ ಇಳಿದಿದೆ. ಸ್ಥಳಕ್ಕೆ ‘ಪ್ರಜಾವಾಣಿ’ ತೆರಳಿದಾಗ ಸಂತ್ರಸ್ತರು, ಅಳಿದುಳಿದ ವಸ್ತುಗಳಲ್ಲೇ ಬಳಕೆಗೆ ಸಾಧ್ಯವಿರುವುದನ್ನು ಆರಿಸಿ ತೆಗೆಯುತ್ತಿದ್ದುದು, ಸ್ವಚ್ಛಗೊಳಿಸುತ್ತಿದ್ದುದು ಕಂಡುಬಂತು. ಹಾಸಿಗೆ, ಬಟ್ಟೆ, ಮಕ್ಕಳ ಶಾಲಾ ಪುಸ್ತಕಗಳು, ಆಹಾರ ಧಾನ್ಯ ಎಲ್ಲವೂ ನೀರಿನಲ್ಲಿ ನೆನೆದು ವ್ಯರ್ಥವಾಗಿವೆ. ಅವುಗಳನ್ನು ಬಿಸಿಲಿನಲ್ಲಿ ಒಣಗಿಸುವ ಯತ್ನವೂ ಕಾಣಿಸಿತು. ಸಂಪೂರ್ಣ ಮುಳುಗಡೆಯಾಗಿದ್ದ ಮಲ್ಲಾಪುರದ ಪೊಲೀಸ್ ಠಾಣೆಯಲ್ಲೂ ಇದೇ ರೀತಿಯ ಸನ್ನಿವೇಶವಿತ್ತು.

‘ನದಿಯಿಂದ ನೀರು ಮೇಲೆ ಬಂದಿದ್ದೇ ಗೊತ್ತಾಗ್ಲಿಲ್ಲ. ಉಟ್ಟ ಬಟ್ಟೆಯಲ್ಲೇ ಹೊರಗೆ ಬಂದು ಜೀವ ಉಳಿಸಿಕೊಂಡಿದ್ದೇವೆ’ ಎಂದರು ಕದ್ರಾದ ಗ್ರೇಸಿ ಮುತ್ತುಸ್ವಾಮಿ. ಕಳೆದ ವರ್ಷವಷ್ಟೇ ಹೊಸದಾಗಿ ಸಿಮೆಂಟ್ ಶೀಟ್‌ಗಳ ಚಾವಣಿಯಿಂದ ನಿರ್ಮಿಸಿದ್ದ ಅವರ ಮನೆ ಕುಸಿದಿದೆ. ಅದನ್ನು ತೋರಿಸುತ್ತ, ‘ಮತ್ತೆ ಮಳೆಯಾಗದಿದ್ದರೆ ಸಾಕು’ ಎಂದು ಆತಂಕದಿಂದಲೇ ಹೇಳಿದರು.

ಈ ಪ್ರದೇಶದಲ್ಲಿ ವ್ಯಾಪಾರಕ್ಕೆ ಬಂದವರಿದ್ದಾರೆ. ಅವರಲ್ಲಿ ಹಲವರು, ನೆರೆ ಇಳಿಯುತ್ತಿದ್ದಂತೆ ಮನೆ ಖಾಲಿ ಮಾಡಿದ್ದಾರೆ. ಸ್ಟೀಲ್, ಪ್ಲಾಸ್ಟಿಕ್, ಮರ ಮುಂತಾದ ಸ್ವಚ್ಛಗೊಳಿಸಿದ ಬಳಿಕ ಬಳಕೆಗೆ ಸಾಧ್ಯವಾಗುವ ವಸ್ತುಗಳನ್ನು ಹೇರಿಕೊಂಡು ಬೇರೆ ಬೇರೆ ಕಡೆಗಳಿಗೆ ತೆರಳಿದ್ದಾರೆ.

ಕಾಳಿ ನದಿಯ ಪ್ರವಾಹದಿಂದ ಮುಳುಗಡೆಯಾಗಿದ್ದ ತಮ್ಮ ಮನೆಯ ಸಾಮಗ್ರಿಗಳನ್ನು ಗ್ರೇಸಿ ಮುತ್ತುಸ್ವಾಮಿ ಭಾನುವಾರ ಆರಿಸಿಕೊಂಡರು

ಕೃಷಿಗೂ ಹಾನಿ

ಕದ್ರಾ ಜಲಾಶಯದಿಂದ ಕೆಳಭಾಗದಲ್ಲಿರುವ ಕೃಷಿ ಜಮೀನುಗಳು, ವಿವಿಧ ರಸ್ತೆಗಳಿಗೆ ಭಾರಿ ಹಾನಿಯಾಗಿದೆ. ಹಣಕೋಣ ಜೂಗ ಪ್ರದೇಶದಲ್ಲಿ ಕೆಲವೇ ದಿನಗಳ ಹಿಂದೆ ನಾಟಿ ಮಾಡಲಾಗಿದ್ದ ಭತ್ತದ ಪೈರು ನೀರುಪಾಲಾಗಿದೆ. ಕಾಳಿ ನದಿಯ ನೀರು ಇಳಿದ ಬಳಿಕ ಗದ್ದೆಗಳಲ್ಲಿ ಪುನಃ ಬೇಸಾಯ ಮಾಡಲು ಪ್ರಯತ್ನಗಳೂ ನಡೆಯುತ್ತಿವೆ.

ಹಿಮಾಚಲ ಪ್ರದೇಶದಲ್ಲಿ ಅವಘಡ; ₹2 ಲಕ್ಷ ಪರಿಹಾರ ಘೋಷಣೆ

ಉರುಳಿದ ಬಂಡೆ: 9 ಪ್ರವಾಸಿಗರ ಸಾವು

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಕಿನ್ನೌರ್ ಜಿಲ್ಲೆಯ ಬಸ್ತೇರಿ ಬಳಿ ಭಾನುವಾರ ಸಂಭವಿಸಿದ ಭೂಕುಸಿತದಲ್ಲಿ 9 ಮಂದಿ ಮೃತಪಟ್ಟಿದ್ದಾರೆ. ಪ್ರವಾಸಿಗರು ತೆರಳುತ್ತಿದ್ದ ಟೆಂಪೊ ಟ್ರಾವಲರ್ ಮೇಲೆ ಭಾರಿ ಬಂಡೆಗಳು ಬಿದ್ದು ಈ ಅನಾಹುತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಇತ್ತೀಚೆಗೆ ಸುರಿದ ಮಳೆಯಿಂದಾಗಿ ಸಾಂಗ್ಲಾ- ಚಿಟ್ಕುಲ್ ರಸ್ತೆಯ ಬಸ್ತೇರಿ ಬಳಿ ಮಧ್ಯಾಹ್ನ 1.25ಕ್ಕೆ ಭೂಕುಸಿತ ಸಂಭವಿಸಿದೆ. ಬಂಡೆಗಳು ಬಿದ್ದಿದ್ದರಿಂದ ಸೇತುವೆ ಕುಸಿದುಬಿದ್ದಿದ್ದು, ಪ್ರಯಾಣಿಕರು ಚಿಟ್‌ಕುಲ್‌ನಿಂದ ಸಾಂಗ್ಲಾಕ್ಕೆ ಹೋಗುತ್ತಿದ್ದರು. ಘಟನೆಯಲ್ಲಿ ಇಬ್ಬರು ಗಾಯಗೊಂಡಿದ್ದಾರೆ.

ಬಸ್ತೇರಿಯಲ್ಲಿ ಸೇತುವೆ ಕುಸಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ವಿಡಿಯೊದಲ್ಲಿ ಬಂಡೆಗಳು ಉರುಳಿ ಬೀಳುತ್ತಿರುವ ದೃಶ್ಯಗಳಿವೆ.

ಕಿನ್ನೌರ್ ಜಿಲ್ಲೆಯಲ್ಲಿ ಇದೇ ರೀತಿಯ ಮತ್ತೊಂದು ಘಟನೆ ನಡೆದಿದ್ದು, ಭೂಕುಸಿತದಲ್ಲಿ ಪಾದಚಾರಿ ಗಾಯಗೊಂಡಿದ್ದಾರೆ.

ಕಿನ್ನೌರ್‌ನಲ್ಲಿ ಭೂಕುಸಿತದಿಂದ ಜನರು ಸಾವನ್ನಪ್ಪಿರುವುದಕ್ಕೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಮತ್ತು ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ. ‘ಘಟನೆಯಿಂದ ತೀವ್ರ ಬೇಸರವಾಗಿದೆ. ದುಃಖಿತ ಕುಟುಂಬಗಳಿಗೆ ನನ್ನ ಸಂತಾಪಗಳು. ಗಾಯಾಳುಗಳು ಶೀಘ್ರವಾಗಿ ಚೇತರಿಸಿಕೊಳ್ಳಬೇಕೆಂದು ಹಾರೈಸುತ್ತೇನೆ’ ಎಂದು ರಾಷ್ಟ್ರಪತಿ ಟ್ವೀಟ್ ಮಾಡಿದ್ದಾರೆ.

‘ಗಾಯಾಳುಗಳ ಚಿಕಿತ್ಸೆಗೆ ಎಲ್ಲ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ಮೃತರ ರಕ್ತಸಂಬಂಧಿಗಳಿಗೆ ತಲಾ ₹2 ಲಕ್ಷ, ಗಾಯಗೊಂಡವರಿಗೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ₹50 ಸಾವಿರ ಪರಿಹಾರ ನೀಡಲಾಗುತ್ತಿದೆ’ ಎಂದು ಪ್ರಧಾನಿ ತಿಳಿಸಿದ್ದಾರೆ.

ಕಿನ್ನೌರ್ ಜಿಲ್ಲೆಯ ಬಸ್ತೇರಿಯಲ್ಲಿ ಭೂಕುಸಿತದಿಂದ ಸೇತುವೆ ಕುಸಿದುಬಿದ್ದಿದೆ–ಪಿಟಿಐ ಚಿತ್ರ

ಕಾಣೆಯಾದವರಿಗಾಗಿ ಹುಡುಕಾಟ

ಮುಂಬೈ: ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿ ಕಳೆದೊಂದು ವಾರದಿಂದ ಸುರಿಯುತ್ತಿರುವ ಮಳೆ, ಅದರಿಂದ ಉಂಟಾದ ಪ್ರವಾಹ ಹಾಗೂ ಭೂಕುಸಿತದಿಂದ ಈವರೆಗೆ ಸುಮಾರು 100 ಜನರು ನಾಪತ್ತೆಯಾಗಿದ್ದಾರೆ ಎಂದು ಸರ್ಕಾರ ತಿಳಿಸಿದೆ. ಅವಘಡಗಳಲ್ಲಿ 50ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಸಾತಾರಾ ಜಿಲ್ಲೆಯಲ್ಲಿ ಭಾನುವಾರ ಮಳೆಯ ತೀವ್ರತೆ ಕಡಿಮೆಯಾಗಿದ್ದು, ಭೂಕುಸಿತದ ನಂತರ ಕಾಣೆಯಾದವರಿಗಾಗಿ ಅಧಿಕಾರಿಗಳು ಶೋಧ ಕಾರ್ಯಾಚರಣೆ ಮುಂದುವರೆಸಿದ್ದಾರೆ.

ಕೇರಳದಲ್ಲಿ ಭಾರಿ ಮಳೆ

ತಿರುವನಂತಪುರ: ಕೇರಳದ ಹಲವಾರು ಭಾಗಗಳಲ್ಲಿ ಭಾನುವಾರ ಬೆಳಿಗ್ಗೆ ಭಾರಿ ಮಳೆಯಾಗಿದೆ. ಆಲಪ್ಪುಳ, ಕೊಟ್ಟಾಯಂ, ಇಡುಕ್ಕಿ, ಎರ್ನಾಕುಲಂ, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಸೋಮವಾರ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಇಲಾಖೆಯ ಮುನ್ಸೂಚನೆ ಪ್ರಕಾರ, ತಿರುವನಂತಪುರ, ಕೊಲ್ಲಂ, ಪತ್ತನಂತಿಟ್ಟ, ಇಡುಕ್ಕಿ, ಕೊಟ್ಟಾಯಂ, ಆಲಪ್ಪುಳ, ಎರ್ನಾಕುಲಂ, ತ್ರಿಶ್ಶೂರ್, ಪಾಲಕ್ಕಾಡ್, ಮಲಪ್ಪುರಂ, ಕೋಯಿಕ್ಕೋಡ್, ವಯನಾಡ್, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಮಧ್ಯಮದಿಂದ ಭಾರಿ ಮಳೆಯಾಗುವ ನಿರೀಕ್ಷೆಯಿದೆ. ಈ ಎಲ್ಲ ಜಿಲ್ಲೆಗಳಿಗೆ ಭಾನುವಾರ ಯೆಲ್ಲೋ ಅಲರ್ಟ್ ನೀಡಲಾಗಿತ್ತು.

ಮಳೆ ಬಿಡುವು: ಪ್ರವಾಹದಿಂದ 13 ಹಸುಗಳ ಸಾವು

ಶಿವಮೊಗ್ಗ: ಜಿಲ್ಲೆಯಲ್ಲಿ ಭಾನುವಾರ ಮಳೆ ಪ್ರಮಾಣ ತಗ್ಗಿದ್ದು, ಜಲಾಶಯಗಳ ಒಳಹರಿವು ಕಡಿಮೆಯಾಗಿದೆ. ಶನಿವಾರ 40.1 ಸೆಂ.ಮೀ. ಮಳೆ ಸುರಿದು ದಾಖಲೆ ಬರೆದಿದ್ದ ಚಕ್ರ ಜಲಾಶಯ ಪ್ರದೇಶದಲ್ಲಿ ಭಾನುವಾರ 7.20 ಸೆಂ.ಮೀ. ಮಳೆ ದಾಖಲಾಗಿದೆ.

ಶನಿವಾರ ಲಿಂಗನಮಕ್ಕಿ ಜಲಾಶಯಕ್ಕೆ ಒಂದು ಲಕ್ಷಕ್ಕೂ ಹೆಚ್ಚು ಕ್ಯುಸೆಕ್ ನೀರು ಹರಿದುಬಂದಿತ್ತು. ಈಗಾಗಲೇ ಭರ್ತಿಯಾಗಿ ಹರಿಯುತ್ತಿರುವ ತುಂಗಾ ನದಿಗೆ 65 ಸಾವಿರ ಕ್ಯುಸೆಕ್ ನೀರು ಹರಿದುಬರುತ್ತಿದ್ದು, 72 ಸಾವಿರ ಕ್ಯುಸೆಕ್ ನೀರನ್ನು ಹೊರಬಿಡಲಾಗುತ್ತಿದೆ.

ಹಸುಗಳ ಸಾವು: ಆನಂದಪುರ ಸಮೀಪದ ಬೈರಾಪುರದಲ್ಲಿ ಸುರಿದ ಭಾರಿ ಮಳೆಗೆ ಪ್ರವಾಹ ಉಂಟಾಗಿ ಮೇಯಲು ಹೋದ 13 ಹಸುಗಳು ಸಾವನ್ನಪ್ಪಿವೆ. ಗೌರಿಹಳ್ಳ ತುಂಬಿ ಹರಿದು ಪ್ರವಾಹ ಉಂಟಾದ ಪರಿಣಾಮ 30 ಹಸುಗಳು ಸಿಲುಕಿದ್ದವು.

ದಾವಣಗೆರೆ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ತಗ್ಗಿದ್ದು, ಮಳೆಯಿಂದಾಗಿ 59 ಮನೆಗಳಿಗೆ ಹಾನಿಯಾಗಿದ್ದು, ₹27.85 ಲಕ್ಷದ ಆಸ್ತಿ ನಷ್ಟವಾಗಿದೆ.

110 ಅಡಿ ದಾಟಿದ ಕೆಆರ್‌ಎಸ್

ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಭಾನುವಾರ ಸಂಜೆ ವೇಳೆಗೆ 110.10 ಅಡಿಗೆ ತಲುಪಿದೆ.

ಮಂಡ್ಯ: ಕಾವೇರಿ ಜಲಾನಯನ ಪ್ರದೇಶದಲ್ಲಿ ಹೆಚ್ಚು ಮಳೆಯಾಗುತ್ತಿರುವ ಕಾರಣ ಭಾನುವಾರ ಸಂಜೆ ವೇಳೆಗೆ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 110.10 ಅಡಿಗೆ ತಲುಪಿದೆ.

ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣವೂ ಹೆಚ್ಚಾಗಿದ್ದು, 37,048 ಕ್ಯುಸೆಕ್ ಒಳಹರಿವು ದಾಖಲಾಗಿದೆ. ಕಾವೇರಿ ನೀರಾವರಿ ನಿಗಮ ಹೊರಹರಿವನ್ನು ಹೆಚ್ಚಳ ಮಾಡಿದೆ. ಸದ್ಯ 10,034 ಕ್ಯುಸೆಕ್ ಹೊರಹರಿವು ಇದೆ.

ರಂಗನತಿಟ್ಟು: ದೋಣಿ ವಿಹಾರ ಸ್ಥಗಿತ: (ಶ್ರೀರಂಗಪಟ್ಟಣ)- ಕಾವೇರಿ ನದಿ ನೀರಿನ ಹರಿವು ಹೆಚ್ಚಾಗಿದ್ದು, ಕೆಆರ್‌ಎಸ್ ಜಲಾಶಯದ ತಗ್ಗಿನಲ್ಲಿರುವ ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ವಿಹಾರ ಸ್ಥಗಿತಗೊಳಿಸಲಾಗಿದೆ. ‘ಜಲಾಶಯದಿಂದ ಹೆಚ್ಚು ನೀರನ್ನು ನದಿಗೆ ಬಿಡಲಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ದೋಣಿ ವಿಹಾರವನ್ನು ಶುಕ್ರವಾರದಿಂದಲೇ ಸ್ಥಗಿತಗೊಳಿಸಲಾಗಿದೆ’ ಎಂದು ಪಕ್ಷಿಧಾಮದ ಆರ್‌ಎಫ್‌ಒ ಕೆ.ಸುರೇಂದ್ರ ತಿಳಿಸಿದರು.

ಪುಸ್ತಕ ಪ್ರಾಧಿಕಾರ, ಭಾಷಾ ಭಾರತಿಗೆ ತಜ್ಞರ ಆಗ್ರಹ • ಅಕಾಡೆಮಿ, ಪ್ರಾಧಿಕಾರಗಳಲ್ಲಿ ಕನ್ನಡ ಕಟ್ಟುವ ಕೆಲಸವಾಗಬೇಕು

‘ಪುಸ್ತಕ ಪ್ರಕಟಣೆ ನಿಲ್ಲಿಸಿ, ಜಿಲ್ಲೆಗಳಲ್ಲಿ ಮಾರಾಟ ವ್ಯವಸ್ಥೆ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಪುಸ್ತಕ ಪ್ರಾಧಿಕಾರ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಮತ್ತು ಅಕಾಡೆಮಿಗಳು ಪುಸ್ತಕ ಪ್ರಕಟಣೆಯನ್ನು ನಿಲ್ಲಿಸಿ, ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳ ಮಾರಾಟದತ್ತ ಗಮನಹರಿಸಬೇಕು. ಹಾಗೆಯೇ ಪುಸ್ತಕೋದ್ಯಮಕ್ಕೆ ಸವಾಲಾಗಿರುವ ತಂತ್ರಜ್ಞಾನವನ್ನೇ ಅವಕಾಶವನ್ನಾಗಿ ಬಳಸಿಕೊಳ್ಳಬೇಕು’...ಇದು ಪ್ರಜಾವಾಣಿ ಕ್ಲಬ್‌ಹೌಸ್‌ನಲ್ಲಿ ‘ಪುಸ್ತಕ–ಲೇಖಕ–ಓದುಗ–ಉದ್ಯಮ’ದ ಬಗ್ಗೆ ಹೀಗೊಂದು ಸಮುದ್ರಮಥನ ನಡೆದಾಗ ಹೊರಬಂದ ಒಕ್ಕೊರಲ ಅಭಿಮತ.

ಭಾನುವಾರ ‘ಆಲದಮರ’ದಡಿ ಮೂರು ಗಂಟೆಗಳ ಕಾಲ ನಡೆದ ಚರ್ಚೆಯಲ್ಲಿ ಲೇಖಕ ಕೇಶವ ಮಳಗಿ, ನವಕರ್ನಾಟಕ ಪಬ್ಲಿಕೇಷನ್ಸ್‌ನ ರಮೇಶ ಉಡುಪ, ಬಹುರೂಪಿ ಬುಕ್‌ಹಬ್‌ನ ಜಿ.ಎನ್.ಮೋಹನ್, ಆಕೃತಿ ಬುಕ್ಸ್‌ನ ಗುರುಪ್ರಸಾದ್ ಡಿ.ಎನ್. ಹಾಗೂ ಮೈಲ್ಯಾಂಗ್ ಬುಕ್ಸ್‌ನ ವಸಂತ ಶೆಟ್ಟಿ ಮುಖ್ಯಅತಿಥಿಗಳಾಗಿದ್ದರು.

ಚರ್ಚೆ ಆರಂಭಿಸಿದ ಕೇಶವ ಮಳಗಿ, ‘ಕೆಲ ಪ್ರಕಾಶಕರು ಕೆಲವು ಲೇಖಕರನ್ನು ಅಸ್ಪೃಶ್ಯರಂತೆ ನೋಡುತ್ತಾರೆ. ಎಲ್ಲ ಲೇಖಕರು ಒಂದೇ ಎಂಬ ಧೋರಣೆಯನ್ನು ಪ್ರಕಾಶಕರು ತೋರದೇ ಹೋದರೆ ಪುಸ್ತಕ ಉದ್ಯಮ ಬೆಳೆಯಲು ಸಾಧ್ಯವಿಲ್ಲ. ಜೊತೆಗೆ ಅಕಾಡೆಮಿ, ಪ್ರಾಧಿಕಾರಗಳಲ್ಲಿ ಕನ್ನಡವನ್ನು ಕಟ್ಟುವ ಕೆಲಸ ಮಾಡಬೇಕಾಗಿದೆ. ಆದರೆ ಇವರು ಕನ್ನಡವನ್ನು ಮುಗಿಸುವ ಕೆಲಸ ಮಾಡುತ್ತಿದ್ದಾರೆ. ಕೇವಲ ಪುಸ್ತಕ ಪ್ರಕಟಣೆ ಅವರ ಕೆಲಸವಲ್ಲ. ಹೊಸ ಓದುಗರನ್ನು ಹುಟ್ಟುಹಾಕಲು ವಿಕೇಂದ್ರೀಕರಣದ ದೃಷ್ಟಿಯಲ್ಲಿ ಕೆಲಸ ಮಾಡಬೇಕು. ತಾಲ್ಲೂಕು ಕೇಂದ್ರಗಳಲ್ಲಿ ಪುಸ್ತಕ ಮಳಿಗೆಗಳನ್ನು ಆರಂಭಿಸಬೇಕು’ ಎಂದರು.

ಕನ್ನಡ ಅರ್ಥವಾಗುತ್ತದೆ ಆದರೆ ಓದಲು, ಬರೆಯಲು ಬರುವುದಿಲ್ಲ ಎನ್ನುವವರಿಗೆ ಆಡಿಯೊ ಬುಕ್ ವರದಾನವಾಗಿದೆ. ಇದು ಸಾಧ್ಯವಾಗಿರುವುದು ತಂತ್ರಜ್ಞಾನದಿಂದ. ಇದರಿಂದ ಮುದ್ರಿತ ಪುಸ್ತಕಗಳ ಮಾರಾಟಕ್ಕೆ ಹೊಡೆತ ಬೀಳುವುದಿಲ್ಲ.

–ರಮೇಶ ಉಡುಪ, ನವಕರ್ನಾಟಕ ಪಬ್ಲಿಕೇಷನ್ಸ್

ಇ–ಕಾಮರ್ಸ್ ಮುಖಾಂತರ ಪುಸ್ತಕ ಮಾರಾಟ ಪ್ರಾರಂಭವಾದಾಗಿನಿಂದ ಹಲವು ಪುಸ್ತಕ ಮಳಿಗೆಗಳು ಮುಚ್ಚಿವೆ. ಕಾರ್ಪೊರೇಟ್ ಕಂಪನಿಗಳು ಈ ಕ್ಷೇತ್ರದಲ್ಲಿ ಏಕಸ್ವಾಮ್ಯ ಹೊಂದುವುದನ್ನು ನಾವು ವಿರೋಧಿಸಲೇಬೇಕು ಹಾಗೂ ಎಚ್ಚರಿಕೆಯಿಂದ ಇರಬೇಕು.

–ಗುರುಪ್ರಸಾದ್ ಡಿ.ಎನ್., ಆಕೃತಿ ಬುಕ್ಸ್

ಪ್ರಜಾವಾಣಿ ಆಲದಮರ

ಚರ್ಚೆಯಲ್ಲಿ ಶ್ರೋತೃಗಳಾಗಿ ಪಾಲ್ಗೊಂಡಿದ್ದ ಲೇಖಕರಾದ ಬೊಳುವಾರು ಮಹಮದ್ ಕುಂಞಿ ಹಾಗೂ ಜೋಗಿ ಅವರು ಇದಕ್ಕೆ ಧ್ವನಿಗೂಡಿಸಿದರು. ‘ಪ್ರಾಧಿಕಾರಗಳು ಕನಿಷ್ಠ 10 ವರ್ಷ ಪುಸ್ತಕ ಪ್ರಕಟಣೆ ನಿಲ್ಲಿಸಬೇಕು. ಈಗ ಪ್ರಕಟವಾಗಿರುವ ಪುಸ್ತಕಗಳನ್ನು ಮಾರಾಟ ಮಾಡುವ ಕೆಲಸ ಮಾಡಬೇಕು’ ಎಂದು ಬೊಳುವಾರು ಅವರು ಆಗ್ರಹಿಸಿದರು. ‘ಕುವೆಂಪು ಭಾಷಾ ಭಾರತಿಯು ಹೊಸಬರ ಪುಸ್ತಕಗಳನ್ನಷ್ಟೇ ಪ್ರಕಟ ಮಾಡಿ ಜನರಿಗೆ ತಲುಪಿಸುವ ವ್ಯವಸ್ಥೆ ಮಾಡಬೇಕು’ ಎಂದು ಜೋಗಿ ಅವರು ಸಲಹೆ ನೀಡಿದರು.

ಇ–ಬುಕ್‌ಗಳ ಡಿಜಿಟಲ್ ಮಾರಾಟದ ಸನ್ನಿವೇಶವನ್ನು ಪ್ರಸ್ತಾಪಿಸಿದ ಜಿ.ಎನ್. ಮೋಹನ್ ಅವರು, ‘ಮೊದಲು ಜನರಿಗೆ ಪುಸ್ತಕದ ರುಚಿ ಹರಡಬೇಕು. ಅಸ್ತಿತ್ವಕ್ಕೆ ಧಕ್ಕೆ ಆಗುವುದನ್ನೇ ಅವಕಾಶವನ್ನಾಗಿ ಬಳಸಿಕೊಳ್ಳಬೇಕು. ಪುಸ್ತಕೋದ್ಯಮಕ್ಕೆ ಇದನ್ನೇ ಅನ್ವಯಿಸಬೇಕು. ತಂತ್ರಜ್ಞಾನದ ಅನೇಕ ಸಾಧ್ಯತೆಗಳಿಗೆ ತೆರೆದುಕೊಳ್ಳದೇ ಹೋದರೆ, ಪುಸ್ತಕದ ಉದ್ಯಮದಲ್ಲಿ ಇರಲು ಸಾಧ್ಯವಿಲ್ಲ. ಬಹುರಾಷ್ಟ್ರೀಯ ಕಂಪನಿಗಳು ಈ ಕ್ಷೇತ್ರಕ್ಕೆ ಬಂದಾಗ ಇದು ನಾಶವಾಗುತ್ತದೆ ಎನ್ನುವ ಆತಂಕ, ಭಯ ನಮ್ಮ ಹೊಸ್ತಿಲಲ್ಲೇ ಇದೆ’ ಎಂದರು.

ವಸಂತ ಶೆಟ್ಟಿ ಅವರು ಮಾತನಾಡಿ, ‘ಜನರ ಮುಂದೆ ಹಲವು ಸೆಳೆತಗಳು ಬಂದಿರುವ ಕಾರಣ ಓದುಗರ ಸಂಖ್ಯೆ ಕಡಿಮೆಯಾಗಿರುವುದು ನಿಜ. ಇದಕ್ಕೆ ತಕ್ಕಂತೆ ಅವರನ್ನು ತಲುಪುವ ಬಗೆಯನ್ನು ನಾವು ಕಂಡುಕೊಳ್ಳಬೇಕು. ಭವಿಷ್ಯದ ಓದುಗರನ್ನು ತಲುಪಲು ಡಿಜಿಟಲ್‌ನಲ್ಲಿ ಹಲವು ಆಯ್ಕೆಗಳಿವೆ. ಭಾರತದಲ್ಲಿ ಸ್ಮಾರ್ಟ್‌ಫೋನ್, ಡೇಟಾ ಅಗ್ಗವಾಗಿದೆ. ಇದು ಪುಸ್ತಕ ಉದ್ಯಮಕ್ಕೂ ಇದು ಸಹಾಯವಾಗಲಿದೆ. ಮೆಕ್‌ಡೊನಾಲ್ಡ್ಸ್ ಪಕ್ಕ ದರ್ಶಿನಿ ಉಳಿದಂತೆ, ಹೊಸ ಓದುಗರನ್ನು ಪಡೆದುಕೊಳ್ಳಲು, ಇರುವ ಓದುಗರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿದೆ’ ಎಂದರು.



ವಸಂತ ಶೆಟ್ಟಿ ಕೇಶವ ಮಳಗಿ ಜಿ.ಎನ್.ಮೋಹನ್

‘ಕನ್ನಡ ಪುಸ್ತಕೋದ್ಯಮವು ಬೇರೆ ಸಮುದಾಯದ ಲೇಖಕರನ್ನು ಬಲಿಷ್ಠಗೊಳಿಸುವ, ಉತ್ತೇಜನ ನೀಡುವ ಕೆಲಸ ಮಾಡಿಲ್ಲ. ಜೊತೆಗೆ, ಇವತ್ತಿನ ತುರ್ತುಗಳಿಗೆ ಯಾವುದೇ ಕನ್ನಡ ಲೇಖಕ ತನ್ನ ಬರವಣಿಗೆಯಿಂದ ಸ್ಪಂದಿಸುತ್ತಿಲ್ಲ. ಹೀಗಾಗಿ ಹೊಸ ಓದುಗರು ಹುಟ್ಟಿಕೊಳ್ಳುತ್ತಿಲ್ಲ’ ಎಂದು ನಾಗೇಗೌಡ ಕೆ.ಎನ್ ಹೇಳಿದರು.

ಪುರುಷೋತ್ತಮ ಬಿಳಿಮಲೆ ಅವರು ಮಾತನಾಡಿ, ‘ವರ್ತಮಾನದ ಪರಿಸ್ಥಿತಿಯಲ್ಲಿ ಕನ್ನಡ ಭಾಷೆ ತನ್ನ ಬೆಳವಣಿಗೆಯಲ್ಲೇ ಕುಂಠಿತವಾಗಿದೆ. ಹೀಗಿರುವಾಗ ಕನ್ನಡ ಪುಸ್ತಕಗಳ ಮಾರಾಟ ಸಂಖ್ಯೆ ಹೆಚ್ಚಾಗುವುದು ಹೇಗೆ? ಕರ್ನಾಟಕದ ಅಸ್ಮಿತೆಯನ್ನು ಬೆಳೆಸುವ ಕೆಲಸ ಆಗಬೇಕು. ಎಲ್ಲ ಲೇಖಕರು ಕನ್ನಡದ ಪರ ಧ್ವನಿ ಎತ್ತಬೇಕು’ ಎಂದರು.

ಆ್ಯಪ್ ಅಗತ್ಯ: ಹಿರಿಯ ಲೇಖಕ ನಾಗೇಶ ಹೆಗಡೆ ಮಾತನಾಡಿ, ‘ಕೃತಿಯ ಬಗ್ಗೆ ಮಾಹಿತಿ ನೀಡುವ, ಆ ಕೃತಿ ಎಲ್ಲಿ ಲಭ್ಯವಿದೆ ಮುಂತಾದ ಮಾಹಿತಿ ಒಂದೇ ಕಡೆ ಲಭ್ಯವಾಗುವಂತೆ ಆ್ಯಪ್ ಅನ್ನು ಅಭಿವೃದ್ಧಿಪಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರಕಾಶಕರ ಸಂಘ ಕ್ರಮಕೈಗೊಳ್ಳಬೇಕು’ ಎಂದರು.

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ
ಬಿಜೆಪಿಯ ಒಗ್ಗಟ್ಟು ಉಳಿಯಬಹುದೆ?
ಸಂವಾದದಲ್ಲಿ ಭಾಗವಹಿಸುವವರು

ಸಂದೀಪ್ ಶಾಸ್ತ್ರಿ ರಾಜಕೀಯ ವಿಶ್ಲೇಷಕ
ಸಿದ್ದನಗೌಡ ಪಾಟೀಲ ಸಿಪಿಐ ರಾಜ್ಯ ಮುಖಂಡ
ರವೀಂದ್ರ ರೇಷ್ಮೆ ಹಿರಿಯ ಪತ್ರಕರ್ತ ಅಂಕಣಕಾರ
ಮುಜಾಫರ್ ಅಸ್ಸಾದಿ ರಾಜಕೀಯ ವಿಶ್ಲೇಷಕ
ಇಂದು ಬೆಳಿಗ್ಗೆ 11 ರಿಂದ 12

ಎಪಿಎಂಸಿಗೆ ₹15 ಕೋಟಿವರೆಗೆ ಅನುದಾನ: ಸೋಮಶೇಖರ್

ಪ್ರಜಾವಾಣಿ ವಾರ್ತೆ

ಮೈಸೂರು: ‘ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಪ್ರತಿ ಎಪಿಎಂಸಿಯ ಅಭಿವೃದ್ಧಿಗೆ ₹ 2 ರಿಂದ ₹15 ಕೋಟಿವರೆಗೆ ಅನುದಾನ ನೀಡಲು ಮುಖ್ಯಮಂತ್ರಿ ಒಪ್ಪಿಗೆ ಸೂಚಿಸಿದ್ದಾರೆ’ ಎಂದು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ಹೇಳಿದರು.

ಭಾನುವಾರ ಇಲ್ಲಿ ನಡೆದ ಬಿಜೆಪಿ ರೈತ ಮೋರ್ಚಾ ರಾಜ್ಯ ಕಾರ್ಯಕಾರಿಣಿಯಲ್ಲಿ ಮಾತನಾಡಿದ ಅವರು, ‘ಎಪಿಎಂಸಿಗಳ ಅಭಿವೃದ್ಧಿಗೆ ಕಳೆದ ವರ್ಷ ₹ 205 ಕೋಟಿ ನೀಡಲಾಗಿತ್ತು. ಈ ಬಾರಿ ಹೆಚ್ಚಿನ ಅನುದಾನ ದೊರೆಯಲಿದೆ. ರೈತರ ಅನುಕೂಲಕ್ಕಾಗಿ ಎಪಿಎಂಸಿ ತಿದ್ದುಪಡಿ ಕಾಯ್ದೆ ಜಾರಿಗೊಳಿಸಿದ್ದು, ರಾಜ್ಯದ ಎಲ್ಲ ಎಪಿಎಂಸಿಗಳಲ್ಲಿ ಬಿರುಸಿನಿಂದ ಚಟುವಟಿಕೆಗಳು ನಡೆಯುತ್ತಿವೆ’ ಎಂದರು.

‘ಈ ಸಾಲಿನಲ್ಲಿ ಸಹಕಾರ ಸಂಸ್ಥೆಗಳ ಮೂಲಕ ₹ 20,810 ಕೋಟಿ ಮೊತ್ತದ ಕೃಷಿ ಸಾಲ ವಿತರಿಸುವ ಗುರಿ ಹೊಂದಲಾಗಿದೆ. ರಾಜ್ಯದ 30 ಲಕ್ಷ ರೈತರು ಇದರ ಪ್ರಯೋಜನ ಪಡೆಯಲಿದ್ದಾರೆ’ ಎಂದು ಅವರು ತಿಳಿಸಿದರು.

ಲಿಂಗಾಯತರ ಮತ ಕಳೆದುಕೊಳ್ಳಬೇಕಾಗುತ್ತದೆ: ನಿಡುಮಾಮಿಡಿ ಸ್ವಾಮೀಜಿ ಎಚ್ಚರಿಕೆ

‘ಯಡಿಯೂರಪ್ಪನವರೇ ಸಿ.ಎಂ ಆಗಿ ಮುಂದುವರಿಯಲಿ’

ಪ್ರಜಾವಾಣಿ ವಾರ್ತೆ

ವೀರಭದ್ರ ಚನ್ನಮಲ್ಲ ಸ್ವಾಮೀಜಿ

ಬೆಂಗಳೂರು: ‘ಜಾತಿ, ಮತ ಎಲ್ಲವನ್ನೂ ಮೀರಿದ ನಾಯಕ ಬಿ.ಎಸ್. ಯಡಿಯೂರಪ್ಪ. ಅವರು ಕೇವಲ ಲಿಂಗಾಯತ ನಾಯಕರಾಗಲಿಲ್ಲ. ಸರ್ವ ಜನಾಂಗದ ಪ್ರೀತಿ ವಿಶ್ವಾಸ ಗಳಿಸಿದ್ದಾರೆ. ಕನಿಷ್ಠ ಆರು ತಿಂಗಳವರೆಗಾದರೂ ಅವರನ್ನು ಮುಖ್ಯಮಂತ್ರಿಯಾಗಿ ಮುಂದುವರಿಸಿ, ನಂತರ ನಿಮ್ಮ ಇಚ್ಛೆಯಂತೆ ನಡೆದುಕೊಳ್ಳಿ’ ಎಂದು ನಿಡುಮಾಮಿಡಿ ವೀರಭದ್ರ ಚನ್ನಮಲ್ಲ ಸ್ವಾಮೀಜಿಯವರು ಬಿಜೆಪಿ ವರಿಷ್ಠರಿಗೆ ಸಂದೇಶ ರವಾನಿಸಿದರು.

ನಗರದಲ್ಲಿ ಭಾನುವಾರ 50ಕ್ಕೂ ಹೆಚ್ಚು ಸ್ವಾಮೀಜಿಗಳ ಜೊತೆ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಯಡಿಯೂರಪ್ಪ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು ಎಂಬುದು ರಾಜ್ಯದ ಮಠಾಧೀಶರ ಆಗ್ರಹ. ಬಿಜೆಪಿ ವರಿಷ್ಠರು ಮಠಾಧೀಶರ ಮಾತಿಗೆ ಬೆಲೆ ಕೊಡಬೇಕು’ ಎಂದರು.

‘ಕೇರಳದಲ್ಲಿ 75 ವರ್ಷ ವಯಸ್ಸು ಮೀರಿದ ವ್ಯಕ್ತಿಯನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಬಿಂಬಿಸಿ, ಬಿಜೆಪಿಯು ಚುನಾವಣೆ ಎದುರಿಸಿತ್ತು. ಆದರೆ, ವಯಸ್ಸಾಯಿತು ಎಂಬ ಕಾರಣ ನೀಡಿ ಯಡಿಯೂರಪ್ಪನವರನ್ನು ಕೆಳಗಿಳಿಸುವ ಪ್ರಯತ್ನಗಳು ನಡೆಯುತ್ತಿವೆ. ಪಕ್ಷವು ಒಂದೊಂದು ಕಡೆ ಒಂದೊಂದು ನಿಯಮ ಪಾಲಿಸಬಾರದು. ಯಡಿಯೂರಪ್ಪನವರಿಗೆ ಸಾಟಿಯಾಗಬಲ್ಲ ಮತ್ತೊಬ್ಬ ನಾಯಕ ಸದ್ಯ ರಾಜ್ಯ ಬಿಜೆಪಿಯಲ್ಲಿ ಇಲ್ಲ’ ಎಂದೂ ಹೇಳಿದರು.

‘ಸರ್ಕಾರದ ರಚನೆಯ ಸಂದರ್ಭದಲ್ಲಿ ಯಡಿಯೂರಪ್ಪ ಅಪಕೀರ್ತಿಗೆ ಒಳಗಾಗಿದ್ದರು. ನಂತರ, ಅತ್ಯಂತ ದಕ್ಷತೆಯಿಂದ, ಕ್ರಿಯಾಶೀಲರಾಗಿ ಕೆಲಸ ಮಾಡಿದ್ದಾರೆ. ನೆರೆ, ಬರ ಹಾಗೂ ಕೋವಿಡ್‌ನಂತಹ ಪರಿಸ್ಥಿತಿಯನ್ನು ಉತ್ತಮವಾಗಿ ನಿಭಾಯಿಸಿದ್ದಾರೆ. ಈಗ ಕೋವಿಡ್ ಮೂರನೇ ಅಲೆ ಬರುವ ಸಾಧ್ಯತೆ ಇದೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಬದಲಾವಣೆಯ ಅವಶ್ಯಕತೆಯಾದರೂ ಇದೆಯಾ’ ಎಂದರು.

‘ಯಡಿಯೂರಪ್ಪನವರನ್ನು ಬದಲಿಸಿದರೆ ಅಥವಾ ಅವರ ನಂತರ ಲಿಂಗಾಯತ ಸಮುದಾಯದವರಿಗೆ ಮುಖ್ಯಮಂತ್ರಿಯನ್ನಾಗಿ ಮಾಡದಿದ್ದರೆ ಬಿಜೆಪಿಯು ಮುಂದಿನ ಚುನಾವಣೆಗಳಲ್ಲಿ ಲಿಂಗಾಯತರ ಮತಗಳನ್ನು ಕಳೆದುಕೊಳ್ಳಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದ ನಿಡುಮಾಮಿಡಿ ಶ್ರೀ, ‘ಇದು ಧರ್ಮದ ಸಭೆ, ರಾಜಕೀಯ ಸಭೆ ಅಲ್ಲ’ ಎಂದೂ ಸ್ಪಷ್ಟಪಡಿಸಿದರು.

ವೀರಶೈವ ಲಿಂಗಾಯತರಿಗೆ ನೀಡಿ: ‘ಯಡಿಯೂರಪ್ಪನವರನ್ನು ಬದಲಿಸುವುದು ಖಚಿತ ಎಂದಾದರೆ, ವೀರಶೈವ ಲಿಂಗಾಯತ ಸಮುದಾಯದ ನಾಯಕರನ್ನೇ ಮುಖ್ಯಮಂತ್ರಿ ಸ್ಥಾನಕ್ಕೆ ಪರಿಗಣಿಸಬೇಕು. ಈ ಸಮುದಾಯದ ನಾಯಕರ ಪೈಕಿ, ಬಸವರಾಜ ಬೊಮ್ಮಾಯಿ, ಮುರುಗೇಶ ನಿರಾಣಿ, ವಿ.ಸೋಮಣ್ಣ, ಮಾಧುಸ್ವಾಮಿ ಮುಖ್ಯಮಂತ್ರಿ ಹುದ್ದೆ ನಿಭಾಯಿಸಲು ಸಮರ್ಥರಿದ್ದಾರೆ’ ಎಂದು ಧಾರವಾಡದ ಮುರುಘಾ ಮಠದ ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು. ರಾಜ್ಯದ 20ಕ್ಕೂ ಹೆಚ್ಚು ಜಿಲ್ಲೆಗಳಿಂದ ಬಂದಿದ್ದ ಸ್ವಾಮೀಜಿಗಳು ಸಭೆಯಲ್ಲಿ ಇದ್ದರು.

ಸಿ.ಎಂ. ಬದಲಾವಣೆ; ವರಿಷ್ಠರ ನಿರ್ಧಾರದಲ್ಲಿ ಗೊಂದಲ- ಶೆಟ್ಟರ್

ಹುಬ್ಬಳ್ಳಿ: ‘ಮುಖ್ಯಮಂತ್ರಿ ಬದಲಾವಣೆ ಕುರಿತು ಪಕ್ಷದ ವರಿಷ್ಠರ ನಿರ್ಧಾರದಲ್ಲಿ ಇನ್ನೂ ಗೊಂದಲಗಳಿವೆ. ಈವರೆಗೆ ಯಾವುದೇ ಸ್ಪಷ್ಟ ಸೂಚನೆ ಅವರಿಂದ ಬಂದಿಲ್ಲ’ ಎಂದು ಸಚಿವ ಜಗದೀಶ ಶೆಟ್ಟರ್ ಹೇಳಿದರು.

ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ವರಿಷ್ಠರು ಏನು ಹೇಳುತ್ತಾರೋ ಅದನ್ನು ಮಾಡುತ್ತೇನೆ ಎಂದು ಯಡಿಯೂರಪ್ಪ ಈಗಾಗಲೇ ಹೇಳಿದ್ದಾರೆ. ಆದಷ್ಟು ಬೇಗ ಗೊಂದಲ ಬಗೆಹರಿಯಲಿದೆ’ ಎಂದರು. ‘75 ವರ್ಷ ಮೇಲ್ಪಟ್ಟವರು ಅಧಿಕಾರದಲ್ಲಿ ಇರಬಾರದು ಎಂದು ಬಿಜೆಪಿ ತತ್ವ ಸಿದ್ಧಾಂತದಲ್ಲಿ ಎಲ್ಲಿಯೂ ಇಲ್ಲ. ಬಿ.ಎಸ್. ಯಡಿಯೂರಪ್ಪ ಅವರು 75 ವರ್ಷ ಆದ ಮೇಲೆಯೇ ಈ ಅವಧಿಗೆ ಮುಖ್ಯಮಂತ್ರಿಯಾಗಿದ್ದು’ ಎಂದು ಹೇಳಿದರು.

‘ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮತ್ತು ಬಸವರಾಜ ಬೊಮ್ಮಾಯಿ ಒಂದೇ ಕ್ಷೇತ್ರದವರು. ಅವರು ಆಗಾಗ ಭೇಟಿ ಆಗುತ್ತಲೇ ಇರುತ್ತಾರೆ. ಈ ಹಿಂದೆಯೂ ಅವರು ಸಾಕಷ್ಟು ಬಾರಿ ಭೇಟಿಯಾಗಿದ್ದಾರೆ. ಅವರ ಈಗಿನ ಭೇಟಿಯನ್ನು ಪಾಕಿಸ್ತಾನ, ಭಾರತದವರು ಒಬ್ಬರನ್ನೊಬ್ಬರು ಭೇಟಿಯಾದ ಹಾಗೆ ಬಿಂಬಿಸಲಾಗುತ್ತಿದೆ. ಅದಕ್ಕೆ ವಿಶೇಷ ಅರ್ಥ ಕಲ್ಪಿಸುವುದು ಬೇಡ’ ಎಂದರು.

ಅಖಾಡಕ್ಕಿಳಿದ ಮಠಾಧೀಶರು

ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥರನ್ನು ಮುಖ್ಯಮಂತ್ರಿ ಮಾಡಿದಂತೆ ರಾಜ್ಯದಲ್ಲಿಯೂ ಮಠಾಧೀಶರೊಬ್ಬರನ್ನು ಮುಖ್ಯಮಂತ್ರಿ ಮಾಡಬೇಕು **ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಮುಷ್ಟೂರು ಮಠ**

ಒಂದನೇ ಪುಟದಿಂದ

ಬಾಲೆಹೊಸೂರಿನ ದಿಂಗಾಲೇಶ್ವರ ಸ್ವಾಮೀಜಿ, ತಿಪಟೂರು ಷಡಾಕ್ಷರಿ ಮಠದ ರುದ್ರಮುನಿ ಸ್ವಾಮೀಜಿ ಮತ್ತು ಚಿತ್ರದುರ್ಗದ ಬಸವಕುಮಾರ ಸ್ವಾಮೀಜಿ ನೇತೃತ್ವದಲ್ಲಿ ಸಮಾವೇಶ ನಡೆಯಿತು. ಉಜ್ಜೈನಿ ಪೀಠದ ಸಿದ್ದಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ, ಧಾರವಾಡದ ಮುರುಘಾ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಚಿಕ್ಕತೊಟ್ಟಲಕೆರೆ ಅಟವಿ ಶಿವಲಿಂಗ ಸ್ವಾಮೀಜಿ ಸೇರಿದಂತೆ ವೀರಶೈವ ಮತ್ತು ಲಿಂಗಾಯತ ಸಮುದಾಯಗಳ ಸ್ವಾಮೀಜಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರು. ನೊಳಂಬ, ಕೊರವ, ಕೊರಚ, ಕೊರಮ ಸಮುದಾಯಗಳ ಮಠಾಧೀಶರು ಸಹ ಪಾಲ್ಗೊಂಡಿದ್ದರು.

ಸಸಿಗೆ ನೀರೆರೆಯುವ ಮೂಲಕ ಸಮಾವೇಶವನ್ನು ಉದ್ಘಾಟಿಸಿದ ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು, ‘ರಾಜ್ಯದಲ್ಲಿ ರಾಜಕೀಯ ಅಸ್ಥಿರತೆ ಕೊನೆಯಾಗಬೇಕು. ಇದಕ್ಕಾಗಿ ನಾವು ನಮ್ಮ ಅಹವಾಲನ್ನು ಹೇಳುತ್ತಿದ್ದೇವೆ. ಈ ಕುರಿತು ಬಿಜೆಪಿ ಹೈಕಮಾಂಡ್‌ನವರು ಸರಿಯಾದ ನಿರ್ಧಾರ ಕೈಗೊಳ್ಳಬೇಕು’ ಎಂದರು.

ಯಡಿಯೂರಪ್ಪ ಉತ್ತಮ ಕೆಲಸ ಮಾಡಿದ್ದಾರೆ. ಅಭಿವೃದ್ಧಿ ಪರವಾದ ರಾಜಕಾರಣ ಅವರದ್ದು. ಹಾಗಾಗಿ ಮಠಾಧೀಶರೆಲ್ಲ ಅವರ ಬೆಂಬಲಕ್ಕೆ ನಿಂತಿದ್ದಾರೆ. ರಾಜ್ಯ ಮತ್ತು ಜನರ ಹಿತಕ್ಕಾಗಿ ಈ ನಿರ್ಧಾರ ಎಂದು ಹೇಳಿದರು.

ರಾಜ್ಯದ ಎಲ್ಲ ಮಠಾಧೀಶರನ್ನು ಒಳಗೊಂಡ ಮಠಾಧೀಶರ ಪರಿಷತ್ ಅಸ್ತಿತ್ವಕ್ಕೆ ತರುವ ನಿರ್ಣಯವನ್ನು ಸಮಾವೇಶದಲ್ಲಿ ಕೈಗೊಳ್ಳಲಾಗಿದೆ.

‘ಭಕ್ತರಿಗಾಗಿ ಕಾಣಿಕೆ ಸ್ವೀಕಾರ’

ಮುಖ್ಯಮಂತ್ರಿಯವರ ಮನೆಯಲ್ಲಿ ಇತ್ತೀಚೆಗೆ ಮಠಾಧೀಶರಿಗೆ ‘ಲಕೋಟೆ’ ವಿತರಿಸಿದ ಘಟನೆಗೆ ಸಂಬಂಧಿಸಿದ ಸುದ್ದಿಗಳ ಕುರಿತು ಪ್ರತಿಕ್ರಿಯಿಸಿದ ದಿಂಗಾಲೇಶ್ವರ ಸ್ವಾಮೀಜಿ, ‘ಮಠಾಧೀಶರು ಯಾವುದೇ ಕಾಣಿಕೆ ತೆಗೆದುಕೊಂಡರೂ ಮಾಧ್ಯಮದವರೂ ಸೇರಿದಂತೆ ಜನ ಸಾಮಾನ್ಯರು ಮಠಕ್ಕೆ ಬಂದಾಗ ದಾಸೋಹ ಮತ್ತು ವಸತಿಗಾಗಿ ಬಳಸಲಾಗುತ್ತದೆ. ಮದ್ಯ ಕುಡಿಯಲು ಮೋಜು ಮಾಡಲು ಅಲ್ಲ’ ಎಂದರು.

ಬಿಎಸ್‌ವೈ ಜಾತ್ಯತೀತ ನಾಯಕ

ದಿಂಗಾಲೇಶ್ವರ ಸ್ವಾಮೀಜಿ ಮಾತನಾಡಿ, ‘ಯಡಿಯೂರಪ್ಪ ಅವರು ಎಲ್ಲ ಜಾತಿ, ಸಮುದಾಯಗಳ ಮಠಗಳಿಗೂ ಅನುದಾನ ನೀಡಿದ್ದಾರೆ. ಅವರು ಜಾತ್ಯತೀತ ನಾಯಕ. ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಬದಲಿಸಬಾರದು ಎಂಬುದು ಎಲ್ಲ ಮಠಾಧೀಶರ ಒಕ್ಕೊರಲ ಅಭಿಪ್ರಾಯ’ ಎಂದರು.

‘ಸಮಾವೇಶವನ್ನು ಯಡಿಯೂರಪ್ಪ ಅವರ ಮಕ್ಕಳು ಆಯೋಜಿಸಿದ್ದಾರೆ ಎಂಬ ಸುಳ್ಳು ಸುದ್ದಿ ಹಬ್ಬಿಸಲಾಗಿದೆ. ಇದು ಮಠಾಧೀಶರೇ ಸ್ವಯಂಪ್ರೇರಿತವಾಗಿ ಕೈಗೊಂಡ ನಿರ್ಧಾರ. ಯಾರ ಸೂಚನೆ ಅಥವಾ ನೆರವಿನಿಂದ ಸಮಾವೇಶ ನಡೆದಿಲ್ಲ’ ಎಂದು ಹೇಳಿದರು.

ಪ್ರತಿಭಟನೆ

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯ ಕೆಲ ಕಾರ್ಯಕರ್ತರು ಕಾವಿ ಧರಿಸಿ, ಮೈಸೂರಿನ ನ್ಯಾಯಾಲಯದ ಸಮೀಪದ ಮಹಾತ್ಮ ಗಾಂಧಿ ಪುತ್ಥಳಿ ಮುಂಭಾಗ ‘ಕಾವಿ ಕಳಚಿ ಖಾದಿ ಧರಿಸಿ’ ಎಂದು ಆಗ್ರಹಿಸಿ ಭಾನುವಾರ ಪ್ರತಿಭಟನೆ ನಡೆಸಿದರು

‘ಸಿಗಂದೂರು ದೇವಸ್ಥಾನ ವಶಪಡಿಸಿಕೊಂಡರೆ ತಕ್ಕ ಪಾಠ’

ಪ್ರಜಾವಾಣಿ ವಾರ್ತೆ

ಹೇಮಗುಡ್ಡ (ಕೊಪ್ಪಳ ಜಿಲ್ಲೆ): ‘ಸಿಗಂದೂರು ಚೌಡೇಶ್ವರಿ ದೇವಸ್ಥಾನವನ್ನು ಸರ್ಕಾರ ವಶಪಡಿಸಿಕೊಳ್ಳಲು ಮುಂದಾದರೆ ತಕ್ಕ ಪಾಠ ಕಲಿಸಲಾಗುವುದು’ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಮಾಲೀಕಯ್ಯ ಗುತ್ತೇದಾರ ಎಚ್ಚರಿಕೆ ನೀಡಿದರು.

ಗಂಗಾವತಿ ತಾಲ್ಲೂಕಿನ ಹೇಮಗುಡ್ಡದ ದುರ್ಗಾದೇವಿ ದೇವಾಲಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಉತ್ತರ ಹಾಗೂ ಕಲ್ಯಾಣ ಕರ್ನಾಟಕ ಆರ್ಯ ಈಡಿಗರ ಸಮಾವೇಶದ ಚಿಂತನ-ಮಂಥನ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಕಲ್ಯಾಣ ಕರ್ನಾಟಕ ಭಾಗದಲ್ಲಿ ಆರ್ಯ ಈಡಿಗರ ಶಕ್ತಿ ಏನೆಂದು ಈಗಾಗಲೇ ತೋರಿಸಿದ್ದೇವೆ. ನಮ್ಮನ್ನು ಬಳಸಿಕೊಂಡು ನಿರ್ಲಕ್ಷ್ಯ ಮಾಡುವುದು ಒಳ್ಳೆಯದಲ್ಲ. ಹೆಂಡ ಮಾರಾಟದ ಮೂಲಕ ಬದುಕು ಕಟ್ಟಿಕೊಂಡಿದ್ದ ಸಮಾಜದ ಜನರು ಇಂದು ಹಮಾಲಿ ಮಾಡುವ ಸ್ಥಿತಿ ತಲುಪಿದ್ದಾರೆ’ ಎಂದರು.

ಮಾಜಿ ಶಾಸಕ ಮಧು ಬಂಗಾರಪ್ಪ ಮಾತನಾಡಿ, ‘ರಾಜಕೀಯ ಪ್ರಾತಿನಿಧ್ಯ, ಸಮಾಜದ ಶಕ್ತಿ ಪ್ರದರ್ಶನಕ್ಕೆ ನಾವೆಲ್ಲ ಸಜ್ಜಾಗೋಣ. ಬಿಲ್ಲವ, ಪೂಜಾರಿ, ಈಳವ, ಈಡಿಗ ಎಂಬ 26 ಒಳಪಂಗಡ ಮರೆತು ನಮ್ಮ ಅಸ್ತಿತ್ವ ತೋರಿಸಬೇಕು’ ಎಂದರು.

ರಾಜ್ಯ ಆರ್ಯ ಈಡಿಗ ಸಂಘದ ಅಧ್ಯಕ್ಷ ತಿಮ್ಮೇಗೌಡ ಮಾತನಾಡಿದರು.

ಭಾನುವಾರ ನಡೆದ ಆರ್ಯ ಈಡಿಗ ಸಮಾಜದ ಚಿಂತನಮಂಥನ ಸಮಾವೇಶದಲ್ಲಿ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಮಾಲೀಕಯ್ಯ ಗುತ್ತೇದಾರ ಮಾತನಾಡಿದರು.

ಅಭಿವೃದ್ಧಿ ನಿಗಮ, ಕೂಡಲ ಸಂಗಮದಲ್ಲಿ ಆರ್ಯಈಡಿಗ ಪೀಠ ಸ್ಥಾಪನೆಗೆ ಸ್ಥಳ, ಮುನಿರಾಬಾದ್‌ನಲ್ಲಿ ನಾರಾಯಣ ಗುರು ಶಿಕ್ಷಣ ಪೀಠ ಸ್ಥಾಪನೆಗೆ 70 ಎಕರೆ ಭೂಮಿ, ಅಧಿಕೃತ ಮದ್ಯ ಮಾರಾಟದಲ್ಲಿ ಸಮಾಜದವರಿಗೆ ಅವಕಾಶ, ಹೋರಾಟ ಸಮಿತಿ ರಚನೆ ಸೇರಿ 14 ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಪ್ರಣವಾನಂದ ಶ್ರೀ, ಬ್ರಹ್ಮಾನಂದ ಸ್ವಾಮೀಜಿ, ವಿಖ್ಯಾತನಂದ, ಸತ್ಯಾನಂದ ಸ್ವಾಮೀಜಿ, ಪ್ರಮುಖರಾದ ಎಚ್‌.ಆರ್. ಶ್ರೀನಾಥ, ಎಚ್‌.ಆರ್.ಗವಿಯಪ್ಪ, ಸತ್ಯಜಿತ್ ಸುರತ್ಕಲ್, ರಾಜಶೇಖರ ಕೋಟ್ಯಾನ್, ಭರತ್.ಎಸ್.ಎಸ್, ಹರಿಬಾಬು ಇದ್ದರು.

ಸಚಿವ ಗೈರು: ಬೇಳೂರು ವ್ಯಂಗ್ಯ

‘ಹಿಂದುತ್ವ, ಪಕ್ಷ ನಿಷ್ಠೆ ಎನ್ನುವ ಮುಜರಾಯಿ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಅವರಿಗೆ ಜಾತಿ ‘ಕೋಟಾ’ದಡಿ ಸಚಿವ ಸ್ಥಾನ ನೀಡಲಾಗಿದೆ. ಆದರೆ, ಯಾರದೋ ಮೇಲಿನ ಭಯದಿಂದ ಅವರು ಸಮಾವೇಶಕ್ಕೆ ಗೈರಾಗಿದ್ದಾರೆ’ ಎಂದು ಮಾಜಿ ಶಾಸಕ ಬೇಳೂರು ಗೋಪಾಲಕೃಷ್ಣ ವ್ಯಂಗ್ಯವಾಡಿದರು

‘ಸಮಾಜದ ಋಣ ಇರುವ ಸಚಿವರೇ ಮುಜರಾಯಿ ಇಲಾಖೆ ನಿಭಾಯಿಸುತ್ತಿದ್ದಾರೆ. ಆದರೆ, ಸಮಾಜದವರಿಗೆ ಸೇರಿದ ಸಿಗಂದೂರು ಚೌಡೇಶ್ವರಿ ದೇವಸ್ಥಾನ ಉಳಿಸಿಕೊಳ್ಳಲು ಪ್ರಯತ್ನ ಮಾಡುತ್ತಿಲ್ಲ. ಅವರು ಸಮಾಜದ ಹಿತ ಹೇಗೆ ಕಾಯುತ್ತಾರೆ’ ಎಂದು ಪ್ರಶ್ನಿಸಿದರು.

ಒಳನೋಟ

ಗಣಿ ಕಂಪನ

ಬೆಂಗಳೂರು: “ಸಕ್ರಮ’ದ ಹೆಸರಲ್ಲಿ ‘ಅಕ್ರಮ” ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಜು.25) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

‘ಗಣಿಗಾರಿಕೆಗೆ ನಿರ್ಬಂಧ ಅಗತ್ಯ’

‘ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಯಬೇಕಾದಲ್ಲಿ ಗಣಿ ಉದ್ಯಮಕ್ಕೆ ಕೆಲವೊಂದು ನಿರ್ಬಂಧಗಳನ್ನು ಹಾಕಬೇಕು. ಅಕ್ರಮ ರಫ್ತಿಗೆ ಕಡಿವಾಣ ಹಾಕಲು ಪ್ರತಿಯೊಂದು ಲಾರಿಯನ್ನೂ ಪರಿಶೀಲಿಸಿ, ತಪ್ಪಿತಸ್ಥರನ್ನು ಪತ್ತೆ ಮಾಡಬೇಕು. ಪರವಾನಗಿ ಇಲ್ಲದ ಹಾಗೂ ವಾಮ ಮಾರ್ಗದಲ್ಲಿ ಗಣಿಗಾರಿಕೆ ನಡೆಸುತ್ತಿರುವವರನ್ನು ಗುರುತಿಸಿ, ಕಾನೂನಿನ ಅಡಿಯಲ್ಲಿ ಶಿಕ್ಷಿಸಬೇಕು. ದೇಶದ ಹಿತಕ್ಕಾಗಿ ರಾಜಕೀಯ ವ್ಯಕ್ತಿಗಳನ್ನು ಈ ಉದ್ಯಮದಿಂದ ದೂರವಿಡಬೇಕು. ಆಗ ಮಾತ್ರ ಅಕ್ರಮ ಗಣಿಗಾರಿಕೆ ನಿಲ್ಲಲಿದೆ.’

ಬಾಲಕೃಷ್ಣ ಎಂ.ಆರ್., ಆರ್‌.ಟಿ. ನಗರ, ಬೆಂಗಳೂರು

‘ಕಾರ್ಮಿಕರ ಪ್ರಾಣಕ್ಕೆ ಕುತ್ತು’

‘ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ಹೊಸದಲ್ಲ. ಇದು ವ್ಯಾಪಿಸಿಕೊಳ್ಳುತ್ತಿರುವ ಬಗೆ ನೋಡಿದಲ್ಲಿ ಭವಿಷ್ಯದಲ್ಲಿ ದೊಡ್ಡ ಮಟ್ಟದ ಸಮಸ್ಯೆಗಳು ಎದುರಾಗಲಿವೆ. ಹಾಗಾಗಿ, ಇದಕ್ಕೆ ಈಗಲೇ ಕಡಿವಾಣ ಹಾಕಬೇಕಿದೆ. ಗಣಿಗಾರಿಕೆಯಿಂದಾಗಿ ಪಾರಂಪರಿಕ ಕಟ್ಟಡ, ಅಣೆಕಟ್ಟೆಗಳು ಹಾಗೂ ಪರಿಸರಕ್ಕೆ ಹಾನಿಯಾಗಲಿದೆ. ಅದೇ ರೀತಿ, ಅಲ್ಲಿನ ಕಾರ್ಮಿಕರು ಹಾಗೂ ಸುತ್ತಮುತ್ತಲಿನ ನಿವಾಸಿಗಳಿಗೆ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆಗಳು ಇರಲಿವೆ. ದಿನವಿಡೀ ಅಲ್ಲಿ ಕೆಲಸ ಮಾಡುವವರ ಪ್ರಾಣಕ್ಕೆ ಕೆಲವು ವೇಳೆ ಕುತ್ತು ಬರಲಿದೆ. ಸಕ್ರಮ ಗಣಿಗಾರಿಕೆ ನಡೆಯುತ್ತಿರುವಲ್ಲಿಯೇ ಕೆಲವರು ಸಾವಿಗೀಡಾದ ಉದಾಹರಣೆಗಳು ಇವೆ.’

ಯಶಸ್ವಿನಿ ಎಂ.ಎನ್., ಮೈಸೂರು

‘ಲೂಟಿಗೆ ಕಡಿವಾಣವಿಲ್ಲ’

‘ಗಣಿಗಾರಿಕೆಯಿಂದ ನಗರಗಳ ಸುತ್ತಮುತ್ತಲಿನ ದೊಡ್ಡ ದೊಡ್ಡ ಬೆಟ್ಟಗಳು ಪುಡಿಯಾಗಿ, ಭಯಾನಕ ರೂಪದ ಕಲ್ಲು ಕ್ವಾರಿಗಳಾಗಿವೆ. ಕಟ್ಟುನಿಟ್ಟಾದ ಕಾನೂನುಗಳು ಇಲ್ಲದಿರುವುದರಿಂದ ಗಣಿ ಮಾಲೀಕರು ಪರಿಸರವನ್ನು ದೋಚುತ್ತಿದ್ದಾರೆ. ಇದರಿಂದ ಸುತ್ತಲ ಪರಿಸರ ನಾಶವಾಗುತ್ತಿದೆ. ಲಾರಿಗಳ ನಿರಂತರ ಸಂಚಾರದಿಂದ ರಸ್ತೆಗಳು ಹಾಳಾಗುತ್ತಿವೆ. ದೂಳಿನ ಸಮಸ್ಯೆ ಕೂಡ ಕಾಣಿಸಿಕೊಳ್ಳುತ್ತಿದೆ. ಈ ನೆಲ ನಮ್ಮದಾದ ಮೇಲೆ ಅದನ್ನು ರಕ್ಷಿಸುವ ಹೊಣೆಗಾರಿಕೆ ಯಾರದ್ದು? ಸಮಸ್ಯೆಗಳ ಸೃಷ್ಟಿಕರ್ತರು ಕಣ್ಣ ಮುಂದೆಯೇ ಇದ್ದರೂ ಅವರಿಗೆ ಶಿಕ್ಷೆ ಆಗದಿರುವುದು ನಮ್ಮ ದುರಂತ.’

ಧನಂಜಯ ಎನ್.ಆರ್., ಜಿ. ನಾಗೇನಹಳ್ಳಿ, ಕೊರಟಗೆರೆ

‘ವ್ಯವಸ್ಥೆಯ ಲೋಪಗಳಿಂದ ಅವಕಾಶ’

‘ರಾಜ್ಯದಲ್ಲಿ ಸಕ್ರಮದ ಹೆಸರಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವದು ಖೇದಕರ ಸಂಗತಿ. ವ್ಯವಸ್ಥೆಯಲ್ಲಿನ ಲೋಪದೋಷಗಳೇ ಇದಕ್ಕೆ ಮೂಲ ಕಾರಣ. ಪ್ರಭಾವಿಗಳೇ ಕಾನೂನಿನ ನಿಯಮಗಳನ್ನು ಮುರಿದು, ಸರ್ಕಾರಕ್ಕೆ ನಷ್ಟ ಉಂಟು ಮಾಡಿದರೆ ಅಭಿವೃದ್ಧಿಯ ಕನಸು ನನಸಾಗಲು ಸಾಧ್ಯವಿಲ್ಲ. ಅಕ್ರಮವನ್ನು ಸಂಪೂರ್ಣ ತಡೆಯಲು ಕಟ್ಟುನಿಟ್ಟಿನ ನಿಯಮಾವಳಿಗಳು ಜಾರಿಯಾಗಬೇಕು. ಈ ನಿಟ್ಟಿನಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು.’

ಮಹಾಂತೇಶ ರಾಜಗೋಳಿ, ಬೈಲಹೊಂಗಲ, ಬೆಳಗಾವಿ

ಅಕ್ರಮ ಗಣಿಗಾರಿಕೆ ಬೆಂಬಲಿಸಿಲ್ಲ: ಎಚ್‌ಡಿಕೆ



ಬೆಂಗಳೂರು: ಮಾಜಿ ಪ್ರಧಾನಿ ಎಚ್. ಡಿ. ದೇವೇಗೌಡರೂ ಸೇರಿದಂತೆ ತಮ್ಮ ಕುಟುಂಬದ ಯಾರೊಬ್ಬರೂ, ಯಾವತ್ತೂ ಅಕ್ರಮ ಗಣಿಗಾರಿಕೆಯನ್ನು ಬೆಂಬಲಿಸಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಅಕ್ರಮ ಗಣಿಗಾರಿಕೆ ಕುರಿತು ‘ಪ್ರಜಾವಾಣಿ’ಯ ಭಾನುವಾರದ ಸಂಚಿಕೆಯಲ್ಲಿ ಪ್ರಕಟವಾದ ‘ಒಳನೋಟ’ದಲ್ಲಿನ ವರದಿಯಲ್ಲಿ ತಮ್ಮ ಕುಟುಂಬದ ಬಗ್ಗೆ ಪ್ರಸ್ತಾಪವಾಗಿರುವುದಕ್ಕೆ ಪ್ರತಿಕ್ರಿಯೆ ನೀಡಿರುವ ಅವರು, ‘ಮಂಡ್ಯದಲ್ಲಿ ನಮ್ಮ ಪಕ್ಷ ತೊರೆದು ಬಿಜೆಪಿ ಸೇರಿದ ಸಚಿವ ಕೆ.ಸಿ. ನಾರಾಯಣ ಗೌಡ ಅವರು ನಮ್ಮ ಪಕ್ಷದ ಮುಖಂಡರ ವಿರುದ್ಧ ಸೇಡಿನ ಕ್ರಮಗಳನ್ನು ಕೈಗೊಂಡು, ಕಿರುಕುಳ ನೀಡಲಾರಂಭಿಸಿದ್ದರು. ಆಗ, ಪಕ್ಷದ ವರಿಷ್ಠರಾಗಿ ದೇವೇಗೌಡರು ಕಾರ್ಯಕರ್ತರ ಪರ ಮಾತನಾಡಿದ್ದರು. ಅದನ್ನೇ ಕ್ರಷರ್ ಪರವಾದ ಹೋರಾಟ ಎಂದು ಬಿಂಬಿಸಲಾಗಿತ್ತು’ ಎಂದು ಹೇಳಿದ್ದಾರೆ.

ಮಂಡ್ಯದ ಕೃಷ್ಣರಾಜ ಸಾಗರ ಅಣೆಕಟ್ಟೆ ಸಮೀಪದ ಬೇಬಿ ಬೆಟ್ಟದಲ್ಲಿ ನಡೆಯುತ್ತಿರುವ ಗಣಿಗಾರಿಕೆ ವಿಚಾರದಲ್ಲೂ ತಾವು ಅಕ್ರಮ ಚಟುವಟಿಕೆಯನ್ನು ಬೆಂಬಲಿಸಿಲ್ಲ. ಎರಡು ಬಾರಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೂ ಅಕ್ರಮ ಗಣಿಗಾರಿಕೆ ಪರವಾದ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಅಕ್ರಮ ತಡೆಯಬೇಕಿರುವುದು ಅಧಿಕಾರದಲ್ಲಿರುವವರು. ವಿರೋಧ ಪಕ್ಷದಲ್ಲಿರುವ ತಮ್ಮ ಮೇಲೆ ಆರೋಪ ಹೊರಿಸುವುದು ಸರಿಯಲ್ಲ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಜೆಡಿಎಸ್ ಪಕ್ಷವಾಗಲಿ, ದೇವೇಗೌಡರಾಗಲಿ ಅಥವಾ ನಾನಾಗಲಿ ಅಕ್ರಮ ಗಣಿಗಾರಿಕೆ ಪರ ನಿಲ್ಲುವುದಿಲ್ಲ. ಅಕ್ರಮದಲ್ಲಿ ತೊಡಗಿರುವವರನ್ನು ಸರ್ಕಾರ ಈ ಕ್ಷಣವೇ ಬಂಧಿಸಲಿ. ಅದಕ್ಕೆ ನನ್ನ ಬೆಂಬಲವೂ ಇದೆ’ ಎಂದಿದ್ದಾರೆ.

‘...ಇನ್ನಾದರೂ ಎಚ್ಚೆತ್ತುಕೊಂಡು ಅಕ್ರಮ ಗಣಿಗಾರಿಕೆ ತಡೆಗೆ ಕ್ಷಿಪ್ರಗತಿಯಲ್ಲಿ ಕ್ರಮಕೈಗೊಳ್ಳಬೇಕು.’

ಗಗನ್ ಎಸ್., ಕೆ.ಆರ್. ಪೇಟೆ, ಮಂಡ್ಯ

‘ವರದಿ ಪರಿಗಣಿಸಲಿ’

‘ಸಮೃದ್ಧ ನೈಸರ್ಗಿಕ ಸಂಪತ್ತನ್ನು ಒಳಗೊಂಡಿರುವ ಈ ನಾಡಿನಲ್ಲಿ ಅಕ್ರಮ ಗಣಿ ಮಾಫಿಯಾ ಶಾಪವಾಗಿ ಕಾಡಲಾರಂಭಿಸಿದೆ. ರಾಜಕೀಯ ಮುಖಂಡರ ಬೆಂಬಲದಿಂದಾಗಿ ಇದಕ್ಕೆ ಕಡಿವಾಣ ಇಲ್ಲದಂತಾಗಿದೆ. ಅಕ್ರಮ ಅದಿರು ರಫ್ತಿಗೆ ಸಂಬಂಧಿಸಿದಂತೆ ಎಚ್‌.ಕೆ. ಪಾಟೀಲರು ನೀಡಿದ ವರದಿ ದೂಳು ತಿನ್ನುತ್ತಿರುವುದು ವಿಪರ್ಯಾಸ. ಸರ್ಕಾರವು

‘ನಿರಂತರ ತೆರಿಗೆ ವಂಚನೆ’

‘ಮರಳು ಗಣಿಗಾರಿಕೆಯಲ್ಲೂ ಸಕ್ರಮಕ್ಕಿಂತ ಅಕ್ರಮವೇ ಹೆಚ್ಚಾಗಿದೆ. ರಾಜಕೀಯ ವ್ಯಕ್ತಿಗಳು, ಅಪರಾಧ ಹಿನ್ನೆಲೆಯವರೇ ಹೆಚ್ಚಾಗಿ ಮರಳು ನಿಕ್ಷೇಪಗಳ ಮೇಲೆ ಹಿಡಿತ ಸಾಧಿಸಿದ್ದಾರೆ. ಸರ್ಕಾರದ ಬೊಕ್ಕಸ ಸೇರಬೇಕಾದ ರಾಜಧನ, ತೆರಿಗೆಯನ್ನು ವಂಚಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ. ಜಲಮೂಲಗಳೂ ಅಪಾಯಕ್ಕೆ ಸಿಲುಕಿವೆ. ಹಾಗಾಗಿ, ಸರ್ಕಾರ ಇದನ್ನು ಕೂಡ ಗಂಭೀರವಾಗಿ ಪರಿಗಣಿಸಬೇಕು.’

ಅಬ್ದುಲ್ ರಝಾಕ್ ಮರ್ಧಾಳ, ಮಂಗಳೂರು

ಪದವಿ ಕಾಲೇಜು ಇಂದಿನಿಂದ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣ ಮುಚ್ಚಿದ್ದ ಪದವಿ, ಸ್ನಾತಕೋತ್ತರ ಪದವಿ ಹಾಗೂ ಎಂಜಿನಿಯರಿಂಗ್ ಕಾಲೇಜುಗಳು ಸೋಮವಾರದಿಂದ (ಜುಲೈ 26) ಪುನರಾರಂಭಗೊಳ್ಳಲಿವೆ.

ತರಗತಿಗಳಿಗೆ ಹಾಜರಾಗಲು ಬಯಸುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದಿರಬೇಕು. ಕಾಲೇಜಿನ ಪ್ರವೇಶದ್ವಾರದ ಬಳಿಯೇ ವಿದ್ಯಾರ್ಥಿಗಳ ಲಸಿಕಾ ಪ್ರಮಾಣಪತ್ರ ಪರಿಶೀಲಿಸಿ ಪ್ರವೇಶ ನೀಡಲಾಗುತ್ತದೆ. ಹೊರ ರಾಜ್ಯಗಳಿಂದ ಬರುವ ವಿದ್ಯಾರ್ಥಿಗಳು ಕಾಲೇಜಿಗೆ ಬರುವ 72 ಗಂಟೆಯ ಮೊದಲು ಆರ್‌ಟಿಪಿಸಿಆರ್ ಪರೀಕ್ಷೆ ಮಾಡಿಸಿರಬೇಕು.

ಈ ಬಗ್ಗೆ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಈಗಾಗಲೇ ಸ್ಪಷ್ಟ ಮಾರ್ಗಸೂಚಿಗಳನ್ನು ಜಾರಿ ಮಾಡಿದೆ. ಎಲ್ಲ ವಿಶ್ವವಿದ್ಯಾಲಯಗಳ ಅಡಿಯಲ್ಲಿರುವ ಕಾಲೇಜುಗಳು ಈ ಮಾರ್ಗಸೂಚಿಗಳನ್ನು ಪಾಲಿಸಲೇಬೇಕು.

ಈ ಬಗ್ಗೆ ಮಾಹಿತಿ ನೀಡಿದ ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ‘ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಈಗಾಗಲೇ ಆದೇಶ ಹೊರಡಿಸಲಾಗಿದೆ’ ಎಂದಿದ್ದಾರೆ.

‘ಕೋವಿಡ್ ಮಾರ್ಗಸೂಚಿಯ ಪ್ರಾಥಮಿಕ ಶಿಷ್ಟಾಚಾರದಂತೆ ಮಾಸ್ಕ್ ಧರಿಸುವುದು, ಸ್ಯಾನಿಟೈಸ್ ಮಾಡುವುದು, ಅಂತರ ಕಾಪಾಡಿಕೊಳ್ಳುವುದು ಕಡ್ಡಾಯ. ನಿತ್ಯವೂ ತರಗತಿ ಕೊಠಡಿಗಳನ್ನು ಸ್ಯಾನಿಟೈಸ್ ಮಾಡಬೇಕು. ಅಲ್ಲದೆ, ವಿದ್ಯಾರ್ಥಿಗಳ ಲಸಿಕೀಕರಣಕ್ಕೆ ಹೆಚ್ಚು ಒತ್ತು ನೀಡಿದ್ದು, ಆದಷ್ಟು ಬೇಗ ಎಲ್ಲರಿಗೂ ಲಸಿಕೆ ಸಿಗುವಂತೆ ಕ್ರಮ ಕೈಗೊಳ್ಳಲು ಎಲ್ಲ ಕುಲಪತಿಗಳಿಗೆ ಸೂಚನೆ ನೀಡಲಾಗಿದೆ’ ಎಂದೂ ಅವರು ತಿಳಿಸಿದ್ದಾರೆ.

‘ತರಗತಿಗಳಿಗೆ ಹಾಜರಾಗುವ ಅಥವಾ ಆನ್‌ಲೈನ್ ಮೂಲಕ ಕಲಿಯುವ ಆಯ್ಕೆಯನ್ನು ವಿದ್ಯಾರ್ಥಿಗಳಿಗೇ ಬಿಡಲಾಗಿದೆ. ಆದರೆ, ಯಾವುದಾದರೂ ಒಂದರಲ್ಲಿ ಹಾಜರಾತಿ ಕಡ್ಡಾಯ’ ಎಂದು ಅವರು ತಿಳಿಸಿದ್ದಾರೆ.

ಶೇ 74ರಷ್ಟು ವಿದ್ಯಾರ್ಥಿಗಳಿಗೆ ಲಸಿಕೆ: ‘ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ವ್ಯಾಪ್ತಿಗಳಲ್ಲೂ ಲಸಿಕೀಕರಣ ವೇಗವಾಗಿ ನಡೆಯುತ್ತಿದೆ. ಕೆಲವು ವಿಶ್ವವಿದ್ಯಾಲಯಗಳಲ್ಲಿ ಉತ್ತಮ ರೀತಿಯಲ್ಲಿ ವಿದ್ಯಾರ್ಥಿಗಳು, ಬೋಧಕರು ಹಾಗೂ ಬೋಧಕೇತರ ಸಿಬ್ಬಂದಿಗೆ ಲಸಿಕೀಕರಣ ನಡೆದಿದೆ. ಇನ್ನು ಕೆಲವು ವಿಶ್ವವಿದ್ಯಾಲಯಗಳಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ. ಈ ಬಗ್ಗೆ ಕ್ರಮ ವಹಿಸಲು ಆಯಾ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ತಿಳಿಸಲಾಗಿದೆ. ಈವರೆಗೆ ಶೇ 74ರಷ್ಟು ವಿದ್ಯಾರ್ಥಿಗಳಿಗೆ ಲಸಿಕೆ ನೀಡಲಾಗಿದೆ. ಕೆಲವೇ ದಿನಗಳಲ್ಲೇ ಉಳಿದ ಎಲ್ಲ ವಿದ್ಯಾರ್ಥಿಗಳಿಗೂ ಆದ್ಯತೆಯ ಮೇರೆಗೆ ಲಸಿಕೆ ಹಾಕಿಸಲಾಗುವುದು’ ಎಂದು ಅವರು ಮಾಹಿತಿ ನೀಡಿದ್ದಾರೆ.

₹ 5.4 ಕೋಟಿ ವೆಚ್ಚದಲ್ಲಿ ಜಾಗತಿಕ ದರ್ಜೆಯ ರಸ್ತೆಯಾಗಿ ಅಭಿವೃದ್ಧಿ • ಬಾಕಿ ಕಾಮಗಾರಿ ಬೇಗ ಪೂರ್ಣಗೊಳಿಸಲು ಒತ್ತಾಯ

ಆಕರ್ಷಣೆಯ ಕೇಂದ್ರವಾದ ಕಮರ್ಷಿಯಲ್ ಸ್ಟ್ರೀಟ್

• ಗುರು ಪಿ.ಎಸ್.

ಬೆಂಗಳೂರು: ಶಿವಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕಮರ್ಷಿಯಲ್ ಸ್ಟ್ರೀಟ್ ಈಗ ಜಾಗತಿಕ ದರ್ಜೆಯ ರಸ್ತೆಯಂತೆ ಕಂಗೊಳಿಸುತ್ತಿದೆ. ಆದರೆ, ರಸ್ತೆಯ ಕಾಮಗಾರಿ ಮುಕ್ತಾಯವಾಗುವುದಕ್ಕೂ ಮುನ್ನವೇ ಉದ್ಘಾಟನೆಯಾಗಿರುವುದರಿಂದ ಹಲವು ಸಮಸ್ಯೆಗಳು ಹಾಗೆಯೇ ಉಳಿದುಕೊಂಡಿವೆ.

ಸ್ಮಾರ್ಟ್ ಸಿಟಿ ಯೋಜನೆಯಡಿ ಕಮರ್ಷಿಯಲ್ ಸ್ಟ್ರೀಟ್‌ನ 458 ಮೀಟರ್‌ವರೆಗಿನ ಭಾಗವನ್ನು ಟೆಂಡರ್ ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಇದಕ್ಕಾಗಿ ₹ 5.4 ಕೋಟಿ ವೆಚ್ಚ ಮಾಡಲಾಗಿದೆ. ವಿವಿಧ ಬಣ್ಣ ಮತ್ತು ವಿನ್ಯಾಸದ ಕಲ್ಲು ಹಾಸುಗಳನ್ನು ಅಳವಡಿಸಲಾಗಿರುವ ರಸ್ತೆ, ವಿಶಾಲವಾದ ಪಾದಚಾರಿ ಮಾರ್ಗಗಳು, ಹೊಸ ವಿನ್ಯಾಸದ ವಿದ್ಯುತ್ ಕಂಬಗಳು, ಅಲಂಕಾರಿಕ ಗಿಡಗಳು ಗಮನ ಸೆಳೆಯುತ್ತಿವೆ.

ಚರ್ಚ್ ಸ್ಟ್ರೀಟ್‌ನಂತೆಯೇ ಅಂದವಾಗಿ ಕಾಣುತ್ತಿರುವ ಈ ರಸ್ತೆಯು ಹೊಸ ಅನುಭವವನ್ನು ನೀಡುತ್ತದೆ ಎಂದು ಸಾರ್ವಜನಿಕರು ಸಂತಸ ವ್ಯಕ್ತಪಡಿಸುತ್ತಾರೆ.

ಒಂದು ವರ್ಷದಿಂದ (2020ರ ಮಾರ್ಚ್) ನಡೆಯುತ್ತಿದ್ದ ಕಾಮಗಾರಿ, ನಂತರ ಲಾಕ್‌ಡೌನ್‌ನಿಂದ ವ್ಯಾಪಾರ–ವಹಿವಾಟು ಕುಸಿದು ನಷ್ಟ ಕಂಡಿದ್ದ ವರ್ತಕರು, ಈಗ ವಿಶ್ವದರ್ಜೆಯಾಗಿ ಕಮರ್ಷಿಯಲ್ ಸ್ಟ್ರೀಟ್ ಮಾರ್ಪಾಡಾಗಿರುವುದನ್ನು ಕಂಡು ಖುಷಿಯಾಗಿದ್ದಾರೆ. ಸುಂದರ ರಸ್ತೆಯಿಂದಾಗಿ ತಮ್ಮ ವ್ಯಾಪಾರ–ವಹಿವಾಟು ಕೂಡಾ ಸುಧಾರಿಸಬಹುದು ಎಂಬ ಸಂತಸದಲ್ಲಿ ವರ್ತಕರು ಇದ್ದಾರೆ.

ನಗರದ ಪ್ರಮುಖ ಹಾಗೂ ಹಳೆಯ ವ್ಯಾಪಾರ ವಹಿವಾಟಿನ ತಾಣ ಎನಿಸಿರುವ ಈ ಪ್ರದೇಶ 150 ವರ್ಷಗಳ ಇತಿಹಾಸ ಹೊಂದಿದೆ. ಇಲ್ಲಿ ಇದುವರೆಗೂ ಈ ಮಟ್ಟದ ಪ್ರಮುಖ ಅಭಿವೃದ್ಧಿ ಕಾಮಗಾರಿಗಳು ನಡೆದಿರಲಿಲ್ಲ. ಸ್ವಾತಂತ್ರ್ಯ ಬಂದ ನಂತರ ಇದೇ ಮೊದಲ ಬಾರಿ ಮುಖ್ಯಮಂತ್ರಿಯೊಬ್ಬರು (ಬಿ.ಎಸ್. ಯಡಿಯೂರಪ್ಪ) ಕಮರ್ಷಿಯಲ್ ಸ್ಟ್ರೀಟ್‌ಗೆ ಭೇಟಿ ನೀಡಿ, ಮರು ಅಭಿವೃದ್ಧಿಗೆ ಚಾಲನೆ ನೀಡಿದ್ದಾರೆ ಎಂದು ಸ್ಮರಿಸುತ್ತಾರೆ ಸ್ಥಳೀಯರು.

ವಾಹನ ನಿಲುಗಡೆಯೇ ಸಮಸ್ಯೆ: ರಸ್ತೆಯಲ್ಲಿ ವಾಹನ ನಿಲುಗಡೆಗೆ ಅವಕಾಶ ನೀಡಬೇಕೆ, ಬೇಡವೇ ಎಂಬ ಬಗ್ಗೆ ಇನ್ನೂ ಚರ್ಚೆ ನಡೆಯುತ್ತಿದೆ. ವಾಹನ ನಿಲುಗಡೆಗೆ ಅವಕಾಶ ಇರುವ ಅಥವಾ ಇಲ್ಲದಿರುವ ಕುರಿತ ಮಾಹಿತಿ ಫಲಕಗಳನ್ನು ರಸ್ತೆಯಲ್ಲಿ ಅಳವಡಿಸಿಲ್ಲ. ಕೆಲವೊಮ್ಮೆ ವಾಹನಗಳನ್ನು ನಿಲ್ಲಿಸಲು ಅವಕಾಶ ನೀಡುತ್ತಾರೆ. ಮತ್ತೆ ಕೆಲವೇ ಹೊತ್ತಿನಲ್ಲಿ 'ಅವಕಾಶ ಇಲ್ಲ' ಎಂದು ಪೊಲೀಸರು ಹೇಳುತ್ತಿದ್ದಾರೆ. ಇದು ಸಾರ್ವಜನಿಕರಲ್ಲಿ ಮತ್ತು ವರ್ತಕರಲ್ಲಿ ಗೊಂದಲ ಮೂಡಿಸುತ್ತಿದೆ.

ಪ್ರಜಾವಾಣಿ ವಿಶೇಷ

'ವಿಡಿಯೊ' ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ರಸ್ತೆಯ ಬದಿಯಲ್ಲಿಯೇ ವಾಹನ ನಿಲ್ಲಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಕೆಲವರು ಸಲಹೆ ನೀಡಿದರು. ಇಲ್ಲಿ ವಾಹನ ನಿಲುಗಡೆಗೆ ಅವಕಾಶ ನೀಡಿದರೆ ರಸ್ತೆಯ ಸೌಂದರ್ಯವೇ ಹಾಳಾಗುತ್ತದೆ ಎಂಬುದು ಇನ್ನು ಕೆಲವರ ಅಭಿಪ್ರಾಯ.

'ವಾಹನ ನಿಲುಗಡೆಯ ಸಮಸ್ಯೆ ಶೀಘ್ರದಲ್ಲಿಯೇ ಮುಕ್ತಾಯವಾಗಬಹುದು. ಸಣ್ಣ–ಪುಟ್ಟ ತೊಂದರೆಗಳೇನೇ ಇದ್ದರೂ ಗುಣಮಟ್ಟದ ಕಾಮಗಾರಿ ನಡೆದಿದೆ. ರಸ್ತೆಯ ಉಳಿದ ಭಾಗದಲ್ಲಿನ ಕಾಮಗಾರಿಯೂ ಬೇಗ ಪೂರ್ಣಗೊಂಡು, ಸಾರ್ವಜನಿಕರ ಸಂಚಾರಕ್ಕೆ ಮುಕ್ತವಾದರೆ ಅನುಕೂಲವಾಗುತ್ತದೆ' ಎಂದು ವರ್ತಕ ವಿಕ್ರಮ್ ಹೇಳಿದರು.

ನಗರದಲ್ಲಿ ಸ್ಮಾರ್ಟ್‌ಸಿಟಿ ಯೋಜನೆಯಡಿ ಅಭಿವೃದ್ಧಿಪಡಿಸಿರುವ ಕಮರ್ಷಿಯಲ್ ಸ್ಟ್ರೀಟ್ ರಸ್ತೆಯ ಒಂದು ನೋಟ ಪ್ರಜಾವಾಣಿ ಚಿತ್ರಗಳು/ ರಂಜು ಪಿ

ನಗರದಲ್ಲಿ ಸ್ಮಾರ್ಟ್‌ಸಿಟಿ ಯೋಜನೆಯಡಿ ಅಭಿವೃದ್ಧಿಪಡಿಸಿರುವ ಕಮರ್ಷಿಯಲ್ ಸ್ಟ್ರೀಟ್ ರಸ್ತೆಯ ಒಂದು ನೋಟ

ಕಾಮಗಾರಿ ಪ್ರಗತಿಯಲ್ಲಿರುವ ಕಮರ್ಷಿಯಲ್ ಸ್ಟ್ರೀಟ್ ರಸ್ತೆಯ ಮತ್ತೊಂದು ಭಾಗದಲ್ಲಿ ಪಾದಚಾರಿ ಮಾರ್ಗವು ಮಳೆಯಿಂದ ಹಾಳಾಗಿರುವುದು

ಸಾರ್ವಜನಿಕರು–ವರ್ತಕರು ಏನಂತಾರೆ?

'ಚರ್ಚ್ ಸ್ಟ್ರೀಟ್‌ನಂತಿದೆ'

ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಓಡಾಡುತ್ತಿದ್ದರೆ, ಚರ್ಚ್‌ಸ್ಟ್ರೀಟ್‌ನಲ್ಲಿ ಓಡಾಡಿದಂತೆ ಭಾಸವಾಗುತ್ತದೆ. ಉತ್ತಮವಾಗಿ ಅಭಿವೃದ್ಧಿ ಪಡಿಸಿದ್ದಾರೆ. ಖರೀದಿಗೆ ಹೆಚ್ಚು ಆಯ್ಕೆಗಳು ಇಲ್ಲಿವೆ.

ಸ್ಫೂರ್ತಿ, ಗ್ರಾಹಕಿ

'ವಿಶಾಲ ಫುಟ್‌ಪಾತ್‌ನಿಂದ ಖುಷಿ'

ಮೊದಲು ಈ ರಸ್ತೆ ತುಂಬಾ ಇಕ್ಕಟ್ಟಾಗಿತ್ತು. ಓಡಾಡುವುದಕ್ಕೇ ಆಗುತ್ತಿರಲಿಲ್ಲ. ಈಗ ಪಾದಚಾರಿ ಮಾರ್ಗಗಳು ವಿಶಾಲವಾಗಿದ್ದು, ಓಡಾಡಲು, ಶಾಪಿಂಗ್ ಮಾಡಲು ಖುಷಿ ಎನಿಸುತ್ತದೆ.

ದೀಪಿಕಾ, ಗ್ರಾಹಕಿ

'ಪರ್ಯಾಯ ವ್ಯವಸ್ಥೆ ಆಗಲಿ'

ರಸ್ತೆಗಿಂತ ಸ್ವಲ್ಪ ದೂರದಲ್ಲಿ ವಾಹನ ನಿಲುಗಡೆಗೆ ಅವಕಾಶ ಮಾಡಿಕೊಟ್ಟು, ಅಲ್ಲಿಂದ ಎಲೆಕ್ಟ್ರಿಕ್ ವಾಹನದಲ್ಲಿ ಹಿರಿಯರನ್ನು ಕರೆತರುವ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ

ಅಜಿತ್, ಗ್ರಾಹಕ

'ಸರ್ಕಾರಕ್ಕೆ ಧನ್ಯವಾದ'

ಕಮರ್ಷಿಯಲ್ ಸ್ಟ್ರೀಟ್ ಅನ್ನು ವಿಶ್ವದರ್ಜೆಯ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಿರುವ ರಾಜ್ಯ ಸರ್ಕಾರಕ್ಕೆ ಅಭಿನಂದನೆ. ವ್ಯಾಪಾರ–ವಹಿವಾಟು ಹೆಚ್ಚಾಗುವ ನಿರೀಕ್ಷೆ ಇದ್ದು, ವರ್ತಕರೆಲ್ಲ ಸಂತಸಗೊಂಡಿದ್ದಾರೆ

ಸಂಜಯ್ ಮೋಟ್ವಾನಿ, ಕಮರ್ಷಿಯಲ್ ಸ್ಟ್ರೀಟ್ ಅಸೋಸಿಯೇಷನ್ ಅಧ್ಯಕ್ಷ

'ನಿಲುಗಡೆ ಇರಲಿ'

ರಸ್ತೆಯ ಉಳಿದ ಕಾಮಗಾರಿಯೂ ಬೇಗ ಮುಗಿಯಬೇಕು. ಈ ಮೊದಲಿನಂತೆ, ರಸ್ತೆಯ ಒಂದು ಬದಿಯಾದರೂ ವಾಹನ ನಿಲುಗಡೆಗೆ ಅವಕಾಶ ನೀಡಿದರೆ ಅನುಕೂಲವಾಗುತ್ತದೆ

ಗೋಪಿ, ಪ್ರೆಸ್ಟೀಜ್ ಮಳಿಗೆ ವ್ಯವಸ್ಥಾಪಕ

ಒಂದೇ ಮಳೆಗೆ ಹದಗೆಟ್ಟ ಪಾದಚಾರಿ ಮಾರ್ಗ

ಮುಖ್ಯಮಂತ್ರಿ ಯಡಿಯೂರಪ್ಪ ಅವರು ಉದ್ಘಾಟಿಸಿರುವ 500 ಮೀಟರ್‌ವರೆಗಿನ ರಸ್ತೆ ಮಾತ್ರ ಅಭಿವೃದ್ಧಿ ಹೊಂದಿದೆ. ಆದರೆ, ಅಕ್ಕ–ಪಕ್ಕದ ರಸ್ತೆಗಳಲ್ಲಿ ಅಭಿವೃದ್ಧಿ ಕಾರ್ಯ ಈಗಲೂ ನಡೆಯುತ್ತಿದೆ. ಬಿದ್ದ ಒಂದೇ ಜೋರು ಮಳೆಗೆ, ನಿರ್ಮಾಣ ಹಂತದಲ್ಲಿರುವ ರಸ್ತೆಗಳ ಪಾದಚಾರಿ ಮಾರ್ಗದಲ್ಲಿ ನೆಲಹಾಸುಗಳು ಕಿತ್ತು ಹೋಗಿವೆ.

ಮಳೆಯ ನೀರು ಮಳಿಗೆಗಳ ಒಳಗೆ ನುಗ್ಗುತ್ತಿದೆ. ಕಮರ್ಷಿಯಲ್ ಸ್ಟ್ರೀಟ್‌ನ ಪೂರ್ಣ ಭಾಗ ಮತ್ತು ಅಕ್ಕ–ಪಕ್ಕದ ರಸ್ತೆಗಳ ಅಭಿವೃದ್ಧಿ ಕಾರ್ಯವೂ ಬೇಗ ಪೂರ್ಣಗೊಳ್ಳಬೇಕು ಎಂದು ವರ್ತಕರು ಒತ್ತಾಯಿಸುತ್ತಾರೆ.

ಬಹುತೇಕರಲ್ಲಿ ಕೋವಿಡ್ ಪ್ರತಿಕಾಯ ಅಭಿವೃದ್ಧಿ: ಆದರೂ ಎಚ್ಚರಿಕೆ ಅಗತ್ಯ

ನವದೆಹಲಿ (ಪಿಟಿಐ): ಕೊರೊನಾ ವೈರಸ್ ಸೋಂಕು ಮತ್ತು ಲಸಿಕೆಯ ಕಾರಣಕ್ಕಾಗಿ ಬಹುತೇಕರಲ್ಲಿ ಈಗಾಗಲೇ ಕೋವಿಡ್ ಪ್ರತಿಕಾಯಗಳು ಅಭಿವೃದ್ಧಿಯಾಗಿವೆ. ಆದರೂ, ಜನರು ಮುನ್ನೆಚ್ಚರಿಕೆ ವಹಿಸುವುದು ಅಗತ್ಯ. ಇಲ್ಲದಿದ್ದರೆ ಎರಡನೇ ಅಲೆಯಲ್ಲಿ ಉಂಟಾದ ಪರಿಸ್ಥಿತಿ ಮರುಕಳಿಸುವ ಸಾಧ್ಯತೆ ಇದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

'ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆ ಇರುವ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆಗಳಿಗೆ ವಿಧಿಸಿರುವ ನಿರ್ಬಂಧಗಳನ್ನು ತೆರವುಗೊಳಿಸಬಹುದು. ಆದರೆ, ಎಚ್ಚರಿಕೆಯಿಂದ ಇರುವುದು ಒಳ್ಳೆಯದು.' ಎಂದು ನವದೆಹಲಿಯ ಏಮ್ಸ್‌ನಲ್ಲಿ ಕೋವಿಡ್–19 ಐಸಿಯು ವಿಭಾಗವನ್ನು ನಿರ್ವಹಿಸುತ್ತಿರುವ ಡಾ.ಯಧ್ಯುವೀರ್ ಸಿಂಗ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಗಂಗಾ ರಾಮ್ ಆಸ್ಪತ್ರೆಯ ಮೆಡಿಸಿನ್ ವಿಭಾಗದ ಹಿರಿಯ ಸಲಹೆಗಾರರಾಗಿರುವ ಡಾ. ಪೂಜಾ ಖೋಸ್ಲಾ ಅವರು, 'ಕೋವಿಡ್‌ನ 2ನೇ ಅಲೆಯು ಈಗಾಗಲೇ ಪ್ರಕರಣಗಳು ಇದ್ದಕ್ಕಿದ್ದಂತೆ ಹೆಚ್ಚಾಗಬಹುದು ಅನ್ನುವ ಪಾಠವನ್ನು ಕಲಿಸಿದೆ' ಎಂದು ಹೇಳಿದ್ದಾರೆ.

'ಲಸಿಕೆ ಮತ್ತು ಈ ಹಿಂದೆ ಕೋವಿಡ್ ಸೋಂಕಿಗೊಳಗಾಗಿರುವ ಕಾರಣದಿಂದಾಗಿ ಬಹುತೇಕರಿಗೆ ಕೊರೊನಾ ವೈರಸ್ ವಿರುದ್ಧ ರೋಗನಿರೋಧಕ ಶಕ್ತಿ ಉಂಟಾಗಿದೆ. ಆದರೆ, ಇವನ್ನೂ ಮೀರಿಯೂ ಡೆಲ್ಟಾ ರೂಪಾಂತರದ ರೀತಿಯ ಸೋಂಕನ್ನು ಅಲ್ಲಗಳೆಯಲು ಸಾಧ್ಯವಿಲ್ಲ' ಎಂದು ನವದೆಹಲಿಯ ಸಫ್ದರ್ ಜಂಗ್ ಆಸ್ಪತ್ರೆಯ ಸಮುದಾಯ ಔಷಧ ವಿಭಾಗದ ಮುಖ್ಯಸ್ಥ ಡಾ.ಜುಗಲ್ ಕಿಶೋರ್ ವಿಶ್ಲೇಷಿಸಿದ್ದಾರೆ.

ಆರೋಗ್ಯ ಸಚಿವರ ಸಮ್ಮುಖದಲ್ಲಿಯೇ ಅಂತರವಿಲ್ಲ!

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಭಾನುವಾರ ನಡೆದ ಕೋವಿಡ್ ಲಸಿಕೆ ಅಭಿಯಾನ, ಕೃಷಿ ಮಾಹಿತಿ ರಥಕ್ಕೆ ಚಾಲನೆ ಹಾಗೂ ಕಾರ್ಮಿಕ ಇಲಾಖೆಯಿಂದ ಕಾರ್ಮಿಕರಿಗೆ ದಿನಸಿ ಕಿಟ್ ವಿತರಣೆ ಕಾರ್ಯಕ್ರಮದಲ್ಲಿ ಜನರು ಅಂತರ ಕಾಯ್ದುಕೊಳ್ಳದೆ ಗುಂಪುಗೂಡಿದ್ದರು.

ಸಾವಿರಾರು ಜನರು ಸೇರಿದ್ದ ಈ ಕಾರ್ಯಕ್ರಮವು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಸಮ್ಮುಖದಲ್ಲಿಯೇ ನಡೆಯಿತು. ಸಚಿವರು ಲಸಿಕೆ ಅಭಿಯಾನ ಉದ್ಘಾಟಿಸುವ ವೇಳೆ ಲಸಿಕೆ ಪಡೆಯಲು ಬಂದವರು ಹಾಗೂ ಸಚಿವರ ಬೆಂಬಲಿಗರು ಹೇರಳ ಸಂಖ್ಯೆಯಲ್ಲಿ ನೆರೆದಿದ್ದರು. ಲಸಿಕೆ ಪಡೆಯಲು ಬಂದವರು ಒತ್ತೊತ್ತಾಗಿ ನಿಂತಿದ್ದರು.

ಅಲ್ಲಿಂದ ಕೃಷಿ ಮಾಹಿತಿ ರಥಕ್ಕೆ ಚಾಲನೆ ನೀಡಲು ಸಚಿವರು ತೆರಳುವ ವೇಳೆಯಲ್ಲಿಯೂ ಅವರ ಹಿಂದೆ ಮುಂದೆ ಜನರು ಮುತ್ತಿದ್ದರು. ವೇದಿಕೆಗೆ ಬಂದ ಸಚಿವರು ಭಾಷಣದಲ್ಲಿ, 'ಇಷ್ಟು ಸಂಖ್ಯೆಯಲ್ಲಿ ಜನರು ಸೇರಿದ್ದರೂ ಮಾಸ್ಕ್ ಧರಿಸಿದ್ದೀರಿ' ಎಂದರು.

ಸಚಿವರು ವೇದಿಕೆಯಿಂದ ನಿರ್ಗಮಿಸುವ ವೇಳೆಯಲ್ಲಿಯೂ ಅವರ ಬೆಂಬಲಿಗರು ಅವರನ್ನು ಸುತ್ತುವರಿದರು. ಕಿಟ್‌ಗಾಗಿ ಬಂದಿದ್ದ ಕಾರ್ಮಿಕರು ಗುಂಪು ಗೂಡಿದರು. ಸಚಿವರ ನಿರ್ಗಮನದ ನಂತರ ಆಹಾರ ಕಿಟ್ ಪಡೆಯಲು ಬಂದಿದ್ದ ಕಾರ್ಮಿಕರನ್ನು ಉದ್ದೇಶಿಸಿ ಅಧಿಕಾರಿಗಳು 'ಅಂತರ ಕಾಪಾಡಿಕೊಳ್ಳಿ. ದೂರ ನಿಲ್ಲಿ. ಪೊಲೀಸರು ದಯವಿಟ್ಟು ಜನರನ್ನು ದೂರ ನಿಲ್ಲಿಸಿ' ಎಂದು ಪದೇ ಪದೇ ಹೇಳಿದ್ದರು. ಆದರೂ ಜನಸಮೂಹ ಮಾತ್ರ ದೊಡ್ಡ ಸಂಖ್ಯೆಯಲ್ಲಿಯೇ ಒತ್ತೊತ್ತಾಗಿತ್ತು.

ಚಿಕ್ಕಬಳ್ಳಾಪುರದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಭಾನುವಾರ ನಡೆದ ಕೃಷಿ, ಕಾರ್ಮಿಕ ಇಲಾಖೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜನರು

ಕೋವಿಡ್: ನಾಲ್ಕೂವರೆ ತಿಂಗಳಲ್ಲಿ ಕನಿಷ್ಠ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1,001 ಮಂದಿ ಕೋವಿಡ್ ಪೀಡಿತರಾಗಿರುವುದು ಭಾನುವಾರ ದೃಢಪಟ್ಟಿದ್ದು, ಸೋಂಕು ದೃಢ ಪ್ರಮಾಣವು ಶೇ 0.68ಕ್ಕೆ ಇಳಿಕೆಯಾಗಿದೆ.

ನಾಲ್ಕೂವರೆ ತಿಂಗಳಲ್ಲಿ ವರದಿಯಾದ ಕನಿಷ್ಠ ಹೊಸ ಪ್ರಕರಣ ಹಾಗೂ ದೃಢ ಪ್ರಮಾಣ ಇದಾಗಿದೆ. ರಾಜ್ಯದಲ್ಲಿ ಮಾರ್ಚ್ ಎರಡನೇ ವಾರದ ಬಳಿಕ ಹೊಸ ಪ್ರಕರಣಗಳು ಸಾವಿರದ ಗಡಿ ದಾಟಿತ್ತು. ಕಳೆದ ಒಂದು ತಿಂಗಳಿನಿಂದ ಕೋವಿಡ್ ಇಳಿಮುಖ ಮಾಡಿದೆ. 13 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 2 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ರಾಯಚೂರು ಹಾಗೂ ಬಾಗಲಕೋಟೆಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ 165ಕ್ಕೆ ಇಳಿಕೆಯಾಗಿದ್ದು, ಈ ವರ್ಷ ವರದಿಯಾದ ಕನಿಷ್ಠ ಪ್ರಕರಣಗಳಾಗಿವೆ. ದಕ್ಷಿಣ ಕನ್ನಡದಲ್ಲಿ 115 ಹಾಗೂ ಉಡುಪಿಯಲ್ಲಿ 110 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.94 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 22 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 15 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 3, ಮೈಸೂರು, ಕೋಲಾರ, ಹಾವೇರಿ, ಹಾಸನ ಹಾಗೂ ಬೆಳಗಾವಿಯಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 2.19ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ನಿಂದ ಸಾವಿಗೀಡಾದವರ ಒಟ್ಟು ಸಂಖ್ಯೆ 36,374ಕ್ಕೆ ಏರಿಕೆಯಾಗಿದೆ.

ಸೋಂಕಿತರಲ್ಲಿ 1,465 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 28.34 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 23,419 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ರಾಜ್ಯ ಕೋವಿಡ್ ಅಂಕಿ–ಅಂಶ

28,94,557 ▲	ಒಟ್ಟು ಸೋಂಕಿತರು (28,93,556 ನಿನ್ನೆಯ ವಿವರ)
23,419 ▼	ಸಕ್ರಿಯ ಪ್ರಕರಣಗಳು
28,34,741 ▲	ಗುಣಮುಖರಾದವರು
36,374 ▲	ಒಟ್ಟು ಸಾವು
ದಿನದ ಏರಿಕೆ	
ಹೊಸ ಪ್ರಕರಣ	1,001 ▼
ಗುಣಮುಖ	1,465 ▼
ಸಾವು	22 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ ಪ್ರಜಾವಾಣಿ ಗ್ರಾಫಿಕ್ಸ್

ನಗರದ ಕೋವಿಡ್ ಅಂಕಿ–ಅಂಶ

12,24,760 ▲	ಒಟ್ಟು ಪ್ರಕರಣಗಳು (12,24,595 ನಿನ್ನೆಯ ವಿವರ)
8,215 ▼	ಸಕ್ರಿಯ ಪ್ರಕರಣಗಳು
12,00,712 ▲	ಗುಣಮುಖರಾದವರು
15,832 ▲	ಒಟ್ಟು ಸಾವು
ಭಾನುವಾರದ ಏರಿಕೆ	
ಹೊಸ ಪ್ರಕರಣ	165 ▼
ಗುಣಮುಖ	293 ▼
ಸಾವು	3 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ ಪ್ರಜಾವಾಣಿ ಗ್ರಾಫಿಕ್ಸ್

ವಿಧಾನಸಭೆ ವಿಸರ್ಜಿಸಿ ಜನರ ಮುಂದೆ ಹೋಗೋಣ: ಡಿಕೆಶಿ

ಬೆಂಗಳೂರು: 'ನೆರೆ, ಕೋವಿಡ್‌ನಿಂದ ಜೀವ ಹಾಗೂ ಜೀವನ ಉಳಿಸಿಕೊಳ್ಳಲು ಪರದಾಡುತ್ತಿರುವ ಜನರನ್ನು ರಕ್ಷಣೆ ಮಾಡಲು ರಾಜ್ಯ ವಿಫಲವಾಗಿದೆ. ಹೀಗಾಗಿ, ವಿಧಾನಸಭೆ ವಿಸರ್ಜಿಸಿ ಜನರ ಮುಂದೆ ಹೋಗೋಣ. ಜನರ ತೀರ್ಪಿನ ಪ್ರಕಾರ ಹೊಸ ಆಡಳಿತ ಬರಲಿ' ಎಂದು ಬಿಜೆಪಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

ಕೋವಿಡ್ ಸಂಬಂಧಿಸಿದಂತೆ ರಾಜ್ಯಮಟ್ಟದ ಕಾಂಗ್ರೆಸ್ ಮೇಲ್ವಿಚಾರಣಾ ಸಮಿತಿ ವರದಿಯನ್ನು ಭಾನುವಾರ ಸ್ವೀಕರಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಯಡಿಯೂರಪ್ಪ ಅವರ ಸ್ಥಾನ ಏನಾಗುತ್ತದೋ ಆ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ. ಆದರೆ, ಜನರ ಕಷ್ಟಕ್ಕೆ ಸ್ಪಂದಿಸದ ಈ ಸರ್ಕಾರಕ್ಕೆ ಅಧಿಕಾರದಲ್ಲಿ ಮುಂದುವರಿಯುವ ಅರ್ಹತೆ ಇಲ್ಲ' ಎಂದರು.

'ರಾಜ್ಯದಲ್ಲಿ ಮೂರು ವರ್ಷಗಳಿಂದ ಮಳೆ- ನೆರೆ ಬರುತ್ತಿದೆ. ನಮ್ಮ ಪಕ್ಷದಿಂದ ಆರ್.ವಿ. ದೇಶಪಾಂಡೆ ಮತ್ತು ಸತೀಶ ಜಾರಕಿಹೊಳಿ ನೇತೃತ್ವದ ತಂಡಗಳು ನೆರೆ ಪರಿಶೀಲನೆಗೆ ತೆರಳಿವೆ. ಈ ವರ್ಷದ ನೆರೆ ಪಕ್ಕಕ್ಕಿಡಿ, ಕಳೆದ ಎರಡು ವರ್ಷಗಳ ನೆರೆ ಸಂತ್ರಸ್ತರಿಗೆ ಸರ್ಕಾರ ಪರಿಹಾರ ಕೊಟ್ಟಿಲ್ಲ. ಇಂಥ ಸರ್ಕಾರ ಯಾಕಿರಬೇಕು' ಎಂದು ಪ್ರಶ್ನಿಸಿದರು.

'ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ಅನ್ಯಾಯ ಮಾಡುತ್ತಿದೆ. ಆದರೂ ಬಿಜೆಪಿ ಸಂಸದರು ಯಾಕೆ ಒತ್ತಡ ತರಲಿಲ್ಲ. ಲಸಿಕೆ ವಿಚಾರದಲ್ಲಿ ಗುಜರಾತ್‌ಗೆ ಎಷ್ಟು ಕೊಟ್ಟಿದ್ದಾರೆ. ನಮ್ಮ ರಾಜ್ಯಕ್ಕೆಷ್ಟು ಕೊಟ್ಟಿದ್ದಾರೆ. ರಾಜ್ಯದಿಂದ 25 ಸಂಸದರನ್ನು ಗೆಲ್ಲಿಸಿ ಕಳುಹಿಸಿಲ್ಲವೇ' ಎಂದೂ ಪ್ರಶ್ನಿಸಿದ ಅವರು, 'ರಾಜ್ಯದುದ್ದಕ್ಕೂ ನಮ್ಮ ಪಕ್ಷದ ಮುಖಂಡರು, ಕಾರ್ಯಕರ್ತರು ಸ್ವಂತ ಹಣದಲ್ಲಿ ಆಹಾರ ಕಿಟ್, ಆಮ್ಲಜನಕ, ದಿನಸಿ ಕಿಟ್, ಸ್ಯಾನಿಟೈಸರ್ ಕೊಟ್ಟಿದ್ದಾರೆ. ಸರ್ಕಾರಕ್ಕೆ ಪರ್ಯಾಯವಾಗಿ ನಾವು 1,225 ಆಂಬುಲೆನ್ಸ್ ಸೇವೆ ಒದಗಿಸಿದ್ದೇವೆ. 12.53 ಲಕ್ಷ ವೈದ್ಯಕೀಯ ಕಿಟ್ ಹಂಚಿದ್ದೇವೆ. 93,47,867 ಆಹಾರ ಕಿಟ್ ನೀಡಿದ್ದೇವೆ. 24,654 ಆಮ್ಲಜನಕ ಸಿಲಿಂಡರ್ ನೀಡಿದ್ದೇವೆ ಎಂದರು.

'ಆಸ್ಪತ್ರೆಯ ದುಬಾರಿ ಬಿಲ್ ಕಟ್ಟಲು ಜನ ತಮ್ಮ ಆಸ್ತಿ, ಚಿನ್ನ ಅಡವಿಟ್ಟಿದ್ದಾರೆ. ಕೆಲವರು ಮಾರಿಕೊಂಡಿದ್ದಾರೆ. ಈ ಬಗ್ಗೆ ನಮಗೆ ಮಧ್ಯಂತರ ವರದಿ ಬಂದಿದ್ದು, ಎಐಸಿಸಿಗೆ ಈ ವರದಿಯನ್ನು ಕಳುಹಿಸಲಾಗುತ್ತದೆ. ಮುಂದೆ ಅಂತಿಮ ವರದಿ ಬರಲಿದೆ. ಡೆತ್ ಆಡಿಟ್ ಮಾಡಲು ನಮ್ಮ ತಂಡಕ್ಕೆ ಸೂಚನೆ ನೀಡಿದ್ದು, ಪ್ರತಿ ಬ್ಲಾಕ್ ಮಟ್ಟದಲ್ಲೂ ಚುರುಕಾಗಿ ಕಾರ್ಯನಿರ್ವಹಿಸುತ್ತಿವೆ' ಎಂದರು.

ಚಿತ್ರಾವಳಿ

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿಯೊಬ್ಬರು ಯುವಕನೊಬ್ಬನಿಗೆ ಕೋವಿಡ್ ಪರೀಕ್ಷೆ ಸಲುವಾಗಿ ಮೂಗಿನಿಂದ ದ್ರವವನ್ನು ಭಾನುವಾರ ಸಂಗ್ರಹಿಸಿದರು ಪ್ರಜಾವಾಣಿ ಚಿತ್ರ

ವೈದ್ಯರ ಮೇಲಿನ ಹಲ್ಲೆಗಳನ್ನು ಖಂಡಿಸಿ ಮಣಿಪಾಲ್ ಆಸ್ಪತ್ರೆಯ ವೈದ್ಯರಾದ ಡಾ. ಗೋಪಾಲದಾಸ್ ಹಾಗೂ ಡಾ. ನಿಖಿಲ್ ನಾರಾಯಣಸ್ವಾಮಿ ಅವರು ಭಾರತೀಯ ವೈದ್ಯಕೀಯ ಸಂಘದ ಬೆಂಗಳೂರು ಶಾಖೆಯಿಂದ ಮಂಗಳೂರು ಶಾಖೆಯವರೆಗೆ 400 ಕಿ.ಮೀ. ಸೈಕ್ಲಥಾನ್ ಅನ್ನು ಭಾನುವಾರ ಕೈಗೊಂಡರು.

ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಅಮೃತಹಳ್ಳಿ ಕಾಂಗ್ರೆಸ್ ಮುಖಂಡರ ವತಿಯಿಂದ ಕೆಂಪಾಪುರದ ಕಾಫಿಬೋರ್ಡ್ ಲೇಔಟ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ, ಬಡವರಿಗೆ ಆಹಾರದ ಕಿಟ್ ವಿತರಿಸಿದರು. ಶಾಸಕ ಕೃಷ್ಣಬೈರೇಗೌಡ, ಪಾಲಿಕೆ ಮಾಜಿಸದಸ್ಯ ಪಿ.ವಿ.ಮಂಜುನಾಥಬಾಬು, ಮುಖಂಡರಾದ ಎಂ.ಜಯಗೋಪಾಲಗೌಡ, ಎನ್.ಎನ್. ಶ್ರೀನಿವಾಸಯ್ಯ, ರವಿಕುಮಾರ್, ಗೌರೀಶ್, ಡಿ.ಬಿ.ಸುರೇಶ್ ಗೌಡ, ಹನುಮಂತೇಗೌಡ, ಗೋವಿಂದೇಗೌಡ ಇತರರು ಇದ್ದರು.

ಅರಕೆರೆ ಗ್ರಾಮದ ಘನತ್ಯಾಜ್ಯ ವಿಲೇವಾರಿ ಘಟಕದ ಬಳಿ ಸಸಿ ನೆಡಲಾಯಿತು.

ಕೋವಿಡ್: ಎರಡನೇ ಅಲೆಯಲ್ಲಿ 10 ವರ್ಷಗಳ ಒಳಗಿನ 61,894 ಮಕ್ಕಳಲ್ಲಿ ಸೋಂಕು

ಮಕ್ಕಳಲ್ಲಿ ಸೋಂಕಿನ ಪ್ರಮಾಣ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹತ್ತು ವರ್ಷದೊಳಗಿನ ಮಕ್ಕಳಲ್ಲಿ ಕೊರೊನಾ ಸೋಂಕು ದೃಢಪಡುವ ಪ್ರಮಾಣವು ಏರುಗತಿಯಲ್ಲಿ ಸಾಗುತ್ತಿದ್ದು, ಮುಂದಿನ ದಿನಗಳಲ್ಲಿ ಈ ಪ್ರಮಾಣ ಇನ್ನಷ್ಟು ಹೆಚ್ಚಳವಾಗುವ ಬಗ್ಗೆ ವೈದ್ಯಕೀಯ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಮೇ ತಿಂಗಳಲ್ಲಿ ವರದಿಯಾದ ಕೋವಿಡ್ ಪ್ರಕರಣಗಳಲ್ಲಿ 10 ವರ್ಷದೊಳಗಿನವರಲ್ಲಿ ಸೋಂಕು ದೃಢ ಪ್ರಮಾಣ ಸರಾಸರಿ ಶೇ 3.5ರಷ್ಟಿತ್ತು. ಇದು ಜೂನ್ ತಿಂಗಳಲ್ಲಿ ಶೇ 4ಕ್ಕೆ ಏರಿಕೆಯಾಗಿತ್ತು. ಜುಲೈ ತಿಂಗಳಲ್ಲಿ ಶೇ 4.4ಕ್ಕೆ ತಲುಪಿದೆ. ಕೋವಿಡ್ ಎರಡನೇ ಅಲೆಯಲ್ಲಿ (ಮಾ.12ರಿಂದ ಜು.23) ಈ ವಯೋಮಾನದ 61,894 ಮಕ್ಕಳು ಸೋಂಕಿತರಾಗಿದ್ದಾರೆ. 10ರಿಂದ 20 ವರ್ಷದೊಳಗಿನವರಲ್ಲಿ 1,56,789 ಮಂದಿ ಕೋವಿಡ್ ಪೀಡಿತರಾಗಿದ್ದಾರೆ.

ಕೋವಿಡ್‌ನಿಂದ ಚೇತರಿಸಿಕೊಂಡ ಕೆಲ ಮಕ್ಕಳಲ್ಲಿ ಬಹುಅಂಗಾಂಗ ಉರಿಯೂತ ಸಮಸ್ಯೆ (ಮೆಸ್ಸಿ) ಕಾಣಿಸಿಕೊಳ್ಳುತ್ತಿದೆ. ಮಕ್ಕಳ ತಜ್ಞರ ಪ್ರಕಾರ ಕೋವಿಡ್‌ನಿಂದ ಚೇತರಿಸಿಕೊಂಡ ಪ್ರತಿ ನೂರು ಮಕ್ಕಳಲ್ಲಿ ಒಂದು ಮಗು ಮೆಸ್ಸಿ ಸಮಸ್ಯೆ ಹೊಂದಿರುವುದು ಕಂಡುಬಂದಿದೆ. ಹೀಗಾಗಿ, ಈ ಕಾಯಿಲೆಯ ಚಿಕಿತ್ಸೆಗೂ ಆದ್ಯತೆ ನೀಡಬೇಕು ಎಂದು ತಜ್ಞರು ಸಲಹೆ ನೀಡಿದ್ದಾರೆ.

'ಎರಡು ವಾರಗಳಿಂದ ಕೋವಿಡ್ ಚಿಕಿತ್ಸೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಆಸ್ಪತ್ರೆಗೆ ಬರುತ್ತಿದ್ದಾರೆ. ಪ್ರವಾಸಿ ಸ್ಥಳಗಳಿಗೆ ಪ್ರಯಾಣ, ವಯಸ್ಕರ ಓಡಾಟ ಹೆಚ್ಚಳ, ಮನೆಯಲ್ಲಿನ ಸದಸ್ಯರು ತಡವಾಗಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವುದು ಸೇರಿದಂತೆ ವಿವಿಧ ಕಾರಣಗಳಿಂದ ಮಕ್ಕಳು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗುತ್ತಿದ್ದಾರೆ' ಎಂದು ಆಸ್ಟರ್ ಸಿಎಂಐ ಆಸ್ಪತ್ರೆಯ ಮಕ್ಕಳ ಶ್ವಾಸಕೋಶ ತಜ್ಞ ಹಾಗೂ ಕೋವಿಡ್ ಮೂರನೇ ಅಲೆಯ ತಜ್ಞರ ಸಮಿತಿ ಸದಸ್ಯ ಡಾ.ಶ್ರೀಕಾಂತ್ ಜೆ.ಟಿ. ತಿಳಿಸಿದರು.

'ನಾಲ್ಕನೇ ಸೆರೊ ಸಮೀಕ್ಷೆಯ ಪ್ರಕಾರ ದೇಶದಲ್ಲಿ ಅರ್ಧಕ್ಕಿಂತ ಹೆಚ್ಚಿನ ಮಕ್ಕಳು (ಶೇ 59.4) ಸೋಂಕಿತರಾಗಿ, ಚೇತರಿಸಿಕೊಂಡಿದ್ದಾರೆ. ಇದು ಆಶಾದಾಯಕ ಬೆಳವಣಿಗೆ' ಎಂದು ವಿವರಿಸಿದರು.

'ರೂಪಾಂತರಿ ವೈರಾಣು ಮಕ್ಕಳ ಮೇಲೆ ಯಾವ ರೀತಿ ಪರಿಣಾಮ ಬೀರಲಿದೆ ಎಂದು ಈಗಲೇ ಹೇಳಲು ಸಾಧ್ಯವಿಲ್ಲ. ಈ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆಯಬೇಕಿದೆ. ಅದೇ ರೀತಿ, 18 ವರ್ಷದೊಳಗಿನವರ ಮೇಲೆ ಹೆಚ್ಚಿನ ನಿಗಾ ಇಡಬೇಕಿದೆ' ಎಂದು ರಾಜ್ಯದ ಜೀನೋಮಿಕ್ ಕಣ್ಗಾವಲು ಸಮಿತಿಯ ಸದಸ್ಯ ಡಾ. ವಿಶಾಲ್ ರಾವ್ ಅಭಿಪ್ರಾಯಪಟ್ಟರು.

ಮುಖ್ಯಾಂಶಗಳು

- ಕೋವಿಡ್ ಜಯಿಸಿದ ಕೆಲ ಮಕ್ಕಳಲ್ಲಿ ಬಹುಅಂಗಾಂಗ ಉರಿಯೂತ ಸಮಸ್ಯೆ
- 18 ವರ್ಷದೊಳಗಿನವರ ಮೇಲೆ ಹೆಚ್ಚಿನ ನಿಗಾ ಅಗತ್ಯ
- ರೂಪಾಂತರಿ ವೈರಸ್‌ನಿಂದ ಮಕ್ಕಳ ಮೇಲಾಗುವ ಪರಿಣಾಮ ಇನ್ನೂ ನಿಗೂಢ

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	19.46 ಕೋಟಿ ▲	3.14 ಕೋಟಿ ▲
ಸಕ್ರಿಯ ಪ್ರಕರಣ	1.38 ಕೋಟಿ ▲	4.05 ಲಕ್ಷ ▲
ಗುಣಮುಖ	17.66 ಕೋಟಿ ▲	3.05 ಕೋಟಿ
ಸಾವು	41.72 ಲಕ್ಷ ▲	4.20 ಲಕ್ಷ
ದಿನದ ಮಾಹಿತಿ		
ಹೊಸ ಪ್ರಕರಣ	4.91 ಲಕ್ಷ ▼	36,840 ▼
ಗುಣಮುಖ	3.31 ಲಕ್ಷ ▼	33,603 ▼
ಸಾವು	8,264 ▼	377 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	38,091 ▼
ಅಮೆರಿಕ	36,779 ▼
ಬ್ರಿಟನ್	31,621 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	50.50 ▼
ಬ್ರೆಜಿಲ್	7.80 ▲
ಬ್ರಿಟನ್	10.97 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	1.31 ಲಕ್ಷ
ತಮಿಳುನಾಡು	33,911 ▲
ದೆಹಲಿ	25,043 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	62.64 ▲
ಕೇರಳ	32.71 ▲
ತಮಿಳುನಾಡು	25.48 ▲

ಪ್ರಜಾವಾಣಿ ಗ್ರಾಫಿಕ್ಸ್

ಹೊಸಕೆರೆಹಳ್ಳಿ ವಾರ್ಡ್‌ನ ಪ್ರಮೋದ್ ಬಡಾವಣೆಯಲ್ಲಿ ಮನೆಗಳಿಗೆ ನುಗ್ಗಿದ ಮಳೆ ನೀರು (ಎಡಚಿತ್ರ), ಮಳೆಯಿಂದ ರಕ್ಷಿಸಿಕೊಳ್ಳಲು ಕೊಡೆಯ ಮೊರೆ ಹೋದ ಮಹಿಳೆಯರು —ಪ್ರಜಾವಾಣಿ ಚಿತ್ರಗಳು

ಹೈದರಾಬಾದ್ ರೇಸ್

ಅಶ್ವ ಬ್ರಾವೊ ಗೆಲ್ಲುವ ನಿರೀಕ್ಷೆ

ತ್ರೀ ವಿಶಷ್ ಪ್ಲೇಟ್ ಸೋಮವಾರದಿಂದ ಪ್ರಾರಂಭವಾಗಲಿರುವ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಶ್ವ ಬ್ರಾವೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.05ಕ್ಕೆ ಪ್ರಾರಂಭವಾಗಲಿರುದ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮ್ಯಾಕ್ಸಿಮಮ್ ಗ್ಲಾಮರ್ 13, ಬೈ ದಿ ಬೇ 9, ಏಂಜೆಲಿಟ 6
2ನೇ ರೇಸ್: ಫೈರ್ ಪವರ್ 3, ಫ್ಯಾಶನ್ ಯೂನಿವರ್ಸ್ 8, ಫಾಟುಮಾ 6
3ನೇ ರೇಸ್: ಮೂನ್‌ಲೈಟ್ ರೂಬಿ 13, ಸಿಟಿ ಆಫ್ ಬ್ಲಿಸ್ 10, ಫಸ್ಟ್ ಇನ ಲೈನ್ 2
4ನೇ ರೇಸ್: ವಿನ್ ವಿಶನ್ 11, ಜಸ್ಟ್ ಇನ್‌ಕ್ರೆಡಿಬಲ್ 2, ಫ್ರಾನ್ಸಿಸ್ ಬೇಕಾನ್ 9
5ನೇ ರೇಸ್: ಅಪೆಂಜೆಲ್ 10, ಫ್ಲೈಯಿಂಗ್ ಜೆಟ್ 5, ಹಿಡನ್ ಹೋಪ್ 1
6ನೇ ರೇಸ್: ಅಶ್ವ ಬ್ರಾವೊ 1, ಹೌಸ್ ಆಫ್ ಡೈಮಂಡ್ಸ್ 6, ಪ್ರೌಡ್ 12
7ನೇ ರೇಸ್: ಕೇಸರಿಯ ಬಾಲಮ್ 5, ಡ್ಯಾಂಡಿ ಮ್ಯಾನ್ 7, ಮಾರ್ಕ್ ಮೈ ವರ್ಡ್ 1
8ನೇ ರೇಸ್: ಆರ್ಟ್ ಇನ್ ಮೋಶನ್ 9, ಕೊಲಾಷಲ್ ಬ್ಯಾಟ್ಲ್ 6, ಅಮೈರ 1

ಉತ್ತಮ ಬೆಟ್: ಫೈರ್ ಪವರ್

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್	1ನೇ ಟ್ರಿಬಲ್
4,5,6,7,8	2,3,4,5	5,6,7,8	1,2,3

2ನೇ ಟ್ರಿಬಲ್	3ನೇ ಟ್ರಿಬಲ್
4,5,6	7,8,9

ನಗರದಲ್ಲಿ ತೀವ್ರ ಮಳೆ ● ತಗ್ಗು ಪ್ರದೇಶದ ಮನೆಗಳ ಒಳಗೆ ನುಗ್ಗಿದ ನೀರು ● ಸಂಚಾರ ದಟ್ಟಣೆ

ರಸ್ತೆ ಮೇಲೆ ನೀರು: ಕುಸಿದ ಮನೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಭಾನುವಾರ ರಾತ್ರಿ ಬಿರುಸಿನ ಮಳೆ ಸುರಿದಿದ್ದು, ಪ್ರಮುಖ ರಸ್ತೆ ಹಾಗೂ ಕೆಳ ಸೇತುವೆಗಳಲ್ಲಿ ನೀರು ಹೊಳೆಯಂತೆ ಹರಿಯಿತು. ಹಲವೆಡೆ ತಗ್ಗು ಪ್ರದೇಶಗಳಲ್ಲಿ ಮನೆಗಳಿಗೂ ನೀರು ನುಗ್ಗಿದೆ. ಮಳೆಯ ತೀವ್ರತೆಗೆ ಕೆಲವೆಡೆ ಮನೆಗಳು ಉರುಳಿಬಿದ್ದಿವೆ.

ಮಳೆಗಾಲ ಶುರುವಾದ ದಿನದಿಂದಲೇ ನಗರದಲ್ಲಿ ಮೋಡ ಕವಿದ ವಾತಾವರಣ ಇರುತ್ತಿತ್ತು. ಕೆಲವೊಮ್ಮೆ ಮಳೆಯಾಗಿತ್ತಾದರೂ ಅದರ ತೀವ್ರತೆ ಅಷ್ಟಾಗಿ ಇರಲಿಲ್ಲ.

ಭಾನುವಾರ ಸಂಜೆ ಬಳಿಕ ನಗರದ ಬಹುತೇಕ ಕಡೆ ಜೋರಾಗಿ ಮಳೆ ಸುರಿಯಿತು. ಕೆಲವೆಡೆ ಬಿರುಸಾದ ಗಾಳಿಯೂ ಬೀಸಿತು.

ವಿಲ್ಸನ್ ಗಾರ್ಡನ್, ಶಾಂತಿನಗರ, ಯಶವಂತಪುರ, ಪೀಣ್ಯ, ಮಲ್ಲೇಶ್ವರ, ರಾಜಾಜಿನಗರ, ವಿಜಯನಗರ, ಬಸವೇಶ್ವರನಗರ, ಮಹಾಲಕ್ಷ್ಮಿ ಬಡಾವಣೆ, ಆರ್.ಟಿ.ನಗರ, ಹೆಬ್ಬಾಳ, ಶಿವಾಜಿನಗರ, ಅಶೋಕನಗರ, ಎಂ.ಜಿ. ರಸ್ತೆ, ಕೋರಮಂಗಲ, ಮಡಿವಾಳ, ಬನಶಂಕರಿ, ಬಸವನಗುಡಿ, ಹನುಮಂತ ನಗರ, ಗಿರಿನಗರ, ದೀಪಾಂಜಲಿ ನಗರ, ರಾಜರಾಜೇಶ್ವರಿ ನಗರ, ಮೈಸೂರು ರಸ್ತೆ ಭಾಗದ ಪ್ರದೇಶಗಳು ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಮಳೆ ಜೋರಾಗಿತ್ತು. ಕಾಲುವೆಗಳು ನೀರಿನಿಂದ ತುಂಬಿ ಹರಿದವು.

ಶಿವಾನಂದ ವೃತ್ತದ ಬಳಿಯ ರೈಲ್ವೆ ಕೆಳಸೇತುವೆ, ಮೆಜೆಸ್ಟಿಕ್ ಬಳಿಯ ರೈಲ್ವೆ ಕೆಳ ಸೇತುವೆ, ಬಳ್ಳಾರಿ ರಸ್ತೆಯ ವಿಂಡ್ಸರ್ ಮ್ಯಾನರ್ ಸೇತುವೆಗಳ ಬಳಿ ರಸ್ತೆಯಲ್ಲಿ ನೀರು ಹೊಳೆಯಂತೆ ಹರಿಯಿತು. ಅಲ್ಲಲ್ಲ ವಾಹನಗಳ ಸಂಚಾರ ಕೆಲಹೊತ್ತು ಸ್ಥಗಿತಗೊಳಿಸಲಾಗಿತ್ತು.

ರಾತ್ರಿ ಮಳೆ ಕಡಿಮೆಯಾಗಿ ನೀರಿನ ಪ್ರಮಾಣ ತಗ್ಗಿದ ನಂತರವೇ ವಾಹನಗಳ ಸಂಚಾರ ಪುನಃ ಆರಂಭವಾಯಿತು. ಕೆಲ ಚಾಲಕರು, ಹರಿಯುವ ನೀರಿನಲ್ಲೇ ವಾಹನಗಳನ್ನು ಚಲಾಯಿಸಲು ಹೋಗಿ ನೀರಿನ ಮಧ್ಯೆಯೇ ಸಿಲುಕಿಕೊಂಡಿದ್ದರು. ಸಾರ್ವಜನಿಕರೇ ಅಂತವರ ವಾಹನಗಳನ್ನು ದಡ ತಲುಪಿಸಲು ನೆರವಾದರು.

ನೀರಿನಲ್ಲಿ ಮುಳುಗಿದ ವಾಹನಗಳು: ಕೋರಮಂಗಲದ ನ್ಯಾಷನಲ್ ಗೇಮ್ಸ್ ವಿಲೇಜ್‌ನಲ್ಲಿ ಜಲಮಂಡಳಿಯ ಕಾಮಗಾರಿಯಿಂದಾಗಿ ನೀರಿನ ಹರಿವಿಗೆ ಅಡ್ಡಿಯಾಗಿ ಸಮಸ್ಯೆ ಸೃಷ್ಟಿಯಾಯಿತು. ಇಲ್ಲಿ ಜಲಮಂಡಳಿಯ ಕಾಮಗಾರಿ ಸಲುವಾಗಿ ಕೆಲ ದಿನಗಳ ಹಿಂದೆ ರಾಜಕಾಲುವೆಯ ತಡೆಗೋಡೆಯನ್ನು ಒಡೆಯಲಾಗಿತ್ತು. ಮಳೆಯಿಂದಾಗಿ ನೀರಿನ ಮಟ್ಟ ಹೆಚ್ಚಿದ್ದರಿಂದ ರಾಜಕಾಲುವೆಯ ಕೊಳಚೆ ನೀರು ಇಲ್ಲಿನ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಆವರಣಕ್ಕೆ ನೀರು ನುಗ್ಗಿತು. ಮೂರು ಅಡಿಗಳಿಗೂ ಹೆಚ್ಚು ನೀರು ನಿಂತಿದ್ದರಿಂದ ಕೆಲವು ವಾಹನಗಳು ನೀರಿನಲ್ಲಿ ಭಾಗಶಃ ಮುಳುಗಿದವು.

'ನಗರದಲ್ಲಿ ಆಗಾಗ ಉತ್ತಮ ಮಳೆಯಾಗುತ್ತಿದೆ. ಪ್ರಮುಖ ರಸ್ತೆ ಹಾಗೂ ಕೆಳ ಸೇತುವೆಗಳಲ್ಲಿ ನೀರು ಹರಿದ ದೂರುಗಳು ಬಂದಿದ್ದವು. ಸ್ಥಳಕ್ಕೆ ಹೋದ ಸಿಬ್ಬಂದಿ, ನೀರು ಹರಿದು ಹೋಗುವಂತೆ ಮಾಡಿದ್ದಾರೆ. ಮರ ಹಾಗೂ ಕೊಂಬೆಗಳು ಬಿದ್ದ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಹೊಸಕೆರೆಹಳ್ಳಿ: ಹೊಳೆಯಂತೆ ಹರಿದ ನೀರು

ನಗರದ ಹೊಸಕೆರೆಹಳ್ಳಿ ವಾರ್ಡ್‌ನಲ್ಲಿನ ಬಡಾವಣೆಗಳ ರಸ್ತೆಯ ಮೇಲೆ ಹೊಳೆಯಂತೆ ಹರಿದ ನೀರು ಮನೆಗಳಿಗೂ ನುಗ್ಗಿತು. ಮನೆಯ ಮುಂದೆ ನಿಲ್ಲಿಸಿದ್ದ ಬೈಕ್, ಕಾರುಗಳಿಗೂ ಹಾನಿಯಾಯಿತು.

ಪ್ರಮೋದ್ ಬಡಾವಣೆಯಲ್ಲಿನ ಬಹುತೇಕ ಮನೆಗಳಲ್ಲಿ ನೀರು ನುಗ್ಗಿದ ಪರಿಣಾಮ ನಿವಾಸಿಗಳು ಪಡಿಪಾಟಲು ಎದುರಿಸಬೇಕಾಯಿತು.

'ರಾಜಕಾಲುವೆಗೆ ತಡೆಗೋಡೆ ನಿರ್ಮಿಸಿರುವ ಕಾಮಗಾರಿ ಅರೆಬರೆಯಾಗಿದೆ. ಈಗಿರುವುದಕ್ಕಿಂತ ಸ್ವಲ್ಪ ಮುಂದೆ ಗೋಡೆ ನಿರ್ಮಾಣ ಮಾಡಬೇಕಿತ್ತು. ಅಲ್ಲದೆ, ಚರಂಡಿ ಅಥವಾ ಮೋರಿಗಳ ದುರಸ್ತಿಯೂ ಆಗಿಲ್ಲ. ಸರಾಗವಾಗಿ ನೀರು ಹೋಗದೆ, ಗೋಡೆಯಿಂದ ತಿರುಗಿ ಮನೆಗಳತ್ತ ನೀರು ನುಗ್ಗುತ್ತಿದೆ' ಎಂದು ನಿವಾಸಿ ಅಣ್ಣೇಗೌಡ ದೂರಿದರು.

'ರಾಜಕಾಲುವೆಯ ಒತ್ತುವರಿ ಪರಿಣಾಮ ನಾವು ತೊಂದರೆ ಅನುಭವಿಸಬೇಕಾಗಿದೆ. ರಾಜಕಾಲುವೆ ಸಣ್ಣದಾಗಿಬಿಟ್ಟಿದೆ. ಪ್ರತಿ ಬಾರಿ ಮಳೆ ಬಂದಾಗ ಇದೇ ಕಷ್ಟ ಅನುಭವಿಸಬೇಕಾಗಿದೆ. ಒತ್ತುವರಿ ತೆರವು ಮಾಡಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳದ ಹೊರತು ಇಲ್ಲಿನ ನಿವಾಸಿಗಳಿಗೆ ಕಷ್ಟ ತಪ್ಪಿದ್ದಲ್ಲ' ಎಂದು ಪ್ರಮೋದ್ ಬಡಾವಣೆ ನಿವಾಸಿ ಯೋಗೇಶ್ ಅಭಿಪ್ರಾಯಪಟ್ಟರು.

ಗೌತಮ್ ಕಾಲೊನಿ: ಉರುಳಿದ ಮನೆ

ದೊಮ್ಮಲೂರು ವಾರ್ಡ್‌ನ ಗೌತಮ್ ನಗರದಲ್ಲಿ ಮಳೆ ಜೋರಾಗಿದ್ದು, ಮನೆಯೊಂದು ಉರುಳಿ ಬಿದ್ದಿದೆ. ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದ್ದರಿಂದ ನಿವಾಸಿಗಳು ಸಮಸ್ಯೆ ಎದುರಿಸಿದರು. ಕೆಲವು ಮನೆಗಳಲ್ಲಿನ ಎಲೆಕ್ಟ್ರಾನಿಕ್ಸ್ ಪರಿಕರಗಳು ನೀರಿನಲ್ಲಿ ಮುಳುಗಿದವು.
'ಕೆಲದಿನಗಳಿಂದ ಸುರಿದ ಮಳೆಯಿಂದದಾಗಿ ಮನೆ ಪಾಯ ಹಾಗೂ ಗೋಡೆಗಳು ನೀರಿನಿಂದ ನನೆದಿದ್ದವು. ಅದೇ ಮನೆ ಭಾನುವಾರ ಉರುಳಿ ಬಿದ್ದಿದೆ' ಎಂದು ಕಾಲೊನಿ ನಿವಾಸಿಯೊಬ್ಬರು ತಿಳಿಸಿದರು.

'ಈ ಪ್ರದೇಶದಲ್ಲಿ 65ಕ್ಕೂ ಅಧಿಕ ಕುಟುಂಬಗಳು ನೆಲೆಸಿವೆ. ಪ್ರತಿ ಬಾರಿ ಮಳೆಯಾದಾಗಲೂ ಇಲ್ಲಿ ಬವಣೆ ತಪ್ಪಿದ್ದಲ್ಲ. ಮಳೆಯಾದಾಗಲೆಲ್ಲ ನಾವು ಆತಂಕದಲ್ಲೇ ಕಾಲಕಳೆಯಬೇಕಾಗುತ್ತದೆ' ಎಂದು ಅವರು ಅಳಲು ತೋಡಿಕೊಂಡರು.

ಪಿಡಬ್ಲ್ಯುಡಿ ವಸತಿ ಸಮುಚ್ಚಯಕ್ಕೆ ನುಗ್ಗಿದ ನೀರು

ಒಮ್ಮೆಲೆ ಸುರಿದ ಮಳೆಯಿಮದಾಗಿ ವಿಲ್ಸನ್ ಗಾರ್ಡನ್‌ನ 10ನೇ ಅಡ್ಡರಸ್ತೆಯ ಆಸುಪಾಸಿನ ಪ್ರದೇಶ ಕೆರೆಯಂತಾಗಿ ಬಿಟ್ಟಿತು. ಇಲ್ಲಿನ ಲೋಕೋಪಯೋಗಿ ಇಲಾಖೆಯ ವಸತಿಗೃಹದ ತಳ ಮಹಡಿಗೆ ನೀರು ನುಗ್ಗಿತು. ಮನೆಯೊಳಗೆ ತುಂಬಿದ್ದ ನೀರನ್ನು ಹೊರಹಾಕಲು ನಿವಾಸಿಗಳು ಹರಸಾಹಸಪಟ್ಟರು.

'ಕಾಂಗ್ರೆಸ್ ನಾಶವಾಗಲು ಸಿದ್ದರಾಮಯ್ಯ ಸಾಕು'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ರಾಜ್ಯದಲ್ಲಿ ಕಾಂಗ್ರೆಸ್ ಅವನತಿಯತ್ತ ಸಾಗಿ ನಾಶವಾಗಲು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಸಾಕು' ಎಂದು ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಹೇಳಿದರು.

'ದಲಿತರು ಮುಖ್ಯಮಂತ್ರಿ ಆಗುವ ಅವಕಾಶ ಕಿತ್ತುಕೊಂಡಿದ್ದೇ ಸಿದ್ದರಾಮಯ್ಯ. ಅದಕ್ಕಾಗಿಯೇ ಈ ಹಿಂದಿನ ಚುನಾವಣೆಯಲ್ಲಿ ಜಿ. ಪರಮೇಶ್ವರ ಅವರ ಸೋಲಿಗೆ ಕಾರಣರಾದರು. ಇವರಿಂದ ಸಮುದಾಯ ಉದ್ಧಾರ ಆಗಿದೆಯೇ' ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದರು.

'ಬಾಯಿಮಾತಿಗೆ ದಲಿತ ಪರ ಎನ್ನುವ ಕಾಂಗ್ರೆಸ್ ನಾಯಕರು ರಾಜ್ಯದಲ್ಲಿ ದಲಿತರನ್ನು ಸಮಾಧಿ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲೂ ವ್ಯಾಪಕ ಭ್ರಷ್ಟಾಚಾರ ನಡೆದಿದೆ. ಅದರ ತನಿಖೆ ನಡೆದರೆ, ಅನೇಕರು ಸಿಕ್ಕಿಬೀಳುತ್ತಿದ್ದರು. ಅದಕ್ಕಾಗಿಯೇ ಲೋಕಾಯುಕ್ತಕ್ಕೆ ಇದ್ದಂಥ ಶಕ್ತಿ ಕಸಿದು ಕೊಂಡು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಜಾರಿಗೆ ತಂದಿದ್ದು' ಎಂದು ಆರೋಪಿಸಿದರು.

ಛಲವಾದಿ ನಾರಾಯಣ ಸ್ವಾಮಿ

'ಕಾಂಗ್ರೆಸ್ ಪಕ್ಷ ಬಹುಮತದಿಂದ 78 ಸ್ಥಾನಕ್ಕೆ ಇಳಿಯಲು ಸಿದ್ದರಾಮಯ್ಯ ಅವರೇ ಕಾರಣರು. ಇನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧವೂ ರಾಜ್ಯದಲ್ಲಿ ಅಲೆ ಇದೆ. ಕಾಂಗ್ರೆಸ್‌ನ ದುರಾಡಳಿತ ನೋಡಿರುವ ರಾಜ್ಯದ ಜನ ಮುಂದಿನ ಬಾರಿಯೂ ಬಿಜೆಪಿಯನ್ನೇ ಅಧಿಕಾರಕ್ಕೆ ತರಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಪ್ರಧಾನಿ ಮೋದಿ ಸಚಿವ ಸಂಪುಟ ಪುನಾರಚಿಸುವ ಮೂಲಕ ಮೊದಲ ಬಾರಿಗೆ ದಲಿತ ಸಮುದಾಯದ 20 ನಾಯಕರನ್ನು ಕೇಂದ್ರ ಸಚಿವರನ್ನಾಗಿ ಮಾಡಿ ಇತಿಹಾಸ ಸೃಷ್ಟಿಸಿದ್ದಾರೆ. ವಿವಿಧ ರಾಜ್ಯಗಳ ಎಂಟು ರಾಜ್ಯಪಾಲರ ಪೈಕಿ ನಾಲ್ವರು ದಲಿತ ಸಮುದಾಯದವರಿದ್ದಾರೆ. ಬಿಜೆಪಿ ದಲಿತ ಪರ ಎಂಬುದಕ್ಕೆ ಇದಕ್ಕಿಂತ ನಿದರ್ಶನ ಬೇಕಿಲ್ಲ' ಎಂದರು.

ಸುಸೂತ್ರವಾಗಿ ನಡೆದ ಕೆ–ಸೆಟ್ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಮೈಸೂರು: ಕೋವಿಡ್ ಕಾರಣ ಎರಡು ಬಾರಿ ಮುಂದೂಡಲಾಗಿದ್ದ ಕರ್ನಾಟಕ ರಾಜ್ಯ ಉಪನ್ಯಾಸಕರ ಅರ್ಹತಾ ಪರೀಕ್ಷೆ (ಕೆ–ಸೆಟ್) ಭಾನುವಾರ ಸುಸೂತ್ರವಾಗಿ ನಡೆದಿದ್ದು, ಶೇ 89ರಷ್ಟು ಅಭ್ಯರ್ಥಿಗಳು ಹಾಜರಾಗಿದ್ದರು.

ಮೈಸೂರು ವಿಶ್ವವಿದ್ಯಾಲಯ ಆಶ್ರಯದಲ್ಲಿ ಮೈಸೂರು, ಬೆಂಗಳೂರು, ಬೆಳಗಾವಿ, ಬಳ್ಳಾರಿ, ವಿಜಯಪುರ, ದಾವಣಗೆರೆ, ಧಾರವಾಡ, ಕಲಬುರ್ಗಿ, ಮಂಗಳೂರು, ಶಿವಮೊಗ್ಗ ಮತ್ತು ತುಮಕೂರಿನಲ್ಲಿರುವ ನೋಡೆಲ್ ಕೇಂದ್ರಗಳಲ್ಲಿ 41 ವಿಷಯಗಳಲ್ಲಿ ಪರೀಕ್ಷೆ ನಡೆಯಿತು. ಒಟ್ಟು 83,907 ಅಭ್ಯರ್ಥಿಗಳು ನೋಂದಾಯಿಸಿದ್ದರು. ಪರೀಕ್ಷೆ ಸ್ವರೂಪದಲ್ಲಿ ಯಾವುದೇ ಬದಲಾವಣೆ ಮಾಡಿರಲಿಲ್ಲ. ಸಾಮಾನ್ಯ ಜ್ಞಾನ ಹಾಗೂ ಆದ್ಯತಾ ವಿಷಯ ಸೇರಿ ಎರಡು ಪರೀಕ್ಷೆಗಳು ಬೆಳಿಗ್ಗೆ 9.30ರಿಂದ ಮಧ್ಯಾಹ್ನ 1ರ ಗಂಟೆವರೆಗೆ ನಡೆದವು.

ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಭಾನುವಾರ ಕೆ–ಸೆಟ್ ಪರೀಕ್ಷೆ ಬರೆದ ಅಭ್ಯರ್ಥಿಗಳು –ಪ್ರಜಾವಾಣಿ ಚಿತ್ರ

'ಕೊರೊನಾ ಮಾರ್ಗಸೂಚಿಯಂತೆ ಪರೀಕ್ಷೆ ನಡೆಸಲಾಗಿದೆ. ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಶೇ 85ರಷ್ಟು ಹಾಜರಾತಿ ಇತ್ತು. ಅಕ್ರಮ ಅಥವಾ ಕಾಪಿ ಮಾಡುವ ಯತ್ನ ನಡೆದಿರುವ ಬಗ್ಗೆ ಯಾವುದೇ ಕೇಂದ್ರಗಳಿಂದ ದೂರು ಬಂದಿಲ್ಲ' ಎಂದು ಕೆ–ಸೆಟ್ ಸಂಯೋಜಕ ಪ್ರೊ.ಎಚ್.ರಾಜಶೇಖರ್ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಮೈಸೂರು ನಗರದಲ್ಲಿ 29 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿದ್ದು, ನೋಂದಾಯಿತ 15,059 ಅಭ್ಯರ್ಥಿ ಗಳ ಪೈಕಿ ಶೇ 87ರಷ್ಟು ಮಂದಿ ಹಾಜರಾಗಿದ್ದರು. ಒಂದು ಬೆಂಚ್‌ನಲ್ಲಿ ಇಬ್ಬರು ಅಭ್ಯರ್ಥಿಗಳನ್ನು ಕೂರಿಸಲಾಗಿತ್ತು. ಎಲ್ಲಾ ಅಭ್ಯರ್ಥಿಗಳು ಮಾಸ್ಕ್ ಧರಿಸಿ ಬಂದಿದ್ದರು. ಪ್ರವೇಶದ್ವಾರದಲ್ಲಿ ಥರ್ಮಲ್ ಗನ್ ಮೂಲಕ ಸ್ಕ್ರೀನಿಂಗ್ ಮಾಡಲಾಯಿತು. ಪರೀಕ್ಷಾ ಕೇಂದ್ರದ 200 ಮೀಟರ್ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು.

23 ಜನರ ವಿರುದ್ಧ ಜಾತಿನಿಂದನೆ ಪ್ರಕರಣ ದಾಖಲು

ಶಿರಾಳಕೊಪ್ಪ: ಹತ್ತಿರದ ಮಾಯತಮ್ಮ ಮುಚುಡಿ ಗ್ರಾಮದ 23 ಜನರ ವಿರುದ್ಧ ಜಾತಿನಿಂದನೆ ಪ್ರಕರಣ ದಾಖಲಾಗಿದೆ. ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ.

ಎರಡು ದಿನಗಳಿಂದ ಸುರಿದ ಧಾರಾಕಾರ ಮಳೆಗೆ ಮಾಯತಮ್ಮನ ಮುಚುಡಿ ಗ್ರಾಮದ ಪರಿಶಿಷ್ಟ ಸಮುದಾಯದ ಕೇರಿಯ ಕೆಲವು ಮನೆಗಳ ಒಳಗೆ ನೀರು ನುಗ್ಗಿತ್ತು. ಪ್ರಸ್ತುತ ಇರುವ ಕಾಲುವೆಯಲ್ಲಿ ನೀರು ಹೋಗದಿದ್ದರಿಂದ ಪಿಡಿಒ ಅನುಮತಿ ಪಡೆದು ಪರಿಶಿಷ್ಟ ಸಮುದಾಯದ ವೀರೇಶ್ ಪಕ್ಕದಲ್ಲಿ ಇನ್ನೊಂದು ನೀರಿನ ಕಾಲುವೆ ಮಾಡುವ ಮೂಲಕ ನೀರನ್ನು ಕಳುಹಿಸಿದ್ದರು.

'ಈ ರೀತಿ ಕಾಲುವೆ ಮಾಡಿದ್ದರಿಂದ ಹಾಲಿನ ವಾಹನಗಳ ಸಂಚಾರಕ್ಕೆ ಅಡಚಣೆಯಾಗಿದೆ ಎಂದು ಸವರ್ಣೀಯರು ಗಾಡಿಗಳನ್ನು ಅಡ್ಡಹಾಕಿ, ಮಹಿಳೆಯರನ್ನು ಕರೆದುಕೊಂಡು ಬಂದು ಜಾತಿನಿಂದನೆ ಮಾಡಿ ಹಲ್ಲೆ ಮಾಡಲು ಯತ್ನಿಸಿದ್ದಾರೆ' ಎಂದು ವೀರೇಶ್ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಈ ಸಂಬಂಧ 23 ಜನರ ವಿರುದ್ಧ ಜಾತಿನಿಂದನೆ ಪ್ರಕರಣ ದಾಖಲಾಗಿದೆ.

ದೂರುದಾರ ವೀರೇಶ್ ಮಾತನಾಡಿ, 'ಇದು ನೂತನ ರಸ್ತೆಯಾಗಿದ್ದು, ಹಾಲಿನ ವಾಹನಗಳು ಓಡಾಡಲು ಬೇರೆ ರಸ್ತೆಗಳಿದ್ದರೂ ದುರುದ್ದೇಶ ಪೂರ್ವಕವಾಗಿ ಮೇಲ್ವರ್ಗದವರು ಬಂದು ಗಲಾಟೆ ಮಾಡಿದ್ದಾರೆ. ಜೂನ್‌ನಲ್ಲಿ ನಾವು ಸಾಗುವಳಿ ಮಾಡುತ್ತಿದ್ದ ಜಮೀನನ್ನು ಸರ್ಕಾರಿ ಅಧಿಕಾರಿಗಳ ಮೂಲಕ ತೆರವುಗೊಳಿಸಿಲು ಯತ್ನಿಸಿದ್ದರು. ಅದು ಸಾಧ್ಯವಾಗಲಿಲ್ಲ. ಹಾಗಾಗಿ, ನಾವು ಒಯ್ದ ಹಾಲನ್ನು ಡೇರಿಯಲ್ಲಿ ಹಾಕಿಸಿಕೊಳ್ಳುವುದಿಲ್ಲ. ನಮ್ಮನ್ನು ಕೆಲಸಕ್ಕೆ ಕರೆಯದೆ ಬಹಿಷ್ಕಾರ ಹಾಕಿದ್ದಾರೆ. ಇದರಿಂದ ಪರಿಶಿಷ್ಟ ಸಮುದಾಯದವರು ಊರಿನಲ್ಲಿ ಬದುಕುವುದೇ ಕಷ್ಟವಾಗಿದ್ದು, ಪೊಲೀಸರು ರಕ್ಷಣೆ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

ಚಾರ್ಮಾಡಿ ಘಾಟ್: ಮೂರು ಗಂಟೆ ವಾಹನ ದಟ್ಟಣೆ

ಪ್ರಜಾವಾಣಿ ವಾರ್ತೆ

ಕೊಟ್ಟಿಗೆಹಾರ: ಚಿಕ್ಕಮಗಳೂರು ಮತ್ತು ಮಂಗಳೂರು ನಡುವಿನ ಸಂಪರ್ಕ ಸೇತುವಾಗಿರುವ ಚಾರ್ಮಾಡಿ ಘಾಟಿಯಲ್ಲಿ ಭಾನುವಾರ ಎರಡೂ ಬದಿಯಿಂದ ಏಕಕಾಲಕ್ಕೆ ವಾಹನಗಳನ್ನು ಬಿಟ್ಟಿದ್ದರಿಂದ ವಾಹನ ದಟ್ಟಣೆ ಉಂಟಾಗಿ ಸತತ 3 ಗಂಟೆ ಪ್ರಯಾಣಿಕರು ಪರದಾಡಿದರು.

ಚಾರ್ಮಾಡಿ ಘಾಟಿಯ ಆರನೆಯ ತಿರುವಿನಲ್ಲಿ ಮಳೆಯಿಂದಾಗಿ ಮಣ್ಣು ಕುಸಿದಿದ್ದು, ದುರಸ್ತಿ ಕಾರ್ಯ ನಡೆಯುತ್ತಿರುವುದರಿಂದ ವಾಹನಗಳು ಸರಾಗವಾಗಿ ಮುಂದೆ ಸಾಗಲು ಆಗದೆ ಸಾಲುಗಟ್ಟಿ ನಿಂತಿದ್ದವು.

ಭಾನುವಾರ 2 ಸಾವಿರಕ್ಕೂ ಹೆಚ್ಚು ವಾಹನಗಳು ಚಾರ್ಮಾಡಿ ಘಾಟಿಯಲ್ಲಿ ದಟ್ಟಣೆಯಲ್ಲಿ ಸಿಲುಕಿದ್ದವು. ಪೊಲೀಸರು ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ವಾಹನ ಸಂಚಾರ ನಿಯಂತ್ರಿಸಲು ಪರದಾಡಬೇಕಾಯಿತು.

ಕೊಟ್ಟಿಗೆಹಾರ ಸಮೀಪದ ಚಾರ್ಮಾಡಿ ಘಾಟಿಯಲ್ಲಿ ಸಾಲುಗಟ್ಟಿದ್ದ ವಾಹನಗಳು

ಸದ್ಯ ಶಿರಾಡಿ ಘಾಟಿಯಲ್ಲಿ ವಾಹನ ಸಂಚಾರಕ್ಕೆ ನಿಷೇಧ ಇರುವುದರಿಂದ ಚಾರ್ಮಾಡಿ ಮೂಲಕ ಮಂಗಳೂರಿಗೆ ಹೋಗುವ ವಾಹನಗಳ ಸಂಖ್ಯೆ ಹೆಚ್ಚಿದೆ. ಚಾರ್ಮಾಡಿ ಮಾರ್ಗದಲ್ಲೂ ರಾತ್ರಿ ವಾಹನ ಸಂಚಾರ ನಿಷೇಧಿ ಸಲಾಗಿದೆ. ಭಾರಿ ಮಳೆಯಿಂದಾಗಿ ಘಾಟಿ ಯಲ್ಲಿ ಮಣ್ಣು ತೇವಗೊಂಡಿದೆ. ದಿನಕ್ಕೆ ಸಾವಿರಾರು ವಾಹನಗಳು ಸಂಚರಿಸುವುದರಿಂದ ರಸ್ತೆಯ ಅಂಚಿನ ಮಣ್ಣು ಕುಸಿಯುವ ಭೀತಿ ಎದುರಾಗಿದೆ.

ನುಗು ಜಲಾಶಯ: ಹಿನ್ನೀರಿನ ಬಳಿ ಹೆಣ್ಣಾನೆ ಸಾವು

ಪ್ರಜಾವಾಣಿ ವಾರ್ತೆ

ಎಚ್.ಡಿ.ಕೋಟೆ/ಸರಗೂರು: ತಾಲ್ಲೂಕಿನ ಬಂಡೀಪುರ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ, ನುಗು ವನ್ಯಜೀವಿ ವಲಯದಲ್ಲಿನ ನುಗು ಜಲಾಶಯದ ಹಿನ್ನೀರಿನ ಬಳಿ ಹೆಣ್ಣಾನೆಯೊಂದು (35) ಅನುಮಾನಾಸ್ಪದವಾಗಿ ಮೃತಪಟ್ಟಿದೆ.

'ಸೋಮವಾರ ಮರಣೋತ್ತರ ಪರೀಕ್ಷೆ ನಡೆಸಲಾಗುವುದು. ಆನೆಯ ಹೊಟ್ಟೆ ಊದಿಕೊಂಡಿದ್ದು, ಅನಾರೋಗ್ಯದಿಂದ ಮೃತಪಟ್ಟಿರಬಹುದು' ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರವಿಕುಮಾರ್ ತಿಳಿಸಿದ್ದಾರೆ.

ನುಗು ಜಲಾಶಯದ ಹಿನ್ನೀರಿನ ಬಳಿ ಹೆಣ್ಣಾನೆಯೊಂದು ಮೃತಪಟ್ಟಿದೆ.

ಆನೆಯ ಕಳೇಬರಕ್ಕೆ ಹಾನಿಯಾಗದಂತೆ ಅರಣ್ಯ ಇಲಾಖೆ ಸಿಬ್ಬಂದಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿದ್ದಾರೆ.

ಯುನೆಸ್ಕೊ ಪಾರಂಪರಿಕ ತಾಣ ಪಟ್ಟಿಗೆ ರಾಮಪ್ಪ ದೇವಸ್ಥಾನ

ನವದೆಹಲಿ (ಪಿಟಿಐ): ತೆಲಂಗಾಣದ ವಾರಂಗಲ್ ಜಿಲ್ಲೆಯ ಪಾಲಂಪೇಟ್ ಗ್ರಾಮದಲ್ಲಿರುವ ರಾಮಪ್ಪ ದೇವಸ್ಥಾನಕ್ಕೆ 'ಯುನೆಸ್ಕೊ ವಿಶ್ವ ಪಾರಂಪರಿಕ ತಾಣ' ಗೌರವ ನೀಡಲಾಗಿದೆ ಎಂದು ಕೇಂದ್ರ ಸಂಸ್ಕೃತಿ ಸಚಿವ ಜಿ.ಕಿಶನ್ ರೆಡ್ಡಿ ಭಾನುವಾರ ತಿಳಿಸಿದ್ದಾರೆ.

ಈ ಕುರಿತು ಅವರು, 'ಈ ವಿಷಯ ಹಂಚಿಕೊಳ್ಳಲು ಸಂತಸ ಎನಿಸುತ್ತದೆ. ಈ ನಿಟ್ಟಿನಲ್ಲಿ ಮಾರ್ಗದರ್ಶನ ಹಾಗೂ ಬೆಂಬಲ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೇಶದ ಪರವಾಗಿ, ಅದರಲ್ಲೂ ತೆಲಂಗಾಣ ಜನರ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ' ಎಂದು ಟ್ವೀಟ್ ಮಾಡಿದ್ದಾರೆ.

13ನೇ ಶತಮಾನದ ಈ ದೇವಸ್ಥಾನ ತನ್ನ ವಾಸ್ತುಶಿಲ್ಪದಿಂದಾಗಿ ಗಮನ ಸೆಳೆಯುತ್ತದೆ. ಈ ದೇವಸ್ಥಾನವನ್ನು ನಿರ್ಮಿಸಿರುವ ಶಿಲ್ಪಿ ರಾಮಪ್ಪ ಅವರ ಹೆಸರನ್ನೇ ದೇಗುಲಕ್ಕೆ ಇಡಲಾಗಿದೆ.

ಮುಖ್ಯಾಂಶಗಳು

- ತೆಲಂಗಾಣದ ಪಾಲಂಪೇಟ್ ಗ್ರಾಮದಲ್ಲಿರುವ ಪುರಾತನ ದೇಗುಲ
- 13ನೇ ಶತಮಾನದ ದೇವಸ್ಥಾನ: ಗಮನ ಸೆಳೆಯುವ ವಾಸ್ತುಶಿಲ್ಪ
- ಕಾಕತೀಯ ರಾಜವಂಶದ ಕಲಾಶ್ರೀಮಂತಿಕೆಯ ಪ್ರತೀಕ

'ಕಾಕತೀಯ ರಾಜವಂಶದ ಕಲಾಶ್ರೀಮಂತಿಕೆಯನ್ನು ರಾಮಪ್ಪ ದೇವಸ್ಥಾನ ಬಿಂಬಿಸುತ್ತದೆ. ಈ ದೇವಸ್ಥಾನಕ್ಕೆ ಯುನೆಸ್ಕೊದ ವಿಶ್ವ ಪಾರಂಪರಿಕ ತಾಣ ಗೌರವ ಲಭಿಸಿದ್ದಕ್ಕಾಗಿ ತೆಲಂಗಾಣ ರಾಜ್ಯದ ಜನರನ್ನು ಅಭಿನಂದಿಸುವೆ. ಪ್ರತಿಯೊಬ್ಬರೂ ಈ ದೇವಸ್ಥಾನಕ್ಕೆ ಭೇಟಿ ನೀಡಿ, ಅದರ ವೈಭವವನ್ನು ಕಣ್ತುಂಬಿಕೊಳ್ಳಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ.

ಈ ಬಾರಿ ಕೇಂದ್ರ ಸರ್ಕಾರ ಈ ದೇವಸ್ಥಾನದ ಹೆಸರಿರುವ ಪ್ರಸ್ತಾವನೆಯನ್ನು ಮಾತ್ರ ವಿಶ್ವ ಪಾರಂಪರಿಕ ತಾಣ ಗೌರವಕ್ಕಾಗಿ ಸಲ್ಲಿಸಿತ್ತು.



ತೆಲಂಗಾಣದ ಪಾಲಂಪೇಟ್ ಗ್ರಾಮದ ರಾಮಪ್ಪ ದೇವಸ್ಥಾನ —ಪಿಟಿಐ ಚಿತ್ರ

ಚಿತ್ರಾವಳಿ

ನಗರದ ಗಂಗಾಧರ ಚೆಟ್ಟ ರಸ್ತೆ ಗುಂಡಿಮಯವಾಗಿರುವ ದೃಶ್ಯ ಭಾನುವಾರ ಕಂಡು ಬಂತು –ಪ್ರಜಾವಾಣಿ ಚಿತ್ರ

ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ಅಗ್ರಹಾರ ದಾಸರಹಳ್ಳಿ ವಾರ್ಡ್‌ನಲ್ಲಿ ನಂದನವನ, ವಿವೇಕಾನಂದ ಹಾಗೂ ಬಸವನ ಉದ್ಯಾನಗಳನ್ನು ವಸತಿ ಸಚಿವ ವಿ. ಸೋಮಣ್ಣ ಭಾನುವಾರ ಉದ್ಘಾಟಿಸಿದರು. ಸಂಸದ ತೇಜಸ್ವಿ ಸೂರ್ಯ, ಮುಖಂಡರಾದ ಡಾ.ಸಿ. ಸೋಮಶೇಖರ, ಅರುಣ್ ಸೋಮಣ್ಣ, ಶಿಲ್ಪಾ ಶ್ರೀಧರ್, ವಿಶ್ವನಾಥ ಗೌಡ ಹಾಗೂ ಇತರರು ಇದ್ದರು

ಕ್ರೆಸೆಂಟ್ ರಸ್ತೆಯಲ್ಲಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರ ಅಧಿಕೃತ ನಿವಾಸದ ಎದುರಿನ ಮರವನ್ನು ಭಾನುವಾರ ಕಡಿಯಲಾಗಿದೆ– ಪ್ರಜಾವಾಣಿ ಚಿತ್ರ

ಹಾಸನ-ಕೊಡಗಿನಲ್ಲಿ ತಗ್ಗಿದ ಮಳೆ ಅಬ್ಬರ

ರಾಮೇಶ್ವರ ದೇಗುಲ ರಾಜಗೋಪುರದ ಕೆಲಭಾಗ ಕುಸಿತ

ಪ್ರಜಾವಾಣಿ ವಾರ್ತೆ

ಕೊಣನೂರು (ಹಾಸನ): ರಾಮನಾಥಪುರದಲ್ಲಿರುವ ಪುರಾತನ ರಾಮೇಶ್ವರಸ್ವಾಮಿ ದೇವಾಲಯದ ರಾಜಗೋಪುರದಲ್ಲಿನ ಕೆಲಭಾಗ ಮಳೆಯಿಂದಾಗಿ ಭಾನುವಾರ ಕುಸಿದಿದೆ.

'ಚತುರ್ಯುಗಮೂರ್ತಿ' ಎಂದೇ ಪ್ರಸಿದ್ಧವಾಗಿರುವ ದೇವಾಲಯವನ್ನು ಕಾವೇರಿ ನದಿ ದಂಡೆಯಲ್ಲಿ ಸುಮಾರು 600 ವರ್ಷಗಳ ಹಿಂದೆ ಚೋಳರ ಕಾಲದಲ್ಲಿ ನಿರ್ಮಿಸಲಾಗಿದೆ. ಈ ರಾಜಗೋಪುರದ ಮೇಲಿನ ವಿಗ್ರಹದ ತಲೆಯ ಭಾಗ ಮುರಿದು ಬಿದ್ದಿದೆ.

ದೇವಾಲಯದ ಕೆಲ ಭಾಗಗಳು ಶಿಥಿಲಗೊಂಡಿದ್ದು, ಮಳೆಗಾಲದಲ್ಲಿ ಸೋರುತ್ತಿದೆ. ವಿಶಿಷ್ಟ ವಾಸ್ತುಶಿಲ್ಪದ ದೇವಾಲಯವನ್ನು ಜೀರ್ಣೋದ್ಧಾರ ಮಾಡಬೇಕೆಂಬ ಮಾತು ಹಲವು ದಿನಗಳಿಂದ ಕೇಳಿ ಬರುತ್ತಿತ್ತು.

ಮುರಿದುಬಿದ್ದಿರುವ ವಿಗ್ರಹದ ಶಿಲಾಬಾಲೆಯ ತಲೆಭಾಗ

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಶಾಸಕ ಎ.ಟಿ.ರಾಮಸ್ವಾಮಿ, 'ದೇವಾಲಯವು ಶಿಥಿಲವಾಗುತ್ತಿರುವುದನ್ನು ಮನಗಂಡು ಜೀರ್ಣೋದ್ಧಾರಕ್ಕಾಗಿ ಈ ಮೊದಲೇ ಪ್ರಾಚ್ಯವಸ್ತು ಇಲಾಖೆಯ ಅನುಮತಿ ಪಡೆದು ₹ 4 ಕೋಟಿ ಮಂಜೂರು ಮಾಡಿಸಿದ್ದೆ. ಕೋವಿಡ್ ಹಿನ್ನೆಲೆ ಯಲ್ಲಿ ಕಾಮಗಾರಿ ತಡವಾಗಿದೆ' ಎಂದರು.

ತಗ್ಗಿದ ಮಳೆಯ ಅಬ್ಬರ: ಹಾಸನ ಹಾಗೂ ಕೊಡಗು ಜಿಲ್ಲೆಯಲ್ಲಿ ನಾಲ್ಕೈದು ದಿನಗಳಿಂದ ಅಬ್ಬರಿಸಿದ್ದ ಮಳೆ ಭಾನುವಾರ ತಗ್ಗಿತ್ತು. ಕೆಲವೆಡೆ ಸಾಧಾರಣ ಮಳೆಯಾಗಿದೆ.

ಕೊಡಗು ಜಿಲ್ಲೆಯಲ್ಲಿ ಕಾವೇರಿ ಹಾಗೂ ಲಕ್ಷ್ಮಣ ತೀರ್ಥ ನದಿಯಲ್ಲೂ ನೀರಿನಮಟ್ಟ ಇಳಿಕೆಯಾಗಿದೆ. ಶನಿವಾರ ಸಂಜೆ ಯಿಂದಲೇ ಕಾನೂರು – ಹರಿಹರ ಮಾರ್ಗದ ಸೇತುವೆ ಮೇಲೆ ವಾಹನ ಸಂಚಾರ ಆರಂಭವಾಗಿದೆ.

ರಾಮನಾಥಪುರದ ರಾಮೇಶ್ವರಸ್ವಾಮಿ ದೇವಾಲಯದ ರಾಜಗೋಪುರದ ಕೆಲಭಾಗ ಬಿದ್ದಿರುವುದು

ಶಿಕ್ಷಣ ಕ್ಷೇತ್ರಕ್ಕೆ ಕಸುವು ತುಂಬಬೇಕು: ಸಚಿವ ಸುರೇಶ್‌ಕುಮಾರ್

ಬೆಂಗಳೂರು: 'ಸಮಾಜದ ದೃಷ್ಟಿಯಿಂದ ಶಿಕ್ಷಣ ಕ್ಷೇತ್ರದಲ್ಲಿ ಕಸುವು ತುಂಬುವ ಕೆಲಸ ಪ್ರಶಿಕ್ಷಣ ಭಾರತೀಯ ಶಿಕ್ಷಕರ ತರಬೇತಿ ಪ್ರಕಲ್ಪದ ಮೂಲಕ ಸಾಕಾರಗೊಳ್ಳಬೇಕು' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದರು.

ರಾಷ್ಟ್ರೋತ್ಥಾನ ಪರಿಷತ್ ಭಾನುವಾರ ಆನ್‌ಲೈನ್ ಮೂಲಕ ಆಯೋಜಿಸಿದ್ದ 'ಪ್ರಶಿಕ್ಷಣ ಭಾರತಿ–ಶಿಕ್ಷಕರ ತರಬೇತಿ ಪ್ರಕಲ್ಪ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಇಂಥ ತರಬೇತಿಗಳು ಶಿಕ್ಷಕರಿಗೆ ಅತ್ಯಂತ ಉಪಯುಕ್ತವಾಗಿದ್ದು, ಶಿಕ್ಷಕರಲ್ಲಿ ಹೊಸ ಬದಲಾವಣೆಗೂ ಕಾರಣ ಆಗಬಲ್ಲುದು' ಎಂದು ಅಭಿಪ್ರಾಯಪಟ್ಟರು.

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಪ್ರೊ.ಎಂ.ಕೆ. ಶ್ರೀಧರ್, 'ವೃತ್ತಿಪರತೆಯ ಅಭಿವೃದ್ಧಿಗೆ ಸಂಬಂಧಪಟ್ಟಂತೆ ತರಬೇತಿ ಕೊಡುವ ಜೊತೆಗೆ, ಮಾನವೀಯ ಸ್ಪರ್ಶಕ್ಕೆ ಸ್ಪಂದಿಸುವ ಕೆಲಸವೂ ಆಗಬೇಕಿದೆ. ಆ ಮೂಲಕ, ಈ ದೇಶ ಮತ್ತು ಸಮಾಜ ಕಟ್ಟುವ ಕೆಲಸವನ್ನು ಶಿಕ್ಷಕರು ಮಾಡಬೇಕು' ಎಂದರು.

ಅಧ್ಯಕ್ಷತೆ ವಹಿಸಿದ್ದ ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ.ಕುಮಾರ್, 'ಮುಂದಿನ ದಿನಗಳಲ್ಲಿ ಸಮಾಜವನ್ನು ಸ್ವಸ್ಥ ಮತ್ತು ಸುಸ್ಥಿರ ಸಮಾಜವಾಗಿ ನಿರ್ಮಾಣ ಮಾಡಲು ಅಗತ್ಯವಾದ ಎಲ್ಲ ಅಂಶಗಳನ್ನು ಮೈಗೂಡಿಸಿಕೊಳ್ಳುವ ತರಬೇತಿಯನ್ನು ಶಿಕ್ಷಕರಿಗೆ ನೀಡಬೇಕಿದೆ' ಎಂದರು.

ವಿದ್ಯಾಭಾರತಿಯ ಸಹ ಸಂಘಟನಾ ಕಾರ್ಯದರ್ಶಿ ಜಗದೀಶ್ ಜಿ.ಆರ್, 'ಗುರು ಪೂರ್ಣಿಮೆಯ ಸಂದರ್ಭದಲ್ಲಿ ಶಿಕ್ಷಕರಿಗೆ ಕೊಡುವ ತರಬೇತಿ ಆಚಾರ್ಯರನ್ನು ನಿರ್ಮಾಣ ಮಾಡುವಂಥ ತರಬೇತಿ ಆಗಬೇಕು' ಎಂದು ಆಶಿಸಿದರು.

ರಾಷ್ಟ್ರೋತ್ಥಾನ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸುಭಾಷಿತ

ಸಮಯ ಎಂಬುದು ಅತ್ಯುತ್ತಮ ಲೇಖಕ. ಅದು ಯಾವಾಗಲೂ ಪರಿಪೂರ್ಣವಾದ ಅಂತ್ಯವನ್ನೇ ಬರೆಯುತ್ತದೆ. –ಚಾರ್ಲಿ ಚಾಪ್ಲಿನ್

ಮಳೆಯ ಆರ್ಭಟಕ್ಕೆ ತತ್ತರಿಸಿದ ಬದುಕು ವಿಳಂಬ ಮಾಡದೆ ಜನರ ಕಣ್ಣೀರು ಒರೆಸಿ

ರಾಜ್ಯದಲ್ಲಿ ನೈಋತ್ಯ ಮುಂಗಾರಿನ ಅಬ್ಬರ ಜೋರಾಗಿದೆ. ಉತ್ತರ ಕರ್ನಾಟಕ, ಕರಾವಳಿ ಹಾಗೂ ಮಲೆನಾಡಿನ ಹಲವು ಜಿಲ್ಲೆಗಳಲ್ಲಿ ಮಳೆ ಆರ್ಭಟಿಸಿದೆ. ಅದರಲ್ಲೂ ಬೆಳಗಾವಿ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳು ಮಳೆಯ ಅಟಾಟೋಪದಿಂದ ನಲುಗಿ ಹೋಗಿವೆ. ಮಹಾರಾಷ್ಟ್ರದಲ್ಲೂ ಭಾರಿ ಪ್ರಮಾಣದ ಮಳೆ ಸುರಿಯುತ್ತಿದ್ದು, ಕೃಷ್ಣಾ ಹಾಗೂ ಅದರ ಉಪನದಿಗಳು ಉಕ್ಕಿ ಹರಿಯುತ್ತಿವೆ. ಇದರಿಂದ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಪ್ರವಾಹದ ಪರಿಸ್ಥಿತಿ ನಿರ್ಮಾಣವಾಗಿದೆ. ನೂರಾರು ಗ್ರಾಮಗಳು ಜಲಾವೃತದ ಭೀತಿಯನ್ನೂ ಎದುರಿಸುತ್ತಿವೆ. ಹಲವೆಡೆ ಸೇತುವೆಗಳು ಮುಳುಗಡೆಯಾಗಿ ಸಂಪರ್ಕ ಕಡಿದುಹೋಗಿದೆ. ಬಿತ್ತನೆಯಾಗಿದ್ದ ಸಾವಿರಾರು ಎಕರೆ ಕೃಷಿಭೂಮಿಯಲ್ಲಿ ಈಗ ಹಸಿರೆಲ್ಲ ಮಾಯವಾಗಿ ನೀರು ನಿಂತಿದೆ. ಮೇಲಿಂದ ಮೇಲೆ ಪ್ರವಾಹದ ಪರಿಸ್ಥಿತಿ ಉಂಟಾಗುತ್ತಿರುವ ಕಾರಣ ಬೆಳಗಾವಿ, ಬಾಗಲಕೋಟೆ, ವಿಜಯಪುರ, ಯಾದಗಿರಿ ಮತ್ತಿತರ ಜಿಲ್ಲೆಗಳ ಜನ ಬಸವಳಿದು ಹೋಗಿದ್ದಾರೆ. ಅವರ ವಾಸದ ಮನೆ, ದವಸ–ಧಾನ್ಯ, ದನಕರುಗಳ ಕೊಟ್ಟಿಗೆ, ಒಣಮೇವು, ಪಚ್ಚೆಪೈರಿನ ಜತೆಗೆ ಭವಿಷ್ಯದ ಕನಸುಗಳೂ ನೀರಿನಲ್ಲಿ ಕೊಚ್ಚಿಕೊಂಡು ಹೋಗಿವೆ. ಈ ಸಮಸ್ಯೆಗೊಂದು ಶಾಶ್ವತ ಪರಿಹಾರವಿಲ್ಲವೇ ಎನ್ನುವುದು ಅವರು ಮುಗ್ಧವಾಗಿ ಮುಂದಿಡುತ್ತಿರುವ ಪ್ರಶ್ನೆ. ಇತ್ತೀಚಿನ ದಿನಗಳಲ್ಲಿ ಪ್ರವಾಹದ ಪರಿಸ್ಥಿತಿ ಪದೇ ಪದೇ ಉಂಟಾಗಲು ಹವಾಮಾನ ಬದಲಾವಣೆಯೂ ಒಂದು ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ. ಬೆಟ್ಟ, ಅರಣ್ಯ, ನದಿಗಳಂತಹ ಪ್ರಾಕೃತಿಕ ಪರಿಸರದಲ್ಲಿ ನಡೆಸುವ ನಮ್ಮ ಅಭಿವೃದ್ಧಿ ಯೋಜನೆಗಳು ದಿಕ್ಕು ತಪ್ಪಿವೆ. ಹವಾಮಾನ ಬದಲಾವಣೆಗೆ ಇಂತಹ ದಿಕ್ಕು ತಪ್ಪಿದ ಯೋಜನೆಗಳೂ ಕಾರಣವಾಗಿವೆ ಎಂಬುದನ್ನು ವಿಜ್ಞಾನಿಗಳು ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಕಾಡು–ಮೇಡು, ನದಿ, ಹಳ್ಳ–ಕೊಳ್ಳವನ್ನೂ ಬಿಡದಂತೆ ನಡೆದ ಒತ್ತುವರಿ ಸಹ ಇಂದಿನ ಸ್ಥಿತಿಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ನದಿ, ಹಳ್ಳಗಳೆಲ್ಲ ತುಂಬಿ ಹರಿದು ನೀರು ತಮ್ಮ ಮನೆಗಳ ತನಕ ಬರುವುದೇಕೆ ಎಂಬ ಬಗ್ಗೆ ಗ್ರಾಮಸ್ಥರೂ ಚಿಂತಿಸಬೇಕಾದ ಕಾಲ ಇದು.

ವಿಕೋಪದ ಸನ್ನಿವೇಶವನ್ನು ಮುಂಚೆಯೇ ಊಹಿಸುವುದು, ಅದಕ್ಕೆ ತಕ್ಕಂತೆ ಕ್ರಿಯಾಯೋಜನೆ ರೂಪಿಸುವುದು ನಮ್ಮ ಆದ್ಯತೆಯಾಗಬೇಕು

ಪದೇ ಪದೇ ದುರಂತಗಳ ಕಹಿ ನೆನಪು ಕಾಡಿದರೂ ಹಳೆಯ ತಪ್ಪುಗಳಿಂದ ನಾವೇನೂ ಪಾಠವನ್ನೇ ಕಲಿತಿಲ್ಲ. ಉತ್ತರ ಕರ್ನಾಟಕದ ಇವೇ ಜಿಲ್ಲೆಗಳು ಹನ್ನೆರಡು ವರ್ಷಗಳ ಹಿಂದೆ ಮಹಾಪೂರದ ಹೊಡೆತಕ್ಕೆ ಸಿಲುಕಿ ನಲುಗಿದಾಗ ಆಗಲೂ ಬಿ.ಎಸ್. ಯಡಿಯೂರಪ್ಪ ಅವರೇ ಮುಖ್ಯಮಂತ್ರಿಯಾಗಿದ್ದರು. ನೂರಾರು ಗ್ರಾಮಗಳನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲು ಆಗ ಯೋಜನೆಯನ್ನೂ ರೂಪಿಸಲಾಗಿತ್ತು. ಆ ಯೋಜನೆ ಕಟ್ಟುನಿಟ್ಟಾಗಿ ಅನುಷ್ಠಾನಗೊಂಡಿದ್ದರೆ ಈಗಿನ ಪ್ರವಾಹ ಜನರನ್ನು ಅಷ್ಟಾಗಿ ಬಾಧಿಸುತ್ತಿರಲಿಲ್ಲ. ಬಾರಾ ಕಮಾನಿನಂತೆ ಕೆಲವು ಕಟ್ಟಡಗಳನ್ನು ನಿರ್ಮಿಸಿದ್ದು ಬಿಟ್ಟರೆ, ಗ್ರಾಮಗಳನ್ನು ನಿಜವಾಗಿಯೂ ಸ್ಥಳಾಂತರಿಸುವ ಯಾವುದೇ ಗಂಭೀರ ಪ್ರಯತ್ನಗಳು ಆಗ ಕಾಣಲಿಲ್ಲ. ಈಗಲೂ ಯಡಿಯೂರಪ್ಪನವರೇ ಮುಖ್ಯಮಂತ್ರಿ. ಪ್ರವಾಹಪೀಡಿತ ಬೆಳಗಾವಿ ಜಿಲ್ಲೆಗೆ ಅವರೇನೋ ಭೇಟಿ ನೀಡಿದ್ದಾರೆ. ಆದರೆ, ಜನರ ನೋವಿಗೆ ತುರ್ತಾಗಿ ಸ್ಪಂದಿಸಬೇಕಾದ ಅಧಿಕಾರಸ್ಥರ ಗಮನವೆಲ್ಲ ಈಗ ದೆಹಲಿಯಿಂದ ಬರುವ ‘ಸಂದೇಶ’ದತ್ತ ನೆಟ್ಟಿದೆ. ಹೀಗಾಗಿ ಜನ ಬಿಟ್ಟ ಕಣ್ಣು ಹಾಗೇ ಬಿಟ್ಟುಕೊಂಡು ಆಕಾಶದತ್ತ ನೋಡುವಂತಾಗಿದೆ.

ಸಂಕಷ್ಟದ ಈ ಸನ್ನಿವೇಶದಲ್ಲಿ ಜೀವ ಉಳಿಸುವುದೇ ಆದ್ಯತೆ ಆಗಬೇಕು. ಪ್ರವಾಹದಲ್ಲಿ ಜನ–ಜಾನುವಾರು ಸಿಲುಕದಂತೆ ತಕ್ಷಣ ರಕ್ಷಣಾ ಕಾರ್ಯವನ್ನು ಆರಂಭಿಸಬೇಕು. ವಿಪತ್ತು ನಿರ್ವಹಣಾ ಪಡೆಗಳನ್ನು ಸದಾ ಸನ್ನದ್ಧ ಸ್ಥಿತಿಯಲ್ಲಿಡಬೇಕು. ಪ್ರವಾಹಪೀಡಿತ ಪ್ರದೇಶಗಳಲ್ಲಿ ಕಾಳಜಿ ಕೇಂದ್ರಗಳನ್ನು ತೆರೆದು ಕೈತೊಳೆದುಕೊಂಡರೆ ಸಾಲದು. ಸಂತ್ರಸ್ತರಿಗೆ ಅಲ್ಲಿ ಎಲ್ಲ ರೀತಿಯ ಸೌಲಭ್ಯಗಳನ್ನೂ ಒದಗಿಸುವ ಕೆಲಸ ಆಗಬೇಕು. ಕೋವಿಡ್ ಕಾಲದ ಈ ಸಂದರ್ಭದಲ್ಲಿ ಸಮರ್ಪಕ ವೈದ್ಯಕೀಯ ಸೌಲಭ್ಯವನ್ನೂ ಒದಗಿಸಬೇಕು. ಅಲ್ಲದೆ, ಈ ಕಾಳಜಿ ಕೇಂದ್ರಗಳು ತಾತ್ಕಾಲಿಕವಾಗಿ ಆಸರೆ ಒದಗಿಸಬಹುದೇ ಹೊರತು ಸಮಸ್ಯೆಗೆ ಶಾಶ್ವತ ಪರಿಹಾರವಲ್ಲ ಎಂಬುದನ್ನೂ ನೆನಪಿಡಬೇಕು. ಇಂತಹ ಪ್ರಾಕೃತಿಕ ವಿಕೋಪಗಳು ಜನರನ್ನು ಮತ್ತೆ ಮತ್ತೆ ಬಾಧಿಸದಂತೆ ಶಾಶ್ವತ ಪರಿಹಾರ ಕಾರ್ಯಗಳತ್ತಲೂ ಗಮನಹರಿಸಬೇಕು. ಮಳೆಯ ಆರ್ಭಟ ಕಡಿಮೆಯಾದ ತಕ್ಷಣವೇ ಸಂತ್ರಸ್ತರು ಮತ್ತೆ ಬದುಕು ಕಟ್ಟಿಕೊಳ್ಳಲು ಸಾಧ್ಯವಿರುವ ಎಲ್ಲ ನೆರವನ್ನು ನೀಡಬೇಕು. ಕುಸಿದುಬಿದ್ದ ಮನೆಗೆ, ಬೆಳೆಹಾನಿಗೆ ಪರಿಹಾರ ನೀಡುವಾಗ ಸಮೀಕ್ಷೆಯ ಹೆಸರಿನಲ್ಲಿ ಅನಗತ್ಯ ವಿಳಂಬ ಆಗದಂತೆ ನೋಡಿಕೊಳ್ಳಬೇಕು. ವಿಕೋಪದ ಸನ್ನಿವೇಶವನ್ನು ಮುಂಚೆಯೇ ಊಹಿಸುವುದು, ಅದಕ್ಕೆ ತಕ್ಕಂತೆ ಕ್ರಿಯಾಯೋಜನೆ ರೂಪಿಸುವುದು ನಮ್ಮ ಆದ್ಯತೆಯಾಗಬೇಕು. ಕೃಷ್ಣಾ, ಕಾವೇರಿಯಂತಹ ನದಿಗಳು 2–3 ರಾಜ್ಯಗಳಲ್ಲಿ ಹರಿದು ಹೋಗುತ್ತವೆ. ಯಾವುದೇ ರಾಜ್ಯದಲ್ಲಿ ಅಧಿಕ ಮಳೆಯಾಗಿ ನದಿಯಲ್ಲಿ ನೀರಿನ ಹರಿವಿನ ಪ್ರಮಾಣ ಹೆಚ್ಚಾದರೆ ಕೆಳ ಹಂತದ ರಾಜ್ಯಗಳಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ. ಹೀಗಾಗಿ ಆಯಾ ರಾಜ್ಯದ ಸನ್ನಿವೇಶದ ಮಾಹಿತಿಯನ್ನು ಪರಸ್ಪರ ಹಂಚಿಕೊಳ್ಳುವ ವ್ಯವಸ್ಥೆಯನ್ನು ಬಲಪಡಿಸಬೇಕು. ಕೇಂದ್ರ ಸರ್ಕಾರವೂ ಅಷ್ಟೇ. ಪರಿಹಾರ ಘೋಷಿಸಲು ಈ ಹಿಂದಿನಂತೆ ವಿಳಂಬ ಮಾಡದೆ, ತಾರತಮ್ಯದ ನೀತಿ ಅನುಸರಿಸದೆ ಬೇಗ ಕಾರ್ಯಪ್ರವೃತ್ತವಾಗಬೇಕು. ರಾಜ್ಯ ಸರ್ಕಾರವು ಕೇಂದ್ರದ ನೆರವಿಗೆ ಅಂಗಲಾಚುತ್ತಾ ಕಾಲಹರಣ ಮಾಡದೆ, ತನ್ನ ಜನರ ಕಣ್ಣೀರು ಒರೆಸುವ ಕಾರ್ಯವನ್ನು ಆದ್ಯತೆಯ ಮೇಲೆ ಮಾಡಬೇಕು. ಸದ್ಯದ ಸನ್ನಿವೇಶದಲ್ಲಿ ಇದಕ್ಕಿಂತ ಗಹನವಾದ ಕೆಲಸ ಬೇರಿಲ್ಲ ಎನ್ನುವುದನ್ನು ನೆನಪಿಡಬೇಕು.

ದಿನದ ಟ್ವೀಟ್

ಕಲಿಕೆ ಇದ್ದರೆ...

ಕನ್ನಡ ಕಲಿಕೆ ಎಲ್ಲದಕ್ಕೂ ಆಧಾರ. ಕನ್ನಡ ಕಲಿಕೆ ಇಲ್ಲದ ಮಕ್ಕಳು ಏಕೆ ಭೈರಪ್ಪನವರ, ತೇಜಸ್ವಿಯವರ ಕಾದಂಬರಿ ಓದಲು ಬರುವರು? ಕನ್ನಡ ಕಲಿಕೆ ಇಲ್ಲದೆ ಪುಸ್ತಕ, ಸಾಹಿತ್ಯದ ಏಳಿಗೆ ತುಂಬಾ ಕಷ್ಟ. ಕಲಿಕೆ ಇದ್ದಲ್ಲಿ ಮಾತ್ರ ಕನ್ನಡ ಪ್ರೀತಿ ಕೂಡ ಇರುತ್ತೆ, ಅಭಿಮಾನ ಕೂಡ ಬರುತ್ತೆ ತಾನೇ ತಾನಾಗಿ.

ಉಮೇಶ್ ಶಿವರಾಜು, ಉದ್ಯಮಿ

ಕಿಡಿನುಡಿ

ಯಡಿಯೂರಪ್ಪ ಅವರಿಗೆ ಪಕ್ಷವು ಬಹಳಷ್ಟು ಅವಕಾಶಗಳನ್ನು ಕೊಟ್ಟಿದೆ. ನಾಲ್ಕು ಬಾರಿ ಮುಖ್ಯಮಂತ್ರಿ, ಒಂದು ಬಾರಿ ಉಪ ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕ ಮತ್ತು ಪಕ್ಷದ ಅಧ್ಯಕ್ಷ ಹುದ್ದೆಯ ಅವಕಾಶ ಕೊಟ್ಟಿದ್ದು ಬಿಜೆಪಿಯೇ ಹೊರತು ಕಾಂಗ್ರೆಸ್, ಜನತಾ ಪರಿವಾರ ಅಥವಾ ಕಮ್ಯುನಿಸ್ಟ್ ಪಕ್ಷಗಳಲ್ಲ.

ಸಿ.ಟಿ.ರವಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ

25 ವರ್ಷಗಳ ಹಿಂದೆ

ಶುಕ್ರವಾರ, 26-7-1996

• ‘ಸಿಇಟಿ’ ಪ್ರಥಮ ರ್‍ಯಾಂಕ್ ಬೆಂಗಳೂರು ಪಾಲು

ಬೆಂಗಳೂರು, ಜುಲೈ 25– ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ವಿಭಾಗದ ಪ್ರಥಮ ರ್‍ಯಾಂಕ್ ಬೆಂಗಳೂರು ನಗರದ ವಿದ್ಯಾರ್ಥಿಗಳ ಪಾಲಾಗಿದೆ.

ರಾಜ್ಯದ ಅಭ್ಯರ್ಥಿಗಳ ಪೈಕಿ ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಅಧ್ಯಯನ ಮಾಡಿದ ಜೆ.ಎಸ್. ಪ್ರಕಾಶ್ ಉಮ್ಮನ್ ವೈದ್ಯಕೀಯ ವಿಭಾಗದಲ್ಲಿ ಹಾಗೂ ರಾಜಾಜಿನಗರದ ಎಸ್. ನಿಜಲಿಂಗಪ್ಪ ಕಾಲೇಜಿನ ವಿದ್ಯಾರ್ಥಿ ಜಿ. ಶರವಣ ಕುಮಾರ್ ಎಂಜಿನಿಯರಿಂಗ್ ವಿಭಾಗದಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದ್ದಾರೆ.

• ಪ್ರಧಾನಿಗೆ ಸಮನ್ಸ್: ರಾಜ್ಯಸಭೆಯಲ್ಲಿ ಕೋಲಾಹಲ

ನವದೆಹಲಿ, ಜುಲೈ 25 (ಪಿಟಿಐ, ಯುಎನ್ಐ)– ಪ್ರಧಾನಿಯಾಗಿ ಎಚ್.ಡಿ. ದೇವೇಗೌಡ ಅವರನ್ನು ನೇಮಕ ಮಾಡಿರುವುದರ ಔಚಿತ್ಯವನ್ನು ಪ್ರಶ್ನಿಸಿರುವ ಅರ್ಜಿಯ ವಿಚಾರಣೆ ನಡೆಸಿದ ಅಲಹಾಬಾದ್ ಹೈಕೋರ್ಟ್, ದೇವೇಗೌಡ ಅವರಿಗೆ ಸಮನ್ಸ್ ನೀಡಿರುವ ವಿಷಯ ರಾಜ್ಯಸಭೆಯಲ್ಲಿ ಇಂದು ಪ್ರಸ್ತಾಪವಾಗಿ ಭಾರಿ ಕೋಲಾಹಲಕ್ಕೆ ಕಾರಣವಾಯಿತು.

50 ವರ್ಷಗಳ ಹಿಂದೆ

ಸೋಮವಾರ, 26-7-1971

• ಕಾನೂನು ಪಾಲನೆ ಸ್ಥಿತಿ ಹಿಂದೆಯೂ ಕೆಟ್ಟಿತ್ತು: ಅರಸು

ಬೆಂಗಳೂರು, ಜುಲೈ 25– ರಾಷ್ಟ್ರಪತಿ ಆಡಳಿತ ಬಂದ ಮೇಲೆ ರಾಜ್ಯದಲ್ಲಿ ಕಾನೂನು ಪಾಲನೆ ಪರಿಸ್ಥಿತಿ ‘ಕೆಟ್ಟಿದೆ’ ಎಂಬ ಶ್ರೀ ಸಿದ್ಧವೀರಪ್ಪ ಅವರ ಅಭಿಪ್ರಾಯವನ್ನು ಆಡಳಿತ ಕಾಂಗ್ರೆಸ್ಸಿನ ಪ್ರದೇಶ ಸಮಿತಿ ಅಧ್ಯಕ್ಷ ಶ್ರೀ ಡಿ. ದೇವರಾಜ ಅರಸು ಅವರು ಒಪ್ಪುವುದಿಲ್ಲ.

ರಾಷ್ಟ್ರಪತಿ ಆಡಳಿತಕ್ಕೆ ಮುಂಚೆಯೂ ಕಾನೂನು ಪಾಲನೆ ಪರಿಸ್ಥಿತಿ ತೃಪ್ತಿಕರವಾಗಿ ಇರಲಿಲ್ಲವೆಂಬ ಶ್ರೀ ಅರಸು ಅವರ ಅಭಿಪ್ರಾಯವೇ ಅವರ ಈ ನಿಲುವಿಗೆ ಕಾರಣ.

ಶ್ರೀ ಸಿದ್ಧವೀರಪ್ಪ ಅವರ ಅಭಿಪ್ರಾಯವನ್ನು ಪ್ರಸ್ತಾಪಿಸಿ ಶ್ರೀಯುತರ ಪ್ರತಿಕ್ರಿಯೆಯನ್ನು ಕೇಳಿದಾಗ ಶ್ರೀ ಅರಸು ಅವರು, ‘ಈಗ ಕೆಟ್ಟಿದೆ ಎಂದರೆ ಹಿಂದೆ ತೃಪ್ತಿಕರವಾಗಿತ್ತೆಂದು ಅರ್ಥವಾಗುತ್ತದೆ. ಇದನ್ನು ನಾನು ಒಪ್ಪುವುದಿಲ್ಲ. ಹಿಂದೆಯೂ ತೃಪ್ತಿಕರವಾಗಿರಲಿಲ್ಲ ಎಂದು ತೋರಿಸಲು ನನ್ನಲ್ಲಿ ಸಾಕಷ್ಟು ಸಾಕ್ಷ್ಯಗಳಿವೆ’ ಎಂದರು.

ಉನ್ನತ ನ್ಯಾಯಾಂಗದ ಮನಃಸ್ಥಿತಿಯನ್ನು ಅರ್ಥ ಮಾಡಿಕೊಳ್ಳದವರು ಪೆಟ್ಟು ತಿನ್ನಬೇಕಾಗುತ್ತದೆ

ರಾಜ್ಯಗಳಿಗೆ ರವಾನೆಯಾದ ಕಠಿಣ ಸಂದೇಶ

ಸೂರ್ಯ–ನಮಸ್ಕಾರ

ಎ.ಸೂರ್ಯ ಪ್ರಕಾಶ್

ದೇಶದ ನಾಗರಿಕರ ಮೂಲಭೂತ ಹಕ್ಕುಗಳನ್ನು ರಕ್ಷಿಸುವ ವಿಚಾರದಲ್ಲಿ ತನ್ನ ದೃಢ ನಿಲುವನ್ನು ಸುಪ್ರೀಂ ಕೋರ್ಟ್ ಮತ್ತೆ ಮತ್ತೆ ಸ್ಪಷ್ಟಪಡಿಸುತ್ತಿದೆ. ಭಯೋತ್ಪಾದನೆ ವಿರೋಧಿ ಕಾನೂನುಗಳ ಬಳಕೆ ಹಾಗೂ ಜನರ ಜೀವವನ್ನು ಅಪಾಯಕ್ಕೆ ಒಡ್ಡುವ ನಿರ್ಣಯಗಳ ವಿಚಾರದಲ್ಲಿ ಎಲ್ಲ ರಾಜ್ಯಗಳೂ ಪೊಲೀಸ್ ಇಲಾಖೆಗಳೂ ಎಚ್ಚರಿಕೆಯಿಂದ ಹೆಜ್ಜೆ ಇರಿಸುವಂತೆ ಆಗಿದೆ.

ಈಚಿನ ದಿನಗಳಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಕೆಲವು ಆದೇಶಗಳು, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್.ವಿ. ರಮಣ ಸೇರಿದಂತೆ ಕೆಲವು ನ್ಯಾಯಮೂರ್ತಿಗಳು ಆಡಿರುವ ಮಾತುಗಳನ್ನು ಗಮನಿಸಿ ಹೇಳುವುದಾದರೆ, ರಾಷ್ಟ್ರೀಯ ಭದ್ರತಾ ಕಾಯ್ದೆ ಹಾಗೂ ಅದರಂತಹ ಇತರ ಕೆಲವು ಕಾನೂನುಗಳನ್ನು ರಾಜ್ಯ ಸರ್ಕಾರಗಳು ತಮ್ಮ ರಾಜಕೀಯ ವಿರೋಧಿಗಳಲ್ಲಿ ಭೀತಿ ಸೃಷ್ಟಿಸಲು ಬಳಸಿಕೊಳ್ಳಲು ಇನ್ನು ಸಾಧ್ಯವಿಲ್ಲ. ಹಾಗೆಯೇ, ಕೋವಿಡ್ ಸಾಂಕ್ರಾಮಿಕ ತಂದಿತ್ತಿರುವ ವಿಪತ್ತನ್ನು ಗಮನಿಸಿ, ಕೆಲವು ವರ್ಗದವರ ಧಾರ್ಮಿಕ ಭಾವನೆಗಳನ್ನು ಅಥವಾ ಇತರ ನಂಬಿಕೆಗಳನ್ನು ತುಷ್ಟೀಕರಿಸಲು ರಾಜ್ಯಗಳು ತೆಗೆದುಕೊಳ್ಳುವ ತೀರ್ಮಾನವನ್ನು ಬೆಂಬಲಿಸಲು ಆಗುವುದಿಲ್ಲ ಎಂದೂ ಕೋರ್ಟ್ ಸ್ಪಷ್ಟಪಡಿಸಿದೆ. ಸರ್ಕಾರಗಳು ತಮ್ಮ ಧೋರಣೆ ಬದಲಿಸಿಕೊಳ್ಳದಿದ್ದರೆ ತಾವು ಮೂಕ ಪ್ರೇಕ್ಷಕರಾಗಿ ಕುಳಿತುಕೊಳ್ಳುವುದಿಲ್ಲ ಎಂದು ಹಲವು ಹೈಕೋರ್ಟ್‌ಗಳು ಹೇಳಿವೆ.

ಮಣಿಪುರದ ಸಾಮಾಜಿಕ ಕಾರ್ಯಕರ್ತನೊಬ್ಬನ ಬಂಧನದ ವಿಚಾರವಾಗಿ, ಉತ್ತರಾಖಂಡ ಮತ್ತು ಉತ್ತರ ಪ್ರದೇಶದಲ್ಲಿನ ಕನ್ವರ್ ಯಾತ್ರೆ ವಿಚಾರವಾಗಿ, ಬಕ್ರೀದ್ ಸಂದರ್ಭದಲ್ಲಿ ಕೇರಳ ಸರ್ಕಾರ ಕೋವಿಡ್ ನಿಯಮಾವಳಿಗಳಲ್ಲಿ ತಂದ ಕೆಲವು ಸಡಿಲಿಕೆಗಳ ವಿಚಾರವಾಗಿ ನೀಡಲಾಗಿರುವ ಆದೇಶಗಳು, ನಿರ್ದೇಶನಗಳು ಕೋರ್ಟ್‌ನ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತೋರಿಸುತ್ತವೆ.

ಸಗಣಿ ಹಾಗೂ ಗೋಮೂತ್ರದ ಕುರಿತು ಫೇಸ್‌ಬುಕ್‌ನಲ್ಲಿ ಬರಹವೊಂದನ್ನು ಪ್ರಕಟಿಸಿದ್ದ ಪ್ರಕರಣದಲ್ಲಿ, ರಾಷ್ಟ್ರೀಯ ಭದ್ರತಾ ಕಾಯ್ದೆಯ ಅಡಿ ಮಣಿಪುರ ಸರ್ಕಾರ ಬಂಧಿಸಿದ್ದ ಕಾರ್ಯಕರ್ತ ಎರೆಂಡ್ರೊ ಲೀಚೊಂಬಮ್ ಅವರನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಕೋರ್ಟ್ ಹಿಂದಿನ ವಾರ ಆದೇಶಿಸಿತು. ಬಿಜೆಪಿಯ ಮಣಿಪುರ ರಾಜ್ಯ ಘಟಕದ ಅಧ್ಯಕ್ಷ ಕೋವಿಡ್‌ನಿಂದಾಗಿ ಮೃತಪಟ್ಟ ನಂತರ ಅವರು ಈ ಬರಹ ಪ್ರಕಟಿಸಿದ್ದರು. ‘ಕೊರೊನಾಕ್ಕೆ ಔಷಧಿ ಸಗಣಿ ಅಥವಾ ಗೋಮೂತ್ರ ಅಲ್ಲ; ವಿಜ್ಞಾನ ಮತ್ತು ಸಾಮಾನ್ಯಜ್ಞಾನ ಇದಕ್ಕೆ ಔಷಧಿ’ ಎಂದು ಅವರು ಬರೆದಿದ್ದರು.

ಈ ಬರಹ ಪ್ರಕಟಿಸಿದ ನಂತರ ಮಣಿಪುರ ಪೊಲೀಸರು ಅವರನ್ನು ಬಂಧಿಸಿದರು. ಎರಡು ತಿಂಗಳಿಗೂ ಹೆಚ್ಚು ಅವಧಿಗೆ ಜೈಲಿನಲ್ಲಿ ಇರಿಸಿದರು. ಈ ವಿಚಾರವು ಸುಪ್ರೀಂ ಕೋರ್ಟ್‌ನಲ್ಲಿ ಕೆಲವು ದಿನಗಳ ಹಿಂದೆ ವಿಚಾರಣೆಗೆ ಬಂದಾಗ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎಂ.ಆರ್. ಶಾ ಅವರು ಇದ್ದ ನ್ಯಾಯಪೀಠವು, ಲೀಚೊಂಬಮ್ ಅವರನ್ನು ತಕ್ಷಣವೇ ಬಿಡುಗಡೆ ಮಾಡುವಂತೆ ಆದೇಶಿಸಿತು, ‘ಇವರನ್ನು ಒಂದು ದಿನವೂ ವಶದಲ್ಲಿ ಇರಿಸಿಕೊಳ್ಳಬಾರದು’ ಎಂದು ಹೇಳಿತು ಎನ್ನುತ್ತವೆ ಮಾಧ್ಯಮ ವರದಿಗಳು. ತನ್ನ ಆದೇಶವನ್ನು ಪಾಲಿಸುವಂತೆ, ಅರ್ಜಿಯ ವಿಚಾರಣೆ ನಡೆಸಿದ ದಿನವೇ ಸಂಜೆ 5 ಗಂಟೆಯೊಳಗೆ ಲೀಚೊಂಬಮ್ ಅವರನ್ನು ಬಿಡುಗಡೆ ಮಾಡುವಂತೆ ನ್ಯಾಯಪೀಠವು ಮಣಿಪುರ ಸರ್ಕಾರಕ್ಕೆ ಸೂಚಿಸಿತು. ಲೀಚೊಂಬಮ್ ಅವರ ಬರಹವು ಒಳ್ಳೆಯ ಅಭಿರುಚಿಯಿಂದ ಕೂಡಿರಲಿಲ್ಲ. ಆದರೆ, ಅದು ರಾಷ್ಟ್ರೀಯ ಭದ್ರತಾ ಕಾಯ್ದೆಯ ಉಲ್ಲಂಘನೆ ಆಗುತ್ತಿತ್ತೇ?

ನಂತರ ಬಂದಿದ್ದು ಕನ್ವರ್ ಯಾತ್ರೆಗೆ ಸಂಬಂಧಿಸಿದ ಅರ್ಜಿಯ ವಿಚಾರಣೆ. ಇದನ್ನು ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತವಾಗಿ ವಿಚಾರಣೆಗೆ ಎತ್ತಿಕೊಂಡಿತ್ತು. ಈ ಯಾತ್ರೆಯಲ್ಲಿ ಲಕ್ಷಾಂತರ ಜನ ಹರಿದ್ವಾರದಿಂದ ಗಂಗಾಜಲ ತೆಗೆದುಕೊಂಡು, ಮಡಕೆಗಳಲ್ಲಿ ಅದನ್ನು ತುಂಬಿಸಿಕೊಂಡು, ನೂರಾರು ಕಿ.ಮೀ. ದೂರದ ತಮ್ಮ ಹಳ್ಳಿಗಳಿಗೆ ಕಾಲ್ನಡಿಗೆಯಲ್ಲಿ ತೆರಳುತ್ತಾರೆ. ಉತ್ತರ ಭಾರತದ ಹಲವು ಕಡೆಗಳಿಂದ ಜನ ಈ ಯಾತ್ರೆಗೆ ಬರುತ್ತಾರೆ. ಯಾತ್ರಿಕರು ತಮ್ಮ ಹಳ್ಳಿಗಳಲ್ಲಿ ಇರುವ ಶಿವನಿಗೆ ಈ ಜಲವನ್ನು ಅಭಿಷೇಕ ಮಾಡುವುದರ ಮೂಲಕ ಯಾತ್ರೆಯು ಕೊನೆಗೊಳ್ಳುತ್ತದೆ. ಕೋವಿಡ್ ಕಾರಣದಿಂದಾಗಿ ಹಿಂದಿನ ವರ್ಷ ಈ ಯಾತ್ರೆಯನ್ನು ನಿಷೇಧಿಸಲಾಗಿತ್ತು. ಆದರೆ, ಈ ವರ್ಷ ಉತ್ತರಾಖಂಡ (ಅಲ್ಲಿಂದ ಗಂಗಾಜಲವನ್ನು ಒಯ್ಯಲಾಗುತ್ತದೆ) ಮತ್ತು ಉತ್ತರಪ್ರದೇಶ (ಯಾತ್ರಿಗಳು ಈ ರಾಜ್ಯದ ಮೂಲಕ ಸಾಗುತ್ತಾರೆ) ರಾಜ್ಯಗಳು ಯಾತ್ರೆ ನಡೆಸುವ ಮನಸ್ಸು ಹೊಂದಿದ್ದವು. ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕರ ಆರೋಗ್ಯದ ವಿಚಾರದಲ್ಲಿ ರಾಜಿ ಸಾಧ್ಯವಿಲ್ಲ ಎಂದು ಘೋಷಿಸಿದ ನಂತರ ಉತ್ತರಾಖಂಡ ಸಚಿವ ಸಂಪುಟವು ಈ ಯಾತ್ರೆಯನ್ನು ರದ್ದುಪಡಿಸಲು ತೀರ್ಮಾನಿಸಿತು. ಆದರೆ, ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡುವವರೆಗೂ ಉತ್ತರಪ್ರದೇಶ ರಾಜ್ಯ ಖಚಿತ ನಿಲುವಿಗೆ ಬಂದಿರಲಿಲ್ಲ. ನ್ಯಾಯಮೂರ್ತಿಗಳಾದ ಆರ್.ಎಫ್. ನರಿಮನ್ ಮತ್ತು ಬಿ.ಆರ್. ಗವಾಯಿ ಅವರನ್ನು ಒಳಗೊಂಡ ನ್ಯಾಯಪೀಠವು ಯಾತ್ರೆ ನಡೆಸುವ ತೀರ್ಮಾನವನ್ನು ಮರುಪರಿಶೀಲಿಸುವಂತೆ ಉತ್ತರಪ್ರದೇಶಕ್ಕೆ ಸೂಚಿಸಿತು.

ಹೀಗೆ ಸೂಚನೆ ನೀಡುವ ಸಂದರ್ಭದಲ್ಲಿ ನ್ಯಾಯಪೀಠವು, ದೇಶದ ನಾಗರಿಕರ ಆರೋಗ್ಯ ಮತ್ತು ಅವರ ಬದುಕುವ ಹಕ್ಕು ಇತರೆಲ್ಲವುಗಳಿಗಿಂತ ಹೆಚ್ಚು ಮಹತ್ವದವು ಎಂದು ಹೇಳಿತು. ಬದುಕುವ ಹಕ್ಕು ಅತ್ಯಂತ ಮೂಲಭೂತವಾದುದು, ಎಲ್ಲ ಬಗೆಯ ಭಾವನೆಗಳು ಈ ಹಕ್ಕಿಗೆ ಅಧೀನವಾಗಿರಬೇಕು ಎಂದು ಪೀಠ ಹೇಳಿತು. ಸಂವಿಧಾನದ 21ನೆಯ ವಿಧಿಯು ಎಲ್ಲರಿಗೂ ರಕ್ಷಣೆ ನೀಡುತ್ತದೆ ಎಂದಿತು. ರಾಜ್ಯ ಸರ್ಕಾರಕ್ಕೆ ತನ್ನ ತೀರ್ಮಾನ ಮರುಪರಿಶೀಲಿಸಲು ಸಮಯ ನೀಡಿತು. ಸೂಚನೆ ಪಾಲಿಸಿದ ಸರ್ಕಾರವು, ಯಾತ್ರೆಯನ್ನು ರದ್ದುಪಡಿಸುವ ತೀರ್ಮಾನ ಪ್ರಕಟಿಸಿತು. ಈ ನಡುವೆ ಕೋರ್ಟ್ ಮುಂದೆ ಇನ್ನೊಂದು ವಿಚಾರ ಬಂದಿತ್ತು. ಬಕ್ರೀದ್‌ಗೆ ವಸ್ತುಗಳನ್ನು ಖರೀದಿಸಲು ಅವಕಾಶ ಕಲ್ಪಿಸಲು ಕೇರಳ ಸರ್ಕಾರವು ಕೋವಿಡ್ ಮಾರ್ಗಸೂಚಿಗಳನ್ನು ಸಡಿಲಿಸಿತ್ತು.

ಒತ್ತಡಕ್ಕೆ ಬಾಗಿ, ನಿರ್ಬಂಧಗಳನ್ನು ಸಡಿಲಗೊಳಿಸಿದ ಕೇರಳ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಕೋರ್ಟ್, ಕನ್ವರ್ ಯಾತ್ರೆ ಪ್ರಕರಣದಲ್ಲಿ ತಾನು ನೀಡಿದ ಆದೇಶವನ್ನು ಈ ಪ್ರಕರಣದಲ್ಲಿಯೂ ಪಾಲಿಸುವಂತೆ ಹೇಳಿತು. ಮಾರ್ಗಸೂಚಿಗಳಲ್ಲಿನ ಸಡಿಲಿಕೆಯಿಂದಾಗಿ ಕೋವಿಡ್ ಹರಡಿದರೆ ಸಡಿಲಿಕೆಯ ತೀರ್ಮಾನ ಕೈಗೊಂಡವರ ವಿರುದ್ಧ ತಾನು ಕ್ರಮ ಜರುಗಿಸುವುದಾಗಿ ಕೋರ್ಟ್ ಎಚ್ಚರಿಕೆ ನೀಡಿತು.

ಅಮೆರಿಕದ ವಕೀಲರ ಸಂಘವು ಆಯೋಜಿಸಿದ್ದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ನ್ಯಾಯಮೂರ್ತಿ ಚಂದ್ರಚೂಡ್ ಅವರು, ಭಯೋತ್ಪಾದನೆ ವಿರೋಧಿ ಕಾನೂನುಗಳು ಸೇರಿದಂತೆ ಕ್ರಿಮಿನಲ್ ಅಪರಾಧಕ್ಕೆ ಸಂಬಂಧಿಸಿದ ಯಾವುದೇ ಕಾನೂನನ್ನು ಅಭಿಪ್ರಾಯಭೇದ ಹತ್ತಿಕ್ಕಲು ಅಥವಾ ಪ್ರಜೆಗಳಿಗೆ ಕಿರುಕುಳ ನೀಡಲು ಬಳಸಬಾರದು ಎಂದು ಹೇಳಿದರು. ಕಾರ್ಯಾಂಗ ಅಥವಾ ಶಾಸಕಾಂಗ ಮೂಲಭೂತ ಮಾನವ ಹಕ್ಕುಗಳನ್ನು ಉಲ್ಲಂಘಿಸಿದಾಗ ಸಂವಿಧಾನದ ರಕ್ಷಕನಾಗಿ ಸುಪ್ರೀಂ ಕೋರ್ಟ್, ಅಂತಹ ಕೆಲಸಕ್ಕೆ ತಡೆ ಒಡ್ಡಬೇಕಾಗುತ್ತದೆ ಎಂದು ಅವರು ಹೇಳಿದರು.

ಪಿ.ಡಿ. ದೇಸಾಯಿ ಸಂಸ್ಮರಣಾ ಭಾಷಣದಲ್ಲಿ ನ್ಯಾಯಮೂರ್ತಿ ರಮಣ ಅವರು ಕೆಲವು ಗಮನಾರ್ಹ ಮಾತುಗಳನ್ನು ಹೇಳಿದರು. ‘ನ್ಯಾಯ ಮತ್ತು ಸಮಾನತೆಯ ಆದರ್ಶಗಳನ್ನು ಮೈಗೂಡಿಸಿಕೊಳ್ಳದೆ ಇದ್ದರೆ ಕಾನೂನನ್ನು ‘ಕಾನೂನು’ ಎಂದು ಕರೆಯಲು ಆಗುವುದಿಲ್ಲ ಎಂದು ಖ್ಯಾತ ವಿದ್ವಾಂಸರು ವಾದಿಸಿದ್ದಾರೆ. ನ್ಯಾಯಸಮ್ಮತವಲ್ಲದ ಕಾನೂನಿಗೆ ನ್ಯಾಯಸಮ್ಮತವಾಗಿರುವ ಕಾನೂನಿನಲ್ಲಿ ಇರುವಂತಹ ನೈತಿಕ ಅರ್ಹತೆ ಇಲ್ಲದಿರಬಹುದು. ಸಾರ್ವಭೌಮ ವ್ಯವಸ್ಥೆಯ ಬೆಂಬಲ ಇರುವ ಯಾವುದೇ ಕಾನೂನಿಗೆ ಕೆಲವು ಆದರ್ಶಗಳು ಅಥವಾ ನ್ಯಾಯದ ಸ್ಪರ್ಶ ಬೇಕು. ಇಂತಹ ಕಾನೂನುಗಳು ಇರುವ ದೇಶದಲ್ಲಿ ಮಾತ್ರ ‘ಕಾನೂನಿನ ಆಡಳಿತ’ ಇದೆ ಎಂದು ಹೇಳಬಹುದು’ ಎಂದು ನ್ಯಾಯಮೂರ್ತಿ ರಮಣ ಹೇಳಿದರು.

ಮೇಲೆ ಉಲ್ಲೇಖಿಸಿರುವ ಆದೇಶಗಳು, ಮಾತುಗಳನ್ನು ಗಮನಿಸಿದರೆ, ಸುಪ್ರೀಂ ಕೋರ್ಟ್‌ನಿಂದ ಬರುತ್ತಿರುವ ಸಂದೇಶ ಬಹಳ ಸ್ಪಷ್ಟವಾಗಿದೆ ಎಂಬುದು ಗೊತ್ತಾಗುತ್ತದೆ. ಉನ್ನತ ನ್ಯಾಯಾಂಗದಲ್ಲಿನ ಮನಃಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ವಿಫಲರಾಗುವವರು ಇಂದಲ್ಲ ನಾಳೆ ಪೆಟ್ಟು ತಿನ್ನಬೇಕಾಗುತ್ತದೆ.

ಚುರುಮುರಿ

ಸಿಎಂಪಿಕ್ಸ್ ಪಂದ್ಯ

• ಸುಮಂಗಲಾ

ಮೀರಾಬಾಯಿ ಚಾನು ಬೆಳ್ಳಿ ಪದಕ ಗೆದ್ದಿದ್ದನ್ನು ನೋಡಿ ನಾನು ಸಂಭ್ರಮಿಸುತ್ತಿದ್ದೆ. ಬೆಕ್ಕಣ್ಣ ಅದೇನು ಮಹಾ ಎಂದು ಮೂಗು ಮುರಿದು, ‘ಒಲಿಂಪಿಕ್ಸಿನಾಗೆ ವೇಟ್‌ಲಿಫ್ಟಿಂಗ್ ಮಾಡೂದೇನ್ ಮಹಾ ಅಲ್ಲೇಳು. ಸಿಎಂಪಿಕ್ಸಿನಾಗೆ ಕುರ್ಚಿ ಲಿಫ್ಟ್ ಮಾಡಿ, ಕೂಡೂದೆ ದೊಡ್ಡದು’ ಎಂದಿತು.

‘ಕೋವಿಶೀಲ್ಡ್ ಇದ್ದರೆ ಕೋವಿಡ್ ಗೆದೀಬೌದು, ಕಾವಿಶೀಲ್ಡ್ ಇದ್ದರೆ ಸಿಎಂಪಿಕ್ಸ್ ಗೆದೀಬೌದು... ದೊಡ್ಡ ಮಹಾ ನಿನ್ನ ಸಿಎಂಪಿಕ್ಸ್’ ಎಂದು ನಾನೂ ಹಂಗಿಸಿದೆ.

‘ಕೋವಿಶೀಲ್ಡ್ ಎಲ್ಲಾ ಕಡಿಗೂ ಸಿಗತೈತಿ. ಕಾವಿಶೀಲ್ಡ್ ನಮ್ಮ ಯೆಡ್ಯೂರಜ್ಜಾರಿಗೆ ಮಾತ್ರ ಸಿಗತೈತಿ’ ವಾದಿಸಿದ ಬೆಕ್ಕಣ್ಣ ಹೊರಹೋಗಲು ತಯಾರಾಯಿತು.

‘ಏನಲೇ... ಕಾವಿಶೀಲ್ಡ್ ಸಾಮರ್ಥ್ಯ ನೋಡಾಕೆ ಅರಮನೆ ಮೈದಾನಕ್ಕೆ ಹೊಂಟೀಯೇನ್’ ಎಂದೆ.

‘ಯೆಡ್ಯೂರಜ್ಜಾರು ಕುರ್ಚಿ ಬಿಟ್ಟಳಿಯೊದೆ ಆತಂದ್ರ ಆಪ್ತರನ್ನ ತಮಗೆ ಬೇಕಾದ ಕುರ್ಚಿವಳಗೆ ಕೂರಿಸ್ತಾರಂತ. ಪಶುಸಂಗೋಪನಾ ಇಲಾಖೆನಾರೂ ನನಗ ಕೊಡ್ರಿ ಮತ್ತ, ನಾನೂ ಹುಲಿವಂಶಸ್ಥನೇ ಅದೀನಿ ಅಂತ ಹೇಳಾಕೆ ಡಾಲರ್ಸ್ ಕಾಲನಿ ಅಜ್ಜಾರ ಮನಿಗಿ ಹೊಂಟೀನಿ’ ಎಂದಿತು.

ಬಗಲಲ್ಲಿ ಹಾಳೆಗಳ ಕಂತೆಯಿಟ್ಟುಕೊಂಡಿದ್ದು ಕಾಣಿಸಿತು. ಅದೇನೆಂದು ಕುತೂಹಲವಾಯಿತು. ‘ಹೊಸ ವೋಟರ್‌ಲಿಸ್ಟ್... ಮುಂದಿನ ಚುನಾವಣೆಗೆ ಇದೇ ಬೇಕಾಗತೈತಿ’ ಎಂದು ಮುಗುಮ್ಮಾಗಿ ಹೇಳಿತು. ಅರೆ... ಚುನಾವಣಾ ಆಯೋಗ ನೋಟಿಸು ಕೊಟ್ಟಿತ್ತೆ, ನನ್ನ ವಿಳಾಸ ಬದಲಾಗಿದ್ದನ್ನು ಸೇರಿಸಬೇಕೆ ಎಂದೆಲ್ಲ ಯೋಚಿಸುವಷ್ಟರಲ್ಲಿ ಬೆಕ್ಕಣ್ಣ ನುಲಿಯುತ್ತ ಹೇಳಿತು.

‘ನೀವು ಪುಟಗೋಸಿ ಶ್ರೀಸಾಮಾನ್ಯರು, ನಿಮ್ಮದೆಲ್ಲ ಈ ಹೊಸ ಪಟ್ಟಿವಳಗೆ ಇರಂಗಿಲ್ಲ. ಕರುನಾಡಿನ ವಟ್ಟು ಎಲ್ಲಾ ಮಠಾಧೀಶರ ವೋಟರ್‌ಲಿಸ್ಟ್ ರೆಡಿ ಮಾಡೀನಿ. ಇನ್ಮ್ಯಾಗೆ ಹಿರಿಕಿರಿಮರಿ ಸ್ವಾಮಿಗಳಷ್ಟೇ ವೋಟ್ ಮಾಡಿ, ಸಿಎಂ ಮತ್ತು ಉಳಿದ ಮಂತ್ರಿಗಳನ್ನ ಆರಿಸ್ತಾರ. ಇದೇ ವೋಟರ್‌ಲಿಸ್ಟ್ ಮುಂದ ವಿಜ್ಯಣ್ಣನ ಸಿಎಂ ಮಾಡಾಕೂ ಬೇಕಾಗತೈತಿ. ಇಷ್ಟ್ ದಿನ ನೀವು ಶ್ರೀಸಾಮಾನ್ಯರು ಆಟಕ್ಕುಂಟು ಲೆಕ್ಕಕ್ಕಿಲ್ಲ ಅನ್ನಂಗಿದ್ರಿ. ಇನ್ನು ಮ್ಯಾಗೆ ಆಟಕ್ಕೂ ಇಲ್ಲ, ಲೆಕ್ಕಕ್ಕಂತೂ ಮದ್ಲೇ ಇಲ್ಲ, ತಿಳ್ಕೋರಿ’ ಬೆಕ್ಕಣ್ಣ ನನ್ನ ಮೂತಿಗೆ ತಿವಿದು ಅಜ್ಜಾರನ್ನು ಭೇಟಿಯಾಗಲು ಓಡಿತು!

ಸಂಗತ

ಬರಲಿದೆ ಮರಗಳ ಸುನಾಮಿ!

ಗೋಳದ ಬಿಸಿ ತಗ್ಗಿಸಲು ಹಲವು ದೇಶಗಳು ಅತ್ಯುತ್ಸಾಹ ತೋರಿಸಿವೆ

• ಶ್ರೀಗುರು

ವಿಶ್ವ ಪರಿಸರ ದಿನವನ್ನು ಕಳೆದ ತಿಂಗಳಷ್ಟೇ ಆಚರಿಸಿದ್ದೇವೆ. ಪರಿಸರ ದಿನಾಚರಣೆಯ ಈ ಸಾಲಿನ ಆತಿಥೇಯ ದೇಶವಾಗಿರುವ ಪಾಕಿಸ್ತಾನವು ಮುಂದಿನ ಐದು ವರ್ಷಗಳಲ್ಲಿ ತನ್ನ ನೆಲದಲ್ಲಿ ಸಾವಿರ ಕೋಟಿ ಸಸಿ ನೆಟ್ಟು ಮರಗಳ ಸುನಾಮಿಯನ್ನೇ ಸೃಷ್ಟಿಸಲಿದೆ. ವಿಶ್ವದಾದ್ಯಂತ ಪರಿಸರ ಜಾಗೃತಿ ಮೂಡಿಸಲು ವಿಶ್ವಸಂಸ್ಥೆಯೊಂದಿಗೆ ಕೈಜೋಡಿಸಿರುವ ಪಾಕಿಸ್ತಾನವು ಈ ಸಲದ ಧ್ಯೇಯವಾಕ್ಯ ‘ಇಕೋಸಿಸ್ಟಮ್ ರೆಸ್ಟೊರೇಶನ್’ನ (ಜೀವಿಪರಿಸರ ಪುನರ್‌ಸ್ಥಾಪನೆ) ಅನುಸಾರ ತನ್ನ ದೇಶದ ಶಾಲೆ– ಕಾಲೇಜು, ಉದ್ಯಮ ಆವರಣ, ಸಾರ್ವಜನಿಕ ಪಾರ್ಕ್, ಗೋಮಾಳ, ನಗರ ಪ್ರದೇಶ, ಕಾಂಡ್ಲಾ ಪ್ರದೇಶಗಳ 730 ಚದರ ಕಿ.ಮೀ. ವ್ಯಾಪ್ತಿಯಲ್ಲಿ ಭಾರಿ ಸಂಖ್ಯೆಯ ದೇಶೀಯ ಸಸಿ ನೆಟ್ಟು, 15 ಮಾದರಿ ಸಂರಕ್ಷಣಾ ವಲಯಗಳನ್ನು ನಿರ್ಮಿಸಿ, 5,000ಕ್ಕೂ ಹೆಚ್ಚು ‘ಹಸಿರು ಉದ್ಯೋಗ’ ಸೃಷ್ಟಿಸುವ ಯೋಜನೆ ರೂಪಿಸಿದೆ.

ನೆಡಲಿರುವ ಸಸಿಗಳು ಹತ್ತು ಲಕ್ಷ ಹೆಕ್ಟೇರ್ ಪ್ರದೇಶವನ್ನು ಹಸಿರಾಗಿಸಲಿವೆ. ನಿಸರ್ಗದ ಸಹಜ ಕಾರ್ಬನ್ ಸಿಂಕ್‌ಗಳಂತೆ ವರ್ತಿಸುವ ಈ ಹಸಿರುರಾಶಿ 2030ರ ವೇಳೆಗೆ ಶೇ 25ರಷ್ಟು ಇಂಗಾಲದ ಹೊಮ್ಮುವಿಕೆಯನ್ನು ಕಡಿಮೆ ಮಾಡಲಿದೆ ಎಂಬ ಅಂದಾಜಿದೆ.

ವಿಶ್ವದ ಪ್ರತಿಯೊಂದು ದೇಶವೂ ಕಳೆದುಕೊಂಡ ತನ್ನ ‘ಜೀವಿ ಪರಿಸರ’ ವ್ಯವಸ್ಥೆಯನ್ನು ಮರುಸ್ಥಾಪಿಸಿಕೊಳ್ಳಲು 2021– 2030ರ ಅವಧಿಯನ್ನು ನಿಗದಿ ಮಾಡಿರುವ ಯುಎನ್‌ಇಪಿ (ಯುನೈಟೆಡ್ ನೇಷನ್ಸ್ ಎನ್‌ವಿರಾನ್‌ಮೆಂಟ್ ಪ್ರೋಗ್ರ್ಯಾಂ), ಪ್ಯಾರಿಸ್ ಒಪ್ಪಂದ ಮತ್ತು ಸುಸ್ಥಿರ ಅಭಿವೃದ್ಧಿಯ ಗುರಿಗಳಿಗೆ (ಎಸ್‌ಡಿಜಿ) ಹೊಂದಿಕೊಂಡಂತೆ ಈ ಕೆಲಸ ಆಗಬೇಕೆಂದು ಹೇಳಿದೆ.

ಇರುವ ಜೀವಿಪರಿಸರಗಳನ್ನು ಸಂರಕ್ಷಣೆಗೊಳಪಡಿಸಿ, ಧ್ವಂಸಗೊಂಡಿರುವ ಪ್ರದೇಶಗಳನ್ನು ಪುನರುಜ್ಜೀವನಗೊಳಿಸುವುದು ‘ಎಕೊಸಿಸ್ಟಮ್ ರೆಸ್ಟೊರೇಶನ್’ನ ಮುಖ್ಯ ಕೆಲಸಗಳಲ್ಲೊಂದು. ನೈಸರ್ಗಿಕ ಕಾಡುಗಳನ್ನು ಕಡಿದು ರಸ್ತೆ, ಉದ್ಯಾನ, ಬಡಾವಣೆ, ಅಣೆಕಟ್ಟು ನಿರ್ಮಿಸಲಾಗಿದೆ. ಅಲ್ಲಿ ಪುನಃ ಅರಣ್ಯ ಬೆಳೆಸಲಾಗುವುದಿಲ್ಲ. ನಾಶಗೊಂಡಿರುವುದನ್ನು ಯಥಾಸ್ಥಿತಿಯಲ್ಲಿ ಹಿಂಪಡೆಯುವುದು ಆಗದ ಮಾತು ಮತ್ತು ಅದು ಅಪ್ರಾಯೋಗಿಕವೂ ಹೌದು.

ಇರುವ ಅಪರೂಪದ ಜೀವಿವೈವಿಧ್ಯ, ಮಣ್ಣಿನ ಫಲವತ್ತತೆ, ಕಾಡು, ವನ್ಯ- ಸಾಗರ ಜೀವಿಗಳನ್ನು ಉಳಿಸಿ, ಬದಲಾದ ವಾಯುಗುಣಕ್ಕೆ ತಕ್ಕಂತೆ ಆಹಾರ ಮತ್ತು ಜೀವನಕ್ರಮ ಬದಲಾಯಿಸಿಕೊಂಡು, ಇನ್ನು ಒಂಬತ್ತು ವರ್ಷಗಳಲ್ಲಿ ಮೂರೂವರೆ ಕೋಟಿ ಹೆಕ್ಟೇರ್ ನಷ್ಟು ಸತ್ವಹೀನ ಮಣ್ಣು ಹಾಗೂ ಮಲಿನ ನೀರಿನ ಪ್ರದೇಶಗಳನ್ನು ಪುನಃ ಸುಸ್ಥಿತಿಗೆ ತರಬಹುದು. ಖಾಲಿ ಜಾಗದಲ್ಲಿ ಗಿಡ ನೆಟ್ಟು, ನಗರಗಳನ್ನು ಹಸಿರಾಗಿಸಿ, ತೋಟಗಳನ್ನು ಪುನರ್‌ರೂಪಿಸಿ, 26 ಗಿಗಾ ಟನ್‌ಗಳಷ್ಟು ಶಾಖವರ್ಧಕ ಅನಿಲಗಳನ್ನು ವಾತಾವರಣದಿಂದ ತೆಗೆದುಹಾಕಬಹುದು. ನದಿ, ಸಾಗರ ತೀರ ಪ್ರದೇಶಗಳ ಕಸಕ್ಕೆ ಮುಕ್ತಿ ನೀಡಬಹುದು. ಇದಕ್ಕಾಗಿ ರೂಪಿಸುವ ಯೋಜನೆಗಳು ಸಹಸ್ರಾರು ಕೋಟಿ ಡಾಲರ್‌ಗಳ ವಹಿವಾಟು ನಡೆಸಲಿವೆ. ಹಾಕಿದ ಬಂಡವಾಳಕ್ಕಿಂತ ಹೆಚ್ಚು ಪಟ್ಟು ಲಾಭ ತರಲಿವೆ.

ಪ್ರಸ್ತುತ ವಿಶ್ವದ 320 ಕೋಟಿ ಜನ ಶುದ್ಧ ಕುಡಿಯುವ ನೀರು, ಗುಣಮಟ್ಟದ ಗಾಳಿ ಮತ್ತು ಫಲವತ್ತತೆ ಇಲ್ಲದ ಜಮೀನುಗಳಿಂದ ಕಷ್ಟ ಅನುಭವಿಸುತ್ತಿದ್ದಾರೆ. ವಿಶ್ವದ ಶೇ 45ರಷ್ಟು ಶಾಖವರ್ಧಕ ಅನಿಲಗಳು ಯುರೋಪ್, ಚೀನಾ ಮತ್ತು ಅಮೆರಿಕಗಳಿಂದಲೇ ಹೊಮ್ಮುತ್ತಿವೆ. ಅಭಿವೃದ್ಧಿಗಾಗಿ ಕಾಡು ಕಡಿತ, ಕಾಳ್ಗಿಚ್ಚು, ಬರದಿಂದಾಗಿ ಪ್ರತಿದಿನ 320 ಚದರ ಕಿ.ಮೀ.ನಷ್ಟು ಮರುಭೂಮಿ ಸೃಷ್ಟಿಯಾಗುತ್ತಿದೆ. ದಿನವೊಂದಕ್ಕೆ ಏಳು ಪ್ರಭೇದದ ಸಸ್ಯ ಮತ್ತು ಮೂರು ಬಗೆಯ ಪ್ರಾಣಿಗಳು ಶಾಶ್ವತ ವಿನಾಶ ಹೊಂದುತ್ತಿವೆ. ಮರ ಮಾರಾಟದಿಂದಲೇ ಹಣ ಗಳಿಸುವ ಬ್ರೆಜಿಲ್, ಇಂಡೊನೇಷ್ಯಾದಲ್ಲಿ ಲಕ್ಷಾಂತರ ಎಕರೆ ಕಾಡು ಪ್ರತಿದಿನ ಕೊಡಲಿಗೆ ಬಲಿಯಾಗುತ್ತಿದೆ.

ಸಮುದ್ರಮಟ್ಟ ಅಪಾಯಕರ ವೇಗದಲ್ಲಿ ಏರುತ್ತಿದೆ. ಸುಸ್ಥಿರ ಅಭಿವೃದ್ಧಿಯ 17 ಗುರಿಗಳನ್ನು ತಲುಪಲು 2030 ಅಂತಿಮ ವರ್ಷವಾಗಿದೆ. ಗುರಿಗಳಿಗೆ ಪೂರಕವಾಗಿ ನದಿ, ಹುಲ್ಲುಗಾವಲು, ಪರ್ವತ, ಸಾಗರ, ಕಾಡು, ಮರುಭೂಮಿ, ತರಿಭೂಮಿ, ಹವಳದ ದಿಬ್ಬ, ಕೃಷಿಭೂಮಿ, ಗಣಿ ಪ್ರದೇಶಗಳನ್ನೆಲ್ಲ ಸುಸ್ಥಿತಿಯಲ್ಲಿ ಇಡಬೇಕಾದುದು ಪ್ರತಿಯೊಂದು ದೇಶದ ಕರ್ತವ್ಯವಾಗಿದೆ. ಪ್ಯಾರಿಸ್ ಒಪ್ಪಂದದ ಪ್ರಕಾರ, ಗೋಳದ ಬಿಸಿಯನ್ನು 2050ರ ವೇಳೆಗೆ 1.5 ಡಿಗ್ರಿ ಸೆ.ಗಿಂತ ಹೆಚ್ಚದಂತೆ ತಡೆಯಬೇಕಿದೆ.

ಈ ಕೆಲಸಕ್ಕೆ ಹಲವು ದೇಶಗಳು ಅತ್ಯುತ್ಸಾಹ ತೋರಿಸಿವೆ. ಭವಿಷ್ಯದ ಜನಾಂಗಗಳಿಗೆ ಬೇಕಾಗುವ ವಾತಾವರಣವನ್ನು ಸಿದ್ಧಗೊಳಿಸಲು ಯುವಜನರ ಅಭಿಪ್ರಾಯ ತುಂಬಾ ಮುಖ್ಯ ಎಂದಿರುವ ಯುರೋಪಿನ ಯುಎನ್‌ಇಪಿ ಕಚೇರಿ, ವಿಶ್ವದ 22 ಭಾಷೆಗಳಲ್ಲಿ ಸಮೀಕ್ಷಾ ನಮೂನೆಯನ್ನು ತಯಾರಿಸಿ 71 ದೇಶಗಳ ಯುವಕರ ಅಭಿಪ್ರಾಯ ಸಂಗ್ರಹಿಸಲು ಪ್ರಾರಂಭಿಸಿದೆ.

2060ರ ವೇಳೆಗೆ ತಾನು ಕಾರ್ಬನ್‌ಮುಕ್ತ ರಾಷ್ಟ್ರವಾಗುವುದಾಗಿ ಚೀನಾ ಹೇಳಿದೆ. ಹಸಿರು ಉದ್ಯಮ ಮತ್ತು ಕಟ್ಟಡ ನಿರ್ಮಾಣಕ್ಕೆ ಜರ್ಮನಿ 250 ಕೋಟಿ ಡಾಲರ್ ಹಣ ಹೂಡಿದೆ. ‘ಗ್ರೀನ್ ಎನರ್ಜಿ’ಗಾಗಿ ಫ್ರಾನ್ಸ್ 760 ಕೋಟಿ ಡಾಲರ್ ಹಾಕಿದೆ. ನಾವು ಸಹ ಬೃಹತ್ ಸೋಲಾರ್ ಹಾಗೂ ಗಾಳಿಶಕ್ತಿ ಯೋಜನೆಗಳಿಗೆ ಕೈಹಾಕಿದ್ದು, ವಾಯುಗುಣ ಶುದ್ಧೀಕರಣ ಕೆಲಸದಲ್ಲಿ ಜಿ– 20 ದೇಶಗಳ ಪೈಕಿ ಸುಸ್ಥಿರ ಅಭಿವೃದ್ಧಿ ಗುರಿ ಸಾಧಿಸುವಲ್ಲಿ ಗಮನಾರ್ಹ ಸಾಧನೆ ಮಾಡಿದ್ದೇವೆ.

ವಾಚಕರ ವಾಣಿ

ರೈಲು ವ್ಯವಸ್ಥೆಯ ಕಾರ್ಯವೈಖರಿ– ಈ ಪರಿ

ತೊಂಬತ್ತೈದು ವರ್ಷದ ಅಜ್ಜಿಯ ಜತೆ ಒಂದು ವಾರ ಕಳೆಯಲೆಂದು ಮಲೆನಾಡಿನ ಹಳ್ಳಿಗೆ- ಸಾಗರ ತಾಲ್ಲೂಕು ತಾಳಗುಪ್ಪ ಹೋಬಳಿ ತಡಗಳಲೆ ಗ್ರಾಮಕ್ಕೆ ತೆರಳಿದ್ದ ಮಗಳು, ಅಲ್ಲಿ ಲಭ್ಯವಿದ್ದ ಇಂಟರ್ನೆಟ್ ಕೈಕೊಟ್ಟ ಕಾರಣ ‘ಮನೆಯಿಂದ ಕೆಲಸ’ಕ್ಕೆ ತೊಡಕುಂಟಾಗಿ, ತುರ್ತಾಗಿ ಬೆಂಗಳೂರಿಗೆ ಹಿಂತಿರುಗಲು ತಾಳಗುಪ್ಪದಿಂದ ರೈಲಿಗೆ ಸೀಟು ಕಾದಿರಿಸಿದ್ದಳು. ಅದೂ ಶುಕ್ರವಾರ ಸಂಜೆ 6 ಗಂಟೆಗೆ, ಪಯಣಿಗರ ಪಟ್ಟಿ (ಪ್ಯಾಸೆಂಜರ್ಸ್ ಚಾರ್ಟ್) ಸಿದ್ಧವಾದ ನಂತರ ತತ್ಕಾಲ್ ಸೀಟು ಕಾದಿರಿಸಿದಳು. ರಾತ್ರಿ 8.20ಕ್ಕೆ ತಾಳಗುಪ್ಪದಿಂದ ಹೊರಡುವ ರೈಲಿಗಾಗಿ 7.20ಕ್ಕೆ ವಾಹನದಲ್ಲಿ ಹೋಗುತ್ತಿರುವಾಗ, ಮಾರ್ಗಮಧ್ಯೆ ಫೋನಿನಲ್ಲಿ ಬಂದ ಎಸ್‌ಎಂಎಸ್ ಸಂದೇಶದ ಮೂಲಕ ‘ಅನಿವಾರ್ಯ ಕಾರಣಗಳಿಂದ ಇಂದಿನ ತಾಳಗುಪ್ಪ– ಬೆಂಗಳೂರು ರೈಲು ರದ್ದಾಗಿದೆ’ ಎಂದು ತಿಳಿಸಲಾಯಿತು.

ಸಾಗರದಲ್ಲಿ ನಮಗೆ ಸಿಕ್ಕ ಮಾಹಿತಿಯ ಪ್ರಕಾರ, ಅಂದು ಸಾಗರಕ್ಕೇ ಆ ಬೆಂಗಳೂರು ರೈಲು ಬಂದಿರಲಿಲ್ಲ ಮತ್ತು ಶಿವಮೊಗ್ಗದಿಂದಲೂ ರೈಲು ಹೊರಡುವುದಿಲ್ಲ ಎಂಬ ಆಘಾತಕಾರಿ ಸುದ್ದಿ ತಿಳಿಯಿತು. ಸಾಗರದಿಂದ ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಅವಳು ಶನಿವಾರ ಬೆಳಿಗ್ಗೆ ಬೆಂಗಳೂರಿಗೆ ಹೋಗಿಯೂ ಆಯಿತು.

ಪ್ರಶ್ನೆ ಇರುವುದು, ರೈಲು ನಿಗದಿತ ನಿಲ್ದಾಣಕ್ಕೇ ಬಂದಿಲ್ಲದಿದ್ದಾಗ್ಯೂ ಆ ನಿಲ್ದಾಣದಿಂದ ಆನ್‌ಲೈನ್ ಟಿಕೆಟನ್ನು ಹೇಗೆ ಕಾದಿರಿಸಲಾಯಿತು ಎನ್ನುವುದು. ಟಿಕೆಟ್ ಕಾದಿರಿಸುವ ಐಆರ್‌ಸಿಟಿಸಿ ಅವರಿಗೂ ರೈಲ್ವೆ ವ್ಯವಸ್ಥೆಯವರಿಗೂ ಸಂಪರ್ಕ ಕಡಿದು ಹೋಗಿತ್ತೇ ಎನ್ನುವುದು. ರೈಲು ರದ್ದಾದ ಕಾರಣ ಟಿಕೆಟಿನ ಹಣ ಹಿಂತಿರುಗಿಸುವ ಜತೆಯಲ್ಲೇ ಪ್ರಯಾಣಿಕರಿಗೆ ಉಂಟಾದ ಅನನುಕೂಲತೆಗೆ ರೈಲ್ವೆ ಇಲಾಖೆ ದಂಡವನ್ನೂ ತೆರಬೇಕಾಗಿರುವುದು ನ್ಯಾಯೋಚಿತವಲ್ಲವೇ?

ಟಿ.ಸುರೇಂದ್ರ ರಾವ್, ಬೆಂಗಳೂರು

ಮಳೆಗಾಲದ ಸಂಕಷ್ಟ: ಬೇಕು ಶಾಶ್ವತ ಪರಿಹಾರ

ರಾಜ್ಯದಾದ್ಯಂತ ವ್ಯಾಪಕವಾಗಿ ಮಳೆಯಾಗುತ್ತಿರುವುದರಿಂದ ಅಲ್ಲಲ್ಲಿ ಮನೆಗಳು ಬಿದ್ದಿರುವುದು, ಭೂ ಕುಸಿತ, ಸೇತುವೆಗಳು ಜಲಾವೃತ, ಹಿನ್ನೀರಿಗೆ ಹಳ್ಳಿಗಳ ಮುಳುಗಡೆಯಂತಹ ಸುದ್ದಿಗಳನ್ನು ಗಮನಿಸುತ್ತಿದ್ದೇವೆ. ಪ್ರತೀ ಬಾರಿ ಇದೇ ಪರಿಸ್ಥಿತಿ ಉದ್ಭವಿಸುತ್ತಿದ್ದರೂ ಆಳುವ ಸರ್ಕಾರಗಳಿಗೆ ಮಾತ್ರ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ. ಅದರಲ್ಲೂ ನದಿ ಪಾತ್ರದಲ್ಲಿ ಅತಿವೃಷ್ಟಿಯಾದಾಗಲೆಲ್ಲಾ ಜನ-ಜಾನುವಾರುಗಳ ಪರಿಸ್ಥಿತಿ ಹೇಳತೀರದಾಗಿದೆ. ಈ ವಿಷಯದಲ್ಲಿ ಸರ್ಕಾರದ ಇಚ್ಛಾಶಕ್ತಿಯ ಕೊರತೆ ಸ್ಪಷ್ಟವಾಗಿ ಕಾಣುತ್ತದೆ. ಇಂತಹ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚಿಸಲಿ.

ಶ್ರೀಧರ್ ಡಿ. ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

ಸೈಕಲ್‌ನಲ್ಲಿ ಸಂಚರಿಸಲು ಬೇಕಿದೆ ಪ್ರತ್ಯೇಕ ಪಥ

ಸಂಸದರು ಸೈಕಲ್ ಸವಾರಿಯ ಕಲ್ಪನೆಯನ್ನು ಸಂಸತ್‌ನಿಂದ ತಮ್ಮ ಮತಕ್ಷೇತ್ರಕ್ಕೆ ವಿಸ್ತರಣೆ ಮಾಡಿಕೊಂಡರೆ ಗ್ರಾಮ ಪಂಚಾಯಿತಿಯಿಂದ ಆರಂಭಿಸಿ ವಿವಿಧ ಹಂತದ ಜನಪ್ರತಿನಿಧಿಗಳು ಹಾಗೂ ಯುವಕರಿಗೆ ಮಾರ್ಗ ತೋರಿದಂತಾಗುತ್ತದೆ ಎಂಬುದು ನಾಗೇಶ ಹೆಗಡೆ ಅವರ ಆಶಯ (ಪ್ರ.ವಾ., ಜುಲೈ 24). ಇದು ಅದ್ಭುತ ಆಲೋಚನೆ ಹಾಗೂ ವಿನೂತನ ಪ್ರಯೋಗ ಕೂಡ!

ಪ್ರಸ್ತುತ ಹೆಚ್ಚುತ್ತಿರುವ ಜನರ ಶಿಕ್ಷಣದ ಮಟ್ಟದ ಜೊತೆಗೆ ‘ಪೂರಕ ಮಾಧ್ಯಮಗಳ’ ಅನುಕೂಲಗಳಿಂದ ಇಡೀ ಪ್ರಪಂಚದ ಮಾಹಿತಿಗಳು ಬೆರಳ ತುದಿಗೆ ಬಂದು ನಿಂತಿವೆ. ಇದರಿಂದ ಜನರ ಬೌದ್ಧಿಕ ಜ್ಞಾನವು ಪರಿಸರ ಕಾಳಜಿಯನ್ನು ಕೂಡ ಇಮ್ಮಡಿಗೊಳಿಸಿದೆ. ಈ ವಿಚಾರದಲ್ಲಿ ರಾಜಕಾರಣಿಗಳು ಜನರಿಗೆ ಮಾದರಿಯಾಗುತ್ತಾರೆ ಎಂದು ನಿರೀಕ್ಷೆ ಮಾಡುವ ಅವಶ್ಯಕತೆ ಬರುವುದಿಲ್ಲ. ಆದರೆ ಅಗತ್ಯವಾಗಿ ಆಗಬೇಕಾಗಿರುವುದು ನಗರಗಳಲ್ಲಿ ಸುರಕ್ಷಿತವಾಗಿ ಸೈಕಲ್‌ನಲ್ಲಿ ಸಂಚರಿಸಲು ಬೇಕಾದ ಅನುಕೂಲಗಳಷ್ಟೆ. ಈ ವಿಚಾರವಾಗಿ, ರಾಜಕೀಯ ಪಕ್ಷಗಳು ಸರ್ಕಾರಗಳ ಮೇಲೆ ಒತ್ತಡ ತಂದು ಪ್ರತ್ಯೇಕ ಸೈಕಲ್ ಲೇನ್ ರೂಪಿಸುವಂತೆ ಮಾಡಿದರೆ, ದಿನನಿತ್ಯ ಬೆಂಗಳೂರಿನ ರಸ್ತೆಗಳಲ್ಲಿ ಲಕ್ಷಾಂತರ ಜನರು ಸೈಕಲ್‌ಗಳಲ್ಲಿ ಸಂಚರಿಸುವುದನ್ನು ಕಾಣಬಹುದು. ರಾಜಕೀಯ ಪಕ್ಷಗಳು ಇದನ್ನೂ ಒಂದು ‘ವೋಟು ಬ್ಯಾಂಕ್’ ಮಾಡಿಕೊಳ್ಳಲು ಇಂಥ ಸಾಮಾಜಿಕ ನಡೆಗೆ ಮುಂದಾಗಬಹುದಲ್ಲವೇ?

ಡಾ. ಜಿ.ಬೈರೇಗೌಡ, ಬೆಂಗಳೂರು

ಪೌರಕಾರ್ಮಿಕರ ಅಲಕ್ಷ್ಯ ಸಾಮಾಜಿಕ ಅಪರಾಧ

ಆರ್ಥಿಕ ಸಂಕಷ್ಟ ಮತ್ತು ಸಾಂಕ್ರಾಮಿಕದಿಂದ ಹುಟ್ಟಿರುವ ಅಸಹಾಯಕತೆಗಳ ಈ ದಿನಗಳಲ್ಲಿ ಕೋವಿಡ್ ನೆಪವೊಡ್ಡಿ ಎಲ್ಲಿ ನೋಡಿದರೂ ಹಂಗಾಮಿ ನೌಕರಿ, ಗುತ್ತಿಗೆ ನೌಕರಿ, ದಿನಗೂಲಿ ನೌಕರಿ ಇತ್ಯಾದಿಯಾಗಿ ಉದ್ಯೋಗಾವಕಾಶಗಳನ್ನು ಕಸಿದುಕೊಳ್ಳುತ್ತಿರುವುದು ಮತ್ತು ಆ ಮೂಲಕ ಜನಸಾಮಾನ್ಯರ ಬದುಕುವ ಹಕ್ಕನ್ನೇ ಕಸಿದುಕೊಳ್ಳುತ್ತಿರುವುದು ಮಾಮೂಲಿ ಸಂಗತಿಯಾಗಿಬಿಟ್ಟಿದೆ. ದೊಡ್ಡ ದೊಡ್ಡ ನಗರಗಳ ನಗರಪಾಲಿಕೆಗಳಲ್ಲಿ ಶೋಚನೀಯ ಪರಿಸ್ಥಿತಿಗಳಲ್ಲಿ ಸರಿಯಾದ ಸಂಬಳ- ಸವಲತ್ತುಗಳಿಲ್ಲದೆ ದುಡಿಯುತ್ತಿರುವ ಪೌರಕಾರ್ಮಿಕರ ಸ್ಥಿತಿ ಇನ್ನೂ ಗಂಭೀರವಾಗಿದೆ. ಅವರಲ್ಲಿ ಬೆರಳೆಣಿಕೆಯ ಜನರು ಮಾತ್ರ ಕಾಯಂ ನೌಕರರಾಗಿದ್ದು ಬಹುಸಂಖ್ಯಾತ ನೌಕರರು ಹಂಗಾಮಿ ನೌಕರರಾಗಿ ದುಡಿಯುತ್ತಾ ಕನಿಷ್ಠ ಸವಲತ್ತುಗಳಿಂದಲೂ ವಂಚಿತರಾಗಿದ್ದಾರೆ. ಹಣವಂತ ಉದ್ಯಮಿ- ವ್ಯಾಪಾರಿ-ರಾಜಕಾರಣಿಗಳಿಂದ ನಗರಪಾಲಿಕೆಗಳಿಗೆ ನ್ಯಾಯವಾಗಿ ಬರಬೇಕಾದ ತೆರಿಗೆಗಳನ್ನು ವಸೂಲು ಮಾಡದೆ, ಆರ್ಥಿಕ ಮಿತವ್ಯಯದ ಹೆಸರಿನಲ್ಲಿ ಈ ಬಡಪಾಯಿ ನೌಕರರನ್ನು ನಿರ್ದಯವಾಗಿ ಕೆಲಸದಿಂದ ತೆಗೆದುಹಾಕಲಾಗುತ್ತಿದೆ.

ಪೌರಕಾರ್ಮಿಕರಲ್ಲಿ ಕಾಯಂ ಮತ್ತು ಹಂಗಾಮಿ ಎಂದು ಭೇದ ಮಾಡಿ ಹಂಗಾಮಿ ನೌಕರರನ್ನು ಕೆಲಸದಿಂದ ತೆಗೆದುಹಾಕುವ ಕ್ರಮ ಅಮಾನವೀಯ ಮಾತ್ರವಲ್ಲ, ಅವಿವೇಕದ್ದೂ ಹೌದು. ಜನಜೀವನದ ನಾಗರಿಕ ಆರೋಗ್ಯದ ಮುಖ್ಯ ಅಂಗದಂತಿರುವ ಪೌರಕಾರ್ಮಿಕರ ಬಗ್ಗೆ ತಾತ್ಸಾರ ಭಾವನೆಯನ್ನು ಆಳುವವರು ಮತ್ತು ಅಧಿಕಾರಿಗಳು ಬೆಳೆಸಿಕೊಂಡರೆ ಅವರ ಅಸ್ತಿತ್ವಕ್ಕೇ ಸಂಚಕಾರ ಬರುವುದರಲ್ಲಿ ಸಂದೇಹವಿಲ್ಲ.

ಸಮಾಜದ ಅತ್ಯಂತ ಕೆಳಸ್ತರದಲ್ಲಿರುವ ಪೌರಕಾರ್ಮಿಕರ ವಿಷಯದಲ್ಲಿ ಹಂಗಾಮಿ ಎನ್ನುವುದೇ ಒಂದು ಅಸಂಬದ್ಧವಾದ ಆಲೋಚನೆ. ಈಗಿರುವ 5,000 ಜನರಿಗೆ ಒಬ್ಬ ಪೌರಕಾರ್ಮಿಕ ಎಂಬ ಅನುಪಾತವನ್ನು ಬದಲಾಯಿಸಿ, ಕಡೇಪಕ್ಷ 1,000 ಜನರಿಗೆ ಒಬ್ಬ ಪೌರಕಾರ್ಮಿಕ ಎಂಬ ಅನುಪಾತದಲ್ಲಿ ಪೌರಕಾರ್ಮಿಕರನ್ನು ನೇಮಿಸಿಕೊಂಡು ಅವರೆಲ್ಲರಿಗೂ ತಿಂಗಳಿಗೆ ₹ 25,000 ಕನಿಷ್ಠ ವೇತನವನ್ನು ಕೊಡುವುದು ಎಲ್ಲಾ ದೃಷ್ಟಿಯಿಂದಲೂ ನ್ಯಾಯ.

ವಿ.ಎನ್.ಲಕ್ಷ್ಮೀನಾರಾಯಣ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಂಡವಾಳ ಕೇಂದ್ರಿತ ಖಾಸಗೀಕರಣದತ್ತ...

ಬಹುರಾಜ್ಯ ಸಹಕಾರಿ ಸಂಘಗಳ ಶಾಸನ ಜಾರಿಗೆ ಬಂದು ಅಂತರರಾಜ್ಯ ಸಹಕಾರ ಸಂಸ್ಥೆಗಳು ಕಾರ್ಯಾರಂಭ ಮಾಡಿದ ನಂತರ ಸಹಕಾರವು ರಾಜ್ಯ ಪಟ್ಟಿಯಲ್ಲಿ ಇದ್ದರೂ, ಕೇಂದ್ರ ಪಟ್ಟಿಗೆ ಪ್ರವೇಶ ಪಡೆಯಿತೆಂದೇ ಹೇಳಬಹುದು. ಹೊಸ ಆರ್ಥಿಕ ನೀತಿಯ ಮುಂದುವರಿದ ಭಾಗವಾಗಿಯೇ ಇವೆಲ್ಲವನ್ನೂ ಅರ್ಥ ಮಾಡಿಕೊಳ್ಳಬೇಕಿದೆ

• ಡಾ. ಉದಯ ಕುಮಾರ ಇರ್ವತ್ತೂರು

ಭಾರತ ಸರ್ಕಾರವು 'ಸಹಕಾರ ಸಚಿವಾಲಯ' ಸ್ಥಾಪಿಸಿ ಅದರ ಚುಕ್ಕಾಣಿಯನ್ನು ಗೃಹ ಸಚಿವ ಅಮಿತ್ ಶಾ ಅವರ ಕೈಗೆ ಒಪ್ಪಿಸಿದೆ. ಈ ಘಟನೆಯು ಸಹಕಾರಿ ರಂಗದ ಭವಿಷ್ಯ ಮತ್ತು ಶಾ ಅವರ ಮುಂದಿನ ನಡೆಯು ಏನಿರಬಹುದು ಎನ್ನುವುದರ ಕುರಿತು ದೇಶದಲ್ಲಿ ಬಹಳಷ್ಟು ಚರ್ಚೆಗೆ ಎಡೆ ಮಾಡಿಕೊಟ್ಟಿದೆ.

ಅರ್ಥ ವ್ಯವಸ್ಥೆಗೆ ಬಲ ತುಂಬಲು ಸಹಕಾರ ಕ್ಷೇತ್ರವನ್ನು ಹೇಗೆ ಬಳಸಿಕೊಳ್ಳಹುದು ಎಂಬುದರ ಬಗ್ಗೆ ಇರುವ ಪೂರ್ವಗ್ರಹಗಳನ್ನು, ಹೊಸತಾಗಿ ಅಸ್ತಿತ್ವಕ್ಕೆ ಬಂದ ಸಹಕಾರ ಸಚಿವಾಲಯವು ಬದಿಗೆ ಇರಿಸಬೇಕು. ದೇಶದ ಇಂದಿನ ಪರಿಸ್ಥಿತಿಯಲ್ಲಿ ಸಹಕಾರಿ ರಂಗದಲ್ಲಿ ಲಭ್ಯವಿರುವ ಅವಕಾಶಗಳನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದರ ಬಗ್ಗೆ ವಸ್ತುನಿಷ್ಠವಾಗಿ ಯೋಚಿಸಬೇಕು. ಅದರ ಜತೆಗೆ, ಬಿಜೆಪಿಯಲ್ಲಿ ಅಮಿತ್ ಶಾ ಅವರ ಪಾತ್ರ ಹಾಗೂ ಪ್ರಭಾವದ ಹಿನ್ನೆಲೆಯಲ್ಲಿ ಕಟು ಟೀಕಾಕಾರರು ಎತ್ತಿರುವ ಪ್ರಶ್ನೆಗಳಿಗೆ, ಅನುಮಾನಗಳಿಗೆ, ಉತ್ತರವನ್ನು ಹುಡುಕುವ ಪ್ರಾಮಾಣಿಕ ಪ್ರಯತ್ನ ಮಾಡುವ ಮೂಲಕ ಆರೋಗ್ಯಪೂರ್ಣ ಸಂವಾದಗಳಿಗೆ ಅವಕಾಶವನ್ನೂ ಒದಗಿಸಬೇಕಿದೆ.

1904ರಿಂದ ಆರಂಭಿಸಿ 2005ರಲ್ಲಿ ವೈದ್ಯನಾಥನ್ ಸಮಿತಿಯ ವರದಿಯಲ್ಲಿರುವ ಶಿಫಾರಸು ವರೆಗೆ, ಕಾಲದಿಂದ ಕಾಲಕ್ಕೆ ಸಹಕಾರಿ ರಂಗದ ಬಲವರ್ಧನೆಗೆ ಹಲವಾರು ರಚನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ರಾಷ್ಟ್ರೀಯ ಸಹಕಾರ ನೀತಿ 2002 ಅನ್ನು ಉದಾರೀಕರಣದ ಭಾಗವಾಗಿ ಅರ್ಥೈಸಿಕೊಳ್ಳಬೇಕಿದೆ; ಮತ್ತು ಬಹುರಾಜ್ಯ ಸಹಕಾರಿ ಸಂಘಗಳ ಶಾಸನ ಜಾರಿಗೆ ಬಂದು ಅಂತರರಾಜ್ಯ ಸಹಕಾರ ಸಂಸ್ಥೆಗಳು ಕಾರ್ಯಾರಂಭ ಮಾಡಿದ ನಂತರ ಸಹಕಾರವು ರಾಜ್ಯ ಪಟ್ಟಿಯಲ್ಲಿ ಇದ್ದರೂ, ಕೇಂದ್ರ ಪಟ್ಟಿಗೆ ಪ್ರವೇಶ ಪಡೆಯಿತೆಂದೇ ಹೇಳಬಹುದು. ಹೊಸ ಆರ್ಥಿಕ ನೀತಿಯ ಮುಂದುವರಿದ ಭಾಗವಾಗಿಯೇ ಇವೆಲ್ಲವನ್ನೂ ಅರ್ಥ ಮಾಡಿಕೊಳ್ಳಬೇಕಿದೆ.

ಸರ್ಕಾರವು ಉದಾರೀಕರಣದ ನಂತರದ ದಿನಗಳಲ್ಲಿ ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಶೀಲತೆಯ ತನ್ನ ಪಾತ್ರದ ಮಹತ್ವವನ್ನು ಹಂತ ಹಂತವಾಗಿ ಮಿತಿಗೊಳಿಸಿ, ಖಾಸಗಿ ಮತ್ತು ಸಹಕಾರಿ ರಂಗಕ್ಕೆ ಹೆಚ್ಚಿನ ಮಹತ್ವ ನೀಡಲು ಮುಂದಾಗಿದೆ. ಆ ಪ್ರಯತ್ನದ ಒಂದು ಪರ್ಯಾಯ ಕ್ರಮವಾಗಿಯೂ ಕೇಂದ್ರದ ಸಹಕಾರ ಸಚಿವಾಲಯವನ್ನು ನಾವು ನೋಡಬಹುದು. ಸದ್ಯ ಕೃಷಿ ಸಚಿವಾಲಯದ ಒಂದು ಭಾಗವಾಗಿರುವ ಸಹಕಾರಿ ಇಲಾಖೆಯು ರಾಜ್ಯಗಳೊಂದಿಗೆ ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವುದು ಕಷ್ಟದ ಕೆಲಸವೇ. ಪ್ರತ್ಯೇಕ ಸಚಿವಾಲಯ ಬಂದಾಗ ಅದಕ್ಕೆ ಸ್ವತಂತ್ರ ಅಸ್ತಿತ್ವ ಮತ್ತು ಪ್ರತ್ಯೇಕ ಬಜೆಟ್ ಅನುದಾನ ದೊರಕುತ್ತದೆ.

ದೇಶದಲ್ಲಿ ಗುಜರಾತ್, ಕರ್ನಾಟಕ, ಮಹಾರಾಷ್ಟ್ರ, ಅಸ್ಸಾಂನಂತಹ ರಾಜ್ಯಗಳಲ್ಲಿ ಆರ್ಥಿಕ ಪ್ರಗತಿಗೆ ಸಹಕಾರಿ ರಂಗದ ಕೊಡುಗೆ ದೊಡ್ಡದಿದೆ. ಅದೇ ಮಾದರಿಯಲ್ಲಿ ಉಳಿದ ರಾಜ್ಯಗಳಲ್ಲಿಯೂ ಸಹಕಾರಿ ಕ್ಷೇತ್ರವನ್ನು ಬೆಳೆಸಲು ಸಚಿವಾಲಯ ಪ್ರಯತ್ನಿಸುವ ಉದ್ದೇಶವಿದ್ದರೆ ಅದು ಸ್ವಾಗತಾರ್ಹವೇ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕಳೆದ ಸಾಲಿನ ಬಜೆಟ್ ಭಾಷಣದಲ್ಲಿ ಪ್ರಸ್ತಾಪಿಸಿದ ಸಾಮಾಜಿಕ ಷೇರು ಬಂಡವಾಳ ವಿನಿಮಯ ವ್ಯವಸ್ಥೆ ಈಗಾಗಲೇ ಪ್ರಸ್ತಾಪಿಸಿದ ಹೊಸ ತಳಿಯ ಸಹಕಾರಿ ಸಂಸ್ಥೆಗಳಿಗೆ ಅಗತ್ಯ ಸಂಪನ್ಮೂಲ ಕ್ರೋಡೀಕರಿಸಲು ಸಹಾಯ ಮಾಡಬಹುದಾಗಿದೆ. ಆದುದರಿಂದ ಸಹಕಾರಿ ಸಚಿವಾಲಯ ಸ್ಥಾಪನೆಯನ್ನು ಈ ದಿಸೆಯಲ್ಲಿ ಸಕಾರಾತ್ಮಕ ಹೆಜ್ಜೆ ಎಂದು ನೋಡಬಹುದು.

ಕೃಷಿ ಸಚಿವಾಲಯವನ್ನು ಈಗಿರುವ ಸಹಕಾರಿ ರಂಗದ ಜವಾಬ್ದಾರಿಯಿಂದ ಮುಕ್ತಗೊಳಿಸಿ ಕೃಷಿಕ್ಷೇತ್ರದ ಉತ್ಪಾದಕತೆಗೆ ಅಗತ್ಯವಿರುವ ಹನಿ ನೀರಾವರಿ, ಹೊಸ ಬೆಳೆಗಳು, ಸುಧಾರಿತ ಸಾವಯವ ಕೃಷಿ ಪದ್ಧತಿ, ಮುಂತಾದ ಕ್ರಮಗಳ ಕಡೆಗೆ ಹೆಚ್ಚಿನ ಗಮನ ಕೊಡುವಂತೆ ಮಾಡಬಹುದು. ಕೃಷಿ ಕ್ಷೇತ್ರಕ್ಕೆ ಅಗತ್ಯವಿರುವ ಮಾರುಕಟ್ಟೆ, ಗೋದಾಮು, ಸಾಲ ಸೌಲಭ್ಯದಂತಹ ಅಂಶಗಳನ್ನು ಸಹಕಾರ ಸಚಿವಾಲಯ ನಿಭಾಯಿಸಿದರೆ ಕೃಷಿ ರಂಗದ ಉತ್ಪಾದಕತೆಯೂ ಉತ್ತಮವಾಗಬಹುದು. ಮಾತ್ರವಲ್ಲ, ಕೇಂದ್ರದ ಕೃಷಿ ಕಾಯ್ದೆಗಳ ಜಾರಿ ಮತ್ತು ಕೃಷಿ ಮಾರುಕಟ್ಟೆಯ ಸುಧಾರಣೆಗಳನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿಯೂ ಈ ಸಚಿವಾಲಯಕ್ಕೆ ಮಹತ್ವ ಇದೆ.

ಯಾಕೆಂದರೆ, ಕಾಯ್ದೆಗಳು ಅನುಷ್ಠಾನಗೊಳ್ಳಬೇಕಾದ ಸಂದರ್ಭದಲ್ಲಿ ಸ್ಪಷ್ಟವಾದ ನೀತಿಯಾಗಿ ರೂಪುಗೊಳ್ಳಬೇಕಾದ ಹಲವು ಅಂಶಗಳು ಇವೆ. ಗುತ್ತಿಗೆ ಕೃಷಿಯಂತಹ ವಿಷಯಗಳನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಆಯಾ ಪರಿಸ್ಥಿತಿಗೆ, ಸಂದರ್ಭಕ್ಕೆ, ಪ್ರದೇಶಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸಮಸ್ಯೆಗಳು ಉದ್ಭವಿಸಬಹುದು. ಅವೆಲ್ಲವನ್ನು ನಿರ್ವಹಿಸುವ ಮತ್ತು ಅವುಗಳಿಗೆ ಪರಿಹಾರೋಪಾಯ ಸೂಚಿಸುವ ದೊಡ್ಡ ಜವಾಬ್ದಾರಿ ಸರ್ಕಾರದ ಮೇಲಿದೆ. ಈ ಸಚಿವಾಲಯದಿಂದ ಕೃಷಿ ಹಾಗೂ ಸಹಕಾರಿ ರಂಗಕ್ಕೆ ಒಳಿತಾಗುವುದಿದ್ದರೆ ಒಳ್ಳೆಯದೇ.

ಸಹಕಾರ ಸಚಿವಾಲಯದ ಜವಾಬ್ದಾರಿ ಗೃಹ ಸಚಿವ ಅಮಿತ್ ಶಾ ಅವರ ಹೆಗಲಿಗೆ ಬಿದ್ದಿರುವುದು ಹಲವಾರು ಅನುಮಾನ, ಆತಂಕ ಮತ್ತು ಸಂಶಯಗಳನ್ನು ಹುಟ್ಟು ಹಾಕಿರುವುದಂತೂ ಸತ್ಯ. ವಿಶೇಷವಾಗಿ ಇತ್ತೀಚೆಗೆ ಜಾರಿಯಾದ, ಕೃಷಿಕ್ಷೇತ್ರಕ್ಕೆ ಸಂಬಂಧಿಸಿದ ವಿವಾದಾತ್ಮಕ ಕಾನೂನುಗಳಿಗೆ ದೊಡ್ಡ ಮಟ್ಟದ ವಿರೋಧ ವ್ಯಕ್ತವಾಗಿದೆ. ಇಂತಹ ವಿರೋಧ ತೋರುತ್ತಿರುವ ರೈತ ಸಮುದಾಯದ ನಾಯಕರಿರುವ ಉತ್ತರ ಪ್ರದೇಶದಲ್ಲಿ ಮುಂದಿನ ವರ್ಷ ವಿಧಾನ ಸಭೆಗೆ ಚುನಾವಣೆಗಳು ನಡೆಯಲಿವೆ. ರೈತ ಸಮುದಾಯದ ಕೆಂಗಣ್ಣಿಗೆ ಗುರಿಯಾಗಿರುವ ಬಿಜೆಪಿ, ರೈತ ಸಮುದಾಯದ ಮೇಲಿನ ತನ್ನ ಹತೋಟಿಯನ್ನು ಮರಳಿ ಬಲಗೊಳಿಸಲು ಹೊಸ ಸಚಿವಾಲಯವನ್ನು ಬಳಸಿಕೊಳ್ಳಬಹುದೇ ಎನ್ನುವ ಪ್ರಶ್ನೆಯೂ ಜನರ ಮುಂದಿದೆ. ಅಧಿಕಾರದ ಗದ್ದುಗೆ ಹಿಡಿಯಲು ವ್ಯೂಹಾತ್ಮಕವಾದ ಕ್ರಮಗಳನ್ನು ಅನುಸರಿಸಲೇ ಬೇಕಾಗುತ್ತದೆ.

ಗುಜರಾತ್, ಕರ್ನಾಟಕದಲ್ಲಿ ಬಿಜೆಪಿ ಅಧಿಕಾರ ಹಿಡಿಯಲು ಸಹಕಾರ ಕ್ಷೇತ್ರವು ಸಾಕಷ್ಟು ಕೊಡುಗೆ ನೀಡಿದೆ ಎನ್ನುವ ಅಂಶವನ್ನು ಮರೆಯುವ ಹಾಗಿಲ್ಲ. ಮಹಾರಾಷ್ಟ್ರದಲ್ಲಿ ಶರದ್ ಪವಾರ್ ಹಾಗೂ ದೇವೇಂದ್ರ ಫಡಣವೀಸ್ ಅವರಿಗೆ ರಾಜಕೀಯ ಶಕ್ತಿ ತುಂಬಿರುವುದು ಇದೇ ಸಹಕಾರಿ ಕ್ಷೇತ್ರ. ಕೃಷಿ ಹಾಗೂ ಸಹಕಾರಿ ಕ್ಷೇತ್ರಕ್ಕೆ ದೊಡ್ಡ ಪ್ರಮಾಣದಲ್ಲಿ ಸಂಪನ್ಮೂಲ ಹರಿದು ಬರುತ್ತಿದ್ದು ಅದರ ಮೇಲಿನ ಹತೋಟಿ ಪ್ರಾಪ್ತವಾದಲ್ಲಿ ಸಮುದಾಯದ ದೊಡ್ಡ ವರ್ಗವೊಂದನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು ಸುಗಮವಾಗಲಿದೆ ಎನ್ನುವ ಪಕ್ಕಾ ಲೆಕ್ಕಾಚಾರ ಅಮಿತ್ ಶಾ ಅವರದ್ದಿರಬಹುದು. ಗುಜರಾತ್ ರಾಜ್ಯದ 17,000 ಹಳ್ಳಿಗಳ ಪೈಕಿ 16,500 ಹಳ್ಳಿಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧಿಕಾರ ಹಿಡಿಯುವ ಮೂಲಕ ತಳಮಟ್ಟದ ಜನರೊಂದಿಗೆ ಸಂಪರ್ಕ ಸುಲಭ ಸಾಧ್ಯವಾಗಿಸಿ ಅಧಿಕಾರದ ಗದ್ದುಗೆ ಏರಲು ಬಿಜೆಪಿಗೆ ಸಾಧ್ಯವಾಗಿತ್ತು. ಸಮುದಾಯದ ಸಂಪನ್ಮೂಲ ಬಳಸಿಯೇ ಮತದಾರರ ಮನಸ್ಸಿಗೆ ಲಗ್ಗೆ ಇಡುವುದೂ ಸುಲಭ ಮತ್ತು ಪರಿಣಾಮಕಾರಿ.

ಈ ದಿಸೆಯಲ್ಲಿ, ಸಂಘ ಪರಿವಾರದ ಅಂಗ ಸಂಸ್ಥೆಯಾದ ಸಹಕಾರ ಭಾರತಿಯು ಕರ್ನಾಟಕ ಮತ್ತು ಗುಜರಾತ್ ರಾಜ್ಯಗಳಲ್ಲಿ ಮಾಡಿರುವ ಪ್ರಯೋಗದ ಪರಿಣಾಮ ಕೂಡಾ ಹೊಸ ಸಚಿವಾಲಯದ ಹುಟ್ಟಿನ ಹಿಂದಿರುವುದು ಗುಟ್ಟೇನು ಅಲ್ಲವೆನಿಸುತ್ತದೆ. ಒಟ್ಟಿನಲ್ಲಿ ಈಗ ಆಗುತ್ತಿರುವ ಎಲ್ಲ ಬದಲಾವಣೆಗಳು ಬಂಡವಾಳ ಕೇಂದ್ರಿತ ಖಾಸಗೀಕರಣದ ಕಡೆಗಿನ ನಡೆಯಂತೆ ಕಂಡು ಬರುತ್ತಿರುವುದಂತೂ ದಿಟ. ಇಂತಹ ಲೆಕ್ಕಾಚಾರದ ನಡೆಯನ್ನು, ಸಮಾಜದ ದುರ್ಬಲರು, ಬಿಜೆಪಿಯೇತರ ರಾಜಕೀಯ ಪಕ್ಷಗಳು ಹೇಗೆ ಎದುರಿಸುತ್ತವೆ ಎನ್ನುವುದರ ಮೇಲೆ ದೇಶದ ರಾಜಕೀಯ ಪ್ರಜಾಪ್ರಭುತ್ವ ಮತ್ತು ಆರ್ಥಿಕ ಬೆಳವಣಿಗೆ ನಿಂತಿದೆ ಎಂದಷ್ಟೇ ಹೇಳಬಹುದು.

ಲೇಖಕ: ಮಂಗಳೂರು ವಿಶ್ವವಿದ್ಯಾಲಯ ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥ

ಸಹಕಾರ ಸಚಿವಾಲಯದಿಂದ ಇನ್ನಷ್ಟು ಸಮೃದ್ಧಿ

117 ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ಸಹಕಾರ ಕ್ಷೇತ್ರ, ಜನಸಾಮಾನ್ಯರು, ರೈತರು ಹಾಗೂ ದುರ್ಬಲ ವರ್ಗದ ಜನರ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತಿದೆ. ಇಂತಹ ಜನಸ್ಪಂದನೆ ಕ್ಷೇತ್ರದ ಮೇಲೆ ಅಪಾರ ನಂಬಿಕೆ, ವಿಶ್ವಾಸ ಹೊಂದಿರುವ ಪ್ರಧಾನಿ ನರೇಂದ್ರ ಮೋದಿ ಸಹಕಾರ ಸಚಿವಾಲಯ ಸ್ಥಾಪಿಸಿರುವುದು ಅಭಿನಂದನಾರ್ಹ ಕ್ರಮ.

ಸಹಕಾರ ಕ್ಷೇತ್ರದಿಂದಲೇ ಜನರ ಸಮೃದ್ಧಿ ಎನ್ನುವುದು ಈಗ ಜಗಜ್ಜಾಹೀರವಾಗಿದೆ. ಸಹಕಾರ ಕ್ಷೇತ್ರವು ಬಹುತೇಕ ರೈತಾಪಿ ವರ್ಗವನ್ನೇ ಒಳಗೊಂಡಿದೆ. ಸಹಕಾರ ಸಂಘಗಳ ಲಾಭಕ್ಕೆ ಆದಾಯ ತೆರಿಗೆ ವಿನಾಯಿತಿ, ನಬಾರ್ಡ್ ಸಾಲ ಯೋಜನೆಯ ಕುರಿತು ಇರುವ ಸಮಸ್ಯೆಗಳನ್ನು ಪರಿಹರಿಸಲು ಸಹಕಾರ ಸಚಿವಾಲಯ ಸೂಕ್ತ ವೇದಿಕೆಯಾಗಲಿದೆ.

ಸಹಕಾರ ಕ್ಷೇತ್ರ ಸಮೃದ್ಧವಾದ ಕ್ಷೇತ್ರ. ಈ ಕ್ಷೇತ್ರ ಇನ್ನಷ್ಟು ಪ್ರಬಲವಾಗಿ ಬೆಳೆಯಬೇಕು ಎನ್ನುವ ಆಶಯ ಸಹಕಾರ ಸಚಿವಾಲಯದ ಸ್ಥಾಪನೆ ಹಿಂದಿದೆ. ಖಾಸಗಿ ಕ್ಷೇತ್ರದ ನಡುವೆ ಸಹಕಾರ ಕ್ಷೇತ್ರ ಇಂದು ಪೈಪೋಟಿ ಎದುರಿಸುತ್ತಿದೆ. ಈ ಕಾಲಘಟ್ಟದಲ್ಲಿ ಸಹಕಾರ ಕ್ಷೇತ್ರದ ಸಂವರ್ಧನೆಗಾಗಿ ಕೇಂದ್ರ ಸರ್ಕಾರ ಸಹಕಾರ ಸಚಿವಾಲಯದ ಜೊತೆಗೆ ಅಮಿತ್ ಶಾ ಅವರನ್ನು ನೂತನ ಸಹಕಾರ ಸಚಿವರನ್ನಾಗಿ ಮಾಡಿರುವುದೂ ಸ್ವಾಗತಾರ್ಹ.

ಸಹಕಾರ ರಂಗ ಅಭಿವೃದ್ಧಿ ಆದಂತೆ, ಕೃಷಿ ಕ್ಷೇತ್ರವೂ ಪ್ರಗತಿ ಸಾಧಿಸಲು ಅನುಕೂಲ ಆಗಲಿದೆ. ಸಹಕಾರ ಸಚಿವಾಲಯದ ಮೂಲಕ ಕೃಷಿಕರ ಸಮಸ್ಯೆ ನಿವಾರಣೆ ಆಗಲಿವೆ. ಅವರಿಗೆ ಇನ್ನಷ್ಟು ಆರ್ಥಿಕ ಶಕ್ತಿ ತುಂಬಲು ಇದು ನೆರವಾಗಲಿದೆ.

ಎಂ.ಎನ್. ರಾಜೇಂದ್ರಕುಮಾರ್, ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಹಾಗೂ ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರು

ದುರುದ್ದೇಶವಿದ್ದರೆ ರೈತರಿಗೆ ಲುಕ್ಸಾನು

ಸಹಕಾರ ಕ್ಷೇತ್ರವನ್ನು ಸಬಲೀಕರಣ ಮಾಡುವ ಉದ್ದೇಶದಿಂದ ನೂತನ ಸಚಿವಾಲಯ ಸ್ಥಾಪಿಸಿದ್ದರೆ ಅದು ಒಳ್ಳೆಯದೇ. ಆದರೆ, ಬಿಜೆಪಿಯವರ ಟ್ರ್ಯಾಕ್ ರೆಕಾರ್ಡ್ ನೋಡಿದಾಗ ಅವರ ಒಳಗುರಿ ಎಲ್ಲ ಸಮಯದಲ್ಲೂ ಬೇರೆಯದೆ ಆಗಿರುವುದು ಗೋಚರವಾಗುತ್ತ ಬಂದಿದೆ. ಹಾಗಾಗಿ, ನೂತನ ಸಚಿವಾಲಯ ಸ್ಥಾಪನೆಯ ಹಿಂದಿನ ಉದ್ದೇಶವನ್ನು ತತ್‌ಕ್ಷಣಕ್ಕೆ ಸ್ಪಷ್ಟವಾಗಿ ವಿಶ್ಲೇಷಿಸುವುದು ಕಷ್ಟಕರ.

ದೇಶದ ಇತಿಹಾಸದಲ್ಲಿ ಕೇಂದ್ರಾಡಳಿತ ಪ್ರದೇಶ ರಾಜ್ಯವಾಗಿ ಬದಲಾಗಿದೆ. ಆದರೆ, ರಾಜ್ಯವಾಗಿದ್ದ ಜಮ್ಮು ಕಾಶ್ಮೀರವನ್ನು ಬಿಜೆಪಿಯವರು ಕೇಂದ್ರಾಡಳಿತ ಪ್ರದೇಶ ಮಾಡಿದರು. ಅಂದರೆ, ಅವರು ತಮ್ಮ ಅಧಿಕಾರದ ಗುರಿ ಸಾಧನೆಗೆ ಬೇಕಾದ್ದನ್ನು ಮಾಡಲು ಸಿದ್ಧ ಎಂಬುದಕ್ಕೆ ಇದೇ ಸಾಕ್ಷಿ. ತಮಿಳುನಾಡಿನಲ್ಲಿ ಅಧಿಕಾರ ಹಿಡಿಯುವುದು ಕಷ್ಟ ಎಂಬ ಕಾರಣಕ್ಕೆ ಮುಂದೊಂದು ದಿನ ಅದನ್ನು ಕೇಂದ್ರಾಡಳಿತ ಪ್ರದೇಶ ಮಾಡಿದರೂ ಅಚ್ಚರಿ ಪಡಬೇಕಿಲ್ಲ.

ಮಲ್ಟಿ ಸ್ಟೇಟ್ ಆ್ಯಕ್ಟ್ ಒಳಗೆ ಯಾವ್ಯಾವ ಸಹಕಾರಿ ಸಂಸ್ಥೆಗಳು ಬರುತ್ತವೆಯೋ ಅವುಗಳ ಮೇಲೆ ಸಚಿವಾಲಯದ ಮೂಲಕ ಹೆಚ್ಚಿನ ನಿಯಂತ್ರಣ ಮಾಡುವ ಅವಕಾಶ ಮುಖ್ಯಸ್ಥರಿಗೆ ಸಿಗಲಿದೆ. ಈಗ ಹೊಸ ಸಚಿವಾಲಯವು ಅಮಿತ್ ಶಾ ಕೈಯಲ್ಲಿರುವುದರಿಂದ ತಮ್ಮ ರಾಜಕೀಯ ಗುರಿ ಸಾಧನೆಗೆ ಅವರು ಸಹಕಾರಿ ನಿಯಮಗಳನ್ನು ಉಲ್ಲಂಘಿಸಿ ನಡೆದರೆ ರೈತಾಪಿ ವರ್ಗಕ್ಕೆ ಬಹಳ ಲುಕ್ಸಾನು ಆಗಲಿದೆ. ಆ ರೀತಿ ಆಗದಿರಲಿ ಎಂದು ಆಶಿಸೋಣ.

ದೇಶಕ್ಕೆ ಒಳ್ಳೆಯದು ಮಾಡಬೇಕು ಎಂಬ ಉದ್ದೇಶ ಹೊಂದಿದ್ದರೆ ಸಚಿವಾಲಯ ಸ್ಥಾಪನೆಯ ಉದ್ದೇಶ ಉತ್ತಮವೇ ಆಗಿದೆ. ಕಷ್ಟಕರ ಸಂದರ್ಭದಲ್ಲಿ ರೈತರ ಹಿತರಕ್ಷಣೆಗೆ ಮುಂದಾಗಬಹುದು. ರಾಜಕೀಯವನ್ನು ಬದಿಗಿಟ್ಟು ಕೆಲಸ ಮಾಡಿದರೆ ಸಹಕಾರ ಸಚಿವಾಲಯ ದೇಶದ ಅಭಿವೃದ್ಧಿಗೆ ಒಳ್ಳೆಯ ಅಸ್ತ್ರವಾಗಲಿದೆ.

ಸಚಿವಾಲಯದ ಮುಖ್ಯಸ್ಥ ಯಾರು, ಅವರ ಒಳ ಉದ್ದೇಶ ಏನು ಎಂಬುದರ ಮೇಲೆ ಅದರ ಲಾಭ, ನಷ್ಟ ಆಗಲಿದೆ.

ಡಿ.ಆರ್.ಪಾಟೀಲ
ಗದಗ ಕೋ– ಅಪರೇಟಿವ್ ಟೆಕ್ಸ್‌ಟೈಲ್ ಮಿಲ್ ಅಧ್ಯಕ್ಷ

ಸಹಕಾರವು ಕೃಷಿಗೆ ಸೀಮಿತವಲ್ಲ

ಸಹಕಾರ ಎಂಬುದು ಕೃಷಿ ಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿಲ್ಲ. ಕೃಷಿ ಸಾಲದಲ್ಲಿ ಸಹಕಾರ ಕ್ಷೇತ್ರದ ಪಾಲು ಶೇ 8ರಷ್ಟು ಮಾತ್ರ. ಸಂವಿಧಾನದಲ್ಲಿ ಸಹಕಾರ ಕ್ಷೇತ್ರ ರಾಜ್ಯಪಟ್ಟಿಯಲ್ಲಿರುವ ವಿಷಯ. ಇದರಲ್ಲಿದ್ದ ಗೊಂದಲ ನಿವಾರಿಸಲು ಯುಪಿಎ–2 ಅವಧಿಯಲ್ಲಿ ಸಹಕಾರ ಕ್ಷೇತ್ರದ ತಿದ್ದುಪಡಿ ಕಾಯ್ದೆ ಮಾಡಲಾಗಿತ್ತು.

ಸಹಕಾರಕ್ಕೆ ಸಂಬಂಧಿಸಿ ರಾಜ್ಯಗಳು ಯಾವ ಕಾಯ್ದೆ ಮಾಡಬೇಕು ಎಂಬುದು ತಿದ್ದುಪಡಿ ಕಾಯ್ದೆಯಲ್ಲಿದೆ. ತಿದ್ದುಪಡಿ ಕಾಯ್ದೆಯಿಂದ ಕೇಂದ್ರದ ಸಹಕಾರ ವ್ಯಾಪ್ತಿ ಹೆಚ್ಚಳವಾಗುವ ಸಾಧ್ಯತೆ ಇದೆ.

ಸದ್ಯಕ್ಕೆ ದೇಶದಲ್ಲಿ ರಾಷ್ಟ್ರೀಯ ಮಟ್ಟದ 24 ಸಹಕಾರ ಸಂಘಗಳಿವೆ. ಒಂದು ರಾಜ್ಯಕ್ಕಿಂತ ಹೆಚ್ಚು ರಾಜ್ಯಗಳ ವಿಸ್ತಾರ ಹೊಂದಿರುವ ಸಹಕಾರಿ ಮಂಡಳಗಳನ್ನು ನಿಯಂತ್ರಿಸಲು ಹೊಸ ಕಾಯ್ದೆ ಹಾಗೂ ಸಚಿವಾಲಯದಿಂದ ಸಾಧ್ಯವಾಗಲಿದೆ. ಕ್ರಿಪ್ಕೊ, ಕ್ಯಾಸ್ಕೊನಂತಹ ಮಹಾಮಂಡಳ ನಿಯಂತ್ರಣ ಇದುವರೆಗೂ ಸಾಧ್ಯವಾಗಿರಲಿಲ್ಲ.

ಕೃಷಿಗೆ ಸಂಬಂಧಿಸಿ ಕೇಂದ್ರವು ನೀಡುತ್ತಿದ್ದ ಸಹಾಯಧನವನ್ನು ಇನ್ನಷ್ಟು ಹೆಚ್ಚಿಗೆ ಪಡೆಯುವುದಕ್ಕೆ ನೂತನ ಸಚಿವಾಲಯದಿಂದ ರಾಜ್ಯಗಳಿಗೆ ಅನುಕೂಲವಾಗಲಿದೆ. ಕೃಷಿ ಕ್ಷೇತ್ರದಲ್ಲಿ ಮೂಲಸೌಕರ್ಯ ವೃದ್ಧಿಗೆ ಪೂರಕವಾಗಿ ಸಹಕಾರ ಸಚಿವಾಲಯ ಕೆಲಸ ಮಾಡಲಿದೆ. ಪ್ರತ್ಯೇಕ ಸಚಿವಾಲಯಕ್ಕೆ ತನ್ನದೇ ಆದ ಬಜೆಟ್ ಸಿಗುವುದರಿಂದ ಸಹಕಾರಿಗಳಿಗೆ ಅನುಕೂಲವಾಗುತ್ತದೆ.

ಕೇಂದ್ರ ಸರ್ಕಾರ ಈಚೆಗೆ ಜಾರಿಮಾಡಿದ ಹೊಸ ಕೃಷಿ ಕಾಯ್ದೆಗಳಲ್ಲಿ ಗುತ್ತಿಗೆ ಕೃಷಿಗೆ ಅವಕಾಶ ಮಾಡಲಾಗಿದೆ. ಈಗ ಸಹಕಾರ ಸಚಿವಾಲಯ ಬರುವುದರಿಂದ ಗುತ್ತಿಗೆ ಕೃಷಿಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

ಮನೋಹರ ಮಸ್ಕಿ
ಮಲೆನಾಡು ನಟ್ಸ್ ಅಂಡ್ ಸ್ಪೈಸ್ ಪ್ರೊಡ್ಯುಸರ್ ಕಂಪನಿ ಅಧ್ಯಕ್ಷ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ರೈತರ ಹೊಲಗಳಲ್ಲಿರುವ ಕೊಳವೆ ಬಾವಿಗಳಿಗೆ ಸೋಲಾರ್ ಪಂಪ್ ಅಳವಡಿಸಲು ಪ್ರಧಾನಮಂತ್ರಿ ಕುಸುಮ್ ಯೋಜನೆ ಅಡಿ ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವಾಲಯವು ರೈತರಿಂದ ₹ 5,600 ಶುಲ್ಕ ಸಂಗ್ರಹಿಸಲು ಅನುಮತಿ ನೀಡಿದೆ. ಯೋಜನೆಯ ಫಲಾನುಭವಿಗಳು, ಪಂಪ್ ಅಳವಡಿಕೆಗೂ ಮುನ್ನ ಈ ಮೊತ್ತವನ್ನು ಪಾವತಿ ಮಾಡಬೇಕು. ಪಂಪ್ ಅಳವಡಿಕೆ ನಂತರ ಈ ಮೊತ್ತವನ್ನು ವಾಪಸ್ ಮಾಡಲಾಗುತ್ತದೆ. ಈ ಕೆಳಗೆ ನೀಡಲಾಗಿರುವ ಬ್ಯಾಂಕ್ ಖಾತೆಗೆ ಹಣ ಹಾಕಿ' ಎಂಬ ವಿವರ ಇರುವ ಸಂದೇಶಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಇದೇ ವಿವರ ಇರುವ ಆದೇಶ ಪತ್ರವೊಂದರ ಚಿತ್ರ ಸಹ ವೈರಲ್ ಆಗಿವೆ.

ಇದು ಸುಳ್ಳು ಸುದ್ದಿ ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಪ್ರಧಾನಮಂತ್ರಿ ಕುಸುಮ್ ಯೋಜನೆ ಅಡಿ ರೈತರು ತಮ್ಮ ಹೊಲಗಳಲ್ಲಿ ಸೌರ ಪಂಪ್ ಅಳವಡಿಸಿಕೊಳ್ಳಲು ಸರ್ಕಾರಕ್ಕೆ ₹5,600 ಶುಲ್ಕ ಪಾವತಿ ಮಾಡಬೇಕಿಲ್ಲ. ಈ ಸಂದೇಶ ಮತ್ತು ಪೋಸ್ಟರ್‌ಗಳಲ್ಲಿ ಹಂಚಿಕೊಳ್ಳಲಾಗಿರುವ ಆದೇಶ ಪತ್ರವು ನಕಲಿ. ನವೀಕರಿಸಬಹುದಾದ ಇಂಧನ ಸಚಿವಾಲಯವು ಇಂತಹ ಯಾವುದೇ ಆದೇಶ ಪತ್ರವನ್ನು ಹೊರಡಿಸಿಲ್ಲ. ಈ ಆದೇಶ ಪತ್ರದಲ್ಲಿ ಸೂಚಿಸಿರುವಂತೆ ಯಾವುದೇ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಬೇಡಿ. ಇದೊಂದು ಮೋಸದ ಜಾಲ. ಈ ಪತ್ರವನ್ನು ತೋರಿಸಿ ಯಾರಾದರೂ ಹಣ ಕೇಳಿದರೆ, ತಕ್ಷಣವೇ ಪೊಲೀಸರಿಗೆ ದೂರು ನೀಡಿ. ಈಗಾಗಲೇ ಹಣ ಪಾವತಿ ಮಾಡಿರುವವರು ಸಹ, ಪತ್ರದಲ್ಲಿ ನಮೂದಿಸಿರುವ ಬ್ಯಾಂಕ್ ಖಾತೆದಾರರ ವಿರುದ್ಧ ದೂರು ದಾಖಲಿಸಿ, ಕ್ರಮ ತೆಗೆದುಕೊಳ್ಳಿ' ಎಂದು ಪಿಐಬಿ ಹೇಳಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಸೌಂದರ್ಯದ ಅಪೇಕ್ಷೆ

ಸೊಗಸು ಬೇಡದ ನರಪ್ರಾಣಿಯೆಲ್ಲಿಹುದಯ್ಯ?|
ಮಗುವೆ, ಮುದುಕನೆ, ಪುರಾಣಿಕ ಪುರೋಹಿತರೇ?||
ಜಗದ ಕಣ್ಣಿಣಿಕದೆಡೆ ಮುಕುರದೆದುರೊಳು ನಿಂತು |
ಮೊಗವ ತಿದ್ದುವರೆಲ್ಲ – ಮಂಕುತಿಮ್ಮ || 442 ||

ಪದ-ಅರ್ಥ: ನರಪ್ರಾಣಿಯೆಲ್ಲಿಹುದಯ್ಯ = ನರಪ್ರಾಣಿ + ಎಲ್ಲಿ + ಇಹುದಯ್ಯ, ಕಣ್ಣಿಣಿಕದೆಡೆ = - ಕಣ್ಣು + ಇಣಿಕದ(ಕಾಣದ) + ಎಡೆ, ಮುಕುರ = - ಕನ್ನಡಿ.

ವಾಚ್ಯಾರ್ಥ: ಸೊಗಸು, ಸುಂದರತೆ ಬೇಡವೆನ್ನುವ ಮನುಷ್ಯ ಎಲ್ಲಿಯಾದರೂ ಇದ್ದಾನೆಯೆ? ಮಗು, ಮುದುಕ, ಪುರಾಣಿಕ, ಪುರೋಹಿತ ಎಲ್ಲರಿಗೂ ಸೊಗಸು ಬೇಕು. ಜಗತ್ತಿನ ಕಣ್ಣು ತಮ್ಮನ್ನು ಗಮನಿಸದಿದ್ದಾಗ ಎಲ್ಲರೂ ಕನ್ನಡಿಯ ಮುಂದೆ ನಿಂತು ಮುಖವನ್ನು ತಿದ್ದುವವರೇ.

ವಿವರಣೆ: ಆಕೆಗೆ ಎಂಭತ್ತೈದು ವರ್ಷ ವಯಸ್ಸು. ದೇವರನ್ನು ಘನವಾಗಿ ಪ್ರಾರ್ಥಿಸಿದಳು. ದೇವ ಅವಳಿಗೊಲಿದ. ಆಕೆ ಕೇಳಿದಳು, 'ಭಗವಂತ, ನನಗೆ ಇನ್ನೂ ಎಷ್ಟು ವರ್ಷ ಆಯುಸ್ಸು?' ಆತ, 'ನಿನಗೆ ಇನ್ನೂ ಇಪ್ಪತ್ತು ವರ್ಷ ಬಾಕಿ ಇದೆ' ಎಂದ. ಆಕೆಗೆ ಸಂಭ್ರಮ. ತಕ್ಷಣ ಆಕೆ ಒಂದು ಪ್ರಖ್ಯಾತ ಆಸ್ಪತ್ರೆಗೆ ಹೋದಳು. ವೈದ್ಯರನ್ನು ಕರೆದು ಹೇಳಿದಳು. 'ನಾನು ಮತ್ತೆ ಇಪ್ಪತ್ತು ವರ್ಷದ ತರುಣಿಯಂತಾಗಬೇಕು. ಏನೇನು ಶಸ್ತ್ರಚಿಕಿತ್ಸೆ ಮಾಡಬೇಕೋ ಮಾಡಿ. ಒಂದು ವರ್ಷದಲ್ಲಿ ನಾನು ಪರಮಸುಂದರಿಯಾಗಬೇಕು. ಎಷ್ಟು ಹಣ ಖರ್ಚಾದರೂ ಚಿಂತೆಯಿಲ್ಲ'. ವೈದ್ಯರು ಒಂದರ ಮೇಲೊಂದು ಶಸ್ತ್ರಚಿಕಿತ್ಸೆ ಮಾಡಿದರು, ಕೆಲವು ಅಂಗಾಂಗಗಳನ್ನು ಬದಲಿಸಿದರು, ಕೆಲವನ್ನು ಹುರಿ ಮಾಡಿದರು, ಬಣ್ಣ ಬದಲಾಯಿಸಿದರು. ಪೂರ್ತಿ ಚಿಕಿತ್ಸೆ ಮುಗಿಯುವವರೆಗೆ ಆಕೆ ಕನ್ನಡಿಯನ್ನು ನೋಡಿಕೊಳ್ಳಲಿಲ್ಲ. ಒಂದು ವರ್ಷದ ಚಿಕಿತ್ಸೆ ಮುಗಿಸಿ ಕನ್ನಡಿಯ ಮುಂದೆ ನಿಲ್ಲಿಸಿದಾಗ ಆಕೆ 'ಯಾರಿವಳು ಸುಂದರಿ?' ಎಂದು ಉದ್ಗಾರ ತೆಗೆದಳು. ಆಸ್ಪತ್ರೆಯಿಂದ ಹೊರಗೆ ಬಂದಳು. ರಸ್ತೆಯ ಆ ಬದಿಗೆ ಇದ್ದ ಕಾರಿನೆಡೆಗೆ ಛಂಗನೇ ಜಿಂಕೆಯಂತೆ ಓಡಿದಳು. ಅದೇ ಸಮಯಕ್ಕೆ ರಸ್ತೆಯಲ್ಲಿ ವೇಗವಾಗಿ ಬಂದ ವಾಹನವೊಂದು ಆಕೆಗೆ ಬಡಿದು ಕ್ಷಣದಲ್ಲೇ ತೀರಿ ಹೋದಳು. ಮೇಲೆ ಹೋಗಿ ಭಗವಂತನನ್ನು ತರಾಟೆಗೆ ತೆಗೆದುಕೊಂಡಳು, 'ನೀನು ನನಗೆ ಇಪ್ಪತ್ತು ವರ್ಷ ಅವಧಿಯನ್ನು ಕೊಟ್ಟಿದ್ದೆ. ಅಂತೆಯೇ ನಾನು ಕಷ್ಟಪಟ್ಟು ಪುನಃ ತರುಣಿಯಾದೆ. ನೀನೇಕೆ ಹೀಗೆ ಮೋಸ ಮಾಡಿದೆ?'. ಆತ ಕ್ಷಣ ಬಿಟ್ಟು ಹೇಳಿದ, 'ಅದು ನೀನೆಂದು ನನಗೆ ಗುರುತೇ ಸಿಗಲಿಲ್ಲ'.

ಇದೊಂದು ತಮಾಷೆಯ ಕಥೆಯಂತೆ ಕಂಡರೂ ಅಲ್ಲೊಂದು ಪುಟ್ಟ ಸಂದೇಶವಿದೆ. ಆ ವಯಸ್ಸಿನಲ್ಲೂ ಆಕೆಗೆ ನವತರುಣಿಯಾಗಿ, ಸುಂದರಳಾಗಿ ಕಾಣಬೇಕೆಂಬ ಬಲವಾದ ಆಸೆ. ಇದು ಆಕೆಗೆ ಮಾತ್ರವಲ್ಲ ಬಹುತೇಕ ಎಲ್ಲ ಜನರಲ್ಲೂ ಇರುವ ಬಯಕೆ. ಆದಷ್ಟು ಸುಂದರರಾಗಿ ಕಾಣಬೇಕೆಂಬ, ವಯಸ್ಸನ್ನು ಮರೆಸಿ ಮತ್ತೆ ಚಿಕ್ಕವರಂತೆ ತೋರಬೇಕೆಂಬ ಆಸೆಗೆ ಬಲವತ್ತರವಾಗಿ ಬಹುದೊಡ್ಡ, ಸಾವಿರಾರು ಕೋಟಿ ರೂಪಾಯಿ ಬಂಡವಾಳದ, ಸೌಂದರ್ಯವರ್ಧಕಗಳ ಉದ್ದಿಮೆಗಳೇ ನಿಂತಿವೆ. ತರತರಹದ ಆಹಾರಗಳು, ವ್ಯಾಯಾಮದ ಉಪಕರಣಗಳು, ಬಣ್ಣಗಳು, ಮಾತ್ರೆಗಳು, ಬಟ್ಟೆಬರೆಗಳು, ದ್ರವಲೇಪಗಳು ಪೈಪೋಟಿಯಲ್ಲಿ ಮನುಷ್ಯರನ್ನು ಸುಂದರವಾಗಿ ಕಾಣಿಸುವಲ್ಲಿ ತೊಡಗಿವೆ. ಇದನ್ನು ಈ ಕಗ್ಗ ಹೇಳುತ್ತದೆ. ಸೊಗಸು ಬೇಡ ಎನ್ನುವವರು ಯಾರು? ಎಲ್ಲ ವಯಸ್ಸಿನವರೂ ಈ ಅಪೇಕ್ಷೆಯನ್ನು ಪಟ್ಟವರೇ. ಯಾರೂ ತಮ್ಮನ್ನು ಗಮನಿಸದಿದ್ದಾಗ ಕನ್ನಡಿಯ ಮುಂದೆ ನಿಂತು, ಮುಖ ತೀಡಿಕೊಂಡು ಸಂತೋಷಪಡುವವರೆ. ❖

ದಿನ ಭವಿಷ್ಯ

ಸೋಮವಾರ ಜುಲೈ 26, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪುಷ್ಯ ತೃತೀಯ ಗಂ. 55-42 (ರಾ. 4-28) ಸೋಮವಾರ ನಿತ್ಯ ನಕ್ಷತ್ರ ಧನಿಷ್ಠ ಗಂ. 15-55 (ಹ. 12-33) ಸೌಭಾಗ್ಯ ನಾಮ ಯೋಗ ಗಂ. 48-47 ವಣಿಜ ಕರಣ ಗಂ. 26-38 ವಿಷ ಗಂ. 34-0 ಅಮೃತ ಗಂ. 58-8 ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-07 ಸೂರ್ಯಾಸ್ತ: 6-45 ಅದೃಷ್ಟ ಸಂಖ್ಯೆ 3, 4

ಮೇಷ: ಅಧಿಕಾರ ಅಥವಾ ಉದ್ಯೋಗದಲ್ಲಿ ಬದಲಾವಣೆಯನ್ನು ನಿರೀಕ್ಷಿಸಬಹುದು. ಎಲ್ಲ ಕಡೆಯಿಂದಲೂ ಗೌರವಾದರಗಳನ್ನು ಪಡೆದುಕೊಳ್ಳಲಿದ್ದೀರಿ. ವಿದೇಶದಲ್ಲಿರುವ ಬಂಧುಗಳಿಂದ ಸಹಾಯ ದೊರಕುವ ಸಾಧ್ಯತೆ.

ವೃಷಭ: ಅಧಿಕಾರಿಗಳ ಅವಕೃಪೆಗೆ ಪಾತ್ರರಾಗುವ ಸಾಧ್ಯತೆ. ಅತಿಯಾದ ಕೋಪವನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳುವುದು ಉತ್ತಮ. ಕಷ್ಟವಾದರೂ ವ್ಯವಹಾರದಲ್ಲಿ ಉತ್ತಮ ಸಾಧನೆ ಮಾಡಲಿದ್ದೀರಿ.

ಮಿಥುನ: ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು. ವ್ಯವಹಾರದಲ್ಲಿ ಉತ್ತಮ ಪ್ರತಿಫಲ ನಿರೀಕ್ಷೆ. ಆದಾಯದಲ್ಲಿ ಹೆಚ್ಚಳ. ಆರೋಗ್ಯದಲ್ಲಿ ಉತ್ತಮ. ಸಂಗಾತಿಯೊಂದಿಗೆ ಸ್ನೇಹಪರ ಮಾತುಕತೆ. ದಿನವಿಡೀ ಸಂತಸ.

ಕರ್ಕಾಟಕ: ವ್ಯವಹಾರ ಕ್ಷೇತ್ರದಲ್ಲಿ ಗಳಿಕೆ ಅಧಿಕಗೊಂಡು ಉತ್ತಮ ಆದಾಯ. ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ಅಗತ್ಯ. ಮಕ್ಕಳ ವಿವಾಹ ಸಂಬಂಧಿಸಿದ ಪ್ರಯತ್ನಗಳು ಫಲಕಾರಿಯಾಗಿ ಪರಿಣಮಿಸುವವು.

ಸಿಂಹ: ವಾಹನಗಳನ್ನು ಖರೀದಿಸುವ ಸಾಧ್ಯತೆ. ಉತ್ತಮ ದಾಂಪತ್ಯ ಜೀವನ ನಿಮ್ಮದಾಗಲಿದೆ. ರೈತಾಪಿ ವರ್ಗದವರಿಗೆ ಹೈನುಗಾರಿಕೆ ನಡೆಸುವವರಿಗೆ ಉತ್ತಮ ದಿನ. ಉನ್ನತಾಧಿಕಾರಿಗಳಿಂದ ಪ್ರಶಂಸೆಗೆ ಪಾತ್ರರಾಗುವಿರಿ.

ಕನ್ಯಾ: ಅಪರೂಪದ ಬಂಧುಗಳ ಭೇಟಿ ಸಾಧ್ಯತೆ. ಅಧಿಕಾರಿಗಳಿಂದ ಗೌರವ ಪ್ರಶಂಸೆಗಳನ್ನು ಗಳಿಸಿಕೊಳ್ಳಲಿದ್ದೀರಿ. ಆಕಾಂಕ್ಷಿಗಳಿಗೆ ಸಂತಾನ ಪ್ರಾಪ್ತಿಯಾಗುವ ಸಾಧ್ಯತೆ. ಪಂಡಿತರಿಗೆ ಉತ್ತಮ ಮನ್ನಣೆ ದೊರಕುವ ಸಾಧ್ಯತೆ.

ತುಲಾ: ಜ್ಞಾನಾರ್ಜನೆಗಾಗಿ ಪರಸ್ಥಳದಲ್ಲಿ ವಾಸಿಸಬೇಕಾದ ಅಥವಾ ದೂರ ಪ್ರಯಾಣ ಕೈಗೊಳ್ಳಬೇಕಾದ ಪ್ರಸಂಗ ಎದುರಾದೀತು. ಜ್ಞಾನದೊಂದಿಗೆ ಧನಾರ್ಜನೆಯ ಕೆಲಸವೂ ನಡೆಯಲಿದೆ. ಸಜ್ಜನರ ಸಾಂಗತ್ಯದಿಂದಾಗಿ ನೆಮ್ಮದಿ.

ವೃಶ್ಚಿಕ: ಆಸೆ ಆಕಾಂಕ್ಷೆಗಳು ಸುಗಮವಾಗಿ ನೆರವೇರುವುದರಿಂದಾಗಿ ಮಾನಸಿಕ ನೆಮ್ಮದಿ. ಮಕ್ಕಳ ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು. ವಸ್ತ್ರಾಭರಣ ಖರೀದಿ ಸಾಧ್ಯತೆ ಕಂಡುಬರುವುದು.

ಧನು: ಉನ್ನತ ಅಧಿಕಾರಿಗಳ ನೆರವಿನಿಂದಾಗಿ ಉದ್ಯೋಗದಲ್ಲಿ ಸ್ಥಿರತೆ. ಪ್ರಯಾಣ ಮಾಡಬೇಕಾದ ಸಂಭವ ಕಂಡುಬರುವುದು. ಆದಾಯದಲ್ಲಿ ಹೆಚ್ಚಳ. ಹೊಸ ಯೋಜನೆಯೊಂದನ್ನು ಸ್ಥಾಪಿಸುವ ಸಲುವಾಗಿ ಸಮಾಲೋಚನೆ.

ಮಕರ: ಉತ್ತಮ ಆರೋಗ್ಯವನ್ನು ಹೊಂದುವಿರಿ. ಉತ್ತಮ ದಾಂಪತ್ಯ ಜೀವನ ನಿಮ್ಮದಾಗಲಿದೆ. ವ್ಯವಹಾರದಲ್ಲಿ ಹೆಚ್ಚಳ ಸಾಧ್ಯತೆ. ಆದಾಯದಲ್ಲಿ ಹೆಚ್ಚಳದಿಂದಾಗಿ ಆರ್ಥಿಕ ಅಭಿವೃದ್ಧಿ. ಹಿರಿಯರ ಆರೋಗ್ಯದ ನಿಮಿತ್ತ ಖರ್ಚು.

ಕುಂಭ: ಶ್ರಮಕ್ಕೆ ತಕ್ಕ ಪ್ರತಿಫಲ ನಿಮ್ಮದಾಗಲಿದೆ. ಅತಿಯಾದ ಪ್ರಯಾಣದ ಆಲಸ್ಯ ಉಂಟಾಗುವ ಸಾಧ್ಯತೆ. ಸ್ತ್ರೀಯರಿಂದ ಅವಮಾನಕರ ಸನ್ನಿವೇಶ ಎದುರಾದೀತು. ಮಾನಸಿಕ ನೆಮ್ಮದಿಯನ್ನು ಕೆಡಿಸಿಕೊಳ್ಳದಿರಿ.

ಮೀನ: ವಿವಾಹಿತರಿಗೆ ಪ್ರಾಪಂಚಿಕ ವಿಷಯಗಳನ್ನು ಉತ್ತಮವಾಗಿ ಅನುಭವಿಸುವ ಯೋಗ. ಬಂಧುಗಳೊಂದಿಗೆ ಮೃಷ್ಟಾನ್ನ ಭೋಜನ ಸವಿಯುವ ಸಾಧ್ಯತೆ. ಪ್ರಯಾಣ ಕಾಲದಲ್ಲಿ ಚೋರಭಯವನ್ನು ಎದುರಿಸಬೇಕಾದೀತು.

ನಿಮ್ಮ ಜನ್ಮದಿನ 26-ಜುಲೈ: ಇಂದು ಅತ್ಯಂತ ಶುಭದಾಯಕ. ನೀವು ಎಲ್ಲ ವಿಧದ ಅಂದವನ್ನು ಇಷ್ಟಪಡುವಿರಿ. ಎಲ್ಲ ರೀತಿಯ ಸಾಧನೆಗಳನ್ನು ಪ್ರಶಂಸಿಸುವಿರಿ. ಹೊಸ ಹೊಸ ಸಂಶೋಧನಾ ಕ್ಷೇತ್ರದಲ್ಲಿ ಯಶಸ್ಸು. ದೇಶದ ವಿವಿಧ ಭಾಗಗಳಲ್ಲಿ ಕಾರ್ಯ ನಿರ್ವಹಿಸುವ ಸಾಧ್ಯತೆ. ಬೇರೆಯವರ ಅಸಾಮರ್ಥ್ಯವನ್ನು ಕೀಳಾಗಿ ಕಾಣುವುದರಿಂದ ಅವಮಾನ ಪಡಿಸುವಿರಿ.

ಪದಬಂಧ 4669 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈ ಪರಿ ಬಂದಿರುವ ದುಃಖ (4)
3.ಈ ಭಟ್ಟ ಬಲು ಅವಿವೇಕಿಯೇ ಬಿಡಿ! (4)
4.ಇದು ಅಂತರಂಗ ಸ್ಪರ್ಶಿಯಾದುದು (3)
5.ಅವನಲ್ಲಿ ಕಾಣುತ್ತಿರುವ ಕೆಟ್ಟಗುಣ (4)
7.ಬರ ಬಂದಾಗ ನೀಡಿರುವ ಪಾನಕ (4)
9.ಓಟನ್ನು ನೀಡುವುದು (4)
11.ಗರತಿ ಸೇರಿಕೊಂಡಿರುವ ಇಯತ್ತೆ (4)
12.ಬಲು ವಾಚಾಳಿಯಾಗಿರುವ ವರ (3)
14.ನಾಲ್ಕು ತಿಂಗಳು ನಡೆಸುವ ವ್ರತ (4)
15.ಹೊಸ ದಂಪತಿಗಳು ಕೈಗೊಳ್ಳುವ ವಿಹಾರಯಾತ್ರೆ (4)

ಮೇಲಿಂದ ಕೆಳಕ್ಕೆ
1.ಛಂದೋಬದ್ಧ ಪದರಚನೆ (2)
2.ಪಣವಿಟ್ಟು ತೋರಿಸಿದ ಅಳತೆ (4)
3.ಮೊದಲಿನಿಂದ ಕೊನೆಯವರೆಗೂ ಇರುವಂಥದ್ದು (4)
6.ವರನ ತಗಾದೆಯೇ ಇದು? (3)
8.ಬಹಳ ಆತ್ಮೀಯ ನೆಂಟರ ಸಮೂಹ (3)
10.ಒಂಬತ್ತು ತಿಂಗಳು (4)
11.ಈ ತರಹ ತೋರಿರುವ ಬೇಧಭಾವ (4)
13.ತಗ್ಗು ದನಿಯಿದು (2)



4668ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸುರಂಗಮಾರ್ಗ 3.ಕಾಮನೆ 5.ವ್ಯವಕಲನ 7.ಬಿದಿಗೆ 8.ಒಣಹರಟೆ 10.ಬಯಕೆ 11.ಹೊಸದಂಪತಿ 14.ದಿಕ್ಸೂಚಿ 15.ಸುಳಿಗೆಗಾರ
ಮೇಲಿಂದ ಕೆಳಕ್ಕೆ: 1.ಸುಶ್ರಾವ್ಯ 2.ಗಣಕ 4.ನೆರಿಗೆ 6.ಲಕ್ಷಣ 7.ಬಿರಟೆ 8.ಒನಕೆ 9.ರಕ್ಷಸ 10.ಬಸದಿ 12.ದಂಡಿಗೆ 13.ತಿಮಿರ

ಸುಡೊಕು 5055

3					8	2		6
			4	9				3
		8			2		5	
	3			4				1
		1	7		5	6	2	
	6			1				
6			5	2		1		7
	1				4		6	
9		5		7		3		8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5054 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

ಸಂಸತ್ತಿನಲ್ಲಿ ಉತ್ತರ ನೀಡಲು ಕಾಂಗ್ರೆಸ್ ನಾಯಕ ಚಿದಂಬರಂ ಒತ್ತಾಯ • ಜೆಪಿಸಿ ತನಿಖೆಗೆ ವಿಪಕ್ಷಗಳ ಆಗ್ರಹ

ಪೆಗಾಸಸ್: ಪ್ರಧಾನಿಯೇ ಸ್ಪಷ್ಟನೆ ನೀಡಲಿ

ನವದೆಹಲಿ (ಪಿಟಿಐ): 'ಪೆಗಾಸಸ್ ಕುತಂತ್ರಾಂಶ ಬಳಸಿಕೊಂಡು ಗೂಢಚರ್ಯೆ ನಡೆಸಲಾಗಿದೆಯೇ, ಇಲ್ಲವೇ ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನಲ್ಲಿ ಸ್ಪಷ್ಟಪಡಿಸಬೇಕು' ಎಂದು ಕಾಂಗ್ರೆಸ್ ಹಿರಿಯ ಮುಖಂಡ ಮತ್ತು ರಾಜ್ಯಸಭಾ ಸದಸ್ಯ ಪಿ.ಚಿದಂಬರಂ ಒತ್ತಾಯಿಸಿದ್ದಾರೆ.

ಪಿಟಿಐಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಅವರು ಈ ಆಗ್ರಹವನ್ನು ಮುಂದಿಟ್ಟಿದ್ದಾರೆ. 'ಮೋದಿ ಅವರು ಈ ಬಗ್ಗೆ ಸ್ಪಷ್ಟನೆ ನೀಡಬೇಕು ಎಂದು ವಿರೋಧ ಪಕ್ಷಗಳು ಒತ್ತಾಯಿಸುತ್ತಲೇ ಇವೆ. ಮೋದಿ ಅವರು ಸಂಸತ್ ಅಧಿವೇಶನದ ಮೊದಲ ದಿನವೇ ಈ ಬಗ್ಗೆ ಹೇಳಿಕೆ ನೀಡಬಹುದಿತ್ತು. ದೇಶದಲ್ಲಿ ಕೆಲವು ಸಂಸ್ಥೆಗಳು ಮಾತ್ರವೇ ಹೀಗೆ ಗೂಢಚರ್ಯೆ ನಡೆಸಲು ಶಕ್ತವಾಗಿವೆ. ಆ ಎಲ್ಲಾ ಸಂಸ್ಥೆಗಳು ಪ್ರಧಾನಿ ಅಧೀನದಲ್ಲಿಯೇ ಬರುತ್ತವೆ. ಹೀಗಾಗಿ ಪ್ರಧಾನಿ ಮಾತ್ರವೇ ಈ ಬಗ್ಗೆ ಸ್ಪಷ್ಟನೆ ನೀಡಲು ಸಾಧ್ಯ' ಎಂದು ಅವರು ಪ್ರತಿಪಾದಿಸಿದ್ದಾರೆ.

'ತಮ್ಮ ಸಚಿವಾಲಯ ಮತ್ತು ಇಲಾಖೆಯಲ್ಲಿ ಏನು ನಡೆಯುತ್ತಿದೆ ಎಂದು ಎಲ್ಲಾ ಸಚಿವರಿಗೆ ಗೊತ್ತಿರುತ್ತದೆ. ಆದರೆ ಎಲ್ಲಾ ಸಚಿವಾಲಯ ಮತ್ತು ಇಲಾಖೆಗಳಲ್ಲಿ ಏನು ನಡೆಯುತ್ತಿದೆ ಎಂಬುದು ಪ್ರಧಾನಿ ಒಬ್ಬರಿಗೆ ಮಾತ್ರವೇ ಗೊತ್ತಿರುತ್ತದೆ. ಹೀಗಾಗಿಯೇ ಪ್ರಧಾನಿ ಮೋದಿ ಅವರು ಮುಂದೆ ಬಂದು, ಪೆಗಾಸಸ್ ಕುತಂತ್ರಾಂಶ ಬಳಸಿ ಗೂಢಚರ್ಯೆ ನಡೆದಿದೆಯೋ ಅಥವಾ ಇಲ್ಲವೋ ಎಂಬುದನ್ನು ಸಂಸತ್ತಿನಲ್ಲಿ ಸ್ಪಷ್ಟಪಡಿಸಲಿ' ಎಂದು ಅವರು ಒತ್ತಾಯಿಸಿದ್ದಾರೆ.

ಜೆಪಿಸಿ ಮೇಲು: 'ಪೆಗಾಸಸ್ ಗೂಢಚರ್ಯೆ ಕುರಿತು ಮಾಹಿತಿ ತಂತ್ರಜ್ಞಾನ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿ ತನಿಖೆ ನಡೆಸಿದರೆ ಸಾಕು ಎಂದು ಹೇಳಲಾಗುತ್ತಿದೆ. ಆದರೆ ಇದಕ್ಕಿಂತಲೂ ಸಂಸತ್ತಿನ ಜಂಟಿ ಸದನ ಸಮಿತಿ (ಜೆಪಿಸಿ) ತನಿಖೆ ನಡೆಸಿದರೆ ಅದು ಹೆಚ್ಚು ಸೂಕ್ತವಾಗಿರುತ್ತದೆ' ಎಂದು ಚಿದಂಬರಂ ಪ್ರತಿಪಾದಿಸಿದ್ದಾರೆ.

'ಪೆಗಾಸಸ್ ಗೂಢಚರ್ಯೆ ಕುರಿತು ತನಿಖೆ ನಡೆಸಲು ಜೆಪಿಸಿ ಅವಶ್ಯಕತೆ ಇಲ್ಲ ಎಂದು ಮಾಹಿತಿ ತಂತ್ರಜ್ಞಾನ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷ ಮತ್ತು ಕಾಂಗ್ರೆಸ್ ಸಂಸದ ಶಶಿ ತರೂರ್ ಹೇಳಿದ್ದಾರೆ. ಈ ಸಮಿತಿಯೇ ತನಿಖೆ ನಡೆಸಲು ಮುಂದೆ ಬಂದಿದೆ. ಅದನ್ನು ಸ್ವಾಗತಿಸೋಣ. ಆದರೆ, ಈ ಸಮಿತಿಗೆ ಕೆಲವು ಮಿತಿಗಳಿವೆ. ಹೊರಗಿನ ಸಾಕ್ಷ್ಯಗಳನ್ನು ಕಲೆಹಾಕಲು ಈ ಸಮಿತಿಗೆ ಅಧಿಕಾರವಿಲ್ಲ. ಬಿಜೆಪಿ ಸದಸ್ಯರೇ ಹೆಚ್ಚಿನ ಸಂಖ್ಯೆಯಲ್ಲಿರುವ ಈ ಸಮಿತಿಯು ತನಿಖೆಗೆ ಅವಕಾಶ ಮಾಡಿಕೊಡುತ್ತದೆಯೇ' ಎಂದು ಚಿದಂಬರಂ ಪ್ರಶ್ನಿಸಿದ್ದಾರೆ.

'ಜಂಟಿ ಸದನ ಸಮಿತಿ ತನಿಖೆ ನಡೆಸಿದರೆ, ಸಂಸತ್ತಿನ ಹೊರಗಿನ ವ್ಯಕ್ತಿಗಳನ್ನು ವಿಚಾರಣೆಗೆ ಕರೆಸಲು ಅವಕಾಶವಿರುತ್ತದೆ. ಬೇರೆ ಬೇರೆ ಮೂಲಗಳಿಂದ ಸಾಕ್ಷ್ಯ ಸಂಗ್ರಹಿಸಲು ಅವಕಾಶವಿರುತ್ತದೆ. ಮರುವಿಚಾರಣೆ ನಡೆಸಲು ಜೆಪಿಸಿಗೆ ಅಧಿಕಾರವಿದೆ' ಎಂದು ಪ್ರತಿಪಾದಿಸಿದ್ದಾರೆ. 'ಸರ್ಕಾರವು ಗೂಢಚರ್ಯೆ ವಿಚಾರವನ್ನು ಜೆಪಿಸಿ ತನಿಖೆಗೆ ಒಪ್ಪಿಸಬೇಕು. ಇಲ್ಲವೇ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ಸ್ವತಂತ್ರ ನ್ಯಾಯಾಂಗ ತನಿಖೆ ನಡೆಸಿ ಎಂದು ಸುಪ್ರೀಂ ಕೋರ್ಟ್ ಅನ್ನು ಕೇಳಿಕೊಳ್ಳಬೇಕು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಳ್ಳಿ ಎಂದು ಕೋರಿ ಈಗಾಗಲೇ ಒಂದೆರಡು ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಾಗಿದೆ. ಸುಪ್ರೀಂ ಕೋರ್ಟ್ ತನಿಖೆಗೆ ಆದೇಶಿಸುವ ಮುನ್ನವೇ ಸರ್ಕಾರವೇ ನ್ಯಾಯಾಲಯವನ್ನು ಕೋರುವುದು ಸೂಕ್ತ' ಎಂದು ಅವರು ಹೇಳಿದ್ದಾರೆ.

ಪೆಗಾಸಸ್ ಗೂಢಚರ್ಯೆಯ ನ್ಯಾಯಾಂಗ ತನಿಖೆಗೆ ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ಕೋಲ್ಕತ್ತದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಕಾನೂನುಬಾಹಿರ ಗೂಢಚರ್ಯೆಯಿಂದಲೇ 2019ರಲ್ಲಿ ಬಿಜೆಪಿ ಗೆಲುವು ಸಾಧಿಸಿತು ಎನ್ನಲು ಸಾಧ್ಯವಿಲ್ಲವಾದರೂ, ಗೆಲುವಿಗೆ ನೆರವಾಯಿತು ಎನ್ನಬಹುದು
ಪಿ.ಚಿದಂಬರಂ, ಕಾಂಗ್ರೆಸ್ ರಾಜ್ಯಸಭಾ ಸದಸ್ಯ

ಪೆಗಾಸಸ್ ಗೂಢಚರ್ಯೆ ಬಗ್ಗೆ ಸಂಸತ್ತಿನಲ್ಲಿ ಪ್ರಶ್ನೆ ಕೇಳಲಾಗಿದೆ. ಆದರೆ ಗೂಢಚರ್ಯೆ ನಡೆಸಲಾಗಿದೆ ಎಂದು ಸರ್ಕಾರ ಒಪ್ಪಿಕೊಳ್ಳುತ್ತಲೂ ಇಲ್ಲ, ನಿರಾಕರಿಸುತ್ತಲೂ ಇಲ್ಲ
ಜಾನ್ ಬ್ರಿಟಾಸ್, ಸಿಪಿಎಂ ರಾಜ್ಯಸಭಾ ಸದಸ್ಯ

ಪೆಗಾಸಸ್ ಎಂಬ ನೂತನ ತಂತ್ರಜ್ಞಾನ ನಮ್ಮನ್ನು ಜೀತಕ್ಕೆ ದೂಡಿದೆ. ಅಣು ಬಾಂಬ್‌ಗಳು ಹಿರೋಷಿಮಾ-ನಾಗಸಾಕಿಯಲ್ಲಿ ಜನರನ್ನು ಕೊಂದವು. ಪೆಗಾಸಸ್ ನಮ್ಮ ಸ್ವಾತಂತ್ರ್ಯವನ್ನು ಕೊಂದಿದೆ
ಸಂಜಯ್ ರಾವುತ್, ಶಿವಸೇನಾ ಸಂಸದ

ಪೆಗಾಸಸ್ ಗೂಢಚರ್ಯೆ ಕುರಿತು ತನಿಖೆ ನಡೆಸಲು ವಿರೋಧ ಪಕ್ಷಗಳ ಸಂಸದರು ಇರುವ ಜಂಟಿ ಸದನ ಸಮಿತಿಯನ್ನು ಸರ್ಕಾರ ಕೂಡಲೇ ರಚಿಸಬೇಕು
ಸುಖಬೀರ್ ಸಿಂಗ್ ಬಾದಲ್, ಅಕಾಲಿ ದಳ ಅಧ್ಯಕ್ಷ

'ಗೂಢಚರ್ಯೆ ನಿರಾಕರಿಸದ ಸರ್ಕಾರ'

'ಪೆಗಾಸಸ್ ಕುತಂತ್ರಾಂಶ ಮೂಲಕ ಗೂಢಚರ್ಯೆ ನಡೆದಿಲ್ಲ ಎಂದು ಸರ್ಕಾರ ಹೇಳುತ್ತಿಲ್ಲ. ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಈ ವಿಚಾರದಲ್ಲಿ ಬಹಳ ಬುದ್ಧಿವಂತಿಕೆಯಿಂದ ಉತ್ತರ ನೀಡುತ್ತಿದ್ದಾರೆ. ಇವರು ಏನು ಹೇಳುತ್ತಿದ್ದಾರೆ ಎಂಬುದಕ್ಕಿಂತ ಏನು ಹೇಳುತ್ತಿಲ್ಲ ಎಂಬುದೇ ಈಗ ಮುಖ್ಯವಾಗಿದೆ' ಎಂದು ಚಿದಂಬರಂ ಹೇಳಿದ್ದಾರೆ.

'ಅನಧಿಕೃತವಾಗಿ ಯಾವುದೇ ಗೂಢಚರ್ಯೆ ನಡೆದಿಲ್ಲ ಎಂದು ಅಶ್ವಿನಿ ವೈಷ್ಣವ್ ಅವರು ಸಂಸತ್ತಿನಲ್ಲಿ ಹೇಳಿದ್ದಾರೆ. ಅಂದರೆ ಅನಧಿಕೃತವಾಗಿ ಗೂಢಚರ್ಯೆ ನಡೆದಿದೆ ಎಂಬುದನ್ನು ಸರ್ಕಾರ ನಿರಾಕರಿಸುತ್ತಿಲ್ಲ. ಆದರೆ ಗೂಢಚರ್ಯೆ ನಡೆದೇ ಇಲ್ಲ ಎಂಬುದನ್ನು ಅವರು ನಿರಾಕರಿಸುತ್ತಿಲ್ಲ. ಅಧಿಕೃತವಾಗಿ ಗೂಢಚರ್ಯೆ ನಡೆಸಲಾಗಿದೆ ಎಂಬುದನ್ನೂ ಅವರು ನಿರಾಕರಿಸುತ್ತಿಲ್ಲ. ಅಧಿಕೃತ ಗೂಢಚರ್ಯೆ ಮತ್ತು ಅನಧಿಕೃತ ಗೂಢಚರ್ಯೆ ನಡುವಣ ವ್ಯತ್ಯಾಸ ಏನು ಎಂಬುದನ್ನು ಸಚಿವರು ಚೆನ್ನಾಗಿ ಅರಿತಿದ್ದಾರೆ' ಎಂದು ಚಿದಂಬರಂ ವ್ಯಂಗ್ಯವಾಡಿದ್ದಾರೆ.

'ಭಾರತದ ಕೆಲವು ಆಯ್ದ ಫೋನ್ ಸಂಖ್ಯೆಗಳನ್ನು ಪೆಗಾಸಸ್ ಮೂಲಕ ಗೂಢಚರ್ಯೆಗೆ ಗುರಿಪಡಿಸಲಾಗಿದೆ ಎಂಬುದನ್ನು ಗೃಹ ಸಚಿವ ಅಮಿತ್ ಶಾ ಹೇಳುತ್ತಿಲ್ಲ. ಶಾ ಏನು ಹೇಳಿದರು ಎಂಬುದಕ್ಕಿಂತ, ಅವರು ಏನು ಹೇಳಲಿಲ್ಲ ಎಂಬುದೇ ಮುಖ್ಯವಾದ ವಿಚಾರ. ಗೂಢಚರ್ಯೆ ನಡೆದಿಲ್ಲ ಎಂದು ಗೃಹ ಸಚಿವರು ಆತ್ಮವಿಶ್ವಾಸದಿಂದ ಹೇಳಲು ಸಾಧ್ಯವಾಗುತ್ತಿಲ್ಲ ಅಂದರೆ, ಈ ಗೂಢಚರ್ಯೆಗೆ ಗೃಹ ಸಚಿವರೇ ನೇರ ಹೊಣೆ' ಎಂದು ಚಿದಂಬರಂ ಆರೋಪಿಸಿದ್ದಾರೆ.

'ನೇರ ಪ್ರಶ್ನೆಗಳಿಗೆ ಉತ್ತರಿಸಿ'

'ಪೆಗಾಸಸ್ ಬಳಸಿ ಗೂಢಚರ್ಯೆ ನಡೆಸಲಾಗಿದೆಯೇ ಇಲ್ಲವೇ ಎಂದು ನಾವು ನೇರವಾಗಿ ಪ್ರಶ್ನಿಸುತ್ತಿದ್ದೇವೆ. ಸರ್ಕಾರ ಗೂಢಚರ್ಯೆ ನಡೆಸಿದೆಯೇ ಅಥವಾ ಸರ್ಕಾರದ ಸಂಸ್ಥೆಗಳು ಗೂಢಚರ್ಯೆ ನಡೆಸಿವೆಯೇ ಎಂದು ಪ್ರಶ್ನಿಸುತ್ತಿದ್ದೇವೆ. ಯಾವ ಸಂಸ್ಥೆ ಪೆಗಾಸಸ್ ಕುತಂತ್ರಾಂಶವನ್ನು ಖರೀದಿಸಿದೆ, ಹಣ ಪಾವತಿ ಮಾಡಿದ್ದು ಯಾರು, ಎಷ್ಟು ಹಣ ಪಾವತಿ ಮಾಡಲಾಗಿದೆ ಎಂದು ನಾಲ್ಕು ಪ್ರಶ್ನೆಗಳನ್ನು ನಾವು ಮುಂದೆ ಇರಿಸಿದ್ದೇವೆ. ಈ ಪ್ರಶ್ನೆಗಳಿಗೆ ಸರ್ಕಾರ ಉತ್ತರಿಸಲಿ' ಎಂದು ಚಿದಂಬರಂ ಒತ್ತಾಯಿಸಿದ್ದಾರೆ.

'ಜನರು ಸಹ ಇಷ್ಟೇ ಸರಳವಾದ ಮತ್ತು ನೇರವಾದ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಇದಕ್ಕೆ ನೇರವಾದ ಉತ್ತರವನ್ನು ನೀಡಬೇಕು. ಸಚಿವರು ಬುದ್ಧಿವಂತಿಕೆಯ ಉತ್ತರ ನೀಡುತ್ತಿದ್ದಾರೆ. ಇದಕ್ಕೆ ನೇರವಾದ ಉತ್ತರ ಅಷ್ಟೆ. ಗೊಂದಲ ಇರುವುದಿಲ್ಲ' ಎಂದು ಅವರು ಹೇಳಿದ್ದಾರೆ.

'ಸರ್ಕಾರದ ಮೌನವು ಮತ್ತಷ್ಟು ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತಿದೆ. ಸರ್ಕಾರಕ್ಕೆ ಗೊತ್ತಿಲ್ಲದಂತೆ ಬೇರೆ ದೇಶದ ಯಾವುದೋ ಸಂಸ್ಥೆ ಗೂಢಚರ್ಯೆ ನಡೆಸುತ್ತಿದೆಯೇ? ಅಥವಾ ನಮ್ಮ ಸರ್ಕಾರಕ್ಕೆ ಗೊತ್ತಿಲ್ಲದಂತೆ ಬೇರೆ ದೇಶವು ಭಾರತೀಯರ ಮೇಲೆ ಗೂಢಚರ್ಯೆ ನಡೆಸುತ್ತಿದೆಯೇ ಎಂಬ ಪ್ರಶ್ನೆಗಳು ಮೂಡುತ್ತವೆ. ಈ ಎರಡೂ ಸಂಗತಿಗಳು ನಿಜವಾಗಿದ್ದರೆ, ಸರ್ಕಾರವು ಗೂಢಚರ್ಯೆ ನಡೆಸಿದ್ದಕ್ಕಿಂತ ಅಪಾಯಕಾರಿ ಸ್ಥಿತಿಯಲ್ಲಿ ನಾವಿದ್ದೇವೆ ಎಂದು ಅರ್ಥ. ಹೀಗಾಗಿ ಸರ್ಕಾರ ಈ ಬಗ್ಗೆ ಉತ್ತರ ನೀಡಬೇಕು' ಎಂದು ಅವರು ಪ್ರತಿಪಾದಿಸಿದ್ದಾರೆ.

ಈ ಆರೋಪಗಳಿಗೆ ಆಧಾರವೇ ಇಲ್ಲ. ಜನರಿಗಾಗಿ ಚರ್ಚೆ ಮಾಡಲು ವಿರೋಧ ಪಕ್ಷಗಳಿಗೆ ಬೇರೆ ವಿಷಯಗಳೇ ಇಲ್ಲ. ಹೀಗಾಗಿ ಈ ವಿಷಯವನ್ನು ಮುಂದು ಮಾಡುತ್ತಿವೆ
ಜೆ.ಪಿ.ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಹೆಚ್ಚುವರಿ ಹಣ ಎಲ್ಲಿ ಹೋಯಿತು: ಸುಬ್ರಮಣಿಯನ್ ಸ್ವಾಮಿ ಪ್ರಶ್ನೆ

'2016-18ನೇ ಸಾಲಿನಲ್ಲಿ ರಾಷ್ಟ್ರೀಯ ಭದ್ರತಾ ಸಮಿತಿ ಕಾರ್ಯಾಲಯಕ್ಕೆ ₹ 33 ಕೋಟಿ ನೀಡಲಾಗಿತ್ತು. 2017-18ರಲ್ಲಿ ₹ 333 ಕೋಟಿ ನೀಡಲಾಗಿದೆ. ಈ 300 ಕೋಟಿ ಹೆಚ್ಚುವರಿ ಅನುದಾನ ನೀಡಿದ್ದು ಏಕೆ? ಈ ಏರಿಕೆ ಏಕೆ' ಎಂದು ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಪ್ರಶ್ನಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, 'ಈ ಕಾರ್ಯಾಲಯಕ್ಕೆ ನೀಡಲಾದ ಅನುದಾನದ ಬಗ್ಗೆ ಸಂಸತ್ತಿನ ಗ್ರಂಥಾಲಯದಲ್ಲಿ ವಿವರ ಕೇಳಿದ್ದೇನೆ. ಈ ಅನುದಾನದಲ್ಲಿ 10 ಪಟ್ಟು ಏರಿಕೆಯಾಗಿದೆ. ಈ ಹೆಚ್ಚುವರಿ ₹ 300 ಕೋಟಿ ಎಲ್ಲಿಗೆ ಹೋಯಿತು ಎಂಬುದಕ್ಕೆ ಬಿಜೆಪಿ ವಕ್ತಾರರು ಸ್ಪಷ್ಟನೆ ನೀಡಬೇಕು' ಎಂದು ಸ್ವಾಮಿ ಆಗ್ರಹಿಸಿದ್ದಾರೆ.

ಸುದ್ದಿ 2 ನಿಮಿಷ

ಪಾಕ್‌ನಿಂದ ಡ್ರೋನ್ ಮೂಲಕ ಉಗ್ರರಿಗೆ ನೆರವು: ಡಿಜಿಪಿ

ಶ್ರೀನಗರ (ಪಿಟಿಐ): ಭಾರತ–ಪಾಕಿಸ್ತಾನ ಗಡಿ ಸಮೀಪ ಈಚೆಗೆ ಉಗ್ರರಿಗೆ ಡ್ರೋನ್ ಮೂಲಕ ಸುಧಾರಿತ ಸ್ಫೋಟಕ ಸಾಧನಗಳನ್ನು (ಐಇಡಿ) ಸಾಗಿಸಲು ಪಾಕಿಸ್ತಾನ ನೆರವಾಗಿದೆ ಎಂದು ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಮಹಾನಿರ್ದೇಶಕ ದಿಲ್‌ಬಾಗ್ ಸಿಂಗ್ ಭಾನುವಾರ ಆರೋಪಿಸಿದ್ದಾರೆ.

ಜಮ್ಮು ಪ್ರದೇಶದ ಜನದಟ್ಟಣೆಯ ಮಾರುಕಟ್ಟೆ ಉಗ್ರರ ಗುರಿಯಾಗಿತ್ತು. ಫೆಬ್ರುವರಿಯಲ್ಲಿ ನಡೆದ ಕದನವಿರಾಮ ಒಪ್ಪಂದದ ಹೊರತಾಗಿಯೂ ಪಾಕಿಸ್ತಾನವು ಭಯೋತ್ಪಾದಕ ಸಂಘಟನೆಗಳ ಸರಬರಾಜು ಮಾರ್ಗಗಳನ್ನು ನಿರ್ವಹಣೆ ಮಾಡುತ್ತಿದೆ ಎಂದು ಹೇಳಿದ್ದಾರೆ.

ಪೊಲೀಸರು ಮತ್ತು ಭದ್ರತಾಪಡೆಗಳ ಕಾರ್ಯಾಚರಣೆಯ ಫಲವಾಗಿ ಲಷ್ಕರ್ ಎ ತಯಬಾ (ಎಲ್‌ಇಟಿ) ಮತ್ತು ಜೈಶ್ ಎ ಮೊಹಮ್ಮದ್ (ಜೆಇಎಂ) ಭಯೋತ್ಪಾದಕ ಸಂಘಟನೆಗಳು ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳ ಕೊರತೆಯನ್ನು ಎದುರಿಸುತ್ತಿವೆ ಎಂದಿದ್ದಾರೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಉಗ್ರರಿಗೆ ಡ್ರೋನ್ ಮೂಲಕ ಶಸ್ತ್ರಾಸ್ತ್ರ, ಮದ್ದುಗುಂಡುಗಳು ಮತ್ತು ಹಣವನ್ನು ಪಾಕಿಸ್ತಾನದಿಂದ ಸಾಗಿಸಲಾಗಿತ್ತು ಎಂದೂ ತಿಳಿಸಿದ್ದಾರೆ.

ಜುಲೈ23ರಂದು ಅಂತರರಾಷ್ಟ್ರೀಯ ಗಡಿಯ ಬಳಿ ಪಾಕಿಸ್ತಾನದ ಕಡೆಯಿಂದ ಬಂದ ಡ್ರೋನ್ ಅನ್ನು ಪೊಲೀಸರು ಹೊಡೆದುರುಳಿಸಿದ್ದರು. ಇದರಲ್ಲಿ 5 ಕೆ.ಜಿ. ಐಇಡಿ ಪತ್ತೆಯಾಗಿತ್ತು.

ಪೊಲೀಸರು ಹೊಡೆದುರಳಿಸಿದ ಡ್ರೋನ್‌ನ ಬಿಡಿಭಾಗಗಳು ಚೀನಾ ಮತ್ತು ತೈವಾನ್ ನಿರ್ಮಿತ ಎಂದು ದಿಲ್‌ಬಾಗ್ ಸಿಂಗ್ ತಿಳಿಸಿದ್ದಾರೆ.

ಚುನಾವಣೆ ಗೆಲ್ಲಲು ದೇವಸ್ಥಾನಗಳಿಗೆ ಮೊರೆ!

ಲಖನೌ: ಉತ್ತರ ಪ್ರದೇಶದಲ್ಲಿ ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವಂತೆಯೇ ರಾಜಕಾರಣಿಗಳು ಈಗ ದೇವಸ್ಥಾನಗಳಿಗೆ ಭೇಟಿ ನೀಡಿ ವಿಶೇಷ ಪೂಜೆಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.

ವಿಧಾನಸಭೆ ಚುನಾವಣೆ ನಡೆಯಲು ಇನ್ನೂ ಏಳು ತಿಂಗಳು ಉಳಿದಿವೆ. ಚುನಾವಣೆಗೆ ಸಿದ್ಧತೆ ಕೈಗೊಳ್ಳುತ್ತಿರುವ ಬಿಜೆಪಿ, ಬಿಎಸ್‌ಪಿ, ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷದ ಮುಖಂಡರು ಈಗಿನಿಂದಲೇ ದೇವಸ್ಥಾನಗಳಿಗೆ ಮತ್ತು ಸ್ವಾಮೀಜಿಗಳನ್ನು ಭೇಟಿ ಮಾಡಿ ಆಶೀರ್ವಾದ ಕೋರುತ್ತಿದ್ದಾರೆ.

ಬಿಎಸ್‌ಪಿ ಪ್ರಧಾನ ಕಾರ್ಯದರ್ಶಿ ಎಸ್.ಸಿ. ಮಿಶ್ರಾ ಸೇರಿದಂತೆ ಪಕ್ಷದ ಹಲವು ನಾಯಕರು ಶುಕ್ರವಾರ ಅಯೋಧ್ಯೆಯಲ್ಲಿ ನಿರ್ಮಾಣ ಹಂತದಲ್ಲಿರುವ ರಾಮ ಮಂದಿರ ಮತ್ತು ಪ್ರಸಿದ್ಧ ದೇವಾಲಯಗಳಿಗೆ ಭೇಟಿ ನೀಡಿದ್ದರು. ಮಿಶ್ರಾ ಅವರು ಪ್ರಮುಖ ಸ್ವಾಮೀಜಿಗಳ ಆಶ್ರಮಗಳಿಗೂ ಭೇಟಿ ನೀಡಿದ್ದರು.

ಶನಿವಾರ ಬಿಜೆಪಿ ಶಾಸಕರು, ನಾಯಕರು, ಪದಾಧಿಕಾರಿಗಳು ಇದೇ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ರಾಜ್ಯದಾದ್ಯಂತ ಸ್ವಾಮೀಜಿಗಳನ್ನು ಸನ್ಮಾನಿಸಿದ ಪಕ್ಷದ ಮುಖಂಡರು, ಆಶ್ರಮಗಳು, ದೇವಾಲಯಗಳಿಗೆ ಭೇಟಿ ನೀಡಿದ್ದರು. ಜತೆಗೆ, ವಿಶೇಷ ಪೂಜೆಗಳನ್ನು ಸಹ ಹಮ್ಮಿಕೊಂಡಿದ್ದರು.

ವಿದ್ಯುತ್ ತಿದ್ದುಪಡಿ ಮಸೂದೆ ಶೀಘ್ರ ಸಂಪುಟದಲ್ಲಿ ಮಂಡನೆ

ನವದೆಹಲಿ: ವಿದ್ಯುತ್ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆಗಳನ್ನು ತರುವ ಉದ್ದೇಶದಿಂದ ರೂಪಿಸಲಾಗಿರುವ 'ವಿದ್ಯುತ್ (ತಿದ್ದುಪಡಿ) ಮಸೂದೆ–2021' ಅನ್ನು ಕೇಂದ್ರ ಸಚಿವ ಸಂಪುಟದ ಮುಂದೆ ಶೀಘ್ರ ಮಂಡಿಸುವ ಸಾಧ್ಯತೆ ಇದೆ.

ದೂರ ಸಂಪರ್ಕ ಸೇವೆಗಳ ರೀತಿಯಲ್ಲೇ ವಿದ್ಯುತ್ ಒದಗಿಸುವ ಕಂಪನಿಗಳನ್ನು ಬಳಕೆದಾರರು ಆಯ್ಕೆ ಮಾಡಿಕೊಳ್ಳಲು ಈ ಮಸೂದೆಯಲ್ಲಿ ಅವಕಾಶ ಒದಗಿಸಲಾಗಿದೆ.

ಜತೆಗೆ, ವಿದ್ಯುತ್ ಕ್ಷೇತ್ರದಲ್ಲಿ ಸ್ಪರ್ಧೆ, ಮೇಲ್ಮನವಿ ನ್ಯಾಯಮಂಡಳಿಯನ್ನು ಬಲಪಡಿಸುವುದು (ಎಪಿಟಿಇಎಲ್) ಹಾಗೂ ನವೀಕರಿಸಬಹುದಾದ ವಿದ್ಯುತ್ ಖರೀದಿ ಒಪ್ಪಂದ ಪಾಲಿಸುವುದು (ಆರ್‌ಪಿಒ) ಮುಂತಾದ ಅಂಶಗಳನ್ನು ಈ ಮಸೂದೆಯು ಒಳಗೊಂಡಿದೆ. ಆರ್‌ಪಿಒ ಅನ್ವಯ ನವೀಕರಿಸಬಹುದಾದ ಇಂಧನದ ಮೂಲಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ವಿದ್ಯುತ್ ವಿತರಣಾ ಕಂಪನಿಗಳು ಖರೀದಿಸಬೇಕಾಗುತ್ತದೆ. ವಿದ್ಯುತ್ ಬಳಕೆದಾರರ ಕರ್ತವ್ಯಗಳು ಮತ್ತು ಹಕ್ಕುಗಳನ್ನು ಸಹ ಮಸೂದೆಯು ಒಳಗೊಂಡಿದೆ.

'ವಿದ್ಯುತ್ ವಿತರಣೆಯ ಲೈಸನ್ಸ್ ಅನ್ನು ವಿಕೇಂದ್ರೀಕರಣಗೊಳಿಸುವುದು ಈ ಮಸೂದೆಯ ಉದ್ದೇಶವಾಗಿದೆ. ಈ ಮಸೂದೆಯ ಟಿಪ್ಪಣಿಯನ್ನು ಸಂಬಂಧಿಸಿದ ಎಲ್ಲ ಸಚಿವಾಲಯಗಳಿಗೆ ಅನುಮೋದನೆಗೆ ಕಳುಹಿಸಲಾಗಿದೆ. ಕಾನೂನು ಸಚಿವಾಲಯ ಒಂದೆರಡು ಪ್ರಶ್ನೆಗಳನ್ನು ಕೇಳಿದೆ. ಈ ಬಗ್ಗೆ ವಿವರಣೆ ನೀಡಲಾಗಿದೆ' ಎಂದು ವಿದ್ಯುತ್ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಆರ್.ಕೆ. ಸಿಂಗ್ ಇತ್ತೀಚೆಗೆ ಹೇಳಿಕೆ ನೀಡಿದ್ದರು. ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಈ ಮಸೂದೆಯನ್ನು ಮಂಡಿಸಲು ಸರ್ಕಾರ ಉದ್ದೇಶಿಸಿದೆ. ಹೀಗಾಗಿ, ಕೆಲವೇ ದಿನಗಳಲ್ಲಿ ಕೇಂದ್ರ ಸಚಿವ ಸಂಪುಟದ ಮುಂದೆ ಮಂಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಪ್ರಾಥಮಿಕ ಹಂತದಿಂದಲೇ ಶಾಲೆ ?

ಒಂದನೇ ಪುಟದಿಂದ

ಅಂಗನವಾಡಿಗಳು, ಪೂರ್ವ ಪ್ರಾಥಮಿಕ ಶಾಲೆಗಳು ಸೇರಿದಂತೆ ಎಲ್ಲ ಶಾಲೆಗಳು, ಪದವಿ ಪೂರ್ವ ತರಗತಿಗಳನ್ನು ಆ. 2 ರಿಂದ ಆರಂಭಿಸಬಹುದು. ಒಂದೇ ಬಾರಿಗೆ ಆರಂಭಿಸಲು ಸಾಧ್ಯವಾಗದೇ ಇದ್ದರೆ, ಪೂರ್ವ ಪ್ರಾಥಮಿಕ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳನ್ನು ಮೊದಲು ಆರಂಭಿಸಿ, ಆರನೇ ಮತ್ತು ನಂತರದ ತರಗತಿಗಳನ್ನು ವಾರದ ಒಳಗೆ (ಆಗಸ್ಟ್ 9ರ ಒಳಗೆ) ಆರಂಭಿಸಬೇಕು.

ಕಡಿಮೆ ಸಂಖ್ಯೆಯ ಮಕ್ಕಳಿರುವ ಶಾಲೆಗಳು (ಕೊಠಡಿಯಲ್ಲಿ 15ರಿಂದ 20 ಮಕ್ಕಳಿಗೆ ಒಬ್ಬರು ಶಿಕ್ಷಕರು) ವೇಳಾಪಟ್ಟಿಯಂತೆ ಕಾರ್ಯನಿರ್ವಹಿಸಬಹುದು. ಹೆಚ್ಚು ಮಕ್ಕಳಿರುವ ಶಾಲೆಗಳಲ್ಲಿ ಪಾಳಿಯಲ್ಲಿ ತರಗತಿ ನಡೆಸಬೇಕು. 1 ರಿಂದ 3ನೇ ತರಗತಿವರೆಗಿನ ಮಕ್ಕಳಿಗೆ ಬೆಳಿಗ್ಗೆ, 4 ಮತ್ತು 5ನೇ ತರಗತಿಯ ಮಕ್ಕಳಿಗೆ ಮಧ್ಯಾಹ್ನದ ನಂತರ ತಲಾ 3 ಗಂಟೆಯಂತೆ ವಾರದ ಆರು ದಿನ ಶಾಲೆ ನಡೆಸಬಹುದು ಎಂದು ಕಾರ್ಯಪಡೆ ಶಿಫಾರಸು ಮಾಡಿದೆ.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) 2020ರ ಡಿಸೆಂಬರ್‌ನಲ್ಲಿ ಹೊರಡಿಸಿದ್ದ ಎಸ್‌ಒಪಿ ಅನ್ವಯ ಶಾಲೆಗಳು ಸಿದ್ಧತೆಗಳನ್ನು ಮಾಡಿಕೊಂಡಿವೆಯೇ ಎಂದು ಖಚಿತಪಡಿಸಿಕೊಳ್ಳಬೇಕು. ಮಕ್ಕಳ ಸುರಕ್ಷತೆ ದೃಷ್ಟಿಯಿಂದ ತೆಗೆದುಕೊಂಡ ಕ್ರಮಗಳ ಬಗ್ಗೆ ಶಿಕ್ಷಕ– ಪೋಷಕರ ಸಂಘಟನೆಗೆ ಮಾಹಿತಿ ನೀಡಬೇಕು. ಮಕ್ಕಳನ್ನು ಶಾಲೆಗೆ ಕಳುಹಿಸಲು ಪೋಷಕರು ಹಿಂದೇಟು ಹಾಕುತ್ತಿದ್ದರೆ, ಅಂಥವರಲ್ಲಿ ಆನ್‌ಲೈನ್ ಶಿಕ್ಷಣಕ್ಕೆ ಅಗತ್ಯವಾದ ಸೌಲಭ್ಯಗಳಿವೆಯೇ ಎಂದು ಖಚಿತಪಡಿಸಿಕೊಳ್ಳಬೇಕು. ಮನೆಯಲ್ಲೇ ಇದ್ದುಕೊಂಡು ಕಲಿಕೆ ಮುಂದುವರಿಸಲು ಬಯಸುವವರನ್ನು ಸಮೀಪದ ಸರ್ಕಾರಿ ಶಾಲೆಗಳಲ್ಲಿ ನೋಂದಾಯಿಸಿ, 'ವಿದ್ಯಾರ್ಥಿ ಸಾಧನೆ ಟ್ರ್ಯಾಕಿಂಗ್ ವ್ಯವಸ್ಥೆ' (ಎಸ್‌ಎಟಿಎಸ್) ಪೋರ್ಟಲ್‌ನಲ್ಲಿ ಪ್ರತ್ಯೇಕ ಗುರುತಿನ ಸಂಖ್ಯೆ ನೀಡಬೇಕು. ಶಾಲೆ ತೊರೆದ ಮಕ್ಕಳನ್ನು ಪತ್ತೆ ಮಾಡಲು ಖಾಸಗಿ, ಅನುದಾನಿತ ಮತ್ತು ಸರ್ಕಾರಿ ಶಾಲೆಗಳು ಪಂಚಾಯಿತಿ ಮಟ್ಟದಲ್ಲಿ ಮಕ್ಕಳ ನೋಂದಣಿ ಅಂಕಿ– ಅಂಶಗಳನ್ನು ಸಿದ್ಧಪಡಿಸಿಕೊಳ್ಳಬೇಕು ಎಂದು ಕಾರ್ಯಪಡೆ ಹೇಳಿದೆ.

ಮಧ್ಯಾಹ್ನದ ಬಿಸಿಯೂಟ ಮತ್ತೆ ಆರಂಭಿಸಬೇಕು. ಬಿಸಿಯೂಟ ನೀಡಲು ಸಾಧ್ಯವಾಗದೇ ಇದ್ದರೆ, ಒಣ ಆಹಾರ ನೀಡಬೇಕು (ಕೆಎಂಎಫ್ ಮೂಲಕ ನೀಡುತ್ತಿರುವ ಹಾಲಿನ ಪುಡಿ ಬದಲು ಬಿಸ್ಕತ್ತು, ಶೇಂಗಾ ಚಿಕ್ಕಿ). ಶಾಲೆ ಆರಂಭವಾಗುತ್ತಿದ್ದಂತೆ ಮಕ್ಕಳಲ್ಲಿನ ಅಪೌಷ್ಟಿಕತೆಯ ಬಗ್ಗೆ ಅರಿಯಲು ಎತ್ತರ ಮತ್ತು ತೂಕ ಅಳೆಯಬೇಕು. ಶಾಲೆಗಳು ಆರಂಭವಾದ ಬಳಿಕ ಪ್ರಾಥಮಿಕ ಆರೋಗ್ಯ ಕೇಂದ್ರಗಳು ನಿರಂತರವಾಗಿ ಆರೋಗ್ಯ ಶಿಬಿರಗಳನ್ನು ಹಮ್ಮಿಕೊಳ್ಳಬೇಕು ಎಂದೂ ಸಲಹೆ ನೀಡಿದೆ.

ಪ್ರಾಥಮಿಕ ಹಂತದಿಂದಲೇ ಶಾಲೆಗಳನ್ನು ಆರಂಭಿಸುವ ಬಗ್ಗೆ ಆರೋಗ್ಯ ಇಲಾಖೆ ಜೊತೆ ಚರ್ಚಿಸಿ 3–4 ದಿನಗಳಲ್ಲಿ ತೀರ್ಮಾನಿಸುತ್ತೇವೆ
ಎಸ್. ಸುರೇಶ್ ಕುಮಾರ್, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಶಾಲೆಗಳಲ್ಲಿ ಮುನ್ನೆಚ್ಚರಿಕೆ ವಹಿಸುವ ಜೊತೆಗೆ ಮನೆ ಪಾಠ, ಕೋಚಿಂಗ್ ಕೇಂದ್ರಗಳಲ್ಲಿಯೂ ಎಸ್‌ಒಪಿ ಪಾಲನೆ ಕಟ್ಟುನಿಟ್ಟಾಗಿ ಪರಿಶೀಲಿಸುವ ಕೆಲಸ ಸರ್ಕಾರದಿಂದ ಆಗಬೇಕು
ಡಿ. ಶಶಿಕುಮಾರ್, ಪ್ರಧಾನ ಕಾರ್ಯದರ್ಶಿ, ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಸಂಘಟನೆ

'ಶಾಲೆಗಳಿಗೆ ವಿಶೇಷ ಅನುದಾನ'

ಸುರಕ್ಷಿತ ಮತ್ತು ನಿರಂತರ ಕಲಿಕಾ ವಾತಾವರಣಕ್ಕೆ ಎಸ್‌ಒಪಿ ಪಾಲನೆ ಕಡ್ಡಾಯ. ಅದಕ್ಕೆ ಬೇಕಾದ ಖರ್ಚು ವೆಚ್ಚವನ್ನು ಅಂದಾಜಿಸಿ, ಅನುದಾನ ನೀಡಬೇಕು. ಅನುದಾನ ಹಂಚಿಕೆಯ ಹೊಣೆಯನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ನೀಡಬೇಕು. ಶಾಲೆಗಳಲ್ಲಿ ಸುರಕ್ಷತೆ, ಸ್ಯಾನಿಟೈಜೇಷನ್ ಚಟುವಟಿಕೆಗೆ ವಿಶೇಷ ಅನುದಾನ ನೀಡಬೇಕು. ಶಾಲೆ ಆರಂಭಕ್ಕೂ ಮೊದಲು ಎಲ್ಲ ಶಿಕ್ಷಕರು, ಸಿಬ್ಬಂದಿ, ಎಸ್‌ಡಿಎಂಸಿ ಸದಸ್ಯರು ಕನಿಷ್ಠ ಒಂದು ಡೋಸ್ ಲಸಿಕೆ ಹಾಕಿಸಿಕೊಂಡಿರಬೇಕು. ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಲಾಗುತ್ತಿದೆಯೇ ಎಂದು ನಿಗಾ ವಹಿಸುವ ಹೊಣೆ ಆಯಾ ಶಾಲೆಗಳ ಮುಖ್ಯ ಶಿಕ್ಷಕರು ಮತ್ತು ಎಸ್‌ಡಿಎಂಸಿ ಅಧ್ಯಕ್ಷರದ್ದು ಎಂದೂ ಕಾರ್ಯಪಡೆ ಹೇಳಿದೆ.

ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ಗಾಜಿಯಾಬಾದ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರಿಗೆ ಬೆಂಬಲ ಸೂಚಿಸಿ ಭಾನುವಾರ ಟ್ರ್ಯಾಕ್ಟರ್ ಮೂಲಕ ಗಾಜಿಪುರ ಗಡಿಯತ್ತ ರೈತರು ಸಾಗಿದರು –ಪಿಟಿಐ ಚಿತ್ರ

ವಿನಯ ಕುಲಕರ್ಣಿ ಜಾಮೀನು ಅರ್ಜಿಗೆ ಸಿಬಿಐ ಆಕ್ಷೇಪ

ನವದೆಹಲಿ: ಧಾರವಾಡದ ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೇಶ್‌ಗೌಡ ಗೌಡರ ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ಮಾಜಿ ಸಚಿವ ವಿನಯ ಕುಲಕರ್ಣಿ, ಜಾಮೀನು ಕೋರಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಗೆ ಸಿಬಿಐ ಆಕ್ಷೇಪ ಸಲ್ಲಿಸಿದೆ.

'ಆರೋಪಿಯು ಪ್ರಭಾವಿ ವ್ಯಕ್ತಿಯಾಗಿದ್ದು ಸಾಕ್ಷಿಗಳನ್ನು ಬೆದರಿಸುವ, ಸಾಕ್ಷ್ಯಗಳನ್ನು ನಾಶಪಡಿಸುವ ಹಾಗೂ ವಿಚಾರಣೆಯನ್ನು ದಿಕ್ಕುತಪ್ಪಿಸುವ ಸಾಧ್ಯತೆ ಇದೆ. ಅಂಥ ವ್ಯಕ್ತಿಗೆ ಜಾಮೀನು ನೀಡಲು ಯಾವುದೇ ಕಾರಣವಿಲ್ಲ. ಹೈಕೋರ್ಟ್ ಕೂಡ ಅವರ ಜಾಮೀನು ಅರ್ಜಿಯನ್ನು ಈಗಾಗಲೇ ತಳ್ಳಿಹಾಕಿದೆ' ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ತಿಳಿಸಿದೆ.

'ಕೊಲೆಯಾದ ವ್ಯಕ್ತಿಯ ಪತ್ನಿಗೆ ಲಕ್ಷಾಂತರ ರೂಪಾಯಿ ನೀಡುವುದರ ಜೊತೆಗೆ ಕಾಂಗ್ರೆಸ್‌ನ ಸ್ಥಳೀಯ ಘಟಕದಲ್ಲಿ ಹುದ್ದೆ ಅಥವಾ ಕೆಲಸ ಕೊಡಿಸಲು ನೆರವಾಗುವ ಮೂಲಕ ಅವರನ್ನು ಪ್ರಕರಣದ ವಿರುದ್ಧ ನಿಲ್ಲುವಂತೆ ಮಾಡಲಾಯಿತು. ಆರೋಪಿಯ ಬೆಂಬಲಿಗರೊಬ್ಬರಿಂದ ಮೃತನ ಸೋದರನ ಮೇಲೆ ಪ್ರಭಾವ ಬೀರುವ ಯತ್ನ ನಡೆದಿತ್ತು' ಎಂದು ಆರೋಪಿಸಿರುವ ಸಿಬಿಐ, ಇದು ಆರೋಪಿಯ ಪಾತ್ರ ಹಾಗೂ ಪ್ರಭಾವವನ್ನು ದೃಢಪಡಿಸುತ್ತದೆ ಎಂದು ಹೇಳಿದೆ.

ನ್ಯಾಯಮೂರ್ತಿ ಯು.ಯು. ಲಲಿತ್ ನೇತೃತ್ವದ ನ್ಯಾಯಪೀಠ, ಈ ಅರ್ಜಿಯ ವಿಚಾರಣೆಯನ್ನು ಸೋಮವಾರ ಕೈಗೆತ್ತಿಕೊಳ್ಳಲಿದೆ

2016ರಲ್ಲಿ ಧಾರವಾಡದ ಸಪ್ತಾಪುರದ ಜಿಮ್‌ನಲ್ಲಿ ಯೋಗೇಶ್‌ಗೌಡ ಗೌಡರ ಕೊಲೆಯಾಗಿತ್ತು. ಈ ಪ್ರಕರಣದ ತನಿಖೆಯನ್ನು, 2019ರಲ್ಲಿ ರಾಜ್ಯ ಸರ್ಕಾರವು ಸಿಬಿಐಗೆ ಒಪ್ಪಿಸಿತ್ತು.

ಕೇರಳ: ಹೊಡೆದಾಡಿಕೊಂಡ ಐಎನ್‌ಎಲ್ ಸದಸ್ಯರು

ಕೊಚ್ಚಿ (ಪಿಟಿಐ): ಕೇರಳದ ಆಡಳಿತಾರೂಢ ಎಲ್‌ಡಿಎಫ್ ಮೈತ್ರಿಕೂಟದ ಭಾಗವಾಗಿರುವ ಇಂಡಿಯನ್ ನ್ಯಾಷನಲ್ ಲೀಗ್‌ನ (ಐಎನ್‌ಎಲ್) ಎರಡು ಬಣಗಳ ಬೆಂಬಲಿಗರು ಸಚಿವರ ಎದುರೇ ಪರಸ್ಪರ ಹೊಡೆದಾಡಿಕೊಳ್ಳುವ ಮೂಲಕ ಪಕ್ಷದ ಆಂತರಿಕ ಕಲಹ ಭಾನುವಾರ ತಾರಕಕ್ಕೆ ತಲುಪಿದೆ.

ಈ ಹಿಂದೆ ನಡೆದಿದ್ದ ಸಭೆಯಲ್ಲಿ, ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಸಿಮ್ ಇರಿಕ್ಕೂರ್ ಟಿಪ್ಪಣಿ ರಚಿಸುವಾಗ ಇಬ್ಬರು ಮುಖಂಡರ ಹೆಸರು ಕೈಬಿಟ್ಟಿದ್ದರು. ಭಾನುವಾರ ನಡೆದ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪಕ್ಷದ ಅಧ್ಯಕ್ಷ ಎ. ಪಿ. ಅಬ್ದುಲ್ ವಹಾಬ್ ಅವರ ಬಣ ಇರಿಕ್ಕೂರ್ ಅವರ ಕ್ರಮವನ್ನು ಪ್ರಶ್ನಿಸಿತು. ಆಗ ಅಲ್ಲಿ ವಾಗ್ಯುದ್ಧ ಆರಂಭವಾಯಿತು. ಇರಿಕ್ಕೂರ್ ಪ್ರಜಾಪ್ರಭುತ್ವ ವಿರೋಧಿಯಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿ ವಹಾಬ್ ಬಣ ಸಭೆಯನ್ನು ಬಹಿಷ್ಕರಿಸಿತು. ಬಂದರು ಸಚಿವ ಅಹಮ್ಮದ್ ದೇವರ್‌ಕೋವಿಲ್ ಅವರು ಈ ವೇಳೆ ಹಾಜರಿದ್ದರು.

ಇದೇ ವೇಳೆ ಹೋಟೆಲ್ ಎದುರು ಎರಡೂ ಬಣಗಳ ನಡುವೆ ಹೊಡೆದಾಟ ಆರಂಭವಾಯಿತು. ದೊಡ್ಡ ಸಂಖ್ಯೆಯಲ್ಲಿ ಸ್ಥಳಕ್ಕೆ ಆಗಮಿಸಿದ ಪೊಲೀಸರು ಎರಡೂ ಬಣದ ಬೆಂಬಲಿಗರನ್ನು ಚದುರಿಸಿದರು. ಸಚಿವ ಅಹಮ್ಮದ್ ದೇವರ್‌ಕೋವಿಲ್ ಅವರನ್ನು ಪೊಲೀಸರು ಸುರಕ್ಷಿತವಾಗಿ ಕರೆದೊಯ್ದರು ಎಂದು ಮೂಲಗಳು ತಿಳಿಸಿವೆ.

ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಇಬ್ಭಾಗವಾದ ಬಳಿಕ 1994ರಲ್ಲಿ ಇಂಡಿಯನ್ ನ್ಯಾಷನಲ್ ಲೀಗ್‌ಅನ್ನು ರಚಿಸಲಾಯಿತು. ಇದೇ ಮೊದಲ ಬಾರಿಗೆ ಪಿಣರಾಯಿ ವಿಜಯನ್ ನೇತೃತ್ವದ ಕೇರಳ ಸರ್ಕಾರದಲ್ಲಿ ಐಎನ್‌ಎಲ್‌ಗೆ ಸಚಿವ ಸ್ಥಾನ ನೀಡಲಾಗಿದೆ.

ಮೋದಿ ಮನದ ಮಾತು: ಸ್ವಾತಂತ್ರ್ಯ ದಿನದ ಅಮೃತ ಮಹೋತ್ಸವಕ್ಕೆ ಸಿದ್ಧತೆ

'ಭಾರತ ಒಗ್ಗೂಡಿಸಲು ಮುಂದಾಳುಗಳಾಗಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿ ನೇತೃತ್ವದ 'ಭಾರತ್ ಛೋಡೊ' (ಕ್ವಿಟ್ ಇಂಡಿಯಾ) ಆಂದೋಲನದಂತೆಯೇ, ದೇಶದ ಪ್ರತಿಯೊಬ್ಬರೂ ಈಗ 'ಭಾರತ್ ಜೋಡೊ' (ಭಾರತ ಒಗ್ಗೂಡಿಸಿ) ಆಂದೋಲನದ ಮುಂದಾಳತ್ವ ವಹಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದರು.

'ಮನದ ಮಾತು' ತಿಂಗಳ ರೇಡಿಯೊ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದ ಅವರು, 'ನಾವು ಮಾಡುವ ಕೆಲಸಗಳು, ವಿವಿಧತೆಯ ದೇಶವಾದ ಭಾರತವನ್ನು ಜೋಡಿಸುವ ಹಾಗೂ ಕೂಡಿಸುವುದಕ್ಕೆ ಪೂರಕವಾಗಿ ಇರುವಂತೆ ನೋಡಿಕೊಳ್ಳಬೇಕಾದುದು ಪ್ರತಿಯೊಬ್ಬರ ಕರ್ತವ್ಯ' ಎಂದರು.

ಸ್ವಾತಂತ್ರ್ಯ ದಿನದ ಅಮೃತ ಮಹೋತ್ಸವದ ಅಂಗವಾಗಿ, ಹಲವು ಕಾರ್ಯಕ್ರಮ ಆಯೋಜಿಸಲಾಗಿದೆ. ಆಗಸ್ಟ್ 15ರಂದು ದೇಶದ ಜನರು ಏಕಕಾಲಕ್ಕೆ ರಾಷ್ಟ್ರಗೀತೆಯನ್ನು ಹಾಡಲು ಅನುವಾಗುವಂತೆ ಕಾರ್ಯಕ್ರಮ ವ್ಯವಸ್ಥೆ ಮಾಡಲಾಗಿದ್ದು, ಅದಕ್ಕಾಗಿ 'ರಾಷ್ಟ್ರಗಾನ ಡಾಟ್ ಇನ್' ಹೆಸರಿನ ಪ್ರತ್ಯೇಕ ವೆಬ್‌ಸೈಟ್ ಆರಂಭಿಸಲಾಗಿದೆ. ಈ ವೆಬ್‌ಸೈಟ್ ಮೂಲಕ, ಜನರು ರಾಷ್ಟ್ರಗೀತೆಯನ್ನು ಹಾಡಿ, ಧ್ವನಿಮುದ್ರಣ ಮಾಡುವುದರೊಂದಿಗೆ ಈ ಅಭಿಯಾನದಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದರು.

ಕ್ರೀಡಾಪಟುಗಳನ್ನು ಹುರಿದುಂಬಿಸಿ: ಸಾಮಾಜಿಕ ಜಾಲತಾಣದಲ್ಲಿ ಆರಂಭವಾಗಿರುವ 'ವಿಕ್ಟರಿ ಪಂಚ್ ಅಭಿಯಾನ'ದಲ್ಲಿ ಪಾಲ್ಗೊಳ್ಳುವ ಮೂಲಕ, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿರುವ ಭಾರತೀಯ ಕ್ರೀಡಾಪಟುಗಳನ್ನು ಹುರಿದುಂಬಿಸುವಂತೆ ಕರೆ ನೀಡಿದರು.

'ಕೊರೊನಾ ವೈರಸ್ ಇನ್ನೂ ಹೋಗಿಲ್ಲ. ಮುಂದೆ ಸಾಲು ಸಾಲು ಹಬ್ಬಗಳು ಬರಲಿದ್ದು, ಆ ಸಂದರ್ಭದಲ್ಲಿ ಜನರು ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಲಸಿಕೆ ಪಡೆಯಬೇಕು. ಲಸಿಕೆ ನಿರಾಕರಿಸುವುದರ ಮೂಲಕ ನೀವು ಮಾತ್ರವಲ್ಲ ನಿಮ್ಮ ಕುಟುಂಬದವರನ್ನೂ, ಊರನ್ನೂ ಅಪಾಯಕ್ಕೆ ಸಿಲುಕಿಸುತ್ತೀರಿ' ಎಂದು ಎಚ್ಚರಿಸಿದರು.

ಸೋಮವಾರ ನಡೆಯಲಿರುವ 'ಕಾರ್ಗಿಲ್ ದಿನ' ಆಚರಣೆಯ ಬಗ್ಗೆಯೂ ಪ್ರಸ್ತಾಪಿಸಿದ ಮೋದಿ, 'ಕಾರ್ಗಿಲ್ ಯುದ್ಧವು ಭಾರತೀಯ ಸೇನೆಯ ಶೌರ್ಯ ಹಾಗೂ ಸಹನೆಯ ಪ್ರತೀಕವಾಗಿದ್ದು, ಎಲ್ಲರೂ ಕಾರ್ಗಿಲ್ ವೀರರಿಗೆ ಗೌರವ ಸಲ್ಲಿಸಬೇಕು' ಎಂದರು.

ಬಾಳೆ ಹಿಟ್ಟು, ಬಾಳೆನಾರಿನ ಉತ್ಪನ್ನ ಪ್ರಸ್ತಾಪಿಸಿದ ಮೋದಿ: 'ಬಾಳೆನಾರಿನಿಂದ ಅತ್ಯುತ್ಕೃಷ್ಟವಾದ ಉತ್ಪನ್ನ ತಯಾರಿಸಬಹುದು ಅಥವಾ ಬಾಳೆಯ ಹಿಟ್ಟಿನಿಂದ ಖಾದ್ಯಗಳನ್ನು ತಯಾರಿಸಬಹುದು ಎಂಬುದನ್ನು ಬಲ್ಲಿರಾ' ಎಂದು ಕೇಳಿದ ಪ್ರಧಾನಿ, ಕರ್ನಾಟಕ ಹಾಗೂ ಉತ್ತರಪ್ರದೇಶದಲ್ಲಿ ಈ ಬಗ್ಗೆ ನಡೆಯುತ್ತಿರುವ ಪ್ರಯೋಗಗಳನ್ನು ಪ್ರಸ್ತಾಪಿಸಿದರು.

ಬಾಳೆಯ ನಾರಿನಿಂದ ಕೈಚೀಲ ತಯಾರಿಸಲಾಗುತ್ತಿದ್ದು, ಕರ್ನಾಟಕದಲ್ಲಿ ಬಾಳೆ ಹಿಟ್ಟಿನಿಂದ ಬಗೆಬಗೆಯ ಖಾದ್ಯಗಳನ್ನು ತಯಾರಿಸಿ, ಸಾಮಾಜಿಕ ಜಾಲತಾಣದಲ್ಲಿ ಪ್ರಚಾರ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಮನದ ಮಾತು; ಪ್ರಸಾರ ಭಾರತಿಗೆ ₹30 ಕೋಟಿ ಆದಾಯ, (ನವದೆಹಲಿ): 'ಮನ್ ಕಿ ಬಾತ್' ರೇಡಿಯೊ ಕಾರ್ಯಕ್ರಮವು, ಕಳೆದ ಏಳು ವರ್ಷಗಳಲ್ಲಿ ಪ್ರಸಾರ ಭಾರತಿಗೆ ₹30.80 ಕೋಟಿ ಆದಾಯ ತಂದುಕೊಟ್ಟಿದೆ.

'ಜನರ ಮನದ ಮಾತು ಕೇಳಿದ್ದರೆ ಈ ಸ್ಥಿತಿ ಇರುತ್ತಿರಲಿಲ್ಲ'

ದೇಶದ ಪ್ರತಿಯೊಬ್ಬರೂ ಕೋವಿಡ್ ಲಸಿಕೆ ಹಾಕಿಸಿಕೊಳ್ಳುವಂತೆ ತಮ್ಮ 'ಮನದ ಮಾತು' ಕಾರ್ಯಕ್ರಮದಲ್ಲಿ ಮನವಿ ಮಾಡಿದ ಪ್ರಧಾನಿ ಮೋದಿ ಅವರಿಗೆ ತಿರುಗೇಟು ನೀಡಿರುವ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, 'ಎಲ್ಲರೂ ಲಸಿಕೆ ಹಾಕಿಸಿಕೊಳ್ಳಿ ಎಂದು ಹೇಳುವ ಮೊದಲು, ದೇಶದಲ್ಲಿನ ಲಸಿಕೆ ಕೊರತೆಯನ್ನು ನೀಗಿಸಿ' ಎಂದು ಟ್ವೀಟ್ ಮಾಡಿದ್ದಾರೆ.

'ಪ್ರಧಾನಿ ಮೋದಿ, ದೇಶದ ಜನರ ಮನದ ಮಾತನ್ನು ಅರ್ಥೈಸಿಕೊಂಡಿದ್ದರೆ, ಪರಿಸ್ಥಿತಿ ಬೇರೆಯೇ ಇರುತ್ತಿತ್ತು. ರಾಜ್ಯಗಳಲ್ಲಿ ಲಸಿಕೆಯ ಕೊರತೆ ಇರುತ್ತಿರಲಿಲ್ಲ' ಎಂದು ಟೀಕಿಸಿರುವ ರಾಹುಲ್ ಗಾಂಧಿ, 'ಲಸಿಕೆ ಎಲ್ಲಿ' ಎಂದು ಪ್ರಶ್ನಿಸಿದ್ದಾರೆ. ಲಸಿಕೆ ಅಭಿಯಾನ ನಿಧಾನಗತಿಯಲ್ಲಿ ನಡೆಯುತ್ತಿರುವ ಬಗೆಗಿನ ವಿಡಿಯೊವೊಂದನ್ನು ಹಾಗೂ ಲಸಿಕೆ ಪಡೆಯಲು ಜನರು ಪರದಾಡಬೇಕಾದ ಸ್ಥಿತಿಯ ಬಗೆಗಿನ ಮಾಧ್ಯಮ ವರದಿಗಳನ್ನೂ ಹಂಚಿಕೊಂಡಿದ್ದಾರೆ.

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–10.
ದೂರವಾಣಿ: 080-23407011-25 ಇ–ಮೇಲ್: md.kssidc@karnataka.gov.in
ಸಂಖೆ:ಕರಾಸಕೈಅನಿನಿ/ಸಿಬ್ಬಂದಿ/ಗುತ್ತಿಗೆ/2021–23 ದಿನಾಂಕ: 20.07.2021
ಅಲ್ಪಾವಧಿ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕೆ.ಎಸ್.ಎಸ್.ಐ.ಡಿ.ಸಿ)ಕ್ಕೆ ಎರಡು ವರ್ಷದ ಅವಧಿಗೆ ಹೊರಸಂಪನ್ಮೂಲ ಆಧಾರಿತ ಕಛೇರಿ / ಭದ್ರತಾ ಸಿಬ್ಬಂದಿ ಸೇವೆ ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್ ಸಲ್ಲಿಸಲು ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಮತ್ತು ನಿಬಂಧನೆಗಳಿಗಾಗಿ ನಿಗಮದ ವೆಬ್‌ಸೈಟ್ www.kssidc.co.in ಮತ್ತು ಇ–ಪೋರ್ಟಲ್ ವೆಬ್‌ಸೈಟ್ ವಿಳಾಸ https://eproc.karnataka.gov.in ಕ್ಕೆ ಸಂಪರ್ಕಿಸಬಹುದಾಗಿದೆ.
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ಬೆಂ.ನ/ಜಿಎ/922/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಚೇರಿ (ವಿನ್ಯಾಸ),
9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009
ಸಂಖ್ಯೆ: ಬೆಂಜಮಂ/ಸಿಇಡಿಟಿಇ/ಅಮುಅ(ಗುಅ)/ತಾಂಸ/528/2021–22 ದಿನಾಂಕ: 23.07.2021
ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ಇತ್ತೀಚಿನ ತಿದ್ದುಪಡಿಗಳೊಂದಿಗೆ ಐಎಸ್:299/2012ಗೆ ಅನುಗುಣವಾಗುವಂತೆ 1000 ಎಮ್‌ಟಿಎಸ್ ಗ್ರೇಡ್ 4 ಆಲಮ್ ಅನ್ನು ಖರೀದಿಸುವ ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಟೆಂಡರ್‌ಗಿಟ್ಟ ಮೊತ್ತ: ₹ 2,34,10,000/– ಇಎಂಡಿ: ₹ 3,51,150/-
ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 25.08.2021ರ ಸಂಜೆ 4:00 ಗಂಟೆಯೊಳಗೆ. ಟೆಂಡರ್‌ಗಳನ್ನು ದಿನಾಂಕ: 27.08.2021ರ ಮಧ್ಯಾಹ್ನ 12:00 ಗಂಟೆಗೆ ತೆರೆಯಲಾಗುವುದು. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಮಾಹಿತಿಯನ್ನು ವೆಬ್‌ಸೈಟ್ https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ವಾ.ಸಾ.ಸಂ.ಇ/914/2021–22 ಸಹಿ/– ಮುಖ್ಯ ಅಭಿಯಂತರರು (ವಿನ್ಯಾಸ)
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಚಿನ್ನದ ಆಮದು ಭಾರಿ ಹೆಚ್ಚಳ

ನವದೆಹಲಿ (ಪಿಟಿಐ): ಚಿನ್ನದ ಆಮದಿನ ಮೌಲ್ಯವು 2020ರ ಏಪ್ರಿಲ್–ಜೂನ್ ಅವಧಿಗೆ ಹೋಲಿಸಿದರೆ ಈ ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ ಭಾರಿ ಏರಿಕೆ ಕಂಡಿದ್ದು, ₹ 58,572 ಕೋಟಿಗೆ ತಲುಪಿದೆ.

2020ರ ಏಪ್ರಿಲ್–ಜೂನ್ ಅವಧಿಯಲ್ಲಿ ಚಿನ್ನದ ಆಮದಿನ ಮೌಲ್ಯ ₹ 5,208 ಕೋಟಿ ಆಗಿತ್ತು ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಮಾಹಿತಿ ನೀಡಿದೆ.

ಬೆಳ್ಳಿ ಆಮದು ಶೇ 93.7ರಷ್ಟು ಕುಸಿತ ಕಂಡಿದ್ದು ₹ 2.91 ಲಕ್ಷ ಕೋಟಿಗಳಷ್ಟಾಗಿದೆ. ಚಿನ್ನದ ಆಮದು ಹೆಚ್ಚಾಗಿರುವುದರಿಂದ ದೇಶದ ವ್ಯಾಪಾರ ಕೊರತೆ ಅಂತರವು ₹ 2.29 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಎಫ್‌ಪಿಐ: ಷೇರುಪೇಟೆಯಿಂದ ₹ 5,689 ಕೋಟಿ ಹೊರಹರಿವು

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಜುಲೈ 1ರಿಂದ 23ರವರೆಗಿನ ಅವಧಿಯಲ್ಲಿ ದೇಶದ ಷೇರುಪೇಟೆಯಿಂದ ₹ 5,689 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ಇದೇ ಅವಧಿಯಲ್ಲಿ ಸಾಲಪತ್ರ ಮಾರುಕಟ್ಟೆಯಲ್ಲಿ ₹ 3,191 ಕೋಟಿ ಹೂಡಿಕೆ ಮಾಡಿದ್ದಾರೆ. ಇದರಿಂದಾಗಿ ಒಟ್ಟಾರೆ ಹೊರಹರಿವಿನ ಮೊತ್ತ ₹ 2,498 ಕೋಟಿಗಳಷ್ಟಾಗಿದೆ.

ಮಾರುಕಟ್ಟೆ ಮೌಲ್ಯ ವೃದ್ಧಿ, ಕಚ್ಚಾತೈಲ ದರ ಏರಿಕೆ ಹಾಗೂ ಅಮೆರಿಕದ ಡಾಲರ್ ಮೌಲ್ಯ ಸ್ಥಿರವಾಗಿರುವ ಕಾರಣಗಳಿಂದಾಗಿ ವಿದೇಶಿ ಹೂಡಿಕೆದಾರರು ದೇಶದ ಷೇರುಪೇಟೆಯಲ್ಲಿನ ಹೂಡಿಕೆಯಿಂದ ಹಿಂದೆ ಸರಿಯುವಂತೆ ಆಗಿದೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ದೀರ್ಘಾವಧಿಯ ದೃಷ್ಟಿಯಿಂದ ಭಾರತವು ಹೂಡಿಕೆಗೆ ಆಕರ್ಷಕ ತಾಣವಾಗಿ ಮುಂದುವರಿಯಲಿದೆ. ಆರ್ಥಿಕ ಚಟುವಟಿಕೆಗಳಲ್ಲಿ ಸುಧಾರಣೆ ಆಗಿ, ದೇಶಿ ಆರ್ಥಿಕತೆಯು ಚೇತರಿಕೆ ಹಾದಿಗೆ ಮರಳಲು ಆರಂಭಿಸಿದ ಬಳಿಕ ವಿದೇಶಿ ಬಂಡವಾಳ ಒಳಹರಿವು ಮತ್ತೆ ಆರಂಭವಾಗುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹510
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹510

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹241-448
ದ್ವಿತಳಿ (ಬಿ.ವಿ)	₹256-512

ಮ್ಯೂಚುವಲ್ ಫಂಡ್ ಆಧರಿಸಿ ಸಾಲ ಪಡೆಯುವುದು ಹೇಗೆ?

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

ನೀವು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದ್ದರೆ, ಹಣಕಾಸಿನ ತುರ್ತು ಎದುರಾದಾಗ ಆ ಹೂಡಿಕೆ ಹಿಂಪಡೆಯುವುದು ಒಳ್ಳೆಯ ಆಯ್ಕೆ. ಆದರೆ, ಷೇರುಪೇಟೆ ಅತಿಯಾಗಿ ಕುಸಿದಿರುವ ಸಂದರ್ಭದಲ್ಲಿ ಮ್ಯೂಚುವಲ್ ಫಂಡ್ ಯೂನಿಟ್ ಮಾರಾಟ ಮಾಡಿದರೆ ನಷ್ಟವಾಗುತ್ತದೆ. ಇಂತಹ ಸಂದರ್ಭದಲ್ಲಿ ಮ್ಯೂಚುವಲ್ ಫಂಡ್ ಹೂಡಿಕೆ ಆಧರಿಸಿ ಸಾಲ ಪಡೆಯುವ ಆಲೋಚನೆ ಮಾಡಬಹುದು. ಮ್ಯೂಚುವಲ್ ಫಂಡ್ ಹೂಡಿಕೆ ಆಧಾರದಲ್ಲಿ ಸಾಲ ಪಡೆಯುವುದು ಹೇಗೆ? ಇರುವ ಇತಿಮಿತಿಗಳೇನು? ಈ ಬಗ್ಗೆ ಕೆಲವು ಮಾಹಿತಿ ಇಲ್ಲಿದೆ.

ಸಾಲ ಪಡೆವ ಪ್ರಕ್ರಿಯೆ: ಎಷ್ಟು ಸಾಲ ಸಿಗುತ್ತದೆ ಎನ್ನುವುದು ನಿಮ್ಮ ಮ್ಯೂಚುವಲ್ ಫಂಡ್ ಪೋಲಿಯೊದಲ್ಲಿ ಎಷ್ಟು ಮೊತ್ತವಿದೆ ಎನ್ನುವುದನ್ನು ಅವಲಂಬಿಸಿರುತ್ತದೆ. ಸಾಲ ಪಡೆಯಲು ನಿಮ್ಮ ಮ್ಯೂಚುವಲ್ ಫಂಡ್ ಯೂನಿಟ್‌ಗಳನ್ನು ಅಡಮಾನ ರೂಪದಲ್ಲಿ ಇಡಬೇಕಾಗುತ್ತದೆ. ಅಡಮಾನ ಇಟ್ಟ ಮೇಲೆ ಬ್ಯಾಂಕ್ ನಿಮ್ಮ ಹೆಸರಲ್ಲಿ ಚಾಲ್ತಿ ಖಾತೆ ತೆರೆಸಿ ಓವರ್ ಡ್ರಾಫ್ಟ್ ರೂಪದಲ್ಲಿ ಸಾಲ ನೀಡುತ್ತದೆ. ಸಾಲ ಮರುಪಾವತಿಯ ತನಕ ಬ್ಯಾಂಕ್‌ಗಳು, ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ) ನಿಮ್ಮ ಯೂನಿಟ್‌ಗಳನ್ನು ಇಟ್ಟುಕೊಂಡಿರುತ್ತವೆ. ಸಾಲ ಮರುಪಾವತಿ ಮಾಡದಿದ್ದರೆ ಬ್ಯಾಂಕ್ ನಿಮ್ಮ ಮ್ಯೂಚುವಲ್ ಫಂಡ್ ಯೂನಿಟ್ ಮಾರಾಟ ಮಾಡಿ ಸಾಲದ ನಷ್ಟ ಭರಿಸಿಕೊಳ್ಳಬಹುದು.

ಸಾಲಕ್ಕೆ ಯಾರು ಅರ್ಹರು?: ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿರುವ, 18 ವರ್ಷ ವಯಸ್ಸು ಮೇಲ್ಪಟ್ಟವರು ಸಾಲಕ್ಕೆ ಅರ್ಜಿ ಸಲ್ಲಿಸಬಹುದು. ಹಲವು ವಿಷಯಗಳನ್ನು ಗಣನೆಗೆ ತೆಗೆದುಕೊಂಡ ನಂತರವಷ್ಟೇ ಸಾಲ ಮಂಜೂರಾತಿಯ ಬಗ್ಗೆ ನಿರ್ಧಾರ ಆಗುತ್ತದೆ. ಈಕ್ವಿಟಿ ಮ್ಯೂಚುವಲ್ ಫಂಡ್‌ಗಳ ಮೇಲೆ ಸಾಲ ಪಡೆಯಲು ಬಹುತೇಕ ಬ್ಯಾಂಕ್‌ಗಳು ವ್ಯಕ್ತಿಗಳಿಗಷ್ಟೇ ಅವಕಾಶ ನೀಡುತ್ತವೆ. ಆದರೆ ಸಾಲಪತ್ರ ಆಧಾರಿತ ಫಂಡ್‌ಗಳ ಮೇಲೆ ವ್ಯಕ್ತಿಗಳಿಗೆ, ಅವಿಭಕ್ತ ಹಿಂದೂ ಕುಟುಂಬಗಳಿಗೆ, ಕಂಪನಿ ಮಾಲೀಕರಿಗೆ, ಪಾರ್ಟ್ನರ್‌ಶಿಪ್ ಉದ್ಯಮಗಳಿಗೆ, ಕಂಪನಿಗಳಿಗೆ ಕೂಡ ಬ್ಯಾಂಕ್‌ಗಳು ಸಾಲ ನೀಡುತ್ತವೆ.

ಎಸ್‌ಬಿಐ, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ, ಎಕ್ಸಿಸ್ ಸೇರಿ ಇನ್ನೂ ಕೆಲವು ಬ್ಯಾಂಕ್‌ಗಳು ಸಾಲ ಒದಗಿಸುತ್ತವೆ. ಎನ್‌ಬಿಎಫ್‌ಸಿಗಳಾದ ಬಜಾಜ್ ಫಿನ್‌ಸರ್ವ್, ಟಾಟಾ ಕ್ಯಾಪಿಟಲ್, ಫುಲರ್ ಟನ್ ಇಂಡಿಯಾ ಕೂಡ ಮ್ಯೂಚುವಲ್ ಫಂಡ್ ಆಧರಿಸಿ ಸಾಲ ಕೊಡುತ್ತವೆ.

ಮ್ಯೂಚುವಲ್ ಫಂಡ್ ಆಧರಿಸಿ ಸಾಲ ನೀಡಲು ಆಯ್ದ ಕೆಲವು ಮ್ಯೂಚುವಲ್ ಫಂಡ್‌ಗಳನ್ನಷ್ಟೇ ಬ್ಯಾಂಕ್‌ಗಳು ಪರಿಗಣಿಸುತ್ತವೆ. ಬ್ಯಾಂಕ್‌ಗಳು ಮತ್ತು ಎನ್‌ಬಿಎಫ್‌ಸಿಗಳ ಬಳಿ ಸಾಲ ನೀಡಬಹುದಾದ ಮ್ಯೂಚುವಲ್ ಫಂಡ್‌ಗಳ ಪಟ್ಟಿ ಇರುತ್ತದೆ. ಉದಾಹರಣೆಗೆ, ಐಸಿಐಸಿಐ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ಗಳು ಕ್ಯಾಮ್ಸ್ (CAMS) ಜೊತೆ ನೋಂದಣಿ ಮಾಡಿಕೊಂಡಿರುವ ಮ್ಯೂಚುವಲ್ ಫಂಡ್‌ಗಳಿಗೆ ಮಾತ್ರ ಸಾಲ ಕೊಡುತ್ತವೆ. ಎಕ್ಸಿಸ್ ಮ್ಯೂಚುವಲ್ ಫಂಡ್, ಮೋತಿಲಾಲ್ ಓಸ್ವಾಲ್, ಮಿರಾಯ್ ಅಸೆಟ್, ನಿಪ್ಪಾನ್ ಇಂಡಿಯಾ ಮ್ಯೂಚುವಲ್ ಫಂಡ್‌ಗಳ ಯೂನಿಟ್‌ಗಳ ಮೇಲೆ ಈ ಎರಡೂ ಬ್ಯಾಂಕ್‌ಗಳು ಸಾಲ ನೀಡುವುದಿಲ್ಲ.

ಎಸ್‌ಬಿಐ ವಿಚಾರಕ್ಕೆ ಬಂದರೆ, ಎಸ್‌ಬಿಐ ಮ್ಯೂಚುವಲ್ ಫಂಡ್ ಯೋಜನೆಗಳ ಮೇಲಷ್ಟೇ ಇಲ್ಲಿ ಸಾಲ ಲಭಿಸುತ್ತದೆ. ಹಾಗಾಗಿ ಮ್ಯೂಚುವಲ್ ಫಂಡ್‌ಗಳನ್ನು ಅಡಮಾನ ಇರಿಸಿ ಸಾಲ ಪಡೆಯುವಾಗ ಒಂದಕ್ಕಿಂತ ಹೆಚ್ಚು ಬ್ಯಾಂಕ್‌ಗಳಿಗೆ ಅರ್ಜಿ ಸಲ್ಲಿಸುವುದು ಸೂಕ್ತ.

ಸಾಲದ ಮಿತಿಯ ಲೆಕ್ಕಾಚಾರ: ಎಷ್ಟು ಸಾಲ ಸಿಗುತ್ತದೆ ಎನ್ನುವುದು ಮ್ಯೂಚುವಲ್ ಫಂಡ್ ಮಾದರಿ ಮತ್ತು ಹಣಕಾಸು ಸಂಸ್ಥೆಗಳ ಆಂತರಿಕ ನಿಯಮಗಳಿಗೆ ಅನುಗುಣವಾಗಿ ನಿರ್ಧಾರವಾಗುತ್ತದೆ. ಸಾಲಪತ್ರ ಆಧಾರಿತ ಫಂಡ್‌ಗಳಿಗೆ ಬಹುತೇಕ ಬ್ಯಾಂಕ್‌ಗಳು ನೆಟ್ ಅಸೆಟ್ ವ್ಯಾಲ್ಯೂನ (ಅಂದರೆ ಒಂದು ಯೂನಿಟ್‌ನ ಮಾರುಕಟ್ಟೆ ಬೆಲೆ) ಶೇ 80ರಷ್ಟು ಸಾಲ ಕೊಡುತ್ತವೆ. ಈಕ್ವಿಟಿ ಫಂಡ್‌ಗಳಿಗೆ ನೆಟ್ ಅಸೆಟ್ ವ್ಯಾಲ್ಯೂನ ಶೇ 50ರಷ್ಟು ಸಾಲ ಒದಗಿಸುತ್ತವೆ. ಅಂದರೆ ನಿಮ್ಮ ಬಳಿ ₹ 5 ಲಕ್ಷ ಮೌಲ್ಯದ ಸಾಲಪತ್ರ ಆಧಾರಿತ ಫಂಡ್ ಇದ್ದರೆ ₹ 4 ಲಕ್ಷ ಸಾಲ ಸಿಗುತ್ತದೆ. ಹಾಗೆಯೇ ₹ 10 ಲಕ್ಷ ಮೌಲ್ಯದ ಈಕ್ವಿಟಿ ಫಂಡ್ ಇದ್ದರೆ ₹ 5 ಲಕ್ಷ ಸಾಲ ಲಭಿಸುತ್ತದೆ.

ಐಸಿಐಸಿಐ ಬ್ಯಾಂಕ್ ಮ್ಯೂಚುವಲ್ ಫಂಡ್‌ಗಳ ಮೇಲೆ ₹ 20 ಲಕ್ಷದವರೆಗೆ ಸಾಲ ನೀಡುತ್ತದೆ. ಫುಲ್ಲರ್ ಟನ್ ಇಂಡಿಯಾ ₹ 5 ಕೋಟಿವರೆಗೆ ಸಾಲ ಕೊಡುತ್ತದೆ. ಆದಿತ್ಯ ಬಿರ್ಲಾ ಮತ್ತು ಬಜಾಜ್ ಫಿನ್‌ಸರ್ವ್ ₹ 10 ಕೋಟಿವರೆಗೂ ಸಾಲ ಒದಗಿಸುತ್ತವೆ. ಎಸ್‌ಬಿಐ, ಫಂಡ್‌ಗಳ ಆಧಾರದ ಮೇಲೆ ₹ 20 ಲಕ್ಷದಿಂದ ₹ 5 ಕೋಟಿವರೆಗೆ ಸಾಲ ಸೌಲಭ್ಯ ಕಲ್ಪಿಸುತ್ತದೆ.

ಬಡ್ಡಿ ದರ, ಶುಲ್ಕಗಳು: ಮ್ಯೂಚುವಲ್ ಫಂಡ್ ಆಧಾರವಾಗಿಟ್ಟು ಪಡೆಯುವ ಸಾಲಕ್ಕೆ ಬ್ಯಾಂಕ್‌ಗಳು ಪ್ರಸ್ತುತ ಶೇ 9.5ರಿಂದ ಶೇ 12ರವರೆಗೆ ಬಡ್ಡಿ ವಿಧಿಸುತ್ತಿವೆ. ಸಾಮಾನ್ಯವಾಗಿ ಈ ಸಾಲದ ಮೇಲಿನ ಬಡ್ಡಿ ದರ ವೈಯಕ್ತಿಕ ಸಾಲದ ಬಡ್ಡಿ ದರಕ್ಕಿಂತ ಕಡಿಮೆ ಇರುತ್ತದೆ. ಐಸಿಐಸಿಐ ಬ್ಯಾಂಕ್ ₹ 3,500 (ಜಿಎಸ್‌ಟಿ ಶುಲ್ಕ ಹೊರತುಪಡಿಸಿ) ಸಂಸ್ಕರಣಾ ಶುಲ್ಕ ನಿಗದಿ ಮಾಡಿದೆ. ಎಸ್‌ಬಿಐನಲ್ಲಿ ಸಾಲ ಮೊತ್ತದ ಶೇ 0.75ರಷ್ಟು ಮೊತ್ತವನ್ನು ಸಂಸ್ಕರಣಾ ಶುಲ್ಕವಾಗಿ ಪಡೆಯಲಾಗುತ್ತದೆ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ., ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಅಲ್ಪ ಕುಸಿತ ಕಂಡ ಷೇರುಪೇಟೆ

ಜುಲೈ 24ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಪ್ರಮಾಣದಲ್ಲಿ ಕುಸಿದಿವೆ. 52,975 ಅಂಶಗಳಲ್ಲಿವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ಶೇ 0.3ರಷ್ಟು ತಗ್ಗಿದ್ದರೆ, 15,856 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿಶೇ 0.42ರಷ್ಟು ಕುಸಿದಿದೆ. ಜಾಗತಿಕ ಮಾರುಕಟ್ಟೆಗಳಲ್ಲಿನ ಅನಿಶ್ಚಿತತೆ, ಕೋವಿಡ್ ಪ್ರಕರಣಗಳಲ್ಲಿ ಹೆಚ್ಚಳ ಮತ್ತು ಕೆಲವು ಕಂಪನಿಗಳ ತ್ರೈಮಾಸಿಕ ಫಲಿತಾಂಶದಲ್ಲಿ ನಿರೀಕ್ಷಿತ ಸಾಧನೆ ಕಂಡುಬರದಿರುವುದು ಸೇರಿ ಹಲವು ಅಂಶಗಳು ಕುಸಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ವಲಯ ಶೇ 2.6ರಷ್ಟು ಕುಸಿತ ಕಂಡಿದೆ. ವಾಹನ ಮತ್ತು ಬ್ಯಾಂಕ್ ವಲಯಗಳು ಸಹ ತಲಾ ಶೇ 2ರಷ್ಟು ಇಳಿಕೆಯಾಗಿವೆ. ಐ.ಟಿ. ವಲಯ ಶೇ 1.6ರಷ್ಟು, ರಿಯಲ್ ಎಸ್ಟೇಟ್ ವಲಯ ಶೇ 0.9ರಷ್ಟು ಏರಿಕೆ ಕಂಡಿವೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ವಿಪ್ರೊ ಶೇ 3.5ರಷ್ಟು, ಬಜಾಜ್ ಫಿನ್‌ಸರ್ವ್ ಶೇ 3.5ರಷ್ಟು, ಏಷ್ಯನ್ ಪೇಂಟ್ಸ್ ಶೇ 3ರಷ್ಟು, ಬಿಪಿಸಿಎಲ್ ಶೇ 2.5ರಷ್ಟು, ನೆಸ್ಲೆ ಶೇ 2.5ರಷ್ಟು, ಐಸಿಐಸಿಐ ಬ್ಯಾಂಕ್ ಶೇ 2.2ರಷ್ಟು, ಟೆಕ್ ಮಹೀಂದ್ರ ಶೇ 2.3ರಷ್ಟು ಮತ್ತು ಇನ್ಫೊಸಿಸ್ ಶೇ 2ರಷ್ಟು ಜಿಗಿದಿವೆ.

ಇಂಡಸ್ ಇಂಡ್ ಬ್ಯಾಂಕ್ ಶೇ 6ರಷ್ಟು, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 5ರಷ್ಟು ಮತ್ತು ಟಾಟಾ ಮೋಟರ್ಸ್ ಶೇ 5ರಷ್ಟು ಇಳಿಕೆಯಾಗಿವೆ.

ಮುನ್ನೋಟ: ಟಾಟಾ ಮೋಟರ್ಸ್, ಮಾರುತಿ, ಟಿವಿಎಸ್ ಮೋಟರ್ಸ್, ಜೆಕೆ ಪೇಪರ್, ಕೋಟಕ್ ಬ್ಯಾಂಕ್, ಎಸ್‌ಬಿಐ ಲೈಫ್, ನೆಸ್ಲೆ ಇಂಡಿಯಾ, ಎನ್‌ಟಿಪಿಸಿ, ಬಿಎಚ್‌ಇಎಲ್ ಸೇರಿ ಪ್ರಮುಖ ಕಂಪನಿಗಳು ಈ ವಾರ ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಗ್ಲೆನ್‌ಮಾರ್ಕ್ ಲೈಫ್ ಸೈನ್ಸಸ್ ಐಪಿಒ ಮಂಗಳವಾರದಿಂದ (ಜುಲೈ 27) ಆರಂಭವಾಗಲಿದೆ. ತ್ರೈಮಾಸಿಕ ಫಲಿತಾಂಶಗಳು, ಜಾಗತಿಕ ವಿದ್ಯಮಾನಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರುವುದರಿಂದ ಸದ್ಯದ ಸ್ಥಿತಿಯಲ್ಲಿ ಮಾರುಕಟ್ಟೆಯಲ್ಲಿ ಏರಿಳಿತ ಮುಂದುವರಿಯಲಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

Public Notice
NOTICE is hereby given on behalf of M/s Inabensa Bharat Private Limited ("IBPL") that we have filed Company Petition No. (IB)-1041(ND)2020 before the Hon'ble National Company Law Tribunal, New Delhi ("NCLT") under Section 10 of the Insolvency and Bankruptcy Code, 2016 seeking initiation of Corporation Insolvency Resolution Process. The Hon'ble NCLT vide its orders dated 17.02.2021 and 13.07.2021 directed issuance of notice in the Petition upon all Creditors and the matter is now listed before the NCLT on 31.08.2021. The creditors of IBPL may accordingly take note of the same and be present before the Hon'ble NCLT on 31.08.2021. A copy of the Petition can be obtained from the undersigned.
FOR INABENSA BHARAT PRIVATE LIMITED
PLA Advocates - Aniket Prasoon
aniket.prasoon@plalegal.com
Contact Number: +91 9871012051, +91 11 4554 9494

ಭವಿಷ್ಯ

Astrology

★॥ಶ್ರೀಅಂಬಾಭವಾನಿದೇವಿ॥★ ಜ್ಯೋತಿಷ್ಯರು ಪ್ರೀತಿಪ್ರೇಮ ವಶೀಕರಣ, ದಾಂಪತ್ಯ, ಸಾಲದಬಾದೆ ಇನ್ಯಾವುದೇ ಕಠಿಣ_ಗುಪ್ತ ಸಮಸ್ಯೆಗಳಿಗೆ 5_ನಿಮಿಷಗಳಲ್ಲಿ ಪರಿಹಾರ. ವಶೀಕರಣ_ಸ್ಪೆಷಲಿಸ್ಟ್. 7204848318

★ಶ್ರೀಸಾಯಿಗುರು ಜ್ಯೋತಿಷ್ಯ★ ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಸಂತಾನಭಾಗ್ಯ, ಇನ್ಯಾವುದೇ ಎಲ್ಲಿಯೂ ಪರಿಹಾರ ಕಾಣದ ಎಷ್ಟೇಕಠಿಣವಾದ ಗುಪ್ತಸಮಸ್ಯೆಗಳಿಗೆ100% ಪರಿಹಾರ. 7829724990

EDUCATION SPECIAL
We are coming out with special offer for Admission Notice, Education Success Congratulation Ads
For details contact:
Jerry : 9731810277
Vishal : 9845114560
Tanveer : 9886213331
E-mail: dhclassifieds@deccanherald.co.in

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ನಿಮ್ಮ ನಿಗೂಢ ಹಾಗೂ ಕಠಿಣ ಸಮಸ್ಯೆಗಳಿಗೆ ಕೇವಲ 1 ಗಂಟೆಯಲ್ಲಿ ಪರಿಹಾರ ಇದು ಚಮತ್ಕಾರ ಅಲ್ಲ. ಸಿದ್ಧಿಸಾಧಕರ ಸಾಧನೆ: 9148244231

ಸ್ತ್ರೀವಶೀಕರಣ, ಪುರುಷವಶೀಕರಣ ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ತಕ್ಷಣ ಬೇಕಾಗಿದ್ದಾರೆ MNCಕಂಪನಿಗಳಿಗೆ SSLC,PUC,ITI Diplomaದವರು ಕೆಲಸಕ್ಕೆ ಬೇಕಾಗಿದ್ದಾರೆ ಉಚಿತ ವಸತಿಯೂಟದೊಂದಿಗೆ ಸಂಬಳ: 15,800 to 45000/- .8904170684, 8884435270

ಕಂಪನಿಗಳಿಗೆ ಬೇಕಾಗಿದ್ದಾರೆ. ವಿಡಿಯೋಕಾನ್, ಟಯೋಟ, TVS ಬ್ರಿಟಾನಿಯಾಗಳಿಗೆ SSLC, PUC, ITI ನವರು ವಿದ್ಯಾರ್ಹತೆಯಿಲ್ಲದವರು ನೇರನೇಮಕಾತಿ 16,200- 56,200/- ವಸತಿಯೂಟವಿದೆ. 9611715755

100%ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) ಬೆಂಗಳೂರಿನ Private Limitedಕಂಪನಿಗಳಲ್ಲಿ ಕೆಲಸಮಾಡಲು7th,SSLC,PUC, Degree,Diploma, ITI,BE(Pass/fail) ಆದಂತಹವರು 1684ಯುವಕರು ಪರ್ಮನೆಂಟ್ ಹುದ್ದೆಗಳಿಗೆ ತಕ್ಷಣ ಬೇಕಾಗಿದ್ದಾರೆ(ವಿದ್ಯರ್ಹತೆಯಿಲ್ಲದವರೂ) ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 13,615-24,815/- ಸಂಪರ್ಕಿಸಿ:9900917474, 9900476464

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800- 45000/-. 9980295449, 9902839010

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9141634619

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-25,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

HEALTH SPECIAL

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ
ಲೈಂಗಿಕ ರೋಗಗಳು, ಉದ್ರೇಕದ ಸಮಸ್ಯೆ, ಲೈಂಗಿಕ ನಿರಾಸಕ್ತಿ, ನಿದ್ರಾ ಸ್ಖಲನ, ಶೀಘ್ರ ಸ್ಖಲನ, ಲಿಂಗ ಚಿಕ್ಕದಾಗುವುದು, ನರ ದೌರ್ಬಲ್ಯ, ಅವಧಿಗೆ ಮೊದಲೇ ಸ್ಖಲನ, ಆತಂಕ, ದೌರ್ಬಲ್ಯ, ಕಡಿಮೆ ವೀರ್ಯಾಣು, ಮುಷ್ಠಿ ಮೈಥುನದ ಅಡ್ಡಪರಿಣಾಮ
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
No Side Effects 100%
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

Wanted

ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ.15,000 86,000. 7259685221, 7760116548

ಮನೆಯಿಂದಲೆ ಕುಳಿತು ಡಾಟಾ ಎಂಟ್ರಿ ಫಾರಂಫಿಲ್ಲಿಂಗ್ ಬರವಣಿಗೆ Offline. Weekly ಪೇಮೆಂಟ್ಸ್ 3000- 5000. ಸಂಪರ್ಕಿಸಿ: 7624918246, 7259848246.

ರೆಂಟಲ್ ಪ್ರಾಪರ್ಟೀಸ್

Accommodation Available

Paying Guest

PG FOR Ladies ಸ್ತ್ರೀಯರು ಕಡಿಮೆ ವೆಚ್ಚದಲ್ಲಿ ಶಾಂತಿಯಿಂದ ಜೀವಿಸಲು ಅನುಕೂಲಕರವಾದ ಸ್ಥಳ. ಸೇರಲು ಬಯಸುವವರು ಸಂಪರ್ಕಿಸಿ: 8147217487

ಪ್ರವಾಸ

Travel

14.08.2021 3ದಿನಗಳ ಉಜ್ಜಯಿನಿ, ಮಹಕಳೇಶ್ವರ, ಓಂಕಾರೇಶ್ವರ. 21.08.2021 3ದಿನಗಳ ಭುವನೇಶ್ವರ್, ಪುರಿಜಗನ್ನಾಥ,ಕೊನಾರ್ಕ್. 21.08.2021 10ದಿನಗಳ ಲೇಹಲಡಾಖ್. 22.08.2021 7ದಿನಗಳ ತಮಿಳುನಾಡು ಸೆಪ್ಟೆಂಬರ್,ಅಕ್ಟೋಬರಿನಲ್ಲಿ 12ದಿನಗಳ ಗುಜರಾತ್/ರಾಜಸ್ಥಾನ್ ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು-40 9880847001, 9342848791

ವಾಹನ

Four Wheelers Selling

Others

ಯಶಸ್ಸು ಮೂರು ಚಿನ್ನದ ಆನೆಗಳೊಂದಿಗೆ
Ace GOLD CNG ವಾಹನ ಆಕರ್ಷಕ ಕೊಡುಗೆಗಳೊಂದಿಗೆ

4.99%* ಬಡ್ಡಿದರ 48 ತಿಂಗಳು
ಅಥವಾ
5.99%* ಬಡ್ಡಿದರ 60 ತಿಂಗಳು
ಕೊಡುಗೆಗಳು ₹25 000/-* ದವರೆಗೆ
ಎಕ್ಸ್‌ಚೇಂಜ್ ₹12 000/-* ದವರೆಗೆ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95389 35533
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 96208 63338
Hubli/Haveri/Gadag/Bellary/Raichur - 96209 55858
Bagalkot/Bijapur/Gulbarga/Bidar - 73899 44057
Hubli/Belgaum 91088 64572
* ಷರತ್ತುಗಳು ಅನ್ವಯಿಸುತ್ತದೆ.

ಸಂಕ್ಷಿಪ್ತ ಸುದ್ದಿ

ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಚುನಾವಣೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಭಾನುವಾರ ವಿಧಾನಸಭೆಗೆ ಚುನಾವಣೆ ನಡೆಯಿತು.

45 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಮತದಾರರು ಮತ ಚಲಾಯಿಸಿದರು. ಈ ಭಾಗದಲ್ಲಿ 32 ಲಕ್ಷಕ್ಕೂ ಹೆಚ್ಚಿನ ಮತದಾರರಿದ್ದಾರೆ.

ಚುನಾವಣೆಯಲ್ಲಿ ಪಾಕಿಸ್ತಾನ ತೆಹ್ರೀಕ್-ಇ-ಇನ್ಸಾಫ್ (ಪಿಟಿಐ), ಪಾಕಿಸ್ತಾನ ಮುಸ್ಲಿಂ ಲೀಗ್-ನವಾಜ್ (ಪಿಎಂಎಲ್-ಎನ್) ಮತ್ತು ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) ಒಳಗೊಂಡ ಕಠಿಣ ತ್ರಿಕೋನ ಸ್ಪರ್ಧೆಯನ್ನು ನಿರೀಕ್ಷಿಸಲಾಗಿದೆ.

ಕಳೆದ ವರ್ಷ ಗಿಲ್ಗಿಟ್– ಬಾಲಿಸ್ತಾನದಲ್ಲಿಯೂ ಪಾಕಿಸ್ತಾನ ಚುನಾವಣೆ ನಡೆಸಿತ್ತು. ಇದಕ್ಕೆ ಭಾರತ ತೀವ್ರ ವಿರೋಧ ವ್ಯಕ್ತಪಡಿಸಿತ್ತು. ಮಿಲಿಟರಿ ಆಕ್ರಮಿತ ಪ್ರದೇಶದ ಸ್ಥಿತಿಯನ್ನು ಬದಲಾಯಿಸುವ ಯಾವುದೇ ಕ್ರಮಕ್ಕೆ ಕಾನೂನು ಮಾನ್ಯತೆ ಇರುವುದಿಲ್ಲ ಎಂದೂ ಭಾರತ ಎಚ್ಚರಿಕೆ ನೀಡಿತ್ತು.

ಚೀನಾ: ಪೂರ್ವ ಕರಾವಳಿಗೆ ಇನ್–ಫಾ ಚಂಡಮಾರುತ

ಶಾಂಘೈ (ಎಪಿ): ಚೀನಾದ ಪೂರ್ವ ಕರಾವಳಿಯ ಶಾಂಘೈನ ದಕ್ಷಿಣಕ್ಕೆ ಭಾನುವಾರ 'ಇನ್– ಫಾ' ಚಂಡಮಾಡುತ ಅಪ್ಪಳಿಸಿದ್ದು, ವಿಮಾನಯಾನ ಮತ್ತು ರೈಲುಗಳನ್ನು ರದ್ದುಗೊಳಿಸಲಾಗಿದೆ. ಜನರು ಮನೆಯಿಂದ ಹೊರಗೆ ಬಾರದಂತೆ ಅಲ್ಲಿನ ಸರ್ಕಾರ ಎಚ್ಚರಿಕೆ ನೀಡಿದೆ.

ಚಂಡಮಾರುತದಿಂದಾಗಿ ಜೆಜಿಯಾಂಗ್ ಪ್ರಾಂತ್ಯದ ಜೊಹೊಸಾನ್‌ನಲ್ಲಿ ಭೂಕುಸಿತವಾಗಿದೆ ಎಂದು ಅಲ್ಲಿನ ಸ್ಥಳೀಯ ಟಿವಿ ವಾಹಿನಿಯೊಂದು ವರದಿ ಮಾಡಿದೆ. ಗಂಟೆಗೆ 155 ಕಿ.ಮೀ. ವೇಗದಲ್ಲಿ ಚಂಡಮಾರುತ ಬೀಸುತ್ತಿದೆ. ಚಂಡಮಾರುತದಿಂದಾಗಿ ಅಲ್ಲಲ್ಲಿ ಮರಗಳು ಧರೆಗುಳಿದಿವೆ. ಆದರೆ, ಯಾವುದೇ ಸಾವು–ನೋವು ಉಂಟಾದ ವರದಿಯಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ವಿಮಾಯಾನ, ರೈಲುಸೇವೆ ರದ್ದು: ಶಾಂಘೈ ಪುಡಾಂಗ್ ಮತ್ತು ಶಾಂಘೈ ಹಾಂಗ್‌ಗಿಯಾವೊ ಸೇರಿದಂತೆ ಹ್ಯಾಂಗ್‌ಜುಹೊ ವಿಮಾನನಿಲ್ದಾಣಗಳಲ್ಲಿ ಅಂತರರಾಷ್ಟ್ರೀಯ ವಿಮಾನಯಾನವನ್ನು ರದ್ದುಪಡಿಸಲಾಗಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಸರದಿ ಪ್ರಕಾರ ಆಗಸ್ಟ್ 1ರಿಂದ ಭಾರತಕ್ಕೆ ಅಧ್ಯಕ್ಷ ಸ್ಥಾನ

ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಸಮತೋಲನದ ಅಗತ್ಯ: ಭಾರತ

ತಿರುಮೂರ್ತಿ

ವಿಶ್ವಸಂಸ್ಥೆ (ಪಿಟಿಐ): 'ಸ್ವತಂತ್ರವಾದ ವಿದೇಶಾಂಗ ನೀತಿ ಹೊಂದಿರುವ ಭಾರತದಂತಹ ಅತಿ ದೊಡ್ಡ ರಾಷ್ಟ್ರವನ್ನು ವಿಶ್ವಸಂಸ್ಥೆ ಭದ್ರತಾ ಮಂಡಳಿಗೆ ಸ್ವಾಗತಿಸಲಾಗುತ್ತಿದೆ. ಈ ಮೂಲಕ ಮಂಡಳಿಯಲ್ಲೂ ಸಮತೋಲನ ಕಾಪಾಡಲಾಗಿದೆ. ಇಂತಹ ಕ್ರಮಗಳು ಅಗತ್ಯವಾಗಿವೆ' ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿಯಾಗಿರುವ ಟಿ.ಎಸ್.ತಿರುಮೂರ್ತಿ ಹೇಳಿದ್ದಾರೆ.

ಸರದಿ ಪ್ರಕಾರ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಅಧ್ಯಕ್ಷ ಸ್ಥಾನವನ್ನು ಭಾರತ ಆಗಸ್ಟ್ 1ರಂದು ವಹಿಸಿಕೊಳ್ಳಲಿದೆ. 15 ರಾಷ್ಟ್ರಗಳ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ, ಕಾಯಂ ಸದಸ್ಯತ್ವವಲ್ಲದ ರಾಷ್ಟ್ರವಾಗಿ 2021–22ರ ಅವಧಿಯಲ್ಲಿ ಭಾರತ ಮೊದಲ ಬಾರಿ ಈ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳಲಿದೆ.

ಅಧ್ಯಕ್ಷ ಸ್ಥಾನ ವಹಿಸಿಕೊಳ್ಳುವ ಹಿನ್ನೆಲೆಯಲ್ಲಿ ತಿರುಮೂರ್ತಿ ಅವರು ಭಾರತದ ನಿಲುವುಗಳು ಮತ್ತು ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಕಾಯಂ ಸದಸ್ಯ ರಾಷ್ಟ್ರಗಳಾದ ಚೀನಾ, ಫ್ರಾನ್ಸ್, ರಷ್ಯಾ, ಬ್ರಿಟನ್ ಮತ್ತು ಅಮೆರಿಕ ಹೊಂದಿರುವ ವಿಟೊ ಅಧಿಕಾರವನ್ನು ಪ್ರಸ್ತಾಪಿಸಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

'ಮಹತ್ವದ ಸನ್ನಿವೇಶ ಮತ್ತು ಸಂದರ್ಭದಲ್ಲಿ ಭಾರತ ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿದೆ. ಕೋವಿಡ್ ಸಾಂಕ್ರಾಮಿಕ ಕಾಯಿಲೆಯ ಸಂಕಷ್ಟದ ಜತೆಗೆ ಹಲವು ಬಿಕ್ಕಟ್ಟುಗಳನ್ನು ಎದುರಿಸಲಾಗುತ್ತಿದೆ. ಒಗ್ಗಟ್ಟಿನಿಂದ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಅಗತ್ಯವಿದೆ' ಎಂದು ಅವರು ತಿರುಮೂರ್ತಿ ಹೇಳಿದ್ದಾರೆ.

'ಭಾರತ ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದರಿಂದ ಹಿಂದೆ ಸರಿದಿಲ್ಲ ಮತ್ತು ಭಯಪಟ್ಟಿಲ್ಲ. ಭಾರತ ಸದಾ ತನ್ನ ನಿಲುವುಗಳನ್ನು ನಿರ್ಭೀತಿಯಿಂದ ವ್ಯಕ್ತಪಡಿಸಿದೆ' ಎಂದು ಹೇಳಿದ್ದಾರೆ.

ಮ್ಯಾನ್ಮಾರ್ ಮತ್ತು ಅಫ್ಗಾನಿಸ್ತಾನದಲ್ಲಿನ ಬೆಳವಣಿಗೆಗಳನ್ನು ಪ್ರಸ್ತಾಪಿಸಿದ ಅವರು, 'ಈ ದೇಶಗಳಲ್ಲಿ ಪದೇ ಪದೇ ಸಂಭವಿಸುತ್ತಿರುವ ಬಿಕ್ಕಟ್ಟಿನ ಬಗ್ಗೆ ಮಂಡಳಿಯಲ್ಲಿ ಚರ್ಚೆಯಾಗುವಂತೆ ಭಾರತ ಒತ್ತಾಯಿಸಿದೆ' ಎಂದು ಹೇಳಿದ್ದಾರೆ.

₹100 ಕೋಟಿ ವಂಚನೆ: ಖಾಸಗಿ ಕಂಪನಿ ಎಂ.ಡಿ ಬಂಧನ

ನವದೆಹಲಿ (ಪಿಟಿಐ): ಸುಮಾರು ₹100 ಕೋಟಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಆರ್ಥಿಕ ಅಪರಾಧಗಳ ವಿಭಾಗದ ಪೊಲೀಸರು ಖಾಸಗಿ ಕಂಪನಿಯೊಂದರ ವ್ಯವಸ್ಥಾಪಕ ನಿರ್ದೇಶಕರನ್ನು ಮುಂಬೈನಲ್ಲಿ ಬಂಧಿಸಿದ್ದಾರೆ.

ಐಎಲ್ ಮತ್ತು ಎಫ್‌ಎಸ್ ರೈಲ್ ಲಿ.ನ ನಿರ್ದೇಶಕ ಮತ್ತು ಐಎಲ್ ಮತ್ತು ಎಫ್‌ಎಸ್‌ನ ಸಾರಿಗೆ ನೆಟ್‌ವರ್ಕ್ ಲಿ.ನ ವ್ಯವಸ್ಥಾಪಕ ನಿರ್ದೇಶಕ ರಾಮ್‌ಚಂದ್ ಕರುಣಾಕರನ್ ಬಂಧಿತ ಆರೋಪಿ. ಈತನ ವಿರುದ್ಧ 2018ರಲ್ಲಿ ವಂಚನೆ, ನಕಲಿ ಒಪ್ಪಂದ, ಹಣ ದುರುಪಯೋಗ ಸೇರಿದಂತೆ ವಿವಿಧ ಆರೋಪಗಳಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿತ್ತು. ನ್ಯಾಯಾಲಯವು ಹೆಚ್ಚಿನ ವಿಚಾರಣೆಗಾಗಿ ಪೊಲೀಸ್ ಕಸ್ಟಡಿಗೆ ವಹಿಸಿದೆ.

ಕೋವಿಡ್: ಶಾಲೆಗಳ ಆದಾಯ ಶೇ 20ರಿಂದ 50ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕವು ಶಿಕ್ಷಣ ಸಂಸ್ಥೆಗಳ ಮೇಲೆ ಭಾರಿ ಪರಿಣಾಮ ಬೀರಿದೆ. ಖಾಸಗಿ ಶಾಲೆಗಳ ಆದಾಯದಲ್ಲಿ ಶೇ20ರಿಂದ 50ರಷ್ಟು ಇಳಿಕೆಯಾಗಿದೆ. ಇದರಿಂದ ಬಹುತೇಕ ಶಿಕ್ಷಕರು ವೇತನ ಕಡಿತ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ ಎಂದು ವರದಿಯೊಂದು ಹೇಳಿದೆ.

ಭಾರತದ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಉತ್ತಮಪಡಿಸಲು ಕಾರ್ಯ ನಿರ್ವಹಿಸುವ ಸರ್ಕಾರೇತರ ಸಂಸ್ಥೆ ಸೆಂಟ್ರಲ್ ಸ್ಕ್ವೇರ್ ಫೌಂಡೇಷನ್ (ಸಿಎಸ್‌ಎಫ್) ಈ ಸಂಬಂಧ ಅಧ್ಯಯನವೊಂದನ್ನು ನಡೆಸಿದೆ. ಇದರಲ್ಲಿ 20 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದ 1,100 ಮಂದಿ(ಪೋಷಕರು,ಶಾಲಾ ಸಿಬ್ಬಂದಿ, ಶಿಕ್ಷಕರು) ಭಾಗಿಯಾಗಿದ್ದರು.

ಈ ವರ್ಷ ಹೊಸದಾಗಿ ಪ್ರವೇಶ ಪಡೆಯುವವರ ಸಂಖ್ಯೆ ಕಡಿಮೆಯಾಗಿದೆ ಎಂದು ಶೇ 55ರಷ್ಟು ಶಾಲೆಗಳು ಹೇಳಿದರೆ, ಮುಕ್ಕಾಲು ಭಾಗದಷ್ಟು ಶಾಲೆಗಳು ಆರ್‌ಟಿಇ(ಶಿಕ್ಷಣದ ಹಕ್ಕು) ಅಡಿ ಸರ್ಕಾರದಿಂದ ಬರಬೇಕಾದ ಶುಲ್ಕ ಮರುಪಾವತಿಯಾಗುವುದು ವಿಳಂಬವಾಗುತ್ತಿದೆ ಎಂದು ತಿಳಿಸಿವೆ.

ಶೇ 20ರಿಂದ 50ರಷ್ಟು ಆದಾಯ ಕಡಿಮೆಯಾಗಿದೆ. ಇದರಿಂದಾಗಿ ಶಾಲೆಗಳು ಸಂಕಷ್ಟ ಎದುರಿಸುತ್ತಿವೆ. ಕೋವಿಡ್‌ನಿಂದ ಪೋಷಕರಿಗೆ ನಿಯಮಿತವಾಗಿ ಶುಲ್ಕವನ್ನು ಭರಿಸಲು ಸಾಧ್ಯವಾಗುತ್ತಿಲ್ಲ. ಈ ರೀತಿಯ ತೊಂದರೆ ನಗರದ ಶಾಲೆಗಳಲ್ಲಿಯೇ ಹೆಚ್ಚು ಎಂದು ತಿಳಿಸಿದೆ.

ಕೋವಿಡ್ ಸಮಯದಲ್ಲಿ ಬ್ಯಾಂಕುಗಳಿಂದ ಸಾಲ ಪಡೆಯಲು ಶೇ 77ರಷ್ಟು ಶಾಲೆಗಳು ಹಿಂಜರಿದರೆ, ಶೇಕಡ 3ರಷ್ಟು ಶಾಲೆಗಳು ಸಾಲಗಳನ್ನು ಪಡೆದಿವೆ. ಶೇಕಡ 5ರಷ್ಟು ಶಾಲೆಗಳು ಸಾಲಕ್ಕಾಗಿ ಕಾಯುತ್ತಿವೆ.

ಕ್ಯಾಲಿಫೋರ್ನಿಯಾ: ಕಾಳ್ಗಿಚ್ಚು ಇನ್ನಷ್ಟು ತೀವ್ರ, ಹಲವು ಮನೆಗಳು ನಾಶ



ಕ್ಯಾಲಿಫೋರ್ನಿಯಾದ ಪ್ಲುಮಾಸ್ ಕೌಂಟಿಯಲ್ಲಿ ಕಾಳ್ಗಿಚ್ಚು ನಂದಿಸಲು ಕಾರ್ಯಾಚರಣೆಯಲ್ಲಿ ತೊಡಗಿರುವ ಸಿಬ್ಬಂದಿ —ಎಎಫ್‌ಪಿ ಚಿತ್ರ

ಬ್ಲೈ (ಅಮೆರಿಕ, ಎಪಿ): ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಕಾಳ್ಗಿಚ್ಚು ತೀವ್ರಗೊಳ್ಳುತ್ತಿದ್ದು, ಶನಿವಾರ ಹಲವಾರು ಮನೆಗಳು ಬೆಂಕಿಗೆ ಆಹುತಿಯಾಗಿವೆ.

'ಜುಲೈ 14ರಂದು ಇಂಡಿಯನ್ ಫಾಲ್ಸ್ ಬಳಿ ಕಾಣಿಸಿಕೊಂಡಿರುವ ಕಾಳ್ಗಿಚ್ಚು ಈಗಾಗಲೇ ಹಲವಾರು ಮನೆಗಳು, ಆಸ್ತಿಗಳಿಗೆ ಹಾನಿ ಉಂಟು ಮಾಡಿದೆ. ಸದ್ಯ ಕಾಳ್ಗಿಚ್ಚು ಪೂರ್ವ ದಿಕ್ಕಿನತ್ತ ಹರಡುತ್ತಿದೆ. ಅಗ್ನಿ ಶಾಮಕ ಸಿಬ್ಬಂದಿಯು ಬೆಂಕಿ ನಂದಿಸಲು ಹರಸಾಹಸ ಪಡುತ್ತಿದ್ದಾರೆ' ಎಂದು ಅಗ್ನಿ ಶಾಮಕ ಸಿಬ್ಬಂದಿಯೊಬ್ಬರು ತಿಳಿಸಿದರು.

'ಈ ಕಾಳ್ಗಿಚ್ಚಿನಿಂದಾಗಿ ಪ್ಲುಮಾಸ್ ಮತ್ತು ಬುಟೆ ಕೌಂಟಿಯಲ್ಲಿ 1,81,000 ಎಕರೆ ಪ್ರದೇಶ ನಾಶವಾಗಿದೆ. ಅಲ್ಮಾನೋ ಸರೋವರದ ಪಶ್ಚಿಮ ತೀರದಲ್ಲಿರುವ ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ಶನಿವಾರ ರಾತ್ರಿ ವೇಳೆಗೆ ಬೆಂಕಿಯು ಶೇ 20ರಷ್ಟಿತ್ತು' ಎಂದರು.

'ಇನ್ನೊಂದೆಡೆ ದಕ್ಷಿಣ ಒರೆಗಾನ್‌ನಲ್ಲಿ ಕಾಣಿಸಿಕೊಂಡ ದೇಶದ ಅತಿ ದೊಡ್ಡ ಕಾಳ್ಗಿಚ್ಚು ಶನಿವಾರ ಇನ್ನಷ್ಟು ಪ್ರದೇಶಗಳಿಗೆ ವ್ಯಾಪಿಸಿದೆ. 2,200 ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಆದರೆ ಗಾಳಿಯಿಂದಾಗಿ ಬೆಂಕಿ ಇನ್ನಷ್ಟು ತೀವ್ರಗೊಳ್ಳುತ್ತಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಅನ್ನದಾತೋ ಸುಖೀಭವ-ಬಿಎಸ್‌ವೈ ಸದ್ಭಾವ

ಕೃಷಿಗಿಲ್ಲ ಕಸಿವಿಸಿ ರೈತ ಸಂಕುಲ ಸದಾ ಖುಷಿ

ಕೃಷಿ ಕ್ಷೇತ್ರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಹಲವು ಯೋಜನೆಗಳೊಂದಿಗೆ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಆರಂಭದಲ್ಲೇ 'ಕೋವಿಡ್' ಬಿಕ್ಕಟ್ಟು ಬಹುದೊಡ್ಡ ಸವಾಲನ್ನೇ ತಂದೊಡ್ಡಿತು. ಆದರೆ, ಆ ಸವಾಲನ್ನು ಸಮರ್ಥವಾಗಿ ಎದುರಿಸಿದ ಯಡಿಯೂರಪ್ಪನವರು, ಕೃಷಿ ಸಚಿವ ಬಿ.ಸಿ. ಪಾಟೀಲ್ ಜತೆಗೂಡಿ ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಕೃಷಿ ಕ್ಷೇತ್ರಕ್ಕೆ ಕಿಂಚಿತ್ತೂ ತೊಂದರೆಯಾಗದಂತೆ ನೋಡಿಕೊಂಡರು.

ಈ ಎರಡು ವರ್ಷಗಳ ಆಡಳಿತದ ಅವಧಿಯಲ್ಲಿ ಬೆಳೆ ಸಮೀಕ್ಷೆ, ರೈತ ಸಿರಿ, ಕೃಷಿ ಯಂತ್ರಧಾರೆ, ಕೃಷಿ ಸಂಜೀವಿನಿಯಂತಹ ಹೊಸ ಯೋಜನೆಗಳ ಮೂಲಕ ಸುಸ್ಥಿರ ಆಹಾರ ಉತ್ಪಾದನೆಗೆ ಆದ್ಯತೆ ನೀಡಿದ್ದಾರೆ. ರೈತರ ಮಕ್ಕಳಿಗೆ ಕೃಷಿ ಪದವಿಯಲ್ಲಿ ಮೀಸಲಾತಿ ಹೆಚ್ಚಿಸುವಂತಹ ಅನೇಕ ಮಹತ್ವದ ಕಾರ್ಯಕ್ರಮಗಳ ಜಾರಿಗೆ ತರುವ ಮೂಲಕ ಕೃಷಿ ಕ್ಷೇತ್ರದಲ್ಲಿ ಮಹತ್ವದ ಹೆಜ್ಜೆಗಳನ್ನು ಇಟ್ಟಿದ್ದಾರೆ. ರೈತರು ಸ್ವಾವಲಂಬಿಯಾಗಿ ಅತ್ಯುತ್ತಮ ಬದುಕು ಸಾಗಿಸುವ ನಿಟ್ಟಿನಲ್ಲಿ ಪ್ರಗತಿಪರ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದ್ದಾರೆ.

ಕೋವಿಡ್ ಬಿಕ್ಕಟ್ಟಿನಲ್ಲೂ 'ಅಗ್ರಿ ವಾರ್ ರೂಮ್'ನಂತಹ ಉಪಕ್ರಮಗಳೊಂದಿಗೆ ಕೃಷಿ ಕ್ಷೇತ್ರಕ್ಕೆ ಹಿನ್ನಡೆಯಾಗದಂತೆ ಕೃಷಿಕರಿಗೆ ತೊಂದರೆಯಾಗದಂತೆ ಎಚ್ಚರವಹಿಸಿದರು. ಅದರಲ್ಲೂ ಕೋವಿಡ್ ಸಮಯದಲ್ಲಿ ಸ್ವತಃ ಕೃಷಿ ಸಚಿವರೇ 'ವಾರ್ ರೂಮ್'ನಲ್ಲಿ ಕುಳಿತು ರೈತರ ಸಮಸ್ಯೆಗಳನ್ನು ಆಲಿಸಿದರು. ರಾಜ್ಯ ಸರ್ಕಾರದ ಕೃಷಿ ಇಲಾಖೆಯ ಇಂಥ ಕಾರ್ಯಗಳಿಗಾಗಿ ಎರಡು ಬಾರಿ ಕೇಂದ್ರ ಸರ್ಕಾರದಿಂದ ಪ್ರಶಂಸೆಗೆ ಪಾತ್ರವಾಯಿತು.

ರೈತರ ಸಾಮಾಜಿಕ ಮತ್ತು ಆರ್ಥಿಕ ಮಟ್ಟವನ್ನು ಸುಧಾರಿಸುವ ಆಶಯ ಹೊಂದಿರುವ ಕೃಷಿ ಇಲಾಖೆಯು ನೂತನ ಕೃಷಿ ತಾಂತ್ರಿಕತೆಗಳನ್ನು ವಿಸ್ತರಣಾ ಚಟುವಟಿಕೆಗಳ ಮೂಲಕ ರೈತರಿಗೆ ತಲುಪಿಸುವ ಕಾಯಕದಲ್ಲಿ ತೊಡಗಿದೆ. ರೈತ ಸಂಪರ್ಕ ಕೇಂದ್ರಗಳ ಮೂಲಕ ಹೆಚ್ಚಿನ ಸಂಖ್ಯೆಯ ರೈತರು ನೂತನ ಕೃಷಿ ತಾಂತ್ರಿಕತೆ ಪದ್ಧತಿಗಳನ್ನು ಅಳವಡಿಸಿಕೊಂಡಿದೆ. ಕಳೆದ ಎರಡು ವರ್ಷಗಳಲ್ಲಿ ಕೃಷಿ ಇಲಾಖೆ ಸಮರ್ಥವಾಗಿ ತನ್ನ ಧ್ಯೇಯೋದ್ದೇಶಗಳು ಈಡೇರಿಸುವ ಮೂಲಕ ರೈತರ ಪ್ರಗತಿಗೆ ಹಗಲಿರುಳು ಶ್ರಮಿಸಿದೆ. ಕೃಷಿ ಸಚಿವ ಬಿ.ಸಿ. ಪಾಟೀಲ ಅವರು, ಇಲಾಖೆಯ ನೇತೃತ್ವವಹಿಸಿಕೊಂಡು ಪ್ರಗತಿಯ ಪಥದಲ್ಲಿ ಮುನ್ನಡೆಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಿತ್ತನೆ ಗುರಿಯಲ್ಲಿ ಮತ್ತು ಬೆಳೆ ಉತ್ಪಾದನೆಯಲ್ಲೂ ಕೃಷಿ ಇಲಾಖೆ ಪ್ರಗತಿ ಸಾಧಿಸಿದೆ'. 2019-20ನೇ ಸಾಲಿನಲ್ಲಿ 113.67 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ವಿವಿಧ ಕೃಷಿ ಬೆಳೆಗಳ ಬಿತ್ತನೆ ಗುರಿ ನಿಗದಿಪಡಿಸಲಾಗಿತ್ತು. ಈ ಪೈಕಿ 103.97 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆಯಾಗಿದೆ. ಈ ಮೂಲಕ ಅತ್ಯುತ್ತಮ ಪ್ರಗತಿ ಸಾಧಿಸಿ ಆಹಾರ ಉತ್ಪಾದನೆ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ. 2019-20ನೇ ಸಾಲಿನಲ್ಲಿ ಆಹಾರ ಧಾನ್ಯಗಳ 138.67 ಲಕ್ಷ ಟನ್ ಉತ್ಪಾದನಾ ಗುರಿಗೆ 136.41 ಲಕ್ಷ ಟನ್ ಉತ್ಪಾದನೆಯಾಗಿದೆ. ಇದೇ ರೀತಿ 2020-21ನೇ ಸಾಲಿನಲ್ಲಿಯೂ ಪ್ರಗತಿ ಸಾಧಿಸಲಾಗಿದೆ.

2020-21ನೇ ಸಾಲಿನಲ್ಲಿ 110 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ವಿವಿಧ ಕೃಷಿ ಬೆಳೆಗಳ ಬಿತ್ತನೆ ಗುರಿಗೆ 111.41 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆಯಾಗಿದೆ. ರೈತರಿಗೆ ಸಕಾಲಕ್ಕೆ ಬಿತ್ತನೆ ಬೀಜ, ರಸಗೊಬ್ಬರ ತಲುಪಿಸಿದ್ದರಿಂದ ನಿರೀಕ್ಷೆಗೂ ಮೀರಿ ಬಿತ್ತನೆಯಾಗಿದೆ. 2020-21ನೇ ಸಾಲಿನಲ್ಲಿ 133.04 ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನಾ ಗುರಿಗೆ 158.73 ಲಕ್ಷ ಟನ್ ದಾಖಲೆ ಪ್ರಮಾಣದಲ್ಲಿ ಹೆಚ್ಚಿನ ಉತ್ಪಾದನೆಯಾಗಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ರೈತರಿಗೆ 'ಅಗ್ರಿ ವಾರ್ ರೂಮ್' ನೆರವು

ಕೋವಿಡ್ ಸಾಂಕ್ರಾಮಿಕದಿಂದಾಗಿ ಕೃಷಿ ಮತ್ತು ಕೃಷಿಗೆ ಸಂಬಧಿಸಿದ ಕ್ಷೇತ್ರಗಳಲ್ಲಿ ರೈತರು ಎದುರಿಸುತ್ತಿದ್ದ ಹಲವಾರು ಸಮಸ್ಯೆಗಳಿಗೆ ಸಲಹೆ ನೀಡುವ ಸಲುವಾಗಿ ಮತ್ತು ಕೃಷಿ ಚಟುವಟಿಕೆಯನ್ನು ಸುಗಮಗೊಳಿಸಲು ಪ್ರಮುಖ ಹೆಜ್ಜೆಯಾಗಿ ಕೃಷಿ ಇಲಾಖೆಯ ಆವರಣದಲ್ಲಿ ಸರ್ಕಾರ 'ಅಗ್ರಿ ವಾರ್ ರೂಮ್ ಸ್ಥಾಪಿಸಿತು. ರೈತರಿಗೆ ದೂರವಾಣಿ ಮೂಲಕ ಹಲವಾರು ಸಮಸ್ಯೆಗಳಿಗೆ ಮಾಹಿತಿಯನ್ನು ನೀಡಲಾಯಿತು.

ಕೋವಿಡ್ ಲಾಕ್‌ಡೌನ್ ಅವಧಿಯಲ್ಲೂ ಕೃಷಿಕರಿಗೆ ತಾವು ಬೆಳೆದ ಉತ್ಪನ್ನಗಳು, ಕೃಷಿ ಪರಿಕರಗಳ ಸಾಗಾಣಿಕೆಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ರೈತರಿಗೆ ಕೃಷಿ ಇಲಾಖೆಯಿಂದ 'ಗ್ರೀನ್ ಪಾಸ್' ವಿತರಿಸಲಾಯಿತು.

ಕೋವಿಡ್-19ರ ಕೋವಿಡ್-ಲಾಕ್‌ಡೌನ್ ಸಮಸ್ಯೆಯಿಂದ ಸಂಕಷ್ಟಕ್ಕೆ ಒಳಗಾಗಿರುವ 2019-20ನೇ ಸಾಲಿನಲ್ಲಿ ಮುಸುಕಿನ ಜೋಳ ಬೆಳೆದ ರೈತರಿಗೆ ತಲಾ ₹5000 ದಂತೆ, 8,01,258 ರೈತರಿಗೆ 2020-21 ನೇ ಸಾಲಿನಲ್ಲಿ ₹385.75 ಕೋಟಿ ಅನುದಾನವನ್ನು ರೈತರ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗಿದೆ.

ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ

- 2019-20ನೇ ಸಾಲಿನಲ್ಲಿ, 2.06 ಲಕ್ಷ ಫಲಾನುಭವಿಗಳಿಗೆ, ₹ 429.53 ಕೋಟಿ ಸಹಾಯಧನ ಒದಗಿಸಿ, 2.11 ಲಕ್ಷ ಹೆಕ್ಟೇರ್‌ಗಳಲ್ಲಿ ಸೂಕ್ಷ್ಮ ನೀರಾವರಿ ಘಟಕಗಳನ್ನು ಅಳವಡಿಸಲಾಗಿದೆ.
- 2020-21ನೇ ಸಾಲಿನಲ್ಲಿ, 2.62 ಲಕ್ಷ ಫಲಾನುಭವಿಗಳಿಗೆ ₹632.90 ಕೋಟಿ ಸಹಾಯಧನ ಒದಗಿಸಿ, 2.69 ಲಕ್ಷ ಹೆಕ್ಟೇರ್‌ಗಳಲ್ಲಿ ಸೂಕ್ಷ್ಮ ನೀರಾವರಿ ಘಟಕಗಳನ್ನು ಅಳವಡಿಸಲಾಗಿದೆ.

ಕೃಷಿ ಯಂತ್ರಧಾರೆ ಕಾರ್ಯಕ್ರಮದಡಿ ಕೃಷಿ ಯಂತ್ರೋಪಕರಣಗಳ ಬಳಕೆ ಪರಿಶೀಲಿಸುತ್ತಿರುವ ಸಚಿವ ಬಿ.ಸಿ. ಪಾಟೀಲ್

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ರಾಜ್ಯ ಸರ್ಕಾರ)

- ರೈತರ ಸಂಕಷ್ಟಕ್ಕೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ರೂಪಿಸಿರುವ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಿದೆ.
- 2019-20ನೇ ಸಾಲಿನಲ್ಲಿ 45,28,735 ರೈತರಿಗೆ ₹ 905.74 ಕೋಟಿ, 2020-21ನೇ ಸಾಲಿನಲ್ಲಿ 49,18,986 ರೈತರಿಗೆ ₹ 983.71 ಕೋಟಿ ಮೊತ್ತದ ಆರ್ಥಿಕ ನೆರವನ್ನು ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ.
- 2021-22ನೇ ಸಾಲಿನಲ್ಲಿ ಇಲ್ಲಿಯವರೆವಿಗೂ 47,98,095ರೈತರಿಗೆ ₹959.61 ಕೋಟಿ ಆರ್ಥಿಕ ನೆರವನ್ನು ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ.

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ (ಕೇಂದ್ರ ಸರ್ಕಾರ)

- 2019-20ನೇ ಸಾಲಿನಲ್ಲಿ 51,10,002 ರೈತರಿಗೆ ₹ 2789.67 ಕೋಟಿ, 2020-21 ನೇ ಸಾಲಿನಲ್ಲಿ 53,16,278 ರೈತರಿಗೆ ₹ 3157.73 ಕೋಟಿ ಮೊತ್ತದ ಆರ್ಥಿಕ ನೆರವನ್ನು ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ.
- 2021-22ನೇ ಸಾಲಿನಲ್ಲಿ ಇಲ್ಲಿಯವರೆಗೂ 53,28,759 ರೈತರಿಗೆ ₹ 1065.75 ಕೋಟಿ ಮೊತ್ತದ ಆರ್ಥಿಕ ನೆರವನ್ನು ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ.

ಪ್ರಧಾನ ಮಂತ್ರಿ ಫಸಲ್ ಬಿಮಾಯೋಜನೆ

- 2019-20ನೇ ಸಾಲಿನಲ್ಲಿ 6.34 ಲಕ್ಷ ರೈತರಿಗೆ ₹729.63 ಕೋಟಿ ಮೊತ್ತದ ಬೆಳೆ ವಿಮೆ ಪರಿಹಾರವನ್ನು ವಿತರಿಸಲಾಗಿದೆ.
- 2020-21 ಸಾಲಿನಲ್ಲಿ 61244 ರೈತರಿಗೆ ₹47.15 ಕೋಟಿಗಳ ಬೆಳೆ ವಿಮೆ ಪರಿಹಾರ ಮೊತ್ತವನ್ನು ವಿತರಿಸಲಾಗಿದೆ. ಉಳಿದ 28,58,106 ರೈತರಿಗೆ ₹419.47 ಕೋಟಿಗಳ ಮೊತ್ತ ವಿತರಿಸುವ ಕಾರ್ಯ ಪ್ರಗತಿಯಲ್ಲಿದೆ.

ಕೃಷಿ ಯಾಂತ್ರೀಕರಣ

ಕೃಷಿ ಕ್ಷೇತ್ರದಲ್ಲಿ ಈಗ ಯಾಂತ್ರೀಕರಣಕ್ಕೆ ಆದ್ಯತೆ ನೀಡಲಾಗುತ್ತಿದೆ. ಯಾಂತ್ರೀಕರಣದ ಮೂಲಕವೇ ಬಹುತೇಕ ಕೃಷಿ ಚಟುವಟಿಕೆಗಳು ನಡೆಯುತ್ತಿರುವುದು ಇತ್ತೀಚೆಗೆ ಸಾಮಾನ್ಯವಾಗುತ್ತಿದೆ. ಕೃಷಿ ಯಂತ್ರಗಳನ್ನು ಸಬ್ಸಿಡಿ ರೂಪದಲ್ಲಿ ನೀಡುವ ಮೂಲಕ ಅನ್ನದಾತರಿಗೆ ನೆರವು ನೀಡುವ ಯೋಜನೆಗಳನ್ನು ಕೃಷಿ ಇಲಾಖೆ ರೂಪಿಸಿ, ತಲುಪಿಸುವ ಕಾರ್ಯದಲ್ಲಿ ತೊಡಗಿದೆ.

- 2019-20ನೇ ಸಾಲಿನಲ್ಲಿ ₹454.65 ಕೋಟಿ ಸಹಾಯಧನ ಒದಗಿಸಿ, ಸುಮಾರು 3.37ಲಕ್ಷ ಫಲಾನುಭವಿಗಳಿಗೆ ಕೃಷಿ ಯಾಂತ್ರೀಕರಣ ಮತ್ತು ಕೃಷಿ ಉತ್ಪನ್ನ ಸಂಸ್ಕರಣೆ ಘಟಕಗಳನ್ನು ಒದಗಿಸಲಾಗಿದೆ.
- 2020-21ನೇ ಸಾಲಿನಲ್ಲಿ ₹467.59 ಕೋಟಿ ಸಹಾಯಧನ ಒದಗಿಸಿ, ಸುಮಾರು 8.48 ಲಕ್ಷ ಫಲಾನುಭವಿಗಳಿಗೆ ಕೃಷಿ ಯಾಂತ್ರೀಕರಣ ಮತ್ತು ಕೃಷಿ ಉತ್ಪನ್ನ ಸಂಸ್ಕರಣೆ ಘಟಕಗಳನ್ನು ಒದಗಿಸಲಾಗಿರುತ್ತದೆ.

ಕೋವಿಡ್ ಸಾಂಕ್ರಾಮಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಆರಂಭಿಸಿದ್ದ 'ಅಗ್ರಿ ವಾರ್ ರೂಮ್'ನಲ್ಲಿ ಕೃಷಿ ಸಚಿವ ಬಿ.ಸಿ.ಪಾಟೀಲ್ ರೈತರ ಸಮಸ್ಯೆಗಳನ್ನು ಆಲಿಸಿದ ಕ್ಷಣ

ಕೃಷಿ ಯಂತ್ರಧಾರೆ

ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು, ಕಡಿಮೆ ಬಾಡಿಗೆ ದರದಲ್ಲಿ ಯಂತ್ರಗಳನ್ನು ಒದಗಿಸುವ ನಿಟ್ಟಿನಲ್ಲಿ ಕೃಷಿ ಯಂತ್ರಧಾರೆ ಯೋಜನೆ ಆರಂಭಿಸಲಾಗಿದೆ.

ಭೂಮಿ ಸಿದ್ಧತೆಯಿಂದ ಕೊಯ್ಲು ಮತ್ತು ಸಂಸ್ಕರಣೆವರೆಗಿನ ವಿವಿಧ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಉಪಯೋಗಿಸಲು ಹೋಬಳಿ ಕೇಂದ್ರಗಳಲ್ಲಿ ಆಯ್ದ ಸಂಸ್ಥೆಗಳ ಸಹಯೋಗದೊಂದಿಗೆ ಕೃಷಿ ಯಂತ್ರಧಾರೆ (ಕೃಷಿ ಯಂತ್ರೋಪಕರಣ ಬಾಡಿಗೆ ಆಧಾರಿತ ಸೇವಾ) ಕೇಂದ್ರಗಳನ್ನು ತೆರೆಯಲಾಗಿದೆ.

ಪ್ರಸಕ್ತ 695 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. 20 ಲಕ್ಷ ರೈತರು ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ. ಕೃಷಿ ಯಂತ್ರಧಾರೆ ಕೇಂದ್ರಗಳ ಸ್ಥಾಪನೆಗೆ 2019-20ನೇ ಸಾಲಿನಲ್ಲಿ ₹32.36 ಕೋಟಿ ಮತ್ತು 2020-21ನೇ ಸಾಲಿನಲ್ಲಿ ₹51.47 ಕೋಟಿ ವೆಚ್ಚ ಭರಿಸಲಾಗಿದೆ.

ಕೃಷಿ ಸಚಿವ ಬಿ.ಸಿ.ಪಾಟೀಲ್ ಭತ್ತದ ಸಸಿ ನಾಟಿ ಯಂತ್ರವನ್ನು ಚಲಾಯಿಸುತ್ತಿರುವುದು

ಸಚಿವ ಬಿ.ಸಿ.ಪಾಟೀಲ್ ಪ್ರಯೋಗಾಲಯಕ್ಕೆ ಭೇಟಿ ನೀಡಿದ ಕ್ಷಣ

ಪ್ರವಾಹ ಪೀಡಿತ ಕೃಷಿ ಜಮೀನುಗಳನ್ನು ಪರಿಶೀಲಿಸುತ್ತಿರುವ ಸಚಿವರು.



ಹೊನ್ನಾಳಿಯ ಹಿರೇಕಲ್ಮಠದಲ್ಲಿ ನಡೆದ ಕೃಷಿ ಮೇಳವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸಿದ ಸಂದರ್ಭ

ನಾಡಿನ ಪ್ರಗತಿಪರ ಕೃಷಿಕರಿಗೆ ಗೌರವ

ವರ್ಷ ಎರಡು.. ಯೋಜನೆಗಳು ಹಲವು..

ಮುಖ್ಯಮಂತ್ರಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ, ಕಳೆದ ಎರಡು ವರ್ಷಗಳಲ್ಲಿ ವಿನೂತನ ಯೋಜನೆಗಳನ್ನು ಅನುಷ್ಠಾನಗೊಳಿ ಸುವ ಮೂಲಕ ರೈತರ ಸಂಕಷ್ಟಗಳನ್ನು ದೂರ ಮಾಡಿ, ಅವರನ್ನು ಸದಾ ಖುಷಿಯಾಗಿಡುವತ್ತ ಹೆಜ್ಜೆ ಹಾಕಿದೆ. ಸಾವಯವ ಕೃಷಿಗೆ ಉತ್ತೇಜನ, ಮಳೆಯಾಶ್ರಿತವಾಗಿ ಬೆಳೆಯುವ ಸಿರಿಧಾನ್ಯಗಳ ಕೃಷಿ ಮತ್ತು ಮಾರುಕಟ್ಟೆಗೆ ಪ್ರೋತ್ಸಾಹ, ಜಮೀನಿನ ಸಮೀಪದಲ್ಲೇ 'ಕೀಟ-ರೋಗ ಬಾಧೆ, ಮಣ್ಣಿನ ಪರೀಕ್ಷೆ'ಯ ಸಂಚಾರಿ ಚಿಕಿತ್ಸಾಲಯದಂತಹ ಹಲವು ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಿದೆ.

ಸಾವಯವ ಕೃಷಿಗೆ ಹೆಚ್ಚು ಪ್ರೋತ್ಸಾಹ ನೀಡುತ್ತಾ ಬಂದಿರುವ ಯಡಿಯೂರಪ್ಪ ಸರ್ಕಾರ, 2021-22ನೇ ಸಾಲಿನ ಬಜೆಟ್‌ನಲ್ಲಿ ಸಾವಯವ ಕೃಷಿ ಉತ್ತೇಜನಕ್ಕಾಗಿ ₹ 500 ಕೋಟಿಗಳನ್ನು ತೆಗೆದಿಟ್ಟಿದೆ. ಬೆಳೆಯುವ ಸಾವಯವ ಉತ್ಪನ್ನಗಳನ್ನು ಪ್ರಮಾಣೀಕರಿಸುವುದಕ್ಕೂ ಆದ್ಯತೆ ನೀಡಿದೆ. ಈ ಮೂಲಕ, ರಾಜ್ಯದಲ್ಲಿ ಸಾವಯವ ಕೃಷಿ ವಿಸ್ತರಣೆಗೆ ಉತ್ತೇಜನ ನೀಡುತ್ತಿದೆ. ಸಾವಯವ ಉತ್ಪನ್ನಗಳ ಸಂಸ್ಕರಣೆ, ಮಾರುಕಟ್ಟೆ ಹಾಗೂ ಸಾವಯವ ಉತ್ಪನ್ನಗಳ ಪ್ರಮಾಣೀಕರಣಕ್ಕೂ ಹೆಚ್ಚಿನ ಆದ್ಯತೆ ನೀಡುತ್ತಿದೆ.

2019-20 ಹಾಗೂ 2020-21ನೇ ಸಾಲಿನಲ್ಲಿ ರಾಜ್ಯ ಸರ್ಕಾರ, 15,658 ರೈತರನ್ನು ಸಾವಯವ ಕೃಷಿ ಅಳವಡಿಕೆ ಮತ್ತು ದೃಢೀಕರಣ ಕಾರ್ಯಕ್ರಮದಡಿ ₹17 ಕೋಟಿ ವೆಚ್ಚದಲ್ಲಿ ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ ಮೂಲಕ ಸಾವಯವ ಪ್ರಮಾಣೀಕರಣಕ್ಕೆ ಒಳಪಡಿಸಿದೆ. ಪ್ರಸ್ತುತ ರಾಜ್ಯದಲ್ಲಿ 96,612 ರೈತರನ್ನು ಒಳಗೊಂಡಂತೆ ಸುಮಾರು 1,35,000 ಹೆಕ್ಟೇರ್ ಪ್ರದೇಶವು ಸಾವಯವ ಪ್ರಮಾಣೀಕರಣದ ವ್ಯಾಪ್ತಿಗೆ ಒಳಪಡಿಸಲಾಗಿದೆ.

'ರೈತ ಸಿರಿ' ಯೋಜನೆ

ಜಾಗತಿಕ ಮಟ್ಟದಲ್ಲಿ 'ಸಿರಿಧಾನ್ಯಗಳ ತವರು' ಎಂದೇ ಮನ್ನಣೆ ಪಡೆದಿರುವ ಕರ್ನಾಟಕದಲ್ಲಿ ಸಿರಿಧಾನ್ಯ ಬೆಳೆ ಉತ್ತೇಜನಕ್ಕೆ ರಾಜ್ಯ ಬಿಜೆಪಿ ಸರ್ಕಾರ ಹಲವು 'ಪ್ರೋತ್ಸಾಹಕ ಯೋಜನೆ'ಗಳನ್ನು ರೂಪಿಸಿದೆ. ಬೆಳೆ ಬೆಳೆಯುವುದಕ್ಕೆ ಪ್ರೋತ್ಸಾಹ ಧನ, ಧಾನ್ಯಗಳ ಸಂಸ್ಕರಣೆ ಮತ್ತು ಮಾರುಕಟ್ಟೆಗೂ ಉತ್ತೇಜನ, ಮೌಲ್ಯವರ್ಧನೆ ತರಬೇತಿ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ.

ಕಳೆದ ಎರಡು ವರ್ಷಗಳಿಂದ ಸಿರಿಧಾನ್ಯ ಬೆಳೆಯನ್ನು ಉತ್ತೇಜಿಸುವ ಸಲುವಾಗಿ ರಾಜ್ಯ ಸರ್ಕಾರ ಒಂದು ಹೆಕ್ಟೇರ್ ಸಿರಿಧಾನ್ಯ ಬೆಳೆಯುವವರಿಗೆ ₹10 ಸಾವಿರ ಪ್ರೋತ್ಸಾಹ ಧನ ನೀಡುತ್ತಿದೆ. ಅದರಂತೆ, 2019-20ನೇ ಸಾಲಿನಲ್ಲಿ ಈ ಯೋಜನೆಯಡಿ 42,684 ಹೆಕ್ಟೇರ್ ಪ್ರದೇಶದಲ್ಲಿ ಸಿರಿಧಾನ್ಯಗಳನ್ನು ಬೆಳೆದ 49,702 ರೈತರಿಗೆ ₹12.88 ಕೋಟಿ (ಹೆಕ್ಟೇರ್‌ಗೆ ₹10ಸಾವಿರದಿಂದ ಗರಿಷ್ಠ 2 ಹೆಕ್ಟೇರ್‌ಗೆ) ಪ್ರೋತ್ಸಾಹಧನ ನೀಡಿದೆ.

2020-21ನೇ ಸಾಲಿನಲ್ಲಿ ₹4.22 ಕೋಟಿ ವೆಚ್ಚದಲ್ಲಿ 6,288 ಹೆಕ್ಟೇರ್ ಪ್ರದೇಶದಲ್ಲಿ ಸಿರಿಧಾನ್ಯಗಳನ್ನು ಬೆಳೆದ 8,772 ರೈತರಿಗೆ ಹಾಗೂ 416 ಹೆಕ್ಟೇರ್ ಪ್ರದೇಶದಲ್ಲಿ ಚಿಯಾ/ ಕ್ವಿನೋವಾ/ ಟೆಫ್ ಬೆಳೆಗಳಂತಹ ಹೊಸ ತರಹದ ಸಿರಿಧಾನ್ಯ ಬೆಳೆಗಳನ್ನು ಬೆಳೆದ 1040 ರೈತರಿಗೆ ಸರ್ಕಾರ ಪ್ರೋತ್ಸಾಹಧನ ವಿತರಿಸಿದೆ.

'ನನ್ನ ಹಕ್ಕು ಬೆಳೆ ಸಮೀಕ್ಷೆ ಯಶಸ್ವಿ ಹೆಜ್ಜೆ'-ಯಶಸ್ವಿ ಹೆಜ್ಜೆರೈತರು ತಾವೇ ತಮ್ಮ ಬೆಳೆಯನ್ನು ಮೊಬೈಲ್ ಆಪ್ ಮೂಲಕ ದಾಖಲಿಸುವ ಮಹತ್ತರ ಯೋಜನೆ 'ನನ್ನ ಬೆಳೆ ನನ್ನ ಹಕ್ಕು - ಬೆಳೆ ಸಮೀಕ್ಷೆ'. ಇದು ರಾಜ್ಯ ಸರ್ಕಾರ ಜಾರಿಗೆ ತಂದಿರುವ ಮಹತ್ವದ ಉಪಕ್ರಮ. ಪ್ರಕೃತಿ ವಿಕೋಪದಂತಹ ಸಂದರ್ಭದಲ್ಲಿ ಬೆಳೆ ಹಾನಿಯಾದಾಗ, ರೈತರಿಗೆ ನಿಖರವಾದ ಪರಿಹಾರ ನೀಡಲು ಈ ಮಾಹಿತಿ ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯಡಿ ರೈತರು ತಮ್ಮ ಮೊಬೈಲ್ ಆ್ಯಪ್ ಮೂಲಕ, 2019-20ನೇ ಸಾಲಿನ ಪೂರ್ವ ಮುಂಗಾರಿನಲ್ಲಿ 36.88 ಲಕ್ಷ, ಮುಂಗಾರಿನಲ್ಲಿ 186.87 ಲಕ್ಷ, ಹಿಂಗಾರಿನಲ್ಲಿ 109.35 ಲಕ್ಷ ಮತ್ತು ಬೇಸಿಗೆ ಹಂಗಾಮಿನಲ್ಲಿ 22.86 ಲಕ್ಷ ತಾಕುಗಳಂತೆ, ಒಟ್ಟು 355.96 ಲಕ್ಷ ತಾಕುಗಳ ಬೆಳೆ ಮಾಹಿತಿಯನ್ನು ಅಪ್‌ಲೋಡ್ ಮಾಡಿದ್ದಾರೆ.

2020-21ನೇ ಸಾಲಿನಲ್ಲಿ ರೈತರು ಮೊಬೈಲ್ ಆ್ಯಪ್ ಮೂಲಕ ಮುಂಗಾರಿನಲ್ಲಿ 80.03 ಲಕ್ಷ ತಾಕುಗಳ ಮಾಹಿತಿ ಅಪ್‌ಲೋಡ್ ಮಾಡಿದ್ದಾರೆ. ಹಾಗೂ ಖಾಸಗಿ ನಿವಾಸಿಗಳ ಮೂಲಕ 293.13 ಲಕ್ಷ ತಾಕುಗಳ ಬೆಳೆ ಸಮೀಕ್ಷೆ ಕೈಗೊಳ್ಳಲಾಗಿದೆ. ಒಟ್ಟಾರೆಯಾಗಿ 2020-21ನೇ ಸಾಲಿನಲ್ಲಿ 373.82 ಲಕ್ಷ ತಾಕುಗಳ ಸಮೀಕ್ಷೆಯಾಗಿದೆ. ಈ ಬೆಳೆಸಮೀಕ್ಷೆ ವಿವರಗಳನ್ನು ಪಹಣಿ (ಆರ್‌ಟಿಸಿ)ಯಲ್ಲಿ ದಾಖಲೀಕರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಈ ಮಾಹಿತಿಯನ್ನು ಸರ್ಕಾರದ ವಿವಿಧ ಯೋಜನೆಗಳಿಗೆ ಬಳಸಿಕೊಳ್ಳಲಾಗುತ್ತಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ 'ಕೃಷಿ ಸಂಜೀವಿನಿ' ವಾಹನಗಳಿಗೆ ಚಾಲನೆ ನೀಡಿದ ಸಂದರ್ಭ



ರೈತರ ಖಾತೆಗಳಿಗೆ ಶೇ 97ರಷ್ಟು ಆಧಾರ್ ಕಾರ್ಡ್ ಜೋಡಣೆ ಮಾಡಿ ನೇರ ನಗದು ವರ್ಗಾವಣೆ ಮಾಡಿದ ಸಾಧನೆಗಾಗಿ ಕೇಂದ್ರ ಸರ್ಕಾರ ನೀಡಿದ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವ ಕೃಷಿ ಸಚಿವ ಬಿ.ಸಿ. ಪಾಟೀಲ್

ಕೃಷಿ ಇಲಾಖೆಗೆ ಸಂದ ಪ್ರಶಸ್ತಿಗಳು

- ಪಿ.ಎಂ. ಕಿಸಾನ್ ಯೋಜನೆಯಡಿ ರೈತರ ಖಾತೆಗಳಿಗೆ ಶೇ 97ಆಧಾರ್ ಕಾರ್ಡ್ ಜೋಡಣೆ ಮಾಡಿ ನೇರ ನಗದು ವರ್ಗಾವಣೆ ಮಾಡಿದ ಸಾಧನೆಗಾಗಿ ಕರ್ನಾಟಕದ ಕೃಷಿ ಇಲಾಖೆ 2020-21ನೇ ಸಾಲಿನ ಪ್ರಥಮ ವರ್ಷದ ಪ್ರಶಸ್ತಿಗೆ ಆಯ್ಕೆಯಾಗಿತ್ತು. ನವದೆಹಲಿಯಲ್ಲಿ 2021ರ ಫೆಬ್ರುವರಿ 24ರಂದು ನಡೆದ ಪಿ.ಎಂ. ಕಿಸಾನ್ ಯೋಜನೆಯ ಎರಡನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಕೃಷಿ ಸಚಿವ ಬಿ.ಸಿ. ಪಾಟೀಲ್ ಅವರು ಕೇಂದ್ರ ಕೃಷಿ ಸಚಿವ ನರೇಂದ್ರಸಿಂಗ್ ತೋಮರ್ ಅವರಿಂದ ಪ್ರಶಸ್ತಿ ಸ್ವೀಕರಿಸಿದರು.
- ದ್ವಿದಳ ಧಾನ್ಯಗಳ ವರ್ಗದಡಿಯಲ್ಲಿ ಹಿಂದಿನ 5 ವರ್ಷಗಳಿಗಿಂತ ಹೆಚ್ಚಿನ ದ್ವಿದಳ ಧಾನ್ಯ ಉತ್ಪಾದನೆ ಮಾಡಿದ ಸಾಧನೆಗಾಗಿ ಭಾರತ ಸರ್ಕಾರ ರಾಜ್ಯ ಕೃಷಿ ಇಲಾಖೆಗೆ ಪ್ರಶಂಸನಾ ಪ್ರಶಸ್ತಿ ಪುರಸ್ಕಾರಕ್ಕೆ ಆಯ್ಕೆ ಮಾಡಿತು. 2020ರ ಜನವರಿ 2ರಂದು ತುಮಕೂರಿನಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯ ಸರ್ಕಾರಕ್ಕೆ ಪ್ರಶಸ್ತಿ ನೀಡಲಾಯಿತು.

ರೈತರ ಬಳಿಗೆ 'ಕೃಷಿ ಸಂಜೀವಿನಿ'

ಬೆಳೆಗಳಿಗೆ ಕಾಡುವ ಕೀಟ ರೋಗ ಮತ್ತು ಕಳೆಗಳ ಬಾಧೆ ಹಾಗೂ ಮಣ್ಣಿನ ಪೋಷಕಾಂಶ ಕೊರತೆ ಹಾಗು ಸಮರ್ಪಕ ನಿರ್ವಹಣೆ ಕುರಿತಂತೆ ರೈತರ ತಾಕುಗಳಲ್ಲಿಯೇ ಹತೋಟಿ ಕ್ರಮಗಳ ಕುರಿತು ಮಾರ್ಗೋಪಾಯಗಳನ್ನು ಒದಗಿಸುವ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ(ಕೃಷಿ ಸಂಜೀವಿನಿ) ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಇದನ್ನು ಅನುಷ್ಠಾನಗೊಳಿಸುತ್ತಿದೆ.

ಸಂಚಾರಿ ವಾಹನದ ಸೌಲಭ್ಯದಿಂದ ಹೆಚ್ಚಿನ ಸಂಖ್ಯೆಯ ರೈತರ ತಾಕುಗಳಿಗೆ ತಾಂತ್ರಿಕ ತಂಡವು ಭೇಟಿ ನೀಡಲು ಸಹಕಾರಿಯಾಗಲಿದೆ. ರೈತರು ತಮ್ಮ ಮಟ್ಟದಲ್ಲೇ ಕಡಿಮೆ ವೆಚ್ಚದಲ್ಲಿ ರಸಗೊಬ್ಬರಗಳ ಕಲಬೆರಕೆಯನ್ನು ಕಂಡುಕೊಂಡು ಗುಣಮಟ್ಟದ ರಸಗೊಬ್ಬರಗಳನ್ನು ಖರೀದಿಸಲು ಇದು ನೆರವಾಗಿದೆ.

ದೊಡ್ಡ ಜಿಲ್ಲೆಗೆ ಎರಡು, ಸಣ್ಣ ಜಿಲ್ಲೆಗೆ ಒಂದು ವಾಹನದಂತೆ, ರಾಜ್ಯದ ಎಲ್ಲ ಜಿಲ್ಲೆಗಳಿಗೆ ಒಟ್ಟು 60 ಸಂಚಾರಿ ಆರೋಗ್ಯ ಚಿಕಿತ್ಸಾಲಯ ವಾಹನಗಳನ್ನುಪೂರೈಸಲಾಗಿದೆ. ಈ ಯೋಜನೆ ಅನುಷ್ಠಾನಕ್ಕಾಗಿ ₹ 12.70 ಕೋಟಿ ವೆಚ್ಚ ಮಾಡಲಾಗಿದೆ.

ಕಲಿಯದೇ ಇರುವುದಕ್ಕಿಂತ ನಿಧಾನವಾಗಿಯಾದರೂ ಕಲಿಯುವುದು ಉತ್ತಮ.

ವಿದ್ಯೆಯನ್ನು ಪ್ರೀತಿಸುವವರನ್ನು ಜಗತ್ತಿನಲ್ಲಿ ಯಾರೂ ಹೆದರಿಸಲು ಸಾಧ್ಯವಿಲ್ಲ.

ಮಷೀನ್ ಲರ್ನಿಂಗ್ ಗಣಿತ ಎಷ್ಟು ಗೊತ್ತಿರಬೇಕು?

ಎಸ್.ಜಿ. ಕೃಷ್ಣ



ಮಷೀನ್ ಲರ್ನಿಂಗ್ ಎಂಬುದು ಇತ್ತೀಚೆಗೆ ಜನಪ್ರಿಯವಾಗುತ್ತಿದೆ. ಭವಿಷ್ಯದಲ್ಲೂ ಕೂಡ ಇದಕ್ಕೆ ಸಾಕಷ್ಟು ಬೇಡಿಕೆ ಇರಲಿದ್ದು ಈ ನಿಟ್ಟಿನಲ್ಲಿ ಕೆಲವು ಕೌಶಲಗಳನ್ನು ರೂಢಿಸಿಕೊಳ್ಳುವುದು ಅವಶ್ಯಕ. ಉದಾಹರಣೆಗೆ ಡೇಟಾ ವಿಜ್ಞಾನಿಯಾದವರು ಅಂಕಿ– ಅಂಶಗಳನ್ನು ವಿಶ್ಲೇಷಣೆ ಮಾಡಬೇಕಾದರೆ ಮಷೀನ್ ಲರ್ನಿಂಗ್ ಬಳಕೆ ಮಾಡಬೇಕಾಗುತ್ತದೆ. ಆದರೆ ಮಷೀನ್ ಲರ್ನಿಂಗ್‌ನಲ್ಲಿ ಪರಿಣತಿ ಪಡೆಯಬೇಕಾದರೆ ಗಣಿತದಲ್ಲಿ ಪಾರಂಗತರಾಗುವುದು ಅಗತ್ಯ.

ಗಣಿತ ಬಲ್ಲವರು ಸರಿಯಾದ ಅಲ್ಗೊರಿದಂ ಆಯ್ಕೆ ಮಾಡಬಹುದು. ಯಾವ ಮಾದರಿ ನಿಮಗೆ ಸೂಕ್ತ ಎಂಬುದರ ಬಗ್ಗೆ ತಕ್ಷಣವೇ ನಿರ್ಧರಿಸಬಹುದು. ಆದರೆ ಗಣಿತ ಕ್ಷೇತ್ರ ವಿಸ್ತಾರವಾದ ಕ್ಷೇತ್ರವಾಗಿದ್ದು, ಮಷೀನ್ ಲರ್ನಿಂಗ್‌ಗೆ ಯಾವುದು ಸೂಕ್ತ ಎಂಬುದನ್ನು ಕೂಡ ತಿಳಿದುಕೊಳ್ಳಬೇಕು.

ಮೊದಲನೆಯದು ಬೀಜಗಣಿತ. ಅದರಲ್ಲೂ ಲೀನಿಯರ್ ಬೀಜಗಣಿತವನ್ನು ಅರಿತುಕೊಂಡರೆ ಅಂದರೆ ವೆಕ್ಟರ್, ಮ್ಯಾಟ್ರಿಕ್ಸ್ ಬಗ್ಗೆ ಜ್ಞಾನವಿದ್ದರೆ ಒಳಿತು. ಕಂಬಸಾಲಿನ ವೆಕ್ಟರ್ ಅಥವಾ ಅಡ್ಡಸಾಲಿನ ವೆಕ್ಟರ್ ಬಗ್ಗೆ ಅರಿತುಕೊಂಡಿರಬೇಕು. ಲೀನಿಯರ್ ಬೀಜಗಣಿತದಲ್ಲಿರುವ ಅಂಕಿ– ಅಂಶಗಳನ್ನು ಕಂಪ್ಯೂಟರ್ ಅರ್ಥ ಮಾಡಿಕೊಳ್ಳಲು ಸಾಧ್ಯ. ಏಕೆಂದರೆ ಇದಕ್ಕೆ ವ್ಯವಸ್ಥಿತವಾದ ನಿಯಮಗಳಿದ್ದು, ಲೀನಿಯರ್ ಸಮೀಕರಣಗಳಲ್ಲಿ ಬಳಸಲಾಗುತ್ತದೆ.

> ಇತ್ತೀಚೆಗೆ ಹೆಚ್ಚು ಪ್ರಚಲಿತದಲ್ಲಿರುವ ಕೋರ್ಸ್‌ಗಳಲ್ಲಿ ಮಷೀನ್ ಲರ್ನಿಂಗ್ ಕೂಡ ಒಂದು. ಈ ವಿಷಯದಲ್ಲಿ ಪರಿಣತಿ ಪಡೆಯಬೇಕಾದರೆ ಗಣಿತ ಕೂಡ ಅಗತ್ಯ. ಆದರೆ ಗಣಿತದಲ್ಲಿ ಯಾವ ವಿಷಯವನ್ನು ಆಯ್ಕೆ ಮಾಡಿಕೊಳ್ಳುತ್ತೀರಿ ಎಂಬುದೂ ಮುಖ್ಯವಾಗುತ್ತದೆ.

ಹೀಗಾಗಿ ಬೀಜಗಣಿತದಲ್ಲಿ ಲೀನಿಯರ್ ಸಮೀಕರಣ, ವೆಕ್ಟರ್, ಮ್ಯಾಟ್ರಿಕ್ಸ್ ಬಗ್ಗೆ ಅರಿತುಕೊಂಡರೆ ಸಾಕು.

ಇನ್ನೊಂದು ಜಾಮೆಟ್ರಿ ಅಥವಾ ರೇಖಾಗಣಿತ. ವಿವಿಧ ಆಕಾರಗಳನ್ನು ಸಂಖ್ಯಾತ್ಮಕವಾಗಿ ಪ್ರಚುರಪಡಿಸುವ ಈ ವಿಭಾಗದ ನಿಯಮಗಳನ್ನು ಬಳಸಿ ಅಂಕಿ– ಅಂಶಗಳನ್ನು ಹಾಕಿದರೆ ಸಂಖ್ಯಾತ್ಮಕವಾದ ಮಾಹಿತಿ ನಿಮಗೆ ಲಭ್ಯವಾಗುತ್ತದೆ. ಮಷೀನ್ ಲರ್ನಿಂಗ್‌ನಲ್ಲಿ ವಿಶ್ಲೇಷಣಾತ್ಮಕ ರೇಖಾಗಣಿತ ಹೆಚ್ಚು ಪ್ರಯೋಜನಕಾರಿ.

ಎರಡು ಅಂಶಗಳ ನಡುವಿನ ದೂರವನ್ನು ಯೂಕ್ಲಿಡಿಯನ್ ದೂರ ಸಮೀಕರಣದ ಮೂಲಕ ಲೆಕ್ಕ ಹಾಕಲು ಸಾಧ್ಯ. ಹಾಗೆಯೇ ಎರಡು ಕೋನಗಳ ಬಗ್ಗೆಯೂ ಸಾಕಷ್ಟು ಜ್ಞಾನವಿರಬೇಕಾಗುತ್ತದೆ. ಇನ್ನೊಂದು ಗಣಿತದ ವಿಭಾಗವೆಂದರೆ ಮ್ಯಾಟ್ರಿಕ್ಸ್ ಡಿಕಂಪೋಜಿಷನ್. ಅತ್ಯಂತ ಕ್ಲಿಷ್ಟಕರವಾದ ಅಂಕಿ– ಅಂಶಗಳನ್ನೂ ಕೂಡ ಇದರ ಮೂಲಕ ಸರಳೀಕರಿಸಬಹುದು.

ಬಹು ಮುಖ್ಯವಾದ ಗಣಿತದ ವಿಭಾಗವೆಂದರೆ ವೆಕ್ಟರ್ ಕ್ಯಾಲ್ಕುಲಸ್. ಇದು ಫಂಕ್ಷನ್ ಹಾಗೂ ಲಿಮಿಟ್‌ಗಳನ್ನು ಒಳಗೊಂಡಿದ್ದು, ಡಿಫರನ್ಶಿಯೇಶನ್ ಹಾಗೂ ಇಂಟಿಗ್ರೇಶನ್ ಬಗ್ಗೆ ವಿಸ್ತಾರವಾದ ಮಾಹಿತಿ ಹೊಂದಿದೆ. ಮುಖ್ಯವಾಗಿ ಡಿರೈವೇಟಿವ್ಸ್ ಅನ್ನೂ ಕಲಿತರೆ ಮಷೀನ್ ಲರ್ನಿಂಗ್ ಸುಲಭ.

ಇನ್ನೊಂದು ವಿಭಾಗವೆಂದರೆ ಸಂಭವನೀಯತೆ. ಒಂದು ಘಟನೆಯ ಸಾಧ್ಯತೆಯನ್ನು ಅಳೆಯುವ ಗಣಿತದ ಲೆಕ್ಕಾಚಾರವಿದು.

ಕೊನೆಯದು ಆಪ್ಟಿಮೈಜೇಶನ್. ಇದರಲ್ಲಿ ಲೋಕಲ್ ಮಿನಿಮಾ ಹಾಗೂ ಗ್ಲೋಬಲ್ ಮಿನಿಮಾ, ಗ್ರೇಡಿಯೆಂಟ್ ಡಿಸೆಂಟ್ ಎಂಬ ಶಬ್ದಗಳು ಪದೇ ಪದೇ ಬರುತ್ತವೆ.

ಮೊದಲೇ ಹೇಳಿದಂತೆ, ಗಣಿತವನ್ನು ಕಲಿತು ಮುಗಿಸಲು ಸಾಧ್ಯವಿಲ್ಲ. ಅದರ ವಿಸ್ತಾರ ಅಗಾಧವಾಗಿದ್ದು, ಕೆಲವು ವಿಭಾಗಗಳನ್ನು ಚೆನ್ನಾಗಿ ಅರಿತುಕೊಂಡರೆ ಒಬ್ಬ ಡೇಟಾ ವಿಜ್ಞಾನಿ ಮಷೀನ್ ಲರ್ನಿಂಗ್‌ನಲ್ಲಿ ತನ್ನ ಕೆಲಸವನ್ನು ಸುಲಭವಾಗಿ ಮಾಡಿಕೊಳ್ಳಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಐಐಟಿ ಬಿಎಚ್‌ಯು ವಾರಾಣಸಿ ಡಿಪಾರ್ಟ್‌ಮೆಂಟ್ ಆಫ್ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಜೂನಿಯರ್ ರೀಸರ್ಚ್ ಫೆಲೋಶಿಪ್ 2021

- **ವಿವರ:** ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಎಂಇ, ಎಂಟೆಕ್ ಪೂರ್ಣಗೊಳಿಸಿದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- **ಅರ್ಹತೆ:** ಅಭ್ಯರ್ಥಿಗಳ ವಯಸ್ಸು 28 ಮೀರಿರಬಾರದು. ಶೇ 60ರಷ್ಟು ಅಂಕಗಳನ್ನು ಪಡೆದಿರಬೇಕು. ಗೇಟ್ ಮತ್ತು ಎನ್‌ಇಟಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿಬೇಕು.
- **ಆರ್ಥಿಕ ಸಹಾಯ:** ₹ 35 ಸಾವಿರ ಮತ್ತು ಎಚ್‌ಆರ್‌ಎ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 8 ಆಗಸ್ಟ್, 2021
- **ಅರ್ಜಿ ಸಲ್ಲಿಕೆ ವಿಧಾನ:** ಇ–ಮೇಲ್ ಮುಖಾಂತರ ಮಾತ್ರ
- **ಹೆಚ್ಚಿನ ಮಾಹಿತಿಗೆ:** www.b4s.in/praja/IBVE0

ಜನರಲ್ ಕೆಟಗರಿ ವಿದ್ಯಾರ್ಥಿಗಳಿಗೆ ಒಎನ್‌ಜಿಸಿ ಸ್ಕಾಲರ್‌ಶಿಪ್ 2021

- **ವಿವರ:** ಮೊದಲ ವರ್ಷದ ಎಂಜಿನಿಯರಿಂಗ್, ಎಂಬಿಬಿಎಸ್, ಎಂಬಿಎ ಮತ್ತು ಜಿಯೊಫಿಸಿಕ್ಸ್, ಜಿಯೋಲಜಿಯಲ್ಲಿ ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- **ಅರ್ಹತೆ:** ಕುಟುಂಬದ ವಾರ್ಷಿಕ ಆದಾಯವು ₹2 ಲಕ್ಷಕ್ಕಿಂತ ಕಡಿಮೆ ಇರಬೇಕು. ಹಿಂದಿನ ಪದವಿಗಳಲ್ಲಿ ಶೇ 60ರಷ್ಟು ಅಂಕ ಗಳಿಸಿರಬೇಕು.
- **ಆರ್ಥಿಕ ಸಹಾಯ:** ವರ್ಷಕ್ಕೆ ₹48 ಸಾವಿರ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 6 ಆಗಸ್ಟ್, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಅಥವಾ ಅಂಚೆ ಮೂಲಕ
- **ಹೆಚ್ಚಿನ ಮಾಹಿತಿಗೆ:** www.b4s.in/praja/OSB8

ಕೃಪೆ:buddy4study.com

ಎಂಕಾಂ ಮಾಡಿದವರು ಡೇಟಾ ಸೈನ್ಸ್ ಓದಬಹುದೇ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್‌ಕುಮಾರ್

- **1. ನಾನು ಎಂಕಾಂ (ಫೈನಾನ್ಸ್ ಮತ್ತು ಅಕೌಂಟಿಂಗ್) ಕೊನೆಯ ವರ್ಷದಲ್ಲಿ ಓದುತ್ತಿದ್ದೇನೆ. ಫೈನಾನ್ಸ್ ವಲಯದಲ್ಲಿ ವೃತ್ತಿಜೀವನವನ್ನು ದೃಢವಾಗಿ ರೂಪಿಸಿಕೊಳ್ಳಲು ಯಾವ ಸರ್ಟಿಫಿಕೇಷನ್ ಕೋರ್ಸ್ ಮಾಡಬೇಕು. ಬ್ಯುಸಿನೆಸ್ ಅನಾಲಿಟಿಕ್ಸ್ ಮತ್ತು ಡೇಟಾ ಸೈನ್ಸ್ ಮಾಡಬಹುದು ಎಂಬ ಸಲಹೆಗಳಿವೆ. ನಿಮ್ಮ ಸಲಹೆ ಬೇಕು.**

ಸುಷ್ಮಿತ, ಬೆಂಗಳೂರು

ಫೈನಾನ್ಸ್ ವಿಸ್ತಾರವಾದ ಕ್ಷೇತ್ರ. ಅಕೌಂಟಿಂಗ್, ಬ್ಯಾಂಕಿಂಗ್, ಇನ್ಶೂರೆನ್ಸ್, ಇನ್ವೆಸ್ಟ್‌ಮೆಂಟ್, ಕಾರ್ಪೊರೇಟ್ ಫೈನಾನ್ಸ್, ರಿಸರ್ಚ್, ರಿಸ್ಕ್ ಮ್ಯಾನೇಜ್‌ಮೆಂಟ್ ಸೇರಿದಂತೆ ಅನೇಕ ವಿಭಾಗಗಳಿವೆ. ನಿಮಗೆ ಯಾವ ವಿಭಾಗದಲ್ಲಿ ಆಸಕ್ತಿಯಿದೆ ಎನ್ನುವುದು ಮುಖ್ಯ. ಈ ಎಲ್ಲಾ ವಲಯಗಳಲ್ಲೂ ಬ್ಯುಸಿನೆಸ್ ಅನಾಲಿಟಿಕ್ಸ್ ಮತ್ತು ಡೇಟಾ ಸೈನ್ಸ್ ಕೋರ್ಸ್‌ಗಳು ಸಹಾಯವಾಗುತ್ತವೆ.

- **2. ನಾನು ಮದುವೆಯಾಗಲಿರುವ ಹುಡುಗಿಯು ಆಂಧ್ರಪ್ರದೇಶದಲ್ಲಿ ಪಿಯುಸಿ ಮುಗಿಸಿದ್ದು ಮದುವೆಯಾದ ಬಳಿಕ ಕರ್ನಾಟಕದಲ್ಲಿ ಟೀಚರ್ಸ್ ಟ್ರೈನಿಂಗ್ ಮಾಡುವ ಇಚ್ಛೆ ಹೊಂದಿದ್ದಾಳೆ. ಅನ್ಯ ರಾಜ್ಯದ ವಿದ್ಯಾರ್ಥಿಗಳು ನಮ್ಮಲ್ಲಿ ಓದಬಹುದೇ ಹಾಗೂ ನಂತರ ಸರ್ಕಾರಿ ಕೆಲಸಕ್ಕೆ ಪ್ರಯತ್ನಿಸಬಹುದೆ? ದಯವಿಟ್ಟು ತಿಳಿಸಿ.**

ಅರುಣ್, ಭದ್ರಾವತಿ

ಕರ್ನಾಟಕದಲ್ಲಿ ಡಿಎಡ್/ಬಿಎಡ್ ಕೋರ್ಸ್ ಮಾಡಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಯಲ್ಲಿ ಉತ್ತೀರ್ಣರಾದ ನಂತರ, ಸರ್ಕಾರಿ ಕೆಲಸಕ್ಕೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗಾಗಿ ಗಮನಿಸಿ: http://www.schooleducation.kar.nic.in/

- **3. ನನ್ನ ಮಗ ಇಂಡಸ್ಟ್ರಿಯಲ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಮಾಡಲು ಇಚ್ಛಿಸಿದ್ದಾನೆ. ಈ ಕೋರ್ಸ್ ಮಾಡಿದ ನಂತರ ಸರ್ಕಾರಿ ಕೆಲಸ ಮಾಡಬಹುದಾ?**

ಹೆಸರು, ಊರು ತಿಳಿಸಿಲ್ಲ

ಯಾವುದೇ ಕೋರ್ಸ್ ನಿರ್ಧಾರಕ್ಕೆ ಮುಂಚೆ ವೃತ್ತಿ ಜೀವನದ ಬಗ್ಗೆ ಚಿಂತಿಸಿ, ಸ್ವಾಭಾವಿಕ ಪ್ರತಿಭೆ ಮತ್ತು ಆಸಕ್ತಿಯಿರುವ ವೃತ್ತಿಯನ್ನು ಆರಿಸುವುದು ಒಳ್ಳೆಯದು. ವೃತ್ತಿಯ ಆಯ್ಕೆಯಂತೆ ಕೋರ್ಸ್/ಸ್ಟ್ರೀಮ್ ಆಯ್ಕೆ ಮಾಡುವುದು ಸುಲಭ. ಹಾಗಾಗಿ, ಇಂಡಸ್ಟ್ರಿಯಲ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕೋರ್ಸ್ ಮಾಡುವ ಹಿಂದಿರುವ ಆಲೋಚನೆ, ಕಾರಣಗಳನ್ನು ವಿಮರ್ಶಿಸಿ ಹಾಗೂ ಸೇರ ಬಯಸುವ ಕಾಲೇಜಿನಲ್ಲಿ ಈ ವಿಭಾಗದ ಪ್ಲೇಸ್‌ಮೆಂಟ್ ಮಾಹಿತಿಯನ್ನೂ ಪರಿಗಣಿಸಿ. ಸರ್ಕಾರಿ ಕ್ಷೇತ್ರದಲ್ಲಿಯೂ ವೃತ್ತಿಯ ಅವಕಾಶಗಳಿರುತ್ತವೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ– 29

- **391. ಕೆಳಗಿನ ಯಾವುದು ಸಂಕೀರ್ಣ ಶಾಶ್ವತ ಅಂಗಾಂಶ?**

ಎ) ಕೋಲಂಕೈಮ
ಬಿ) ಕ್ಸೈಲಂ
ಸಿ) ಸ್ಕ್ಲೀರಂಕೈಮ
ಡಿ) ಪೇರಂಕೈಮ

- **392. ಒಂದು ಸಂಕೇತ ಭಾಷೆಯಲ್ಲಿ 'ROSE' ಎಂಬ ಪದವನ್ನು 'TQUG' ಎಂದು ಬರೆದರೆ ಅದೇ ರೀತಿ 'BLUE' ಎಂಬ ಪದವನ್ನು ಹೇಗೆ ಬರೆಯಲಾಗುತ್ತದೆ?**

ಎ) YQSF
ಬಿ) DNWG
ಸಿ) DMQF
ಡಿ)CDFG

- **393. ಸಾಮಾನ್ಯ ಮಾನವನ ರಕ್ತ ಈ ಗುಣ ಹೊಂದಿರುತ್ತದೆ**

ಎ) ಆಮ್ಲೀಯ ಬಿ) ತಟಸ್ಥ
ಸಿ) ಕ್ಷಾರೀಯ ಡಿ) ಮೇಲಿನ ಯಾವುದೂ ಅಲ್ಲ

- **394. ರಾಷ್ಟ್ರೀಯ ಮತದಾರರ ದಿನವನ್ನು ಎಂದು ಆಚರಿಸಲಾಗುತ್ತದೆ?**

ಎ) ಜನವರಿ 25
ಬಿ) ಫೆಬ್ರುವರಿ 25
ಸಿ) ಮಾರ್ಚ್ 25
ಡಿ) ಏಪ್ರಿಲ್ 25

- **395. ಏಷ್ಯಾದ ಮೊದಲ 'ರೈಸ್ ಟೆಕ್ ಪಾರ್ಕ್' ಅನ್ನು ಎಲ್ಲಿ ನಿರ್ಮಿಸಲಾಗುತ್ತದೆ?**

ಎ) ಗಂಗಾವತಿ
ಬಿ) ರಾಣೆಬೆನ್ನೂರು
ಸಿ) ಧಾರವಾಡ
ಡಿ) ಕಾರವಾರ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ– 28ರ ಉತ್ತರ: 376. ಡಿ, 377. ಬಿ, 378. ಸಿ, 379. ಸಿ, 380. ಸಿ, 381. ಎ, 382. ಸಿ, 383. ಡಿ, 384. ಡಿ, 385. ಸಿ, 386. ಎ, 387. ಎ, 389. ಎ, 390. ಸಿ

ಬ್ಯಾಡ್ಮಿಂಟನ್: ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಪ್ರಾಬಲ್ಯ ಮೆರೆದ ಸಿಂಧು; ಇಸ್ರೇಲ್‌ನ ಸೆನಿಯಾಗೆ ಕಾಡಿದ ನಿರಾಸೆ

ಹೈದರಾಬಾದ್ ಹುಡುಗಿಯ ಜಯದ ಆರಂಭ

ಪಿ.ವಿ.ಸಿಂಧು ಷಟಲ್ ಹಿಂತಿರುಗಿಸಲು ಪ್ರಯತ್ನಿಸಿದ ಕ್ಷಣ –ಪಿಟಿಐ/ಎಪಿ ಚಿತ್ರ

ಮೊದಲ ಹೋರಾಟ ಸುಲಭದ್ದಾಗಿತ್ತು. ಹಾಗಂತ ಲಘುವಾಗಿ ಪರಿಗಣಿಸಲಿಲ್ಲ. ಪಂದ್ಯ ಯಾವುದೇ ಆಗಿರಲಿ, ಎದುರಾಳಿ ಯಾರೇ ಇರಲಿ, ಪಾಯಿಂಟ್ಸ್ ಗಳಿಸುವುದಷ್ಟೇ ನಮ್ಮ ಗುರಿಯಾಗಿರಬೇಕು

ಪಿ.ವಿ.ಸಿಂಧು, ಭಾರತದ ಆಟಗಾರ್ತಿ

ಟೋಕಿಯೊ (ಪಿಟಿಐ): ಭಾರತದ ಭರವಸೆಯ ಆಟಗಾರ್ತಿ ಪಿ.ವಿ.ಸಿಂಧು ಗೆಲುವಿನೊಂದಿಗೆ ಕೂಟದಲ್ಲಿ ಪದಕದತ್ತ ಪಯಣ ಆರಂಭಿಸಿದ್ದಾರೆ.

ಹಾಲಿ ವಿಶ್ವ ಚಾಂಪಿಯನ್ ಸಿಂಧು, ಮಹಿಳೆಯರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಹಣಾಹಣಿಯಲ್ಲಿ ಇಸ್ರೇಲ್‌ನ ಸೆನಿಯಾ ಪೊಲಿಕರ್ಪೊವಾ ವಿರುದ್ಧ ಸುಲಭ ಜಯ ಸಾಧಿಸಿದರು.

ಭಾರತದ ಆಟಗಾರ್ತಿ ಈ ಪಂದ್ಯದಲ್ಲಿ ಆಕ್ರಮಣಕಾರಿ ಆಟಕ್ಕೆ ಒತ್ತು ನೀಡಿದ್ದು ಗಮನ ಸೆಳೆಯಿತು. ಮೃಧು ಸ್ವಭಾವದ ಹಾಗೂ ಮಿತಭಾಷಿಯಾಗಿರುವ ಸಿಂಧು ಅವರ ಆಟದಲ್ಲಿ ಈ ಹಿಂದೆ ಅಟ್ಯಾಕಿಂಗ್ ಕೊರತೆ ಎದ್ದು ಕಾಣುತ್ತಿತ್ತು. ಇದನ್ನು ಮನಗಂಡ ರಾಷ್ಟ್ರೀಯ ಕೋಚ್ ಪುಲ್ಲೇಲಾ ಗೋಪಿಚಂದ್, ಶಿಷ್ಯೆಯ ತಪ್ಪುಗಳನ್ನು ತಿದ್ದಿ ತೀಡಿದ್ದರು. ಆಕ್ರಮಣಶೀಲತೆ ಮೈಗೂಡಿಸಿಕೊಳ್ಳಲು ನೆರವಾಗಿದ್ದರು. ಹೀಗಾಗಿ ಹೈದರಾಬಾದ್‌ನ ಆಟಗಾರ್ತಿ ರಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆಲ್ಲಲು ಸಾಧ್ಯವಾಗಿತ್ತು.

ಸಿಂಧು, ಮಾನಸಿಕ ಹಾಗೂ ದೈಹಿಕವಾಗಿ ಈಗ ಮತ್ತಷ್ಟು ಸದೃಢರಾಗಿರುವುದು ಭಾನುವಾರದ ಅವರ ಆಟದಲ್ಲೇ ಎದ್ದು ಕಂಡಿತು. ಅನುಭವದಿಂದಲೂ ಪಾಠ ಕಲಿತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿತ್ತು.

ಟೋಕಿಯೊ ಕೂಟಕ್ಕಾಗಿಯೇ ವಿಶೇಷ ತಯಾರಿ ಮಾಡಿಕೊಂಡಿದ್ದ 26 ವರ್ಷ ವಯಸ್ಸಿನ ಸಿಂಧು, ಮೊದಲ ಪಂದ್ಯದಲ್ಲಿ ಯಾವ ಹಂತದಲ್ಲೂ ತಪ್ಪುಗಳಾಗದಂತೆ ಎಚ್ಚರವಹಿಸಿದರು. ಮೊದಲ ಗೇಮ್‌ನ ಆರಂಭದಲ್ಲೇ 3–4 ಹಿನ್ನಡೆ ಕಂಡಿದ್ದ ಅವರು ಬಳಿಕ ಆಕ್ರಮಣಕಾರಿಯಾಗಿ ಆಡಿ ಎದುರಾಳಿಯನ್ನು ತಬ್ಬಿಬ್ಬುಗೊಳಿಸಿದರು.

11–5 ಮುನ್ನಡೆಯೊಂದಿಗೆ ವಿರಾಮಕ್ಕೆ ಹೋದ ಸಿಂಧು, ದ್ವಿತೀಯಾರ್ಧದಲ್ಲಿ ರ್‍ಯಾಲಿಗಳಿಗೆ ಹೆಚ್ಚು ಒತ್ತು ಕೊಟ್ಟರು. ನೇರ ಹಾಗೂ ಕ್ರಾಸ್‌ಕೋರ್ಟ್ ಸ್ಮ್ಯಾಷ್‌ಗಳ ಜೊತೆಗೆ ಚುರುಕಿನ ಡ್ರಾಪ್‌ಗಳ ಮೂಲಕವೂ ಸತತವಾಗಿ ಪಾಯಿಂಟ್ಸ್ ಕಲೆಹಾಕಿ ಗೇಮ್ ಜಯಿಸಿದರು.

ದ್ವಿತೀಯ ಗೇಮ್‌ನಲ್ಲಿ ಸಿಂಧು ಆಟ ಮತ್ತಷ್ಟು ಕಳೆಗಟ್ಟಿತು. 9–3ರಿಂದ ಮುಂದಿದ್ದ ಭಾರತದ ಆಟಗಾರ್ತಿ ನಂತರ ಮತ್ತಷ್ಟು ಚುರುಕಾಗಿ ಆಡಿ 7 ಪಾಯಿಂಟ್ಸ್‌ಗಳ ಮುನ್ನಡೆಯೊಂದಿಗೆ ಮೊದಲಾರ್ಧದ ಆಟ ಮುಗಿಸಿದರು. ಎರಡನೇ ಅವಧಿಯಲ್ಲಿ ಇಸ್ರೇಲ್‌ನ ಆಟಗಾರ್ತಿ ಅನೇಕ ತಪ್ಪುಗಳನ್ನು ಮಾಡಿದರು. ಹೀಗಾಗಿ ಸಿಂಧು ಖಾತೆಗೆ ಸುಲಭವಾಗಿ ಪಾಯಿಂಟ್ಸ್‌ಗಳು ಜಾರಿದವು. ಸೆನಿಯಾ ಬಾರಿಸಿದ ಷಟಲ್ ಅಂಗಳದ ಆಚೆ ಬೀಳುತ್ತಿದ್ದಂತೆ ಭಾರತದ ಆಟಗಾರ್ತಿ ಸಂಭ್ರಮಿಸಿದರು.

‘ಇದು ಹೊಸ ಆರಂಭ. ಹೀಗಾಗಿ ಆಯಾ ದಿನ ನಡೆಯುವ ಪಂದ್ಯಕ್ಕೆ ಸಕಲ ರೀತಿಯಲ್ಲೂ ಸಿದ್ಧರಾಗಿರಬೇಕು. ಒಲಿಂಪಿಕ್ಸ್‌ನಂತಹ ಮಹಾ ಕೂಟದಲ್ಲಿ ಎಲ್ಲರೂ ಪದಕದ ಗುರಿಯೊಂದಿಗೆ ಕಣಕ್ಕಿಳಿಯುತ್ತಾರೆ. ಯಾರೂ ಸುಲಭವಾಗಿ ಸೋಲೊಪ್ಪಿಕೊಳ್ಳಲು ಸಿದ್ಧರಿರುವುದಿಲ್ಲ’ ಎಂದು ಸಿಂಧು ಪ್ರತಿಕ್ರಿಯಿಸಿದರು.

ಸೆನಿಯಾ ಪೊಲಿಕರ್ಪೊವಾ

ಇಂದು ಡಬಲ್ಸ್ ಹೋರಾಟ

ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಅವರು ಪುರುಷರ ಡಬಲ್ಸ್ ವಿಭಾಗದಲ್ಲಿ ಸೋಮವಾರ ಅಂಗಳಕ್ಕಿಳಿಯಲಿದ್ದಾರೆ.

ಎರಡನೇ ಸುತ್ತಿನ ಹಣಾಹಣಿಯಲ್ಲಿ ಭಾರತದ ಆಟಗಾರರಿಗೆ ಇಂಡೊನೇಷ್ಯಾದ ಮಾರ್ಕಸ್ ಫರ್ನಾಲ್ದಿ ಗಿಡೊನ್ ಹಾಗೂ ಕೆವಿನ್ ಸಂಜಯ ಸುಖಮುಲ್ಜೊ ಅವರ ಸವಾಲು ಎದುರಾಗಲಿದೆ.

ಈ ಹಣಾಹಣಿ ಮುಸಾಶಿನೊ ಫಾರೆಸ್ಟ್ ಪ್ಲಾಜಾದ ಎರಡನೇ ಅಂಕಣದಲ್ಲಿ ನಿಗದಿಯಾಗಿದೆ. ಮೊದಲ ಸುತ್ತಿನ ಪೈಪೋಟಿಯಲ್ಲಿ ಮಿಂಚಿರುವ ಭಾರತದ ಜೋಡಿ ಈ ಪಂದ್ಯದಲ್ಲೂ ಗೆಲ್ಲುವ ಹುಮ್ಮಸ್ಸಿನಲ್ಲಿದೆ.

13
ಮೊದಲ ಗೇಮ್‌ನಲ್ಲಿ ಸಿಂಧು ಸತತವಾಗಿ ಕಲೆಹಾಕಿದ ಪಾಯಿಂಟ್ಸ್

16
ಮೊದಲ ಗೇಮ್‌ನಲ್ಲಿ ಸಿಂಧು ಸರ್ವ್‌ಗಳ ಮೂಲಕವೇ ಗಳಿಸಿದ ಪಾಯಿಂಟ್ಸ್

ಪಂದ್ಯದ ವಿವರ

ಸಿಂಧು		ಸೆನಿಯಾ
21	ಮೊದಲ ಗೇಮ್	7
21	ಎರಡನೇ ಗೇಮ್	10
7	ರ್‍ಯಾಂಕಿಂಗ್	58
ಪಂದ್ಯದ ಅವಧಿ: 28 ನಿಮಿಷ		

ಗುಂಪು: ಜೆ
ಸಿಂಧು ಮುಂದಿನ ಎದುರಾಳಿ: ಚೆವುಂಗ್ ನಗನ್ ಯಿ.

ಮೇರಿ ಜಯಭೇರಿ

ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲಲು ಆಗಿಲ್ಲ ಎಂಬ ಕೊರಗು ಕಾಡುತ್ತಿದೆ. ಈಗಲಾದರೂ ಆ ಕೊರಗು ದೂರಮಾಡಿಕೊಳ್ಳಬೇಕು. ಅದಕ್ಕಾಗಿ ಶಕ್ತಿಮೀರಿ ಪ್ರಯತ್ನಿಸುತ್ತೇನೆ

ಎಂ.ಸಿ.ಮೇರಿಕೋಮ್, ಭಾರತದ ಬಾಕ್ಸರ್

ಟೋಕಿಯೊ (ಪಿಟಿಐ): ಭಾರತದ ಅನುಭವಿ ಬಾಕ್ಸರ್ ಎಂ.ಸಿ.ಮೇರಿ ಕೋಮ್ ಗೆಲುವಿನೊಂದಿಗೆ ಒಲಿಂಪಿಕ್ಸ್ ಅಭಿಯಾನ ಆರಂಭಿಸಿದ್ದಾರೆ.

ಮಹಿಳೆಯರ 51 ಕೆ.ಜಿ.ವಿಭಾಗದ ಮೊದಲ ಸುತ್ತಿನ ಹೋರಾಟದಲ್ಲಿ ಮೇರಿ 4–1 ಪಾಯಿಂಟ್ಸ್‌ನಿಂದ ಡೊಮಿನಿಕನ್ ಗಣರಾಜ್ಯದ ಮಿಗುಲಿನಾ ಹರ್ನಾಂಡೆಜ್ ಗಾರ್ಸಿಯಾ ಅವರನ್ನು ಸೋಲಿಸಿ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

38 ವರ್ಷ ವಯಸ್ಸಿನ ಮೇರಿ, ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಆರು ಬಾರಿ ಪ್ರಶಸ್ತಿ ಗೆದ್ದ ದಾಖಲೆ ಹೊಂದಿದ್ದಾರೆ. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ ಹಿರಿಮೆಯೂ ಅವರದ್ದಾಗಿದೆ.

ವಯಸ್ಸಿನಲ್ಲಿ ತಮಗಿಂತ 15 ವರ್ಷ ಚಿಕ್ಕವರಾಗಿರುವ ಗಾರ್ಸಿಯಾ ಎದುರು ಮೇರಿ ಅಮೋಘ ಸಾಮರ್ಥ್ಯ ತೋರಿದರು. ಬಲಿಷ್ಠ ಪಂಚ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದರು.

ಮೊದಲ ಸುತ್ತಿನಲ್ಲಿ ಆಕ್ರಮಣಕಾರಿ ತಂತ್ರ ಅನುಸರಿಸಿದ ಮೇರಿಗೆ ಐದು ಮಂದಿ ರೆಫರಿಗಳ ಪೈಕಿ ಮೂವರು ತಲಾ 10 ಪಾಯಿಂಟ್ಸ್ ನೀಡಿದರು.

ಎರಡನೇ ಸುತ್ತಿನಲ್ಲಿ ಗಾರ್ಸಿಯಾ ಆಕ್ರಮಣಕಾರಿಯಾದರು. ಕೊನೆಯ ಮೂರು ನಿಮಿಷಗಳಲ್ಲಿ ಪ್ರಾಬಲ್ಯ ಮೆರೆದ ಮೇರಿ ಸಂಭ್ರಮಿಸಿದರು. ಭಾರತದ ಬಾಕ್ಸರ್, ಎದುರಾಳಿಯ ತಲೆ ಹಾಗೂ ಪಕ್ಕೆಗೆ ನಿರಂತರವಾಗಿ ಪಂಚ್‌ಗಳನ್ನು ಮಾಡಿ ಪಾಯಿಂಟ್ಸ್ ಕಲೆಹಾಕಿದರು. ಮೇರಿ, ಮುಂದಿನ ಸುತ್ತಿನಲ್ಲಿ ಕೊಲಂಬಿಯಾದ ಇಂಗ್ರಿಟ್ ವಲೆನ್ಸಿಯಾ ಎದುರು ಆಡಲಿದ್ದಾರೆ.

ಮನೀಷ್‌ಗೆ ನಿರಾಸೆ: ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಗೆದ್ದಿರುವ ಮನೀಷ್ ಕೌಶಿಕ್, ಮೊದಲ ಸುತ್ತಿನಲ್ಲೇ ಮುಗ್ಗರಿಸಿದರು.

ಪುರುಷರ 63 ಕೆ.ಜಿ. ವಿಭಾಗದ ಹಣಾಹಣಿಯಲ್ಲಿ ಮನೀಷ್ 1–4ರಿಂದ ಬ್ರಿಟನ್‌ನ ಲೂಕ್ ಮೆಕ್‌ಕಾರ್ಮಕ್ ವಿರುದ್ಧ ಸೋತರು.

ಭಾರತದ ಮೇರಿಕೋಮ್ (ಕೆಂಪು ಪೋಷಾಕು) ಎದುರಾಳಿಗೆ ಪಂಚ್ ಮಾಡಿದ ಕ್ಷಣ –ಎಪಿ/ಪಿಟಿಐ ಚಿತ್ರ

ರೋಚಕ ಹಣಾಹಣಿಯಲ್ಲಿ ಗೆದ್ದ ಮಣಿಕಾ

ಟೋಕಿಯೊ(ಪಿಟಿಐ): ಒಲಿಂಪಿಕ್ ಕೂಟದ ಟೇಬಲ್ ಟೆನಿಸ್ ಆಟದಲ್ಲಿ ಭಾರತದ ಪಾಲಿಗೆ ಭರವಸೆಯ ಕಿರಣವಾಗಿ ಮಣಿಕಾ ಬಾತ್ರಾ ಹೊರಹೊಮ್ಮಿದರು.

ಭಾನುವಾರ ನಡೆದ ಮಹಿಳೆಯರ ಸಿಂಗಲ್ಸ್‌ನ ಎರಡನೇ ಸುತ್ತಿನಲ್ಲಿ ಅಮೋಘ ಆಟವಾಡಿದ ಮಣಿಕಾ ತಮಗಿಂತಲೂ ಉತ್ತಮ ರ್‍ಯಾಂಕಿಂಗ್‌ನಲ್ಲಿರುವ ಮಾರ್ಗರೀಟಾ ಪೆಸ್ಟೋತ್ಸ್ಕಾ ವಿರುದ್ಧ ಗೆದ್ದು ಮೂರನೇ ಸುತ್ತಿಗೆ ಸಾಗಿದರು. ಪಂದ್ಯದ ಮೊದಲ ಎರಡು ಗೇಮ್‌ಗಳಲ್ಲಿ ಆಘಾತ ಅನುಭವಿಸಿದ್ದ ಮಣಿಕಾ ನಂತರ ಪುಟಿದೆದ್ದ ರೀತಿ ಅವರ ಆತ್ಮವಿಶ್ವಾಸದ ಪರಿಚಯ ನೀಡಿತ್ತು.

62 ನೇ ಶ್ರೇಯಾಂಕದ ಮಣಿಕಾ 4-11, 4-11, 11-7, 12-10, 8-11, 11-5, 11-7ರಿಂದ ಎದುರಾಳಿಯನ್ನು ಸೋಲಿನತ್ತ ತಳ್ಳಿದರು. ಈ ಹಂತದಲ್ಲಿ ಆಟವು ಬಹಳಷ್ಟು ರೋಚಕ ತಿರುವುಗಳನ್ನು ಕಂಡಿತು. ಮೂರನೇ ಗೇಮ್‌ನಲ್ಲಿ ಒತ್ತಡ ಮೀರಿ ನಿಂತ ಮಣಿಕಾ ಜಯದ ರುಚಿ ಸವಿದರು. ಆದರೆ ಇದರಿಂದ ಎಚ್ಚೆತ್ತ ಮಾರ್ಗರಿಟಾ ನಾಲ್ಕನೇ ಗೇಮ್‌ನಲ್ಲಿ ಕಠಿಣ ಪೈಪೋಟಿ ಒಡ್ಡಿದರು. ಇದರಿಂದಾಗಿ ಟೈಬ್ರೇಕರ್‌ನಲ್ಲಿ ಕಷ್ಟಪಟ್ಟು ಮಣಿಕಾ ಜಯಿಸಬೇಕಾಯಿತು.

ನಂತರದ ಗೇಮ್‌ನಲ್ಲಿ ಮಾರ್ಗರಿಟಾ ಮೇಲುಗೈ ಸಾಧಿಸಿದರು. ಆದರೆ ಮಣಿಕಾ ಪುಟಿದೆದ್ದರು. ಉಳಿದ ಎರಡೂ ಗೇಮ್‌ಗಳನ್ನು ತಮ್ಮದಾಗಿಸಿಕೊಂಡರು.

ಈ ಪಂದ್ಯದಲ್ಲಿಯೂ ಅವರು ಟಿಟಿ ತಂಡದ ರಾಷ್ಟ್ರೀಯ ತರಬೇತುದಾರನನ್ನು ಪಂದ್ಯದ ಸ್ಥಳದಲ್ಲಿರದಂತೆ ನೋಡಿಕೊಂಡರು. ಮೊದಲ ಪಂದ್ಯದಲ್ಲಿಯೂ ಅವರು ಇದೇ ಕ್ರಮ ಅನುಸರಿಸಿದ್ದರು. ಅವರ ವೈಯಕ್ತಿಕ ಕೋಚ್ ಸನ್ಮಯ್ ಪರಾಂಜಪೆ ಮಾತ್ರ ಗ್ಯಾಲರಿಯಲ್ಲಿದ್ದರು. ಸೋಮವಾರ ನಡೆಯಲಿರುವ 3ನೇ ಸುತ್ತಿನ ಪಂದ್ಯದಲ್ಲಿ ಅವರು ಆಸ್ಟ್ರಿಯಾದ ಸೋಫಿಯಾ ಪಾಲ್ಕನೊವಾ ವಿರುದ್ಧ ಜಯಿಸಿದರೆ ಪ್ರೀಕ್ವಾರ್ಟರ್ ಪ್ರವೇಶಿಸುವರು. ಇದರೊಂದಿಗೆ ಈ ಸಾಧನೆ ಮಾಡಿದ ಭಾರತದ ಆಟಗಾರ್ತಿಯೆಂಬ ದಾಖಲೆ ಬರೆಯುವ ಅವಕಾಶವೂ ಅವರಿಗಿದೆ.

ಗೆಲುವು ಕೈಚೆಲ್ಲಿದ ಸತ್ಯನ್: ಭಾರತದ ಸತ್ಯನ್ ಜ್ಞಾನಶೇಖರನ್ ಪುರುಷರ ಸಿಂಗಲ್ಸ್‌ನ ಮೊದಲ ಪಂದ್ಯದಲ್ಲಿ ಗೆಲುವಿನ ಸನಿಹ ಎಡವಿದರು. ಭಾನುವಾರ ನಡೆದ ಪಂದ್ಯದಲ್ಲಿ ಸತ್ಯನ್ 3–4 ಗೇಮ್‌ಗಳಿಂದ ಹಾಂಗ್‌ಕಾಂಗ್‌ನ ಎಸ್.ಎಚ್. ಲ್ಯಾಮ್ ವಿರುದ್ಧ ಸೋತರು.

ಪಂದ್ಯದ ಸಮಯ

ಗೇಮ್	ನಿಮಿಷ
1	5
2	6
3	7
4	11
5	8
6	7
7	7



ಮಣಿಕಾ ಬಾತ್ರಾ ಎಎಫ್‌ಪಿ ಚಿತ್ರ

ಭಾರತದ ಸ್ಪರ್ಧಾ ಸಮಯ

ಸಮಯ	ಸ್ಪರ್ಧೆ
ಆರ್ಚರಿ	
ಬೆಳಿಗ್ಗೆ 6 ಗಂಟೆ	ಪುರುಷರ ತಂಡದ ಎಲಿಮಿನೇಷನ್ಸ್(ಅತನು ದಾಸ್, ಪ್ರವೀಣ್ ಜಾಧವ್, ತರುಣದೀಪ್ ರಾಯ್)
ಬ್ಯಾಡ್ಮಿಂಟನ್	
ಬೆಳಿಗ್ಗೆ 9.10	ಪುರುಷರ ಡಬಲ್ಸ್ ಗುಂಪು ಹಂತ (ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಚಿರಾಗ್ ಶೆಟ್ಟಿ)
ಬಾಕ್ಸಿಂಗ್	
ಮಧ್ಯಾಹ್ನ 3.06	ಪುರುಷರ ಮಿಡ್ಲ್‌ವೇಟ್ ರೌಂಡ್ 32 (ಆಶಿಶ್ ಕುಮಾರ್)
ಫೆನ್ಸಿಂಗ್	
ಬೆಳಿಗ್ಗೆ 5.30	ಮಹಿಳೆಯರ ಸೇಬರ್ ವಿಭಾಗದ ಮೊದಲ ಸುತ್ತು (ಭವಾನಿ ದೇವಿ)
ಸಂಜೆ 5.15	ಮಹಿಳೆಯರ ಸೇಬರ್ ವಿಭಾಗದ ಪದಕದ ಸುತ್ತುಗಳು
ಶೂಟಿಂಗ್	
ಬೆಳಿಗ್ಗೆ 6.30	ಪುರುಷರ ಸ್ಕೀಟ್ ಅರ್ಹತಾ ಸುತ್ತು ಎರಡನೇ ದಿನ (ಅಂಗದ್ ಬಾಜ್ವಾ, ಮೈರಾಜ್ ಅಹಮದ್ ಖಾನ್)
ಮಧ್ಯಾಹ್ನ 12.20	ಪುರುಷರ ಸ್ಕೀಟ್ ಫೈನಲ್

ಸಮಯ	ಸ್ಪರ್ಧೆ
ಈಜು	
ಮಧ್ಯಾಹ್ನ 3.45	ಪುರುಷರ 200 ಮೀ. ಬಟರ್‌ಫ್ಲೈ ಹೀಟ್ಸ್ (ಸಜನ್ ಪ್ರಕಾಶ್)
ಟೇಬಲ್ ಟೆನಿಸ್	
ಬೆಳಿಗ್ಗೆ 6.30-8.30	ಪುರುಷ ಮತ್ತು ಮಹಿಳೆಯರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯಗಳು (ಅಚಂತ ಶರತ್ ಕಮಲ್, ಸುತೀರ್ಥಾ ಮುಖರ್ಜಿ)
ಬೆಳಿಗ್ಗೆ 11.40- ಮ. 2 ಗಂಟೆ	ಮಹಿಳಾ ಸಿಂಗಲ್ಸ್ ಮೂರನೇ ಸುತ್ತಿನ ಪಂದ್ಯಗಳು (ಮಣಿಕಾ ಬಾತ್ರಾ)
ಮಹಿಳಾ ಹಾಕಿ	
ಸಂಜೆ 5.45	ಭಾರತ–ಜರ್ಮನಿ ಪಂದ್ಯ
ಸೇಲಿಂಗ್	
ಬೆಳಿಗ್ಗೆ 8.35	ಪುರುಷರ ಲೇಸರ್ ಹೀಟ್ಸ್ (ವಿಷ್ಣು ಸರವಣನ್)
ಬೆಳಿಗ್ಗೆ 11.05	ಮಹಿಳೆಯರ ಲೇಸರ್ ರೇಡಿಯಲ್ ಹೀಟ್ಸ್ (ನೇತ್ರಾ ಕುಮನನ್)
ಟೆನಿಸ್	
ಬೆಳಿಗ್ಗೆ 7.30	ಪುರುಷರ ಸಿಂಗಲ್ಸ್ ಎರಡನೇ ಸುತ್ತು (ಸುಮಿತ್ ನಗಾಲ್– ಡೇನಿಯಲ್ ಮೆಡ್ವೆಡೆವ್ ಹಣಾಹಣಿ)

ಭಾರತೀಯ ಕಾಲಮಾನ | ಲೈವ್ ಸೋನಿ ನೆಟ್‌ವರ್ಕ್

ಮೀರಾಬಾಯಿಗೆ ಪಿಜ್ಜಾ ಕಾಣಿಕೆ!

ನವದೆಹಲಿ (ಪಿಟಿಐ): ವೇಟ್‌ಲಿಫ್ಟಿಂಗ್‌ನಲ್ಲಿ ಬೆಳ್ಳಿ ಪದಕ ಗೆದ್ದು ಇತಿಹಾಸ ರಚಿಸಿದ ಮೀರಾಬಾಯಿ ಚಾನುಗೆ ಪಿಜ್ಜಾ ಖಾದ್ಯವನ್ನು ಜೀವಮಾನಪೂರ್ತಿ ಉಚಿತವಾಗಿ ನೀಡಲು ಡೊಮಿನೊಸ್ ಸಂಸ್ಥೆ ನಿರ್ಧರಿಸಿದೆ.

ಪದಕ ಗೆದ್ದ ನಂತರ ಶನಿವಾರ ಸಂದರ್ಶನವೊಂದರಲ್ಲಿ ಮಾತನಾಡಿದ್ದ ಮೀರಾ ‘ಪಿಜ್ಜಾ ತಿಂದು ಬಹಳ ದಿನಗಳಾಗಿಬಿಟ್ಟಿವೆ. ಈಗ ಪಿಜ್ಜಾ ಸವಿಯುವ ಮನಸ್ಸಾಗುತ್ತಿದೆ. ಇವತ್ತು ಹೊಟ್ಟೆಬಿರಿಯುವಷ್ಟು ತಿಂದುಬಿಡುತ್ತೇನೆ’ ಎಂದಿದ್ದರು.

ಈ ವಿಡಿಯೊವನ್ನು ಡೊಮಿನೊಸ್ ಸಂಸ್ಥೆಯ (ಭಾರತ) ಸಿಇಒ ಪ್ರತೀಕ್ ಅವರಿಗೆ ಟ್ಯಾಗ್ ಮಾಡಲಾಗಿತ್ತು. ವಿಡಿಯೊ ನೋಡಿದ ಪ್ರತೀಕ್, ಇಂಫಾಲದಲ್ಲಿರುವ ಮೀರಾಬಾಯಿ ಮನೆಗೆ ಸಂಸ್ಥೆಯ ಸಿಬ್ಬಂದಿಯನ್ನು ಕಳುಹಿಸಿ ಮನೆಯವರಿಗೆಲ್ಲಾ ಪಿಜ್ಜಾ ಉಚಿತವಾಗಿ ವಿತರಿಸುವ ವ್ಯವಸ್ಥೆ ಮಾಡಿದ್ದರು. ಆ ಚಿತ್ರವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದರು.

‘ನೀವು ಹೇಳಿದನ್ನು ನಾವು ಆಲಿಸಿದ್ದೇವೆ (ಆಪ್ನೆ ಕಹಾ ಔರ್ ಹಮ್ನೆ ಸುನ್ ಲಿಯಾ). ಮೀರಾ ಇನ್ನು ಮುಂದೆ ಪಿಜ್ಜಾ ಸವಿಯಲು ಕಾಯಬೇಕಿಲ್ಲ. ಅದಕ್ಕೆ ನಾವು ಆಸ್ಪದ ನೀಡುವುದಿಲ್ಲ. ಅವರಿಗೆ ಪಿಜ್ಜಾವನ್ನು ಜೀವಮಾನ ಕಾಣಿಕೆಯಾಗಿ ಉಚಿತವಾಗಿ ಪೂರೈಸುತ್ತೇವೆ’ ಎಂದು ಡೊಮಿನೊಸ್ ಪಿಜ್ಜಾ ಟ್ವೀಟ್ ಮಾಡಿದೆ.

‘ಮನೆ ಹಾಗೂ ಮನೆಯವರ ಮುಖ ನೋಡಿ ವರ್ಷಗಳೇ ಉರುಳಿವೆ. ಹೀಗಾಗಿ ಭಾರತ ತಲುಪಿದ ಕೂಡಲೇ ನೇರವಾಗಿ ಮನೆಗೆ ಹೋಗುತ್ತೇನೆ’ ಎಂದೂ ಮೀರಾ ಹೇಳಿದ್ದರು.

ಮೀರಾಬಾಯಿ ಧರಿಸಿದ್ದ ಕಿವಿಯೋಲೆ –ಪಿಟಿಐ ಚಿತ್ರ

ಅದೃಷ್ಟದ ಕಿವಿಯೋಲೆ

ಮೀರಾಬಾಯಿ ಶನಿವಾರ ಧರಿಸಿದ್ದ ಕಿವಿಯೋಲೆ ಎಲ್ಲರ ಗಮನ ಸೆಳೆಯಿತು.

ಒಲಿಂಪಿಕ್ ರಿಂಗ್‌ಗಳ ಆಕಾರದ ಈ ಓಲೆಯನ್ನು ಅವರ ತಾಯಿ ಒಂಗ್ಬಿ ತೋಂಬಿ ಲೀಮಾ ಐದು ವರ್ಷಗಳ ಹಿಂದೆ ಮಾಡಿಸಿಕೊಟ್ಟಿದ್ದರು. ಇದಕ್ಕಾಗಿ ತಮ್ಮ ಬಳಿ ಇದ್ದ ಎಲ್ಲಾ ಚಿನ್ನದ ಒಡವೆಗಳನ್ನು ಮಾರಿದ್ದರು. ಮಗಳಿಗೆ ಅದೃಷ್ಟ ಒಲಿಯಲಿ ಎಂಬುದು ಅವರ ಉದ್ದೇಶವಾಗಿತ್ತು.

ಶೂಟಿಂಗ್: ಮತ್ತೆ ನಿರಾಸೆ

ಟೋಕಿಯೊ (ಪಿಟಿಐ): ಭಾರತದ ಶೂಟರ್‌ಗಳು ಭಾನುವಾರವೂ ಗುರಿ ತಪ್ಪಿದರು.

ಮಹಿಳೆಯರ 10 ಮೀ. ಏರ್ ಪಿಸ್ತೂಲ್‌ನಲ್ಲಿ ಪದಕದ ಭರವಸೆ ಮೂಡಿಸಿದ್ದ ಮನು ಭಾಕರ್ ನಿರಾಸೆ ಕಂಡರು. ಅರ್ಹತಾ ಸುತ್ತಿನ ಸ್ಪರ್ಧೆಯ ವೇಳೆ ಪಿಸ್ತೂಲ್‌ನ ಕಾಕಿಂಗ್ ಲಿವರ್ ಮುರಿದಿದ್ದರಿಂದ ಅವರಿಗೆ ಹಿನ್ನಡೆಯಾಯಿತು. ಅವರು 575 ಸ್ಕೋರ್ ಗಳಿಸಿದರು. ಕೇವಲ ಎರಡು ಸ್ಕೋರ್ ಅಂತರದಿಂದ ಫೈನಲ್ ಅರ್ಹತೆ ಕಳೆದುಕೊಂಡರು. ಯಶಸ್ವಿನಿ ಸಿಂಗ್ ದೇಸ್ವಾಲ್ (574) 13ನೇ ಸ್ಥಾನಕ್ಕೆ ತೃಪ್ತರಾದರು.

ಪುರುಷರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ದೀಪಕ್ ಕುಮಾರ್ (26) ಮತ್ತು ದಿವ್ಯಾಂಶ್ ಸಿಂಗ್ ಪನ್ವಾರ್ (32ನೇ) ಅರ್ಹತಾ ಹಂತದಲ್ಲೇ ಹೊರಬಿದ್ದರು.

ಸಾನಿಯಾ–ಅಂಕಿತಾಗೆ ಸೋಲು

ಟೋಕಿಯೊ (ಪಿಟಿಐ/ಎಎಫ್‌ಪಿ): ಅನುಭವಿ ಆಟಗಾರ್ತಿ ಸಾನಿಯಾ ಮಿರ್ಜಾ ಮತ್ತು ಒಲಿಂಪಿಕ್ಸ್‌ನಲ್ಲಿ ಚೊಚ್ಚಲ ಪಂದ್ಯ ಆಡಿದ ಅಂಕಿತಾ ರೈನಾ ಒಲಿಂಪಿಕ್ಸ್ ಟೆನಿಸ್‌ನ ಮೊದಲ ಸುತ್ತಿನಲ್ಲೇ ನಿರಾಸೆಗೊಂಡು ಮರಳಿದರು. ಭಾನುವಾರ ನಡೆದ ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಭಾರತದ ಜೋಡಿ ಉಕ್ರೇನ್‌ನ ಅವಳಿ ಸಹೋದರಿಯರಾದ ನಾದಿಯಾ–ಲುಡ್ಮಿಲಾ ಕಿಚೆನೊಕ್ ಜೋಡಿಗೆ ಮಣಿದರು.

ಅರಿಯಾಕೆ ಟೆನಿಸ್ ಕೇಂದ್ರದಲ್ಲಿ ನಡೆದ ಪಂದ್ಯದಲ್ಲಿ ಭಾರತದ ಆಟಗಾರ್ತಿಯರು ಅಮೋಘ ಆರಂಭ ಕಂಡಿದ್ದರು. ಆದರೆ ಎರಡನೇ ಸೆಟ್‌ನಿಂದ ದಿಢೀರ್ ಚೇತರಿಸಿಕೊಂಡು ಪ್ರಬಲ ತಿರುಗೇಟು ನೀಡಿದ ನಾದಿಯಾ–ಲುಡ್ಮಿಲಾ 0-6 7-6(0) 10-8ರಲ್ಲಿ ಗೆಲುವು ತಮ್ಮದಾಗಿಸಿಕೊಂಡರು.

ಒಸಾಕ ಜಯಭೇರಿ; ಬಾರ್ಟಿಗೆ ನಿರಾಸೆ

ಒಲಿಂಪಿಕ್ಸ್‌ನಲ್ಲಿ ಮೊದಲ ಪಂದ್ಯ ಆಡಿದ ನವೊಮಿ ಒಸಾಕ ತವರಿನ ಅಂಗಣದಲ್ಲಿ ಜಯಭೇರಿ ಮೊಳಗಿಸಿದರು. ಆದರೆ ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನದಲ್ಲಿರುವ ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ ಸೋತು ಹೊರಬಿದ್ದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಒಸಾಕ ಚೀನಾದ ಜೆಂಗ್ ಸೈಸೈ ವಿರುದ್ಧ 6-1, 6-4ರಲ್ಲಿ ಜಯ ಗಳಿಸಿದರು.

ಮಾನಸಿಕ ಸಮಸ್ಯೆಗಳಿಗೆ ಸಂಬಂಧಿಸಿ ಮಾಧ್ಯಮಗಳು ಬೇಜವಾಬ್ದಾರಿಯಿಂದ ವರ್ತಿಸುತ್ತಿವೆ ಎಂದು ಆರೋಪಿಸಿ ಫ್ರೆಂಚ್ ಓಪನ್ ಟೂರ್ನಿಯಿಂದ ದೂರ ಉಳಿದಿದ್ದ ಒಸಾಕ ವಿಂಬಲ್ಡನ್ ಟೂರ್ನಿಯಲ್ಲೂ ಆಡಿರಲಿಲ್ಲ. ಅವರಿಗೆ ಇಲ್ಲಿ ಎರಡನೇ ಶ್ರೇಯಾಂಕ ನೀಡಲಾಗಿತ್ತು. ಜೆಂಗ್ 52ನೇ ಶ್ರೇಯಾಂಕ ಹೊಂದಿದ್ದರು.

ವಿಂಬಲ್ಡನ್ ಚಾಂಪಿಯನ್ ಬಾರ್ಟಿ ಸ್ಪೇನ್‌ನ 48ನೇ ಶ್ರೇಯಾಂಕಿತೆ ಸಾರಾ ಸೋರಿಬ್ಸ್ ತೊರ್ಮೊ ವಿರುದ್ಧ 6-4, 6-3ರಲ್ಲಿ ಸೋತರು.



ನವೊಮಿ ಒಸಾಕ

ಜಿಮ್ನಾಸ್ಟಿಕ್ಸ್: ಫೈನಲ್ಸ್ ತಲುಪದ ಪ್ರಣತಿ

ಟೋಕಿಯೊ (ಪಿಟಿಐ): ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿರುವ ಭಾರತದ ಏಕೈಕ ಜಿಮ್ನಾಸ್ಟಿಕ್ಸ್ ಪಟು ಪ್ರಣತಿ ನಾಯಕ್, ಭಾನುವಾರ ಇಲ್ಲಿ ನಡೆದ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್‌ನಲ್ಲಿ ಆಲ್ ರೌಂಡ್ ಫೈನಲ್ಸ್‌ಗೆ ಅರ್ಹತೆ ಗಳಿಸುವಲ್ಲಿ ವಿಫಲರಾಗಿದ್ದಾರೆ.

ಅರಿಯೇಕ್ ಜಿಮ್ನಾಸ್ಟಿಕ್ಸ್ ಸೆಂಟರ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ 26 ವರ್ಷದ ಪ್ರಣತಿ, ನಾಲ್ಕು ವಿಭಾಗಗಳಲ್ಲಿ (ಫ್ಲೋರ್ ಎಕ್ಸೈಜ್, ವಾಲ್ಟ್, ಅನ್‌ಇವನ್ ಬಾರ್ಸ್, ಬ್ಯಾಲನ್ಸ್ ಬೀಮ್) ಸೇರಿ ಒಟ್ಟು 42.565 ಸ್ಕೋರ್ ಕಲೆ ಹಾಕಿದರು. ಸಬ್‌ಡಿವಿಷನ್ 2ರ ಅಂತ್ಯಕ್ಕೆ ಒಟ್ಟಾರೆ 29ನೇ ಸ್ಥಾನ ಗಳಿಸಿದರು.

ಒಟ್ಟು ಐದು ಸಬ್‌ಡಿವಿಷನ್ ಗಳಿವೆ. ಅದರಲ್ಲಿ ಅಗ್ರಸ್ಥಾನ ಗಳಿಸಿದ 24 ಜಿಮ್ನಾಸ್ಟ್‌ಗಳು (ಎಲ್ಲ ನಾಲ್ಕು ವಿಭಾಗಗಳಲ್ಲಿ ಉತ್ತಮ ಸ್ಕೋರ್ ಗಳಿಸಿದವರು) ಆಲ್-ರೌಂಡ್ ಫೈನಲ್‌ಗೆ ಅರ್ಹತೆ ಪಡೆಯಲಿದ್ದಾರೆ. ಜುಲೈ 29ರಂದು ಈ ಫೈನಲ್ ನಡೆಯಲಿದೆ.

ಪ್ರತಿ ನಾಲ್ಕು ವಿಭಾಗಗಳಲ್ಲಿ ಅಗ್ರ ಎಂಟು ಸ್ಥಾನಗಳನ್ನು ಗಳಿಸಲಿರುವ ಜಿಮ್ನಾಸ್ಟ್‌ಗಳು, ಆಗಸ್ಟ್ 1ರಿಂದ 3ರವರೆಗೆ ನಡೆಯಲಿರುವ ಆಯಾ ವಿಭಾಗದ ಫೈನಲ್‌ಗೆ ಪ್ರವೇಶ ಪಡೆಯಲಿದ್ದಾರೆ.

ವಾಲ್ಟ್ ವಿಭಾಗದಲ್ಲಿ ಅಮೆರಿಕದ ಸಿಮೋನ್ ಬೈಲ್ಸ್ (15.183) ಅತಿ ಹೆಚ್ಚು ಪಾಯಿಂಟ್ಸ್ ಕಲೆಹಾಕಿದರು. ಬಹುತೇಕ ವಿಭಾಗಗಳಲ್ಲಿ ಅಮೆರಿಕದ ಜಿಮ್ನಾಸ್ಟ್‌ಗಳೇ ಪ್ರಾರಮ್ಯ ಮೆರೆದರು.

ನಿರೀಕ್ಷೆ ಹುಟ್ಟುಹಾಕಿದ್ದ ಪ್ರಣತಿ, ಎಲ್ಲ ನಾಲ್ಕು ವಿಭಾಗದಲ್ಲೂ ನಿರಾಸೆ ಮೂಡಿಸಿದರು. ಜಿಮ್ನಾಸ್ಟಿಕ್ಸ್ ಕ್ರೀಡೆಯಲ್ಲಿ ಒಲಿಂಪಿಕ್ಸ್ ಅರ್ಹತೆ ಗಿಟ್ಟಿಸಿದ ಭಾರತದ ಎರಡನೇ ಮಹಿಳಾ ಸ್ಪರ್ಧಿ ಎಂಬ ಹಿರಿಮೆಗೆ ಪ್ರಣತಿ ಪಾತ್ರರಾಗಿದ್ದರು. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ದೀಪಾ ಕರ್ಮಾಕರ್ ಭಾಗವಹಿಸಿ ವಾಲ್ಟ್ ವಿಭಾಗದಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದರು.

ಪ್ರಣತಿ ನಾಯಕ್

ಬ್ಯಾಲೆನ್ಸ್ ಬೀಮ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಅಮೆರಿಕದ ಸಿಮೋನ್ ಬೈಲ್ಸ್ –ಎಎಫ್‌ಪಿ ಚಿತ್ರ

ಅರ್ಜುನ್ ಲಾಲ್ ಜಾಟ್ ಹಾಗೂ ಅರವಿಂದ್ ಸಿಂಗ್– ಪಿಟಿಐ ಚಿತ್ರ

ಭರವಸೆ 'ಹುಟ್ಟು' ಹಾಕಿದ ಜೋಡಿ

ಟೋಕಿಯೊ (ಪಿಟಿಐ): ಭಾರತದ ಅರ್ಜುನ್ ಲಾಲ್ ಜಾಟ್ ಮತ್ತು ಅರವಿಂದ್ ಸಿಂಗ್ ಒಲಿಂಪಿಕ್ಸ್‌ನ ರೋಯಿಂಗ್‌ನ ಪುರುಷರ ಲೈಟ್‌ವೇಟ್ ಡಬಲ್ ಸ್ಕಲ್ಸ್ ವಿಭಾಗದಲ್ಲಿ ಸೆಮಿಫೈನಲ್‌ಗೆ ಪ್ರವೇಶಿಸಿದ್ದಾರೆ.

ಸೀ ಫಾರೆಸ್ಟ್ ವಾಟರ್‌ವೇನಲ್ಲಿ ನೀರಿಗಿಳಿದಿದ್ದ ಭಾರತ ಜೋಡಿಯು 6 ನಿಮಿಷ 51.36 ಸೆಕೆಂಡುಗಳಲ್ಲಿ ಗುರಿ ತಲುಪಿತು.

ಈ ಮೂಲಕ ರಿಪೇಚ್ ವಿಭಾಗದಲ್ಲಿ ಮೂರನೇ ಸ್ಥಾನ ಪಡೆದು ನಾಲ್ಕರಘಟ್ಟಕ್ಕೆ ಅರ್ಹತೆ ಗಿಟ್ಟಿಸಿದರು.

ಈ ವಿಭಾಗದಲ್ಲಿ ಪೋಲೆಂಡ್‌ನ ಜೆರ್ಜಿ ಕೊವಾಸ್ಕಿ ಹಾಗೂ ಆರ್ಥರ್ ಮಿಕೊಲಾಜೆಸ್ಕಿ (6 ನಿ. 43.44 ಸೆ.) ಅಗ್ರಸ್ಥಾನ ಪಡೆದರೆ, ಸ್ಪೇನ್‌ನ ಕ್ಯಾಟನೊ ಹೊರ್ಟಾ ಪೊಂಬೊ ಮತ್ತು ಮ್ಯಾನೆಲ್ ಬಲಾಸ್ಟೆಗುಯಿ (6 ನಿ. 45.71 ಸೆ.) ಎರಡನೇ ಸ್ಥಾನ ಗಳಿಸಿದರು.

ಹೀಟ್ ಎರಡರ ಸ್ಪರ್ಧೆಯಲ್ಲಿ ಭಾರತ ಜೋಡಿ ಶನಿವಾರ 6 ನಿಮಿಷ 40.33 ಸೆಕೆಂಡುಗಳಲ್ಲಿ ಗುರಿ ತಲುಪಿತ್ತು. ಆರು ತಂಡಗಳಿದ್ದ ಸ್ಪರ್ಧೆಯಲ್ಲಿ ಐದನೇ ಸ್ಥಾನ ಗಳಿಸಿತ್ತು. ಸೆಮಿಫೈನಲ್ ಪಂದ್ಯಗಳು ಮಂಗಳವಾರ ನಡೆಯಲಿವೆ.

ನಿರಾಸೆ ಮೂಡಿಸಿದ ನೇತ್ರಾ, ವಿಷ್ಣು: ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತದ ಸೇಲಿಂಗ್ ಪಟುಗಳು ಭಾನುವಾರ ನೀರಸ ಆರಂಭ ಮಾಡಿದರು.

ಮೊದಲ ದಿನ, ಮಹಿಳಾ ಲೇಸರ್ ರೇಡಿಯಲ್ ವಿಭಾಗದ ಎರಡು ರೇಸ್‌ಗಳಲ್ಲಿ ಸ್ಪರ್ಧಿಸಿದ್ದ ನೇತ್ರಾ ಕುಮನನ್ ಒಟ್ಟಾರೆ 27ನೇ ಸ್ಥಾನ ಗಳಿಸಿದರು. ಲೇಸರ್ ವಿಭಾಗದಲ್ಲಿ ಸ್ಪರ್ಧಿಸಿದ್ದ ವಿಷ್ಣು ಸರವಣನ್ 14ನೇ ಸ್ಥಾನ ಗಳಿಸಿದರು.

ಏನಿದು ರೋಯಿಂಗ್?

ನೀರಿನಲ್ಲಿ ಹುಟ್ಟು ಹಾಕಿ ಬೋಟ್‌ಅನ್ನು ಮುನ್ನಡೆಸುವ ಕ್ರೀಡೆ ಇದು. ಸ್ಕಲ್ ಮತ್ತು ಸ್ವೀಪ್ ರೋಯಿಂಗ್ ಎಂದು ಎರಡು ವಿಭಾಗಗಳನ್ನಾಗಿ ಇದನ್ನು ವಿಂಗಡಿಸಲಾಗಿದೆ. ಸ್ಕಲ್‌ನಲ್ಲಿ ರೋಯಿಂಗ್ ಪಟು ಎರಡೂ ಕೈಯಲ್ಲಿ ಒಂದೊಂದು ಹುಟ್ಟು ಹಿಡಿದಿರುತ್ತಾನೆ. ಆದರೆ ಸ್ವೀಪ್ ರೋಯಿಂಗ್‌ನಲ್ಲಿ ಪ್ರತಿ ರೋವರ್ ಎರಡೂ ಕೈಗಳಿಂದ ಒಂದು ಹುಟ್ಟನ್ನು ಮಾತ್ರ ಹೊಂದಿರುತ್ತಾನೆ.

ಅತ್ಯಂತ ಹಳೆಯ ಕ್ರೀಡೆಗಳಲ್ಲಿ ಒಂದಾದ ರೋಯಿಂಗ್, 1896ರ ಅಥೆನ್ಸ್ ಒಲಿಂಪಿಕ್ಸ್‌ನ ಸ್ಪರ್ಧೆಗಳ ಪಟ್ಟಿಯಲ್ಲಿತ್ತು. ಆದರೆ ಪ್ರತಿಕೂಲದ ಹವಾಮಾನದ ಕಾರಣ ಸ್ಪರ್ಧೆ ನಡೆದಿರಲಿಲ್ಲ. 1900ರ ಪ್ಯಾರಿಸ್ ಕೂಟದಲ್ಲಿ ಪುರುಷರ ವಿಭಾಗದ ಸ್ಪರ್ಧೆಗಳನ್ನು ನಡೆಸಲಾಯಿತು. 1976ರ ಮಾಂಟ್ರಿಯಲ್ ಒಲಿಂಪಿಕ್ಸ್‌ನಿಂದ ಮಹಿಳೆಯರು ಸ್ಪರ್ಧಿಸುತ್ತಿದ್ದಾರೆ.

ಡೈವಿಂಗ್: ಚಿನ್ನ ಹೆಕ್ಕಿದ ಚೀನಾ

ಟೋಕಿಯೊ (ರಾಯಿಟರ್ಸ್): ಡೈವಿಂಗ್‌ನಲ್ಲಿ ಚೀನಾ ಮಹಿಳೆಯರು ಮತ್ತೊಮ್ಮೆ ಪಾರಮ್ಯ ಮೆರೆದರು. ಭಾನುವಾರ ನಡೆದ ಮೂರು ಮೀಟರ್ಸ್ ಸಿಂಕ್ರನೈಡ್ಸ್ ಸ್ಪರ್ಧೆಯಲ್ಲಿ ಶಿ ತಿಂಗ್ಮೊ ಮತ್ತು ವಾಂಗ್ ಹ್ಯಾನ್ 326.40 ಪಾಯಿಂಟ್‌ಗಳೊಂದಿಗೆ ಚಿನ್ನಕ್ಕೆ ಮುತ್ತನ್ನಿತ್ತರು.

ಕೆನಡಾದ ಜೆನಿಫರ್ ಅಬೆಲ್ ಮತ್ತು ಮೆಲಿಸಾ ಸಿಟ್ರಿನಿ ಜೋಡಿ (300.78 ಪಾಯಿಂಟ್ಸ್) ಬೆಳ್ಳಿ ಪದಕ ಗೆದ್ದುಕೊಂಡರು. ಜರ್ಮನಿಯ ಲೀನಾ ಹೆನ್ಜೆಲ್ ಮತ್ತು ಟಿನಾ ಪಂಜೆಲ್ (284.97) ಕಂಚಿನ ಪದಕ ಗಳಿಸಿದರು.

ಮೊದಲ ದಿನ ಅಮೆರಿಕದ ಈಜುಪಟುಗಳ ಪ್ರಾಬಲ್ಯ

ಚಿನ್ನ ಗೆದ್ದು ಬೆರಗು ಮೂಡಿಸಿದ ಅಹ್ಮದ್

ಟೋಕಿಯೊ (ಪಿಟಿಐ): ಒಲಿಂಪಿಕ್ಸ್ ಈಜು ಕೊಳದಲ್ಲಿ ಭಾನುವಾರ ಅಚ್ಚರಿಯ ಫಲಿತಾಂಶ ಹೊರಬಿದ್ದಿತು.

ಟ್ಯುನಿಷಿಯಾದ ಚಿಗುರು ಮೀಸೆಯ ಹುಡುಗ ಅಹ್ಮದ್ ಹಫ್ನಾವುಯಿ 400 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಚಿನ್ನದ ಪದಕ ಜಯಿಸಿ ಬೆರಗು ಮೂಡಿಸಿದರು.

ಹಿಂದಿನ ಒಲಿಂಪಿಕ್ಸ್‌ಗಳಲ್ಲಿ ಅಮೆರಿಕ ದವರೇ ಪ್ರಾಬಲ್ಯ ಮೆರೆದಿದ್ದರು. ಹೀಗಾಗಿ ಎಲ್ಲರ ಕಣ್ಣುಗಳೂ ಈ ದೇಶದ ಈಜುಪಟುಗಳ ಮೇಲೆಯೇ ನೆಟ್ಟಿದ್ದವು. ಎಂಟು ಲ್ಯಾಪ್‌ಗಳ ರೇಸ್‌ನಲ್ಲಿ ತನಗಿಂತಲೂ ಹಿರಿಯ ಹಾಗೂ ಅನುಭವಿ ಈಜುಪಟುಗಳನ್ನು ಹಿಂದಿಕ್ಕಿದ 18 ವರ್ಷದ ಅಹ್ಮದ್ ಖುಷಿಯಿಂದ ಹಿಗ್ಗಿದರು.

ಅವರು 3 ನಿಮಿಷ 43.36 ಸೆಕೆಂಡುಗಳಲ್ಲಿ ಗುರಿ ಕ್ರಮಿಸಿದರು.

ಆಸ್ಟ್ರೇಲಿಯಾದ ಜಾಕ್ ಮೆಕ್‌ಲಾಫ್ಲಿನ್ ಈ ವಿಭಾಗದ ಬೆಳ್ಳಿಯ ಪದಕ ಪಡೆದರು. ಅವರು ನಿಗದಿತ ಗುರಿ ಮುಟ್ಟಲು 3 ನಿಮಿಷ 43.52 ಸೆಕೆಂಡು ತೆಗೆದುಕೊಂಡರು. ಅಮೆರಿಕದ ಕೀರನ್ ಸ್ಮಿತ್ (3:43.94) ಕಂಚಿನ ಪದಕಕ್ಕೆ ತೃಪ್ತರಾದರು.

'ನೀರಿಗೆ ಧುಮುಕಿದ ಕೂಡಲೇ ಪದಕದ ಬಗ್ಗೆಯೇ ಯೋಚಿಸುತ್ತಿದೆ. ಸಮಯದ ಬಗ್ಗೆ ತಲೆಕೆಡಿಸಿಕೊಳ್ಳಲೇ ಇಲ್ಲ' ಎಂದು ಅಹ್ಮದ್ ಪ್ರತಿಕ್ರಿಯಿಸಿದರು.

ಅಹ್ಮದ್, ಅವಸ್ ಮೆಲೌಲಿ ನಂತರ ಒಲಿಂಪಿಕ್ಸ್ ಈಜು ಸ್ಪರ್ಧೆಯಲ್ಲಿ ಚಿನ್ನ ಜಯಿಸಿದ ಟ್ಯುನಿಷಿಯಾದ ಕ್ರೀಡಾಪಟು ಎಂಬ ಹಿರಿಮೆ ತಮ್ಮದಾಗಿಸಿಕೊಂಡರು. 37 ವರ್ಷದ ಮೆಲೌಲಿ, 2008ರ ಬೀಜಿಂಗ್ ಒಲಿಂಪಿಕ್ಸ್‌ನ 1,500 ಮೀಟರ್ಸ್ ಸ್ಪರ್ಧೆಯಲ್ಲಿ ಚಿನ್ನಕ್ಕೆ ಮುತ್ತಿಟ್ಟಿದ್ದರು.

ಚೇಸ್‌ಗೆ ಚಿನ್ನ: ಪುರುಷರ 400 ಮೀಟರ್ಸ್ ವೈಯಕ್ತಿಕ ಮೆಡ್ಲೆಯಲ್ಲಿ ಅಮೆರಿಕದ ಚೇಸ್ ಕಲಿಸ್ ಚಿನ್ನ ಜಯಿಸಿದರು. ಅವರು 4 ನಿಮಿಷ 09.42 ಸೆಕೆಂಡುಗಳಲ್ಲಿ ಗುರಿ ಕ್ರಮಿಸಿದರು. ಅಮೆರಿಕದವರೇ ಆದ ಜೇ ಲಿದರ್‌ಲ್ಯಾಂಡ್ (4:10.28) ಮತ್ತು ಆಸ್ಟ್ರೇಲಿಯಾದ ಬ್ರೆಂಡನ್ ಸ್ಮಿತ್ (4:10.38) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಪಡೆದರು.

ಮಹಿಳೆಯರ 400 ಮೀಟರ್ಸ್ ವೈಯಕ್ತಿಕ ಮೆಡ್ಲೆ ಸ್ಪರ್ಧೆಯಲ್ಲಿ ಜಪಾನ್‌ನ ಯೂಹಿ ಒಹಾಶಿ (4:32.08) ಚಿನ್ನದ ಪದಕ ಗೆದ್ದರು. ಅಮೆರಿಕದ ಎಮಾ ಯೆಮಂಟ್ (4:32.76) ಬೆಳ್ಳಿ ಮತ್ತು ಹ್ಯಾಲಿ ಫ್ಲಿಂಕಿಂಗರ್ (4:34.90) ಕಂಚು ಜಯಿಸಿದರು.

ಮಹಿಳೆಯರ 4X100 ಮೀ. ಫ್ರೀಸ್ಟೈಲ್ ರಿಲೆ ಸ್ಪರ್ಧೆಯ ಚಿನ್ನ ಆಸ್ಟ್ರೇಲಿಯಾದ ಪಾಲಾಯಿತು. ಈ ತಂಡ 3 ನಿಮಿಷ 29.69 ಸೆಕೆಂಡುಗಳಲ್ಲಿ ಗುರಿ ತಲುಪಿ ವಿಶ್ವ ದಾಖಲೆ ನಿರ್ಮಿಸಿತು. ಕೆನಡಾ (3:32.78) ಮತ್ತು ಅಮೆರಿಕ (3:32.81) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಪಡೆದವು.

ಪದಕವನ್ನು ಟ್ಯುನಿಷಿಯಾದ ಜನರಿಗೆ ಅರ್ಪಿಸುತ್ತೇನೆ. ವಿಜಯ ವೇದಿಕೆಯಲ್ಲಿ ರಾಷ್ಟ್ರಗೀತೆ ಮೊಳಗಿದ ವೇಳೆ ಖುಷಿಯಿಂದ ಕಣ್ಣುಗಳು ತೇವಗೊಂಡವು. ಈ ಸಾಧನೆ ಹೆಮ್ಮೆಯ ಭಾವ ಮೂಡಿಸಿದೆ

ಅಹ್ಮದ್ ಹಫ್ನಾವುಯಿ, ಟ್ಯುನಿಷಿಯಾದ ಈಜುಪಟು.

ಅಹ್ಮದ್ ಅವರು ಅದ್ಭುತ ರೀತಿಯಲ್ಲಿ ಈಜಿದರು. ಒಲಿಂಪಿಕ್ಸ್‌ನಲ್ಲಿ ಯಾರು ಬೇಕಾದರೂ ಪದಕ ಗೆಲ್ಲಬಹುದು ಎಂಬುದನ್ನು ಅವರು ನಿರೂಪಿಸಿದ್ದಾರೆ.

ಮೈಕಲ್ ಫೆಲ್ಪ್ಸ್, ಅಮೆರಿಕದ ಹಿರಿಯ ಈಜುಪಟು

ಮಾನಾ, ಶ್ರೀಹರಿಗೆ ನಿರಾಸೆ

ಭಾರತದ ಈಜುಪಟುಗಳಾದ ಶ್ರೀಹರಿ ನಟರಾಜನ್ ಹಾಗೂ ಮಾನಾ ಪಟೇಲ್ ಸೆಮಿಫೈನಲ್ ಪ್ರವೇಶಿಸಲು ವಿಫಲರಾದರು. 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನ ಹೀಟ್ಸ್‌ನಲ್ಲಿ ಶ್ರೀಹರಿ ಐದನೇ ಸ್ಥಾನ (54.31ಸೆ) ಪಡೆದರು. ಒಟ್ಟಾರೆ ಅವರು 27ನೇಯವರಾದರು. ಈ ವಿಭಾಗದಲ್ಲಿ ಒಟ್ಟು 40 ಈಜುಪಟುಗಳು ಪಾಲ್ಗೊಂಡಿದ್ದರು. ಮಾನಾ 1 ನಿಮಿಷ 05.20 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಅವರು ಒಟ್ಟಾರೆ 39ನೇಯವರಾಗಿ ಸ್ಪರ್ಧೆ ಕೊನೆಗೊಳಿಸಿದರು.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	6	1	4	11
ಜಪಾನ್	5	1	0	6
ಅಮೆರಿಕ	4	2	4	10
ದಕ್ಷಿಣ ಕೊರಿಯಾ	2	0	3	5
ರಷ್ಯನ್ ಒಲಿಂಪಿಕ್ಸ್ ಸಮಿತಿ	1	4	2	7
ಭಾರತ (24ನೇ ಸ್ಥಾನ)	0	1	0	1

ಏಳು ಗೋಲು ಬಿಟ್ಟುಕೊಟ್ಟ ಮನ್‌ಪ್ರೀತ್ ಸಿಂಗ್ ಬಳಗ; ಗೌರವ ಉಳಿಸಿದ ದಿಲ್‌ಪ್ರೀತ್

ಆಸ್ಟ್ರೇಲಿಯಾ ದಾಳಿಗೆ ಭಾರತ ಕಂಗಾಲು

ಟೋಕಿಯೊ (ರಾಯಿಟರ್ಸ್): ಎದುರಾಳಿಗಳ ಆಕ್ರಮಣಕಾರಿ ಆಟಕ್ಕೆ ಕಂಗೆಟ್ಟ ಭಾರತ ಹಾಕಿ ತಂಡ 'ಎ' ಗುಂಪಿನ ಎರಡನೇ ಪಂದ್ಯದಲ್ಲಿ ನಿರಾಸೆಗೆ ಒಳಗಾಯಿತು. ಭಾನುವಾರ ನಡೆದ ಪಂದ್ಯದಲ್ಲಿ ಮನ್‌ಪ್ರೀತ್ ಬಳಗ ಆಸ್ಟ್ರೇಲಿಯಾಗೆ 7–1ರಲ್ಲಿ ಮಣಿಯಿತು.

ಶನಿವಾರ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಮಣಿಸಿದ್ದ ಭಾರತ ಎಲ್ಲ ಕ್ವಾರ್ಟರ್‌ಗಳಲ್ಲೂ ಒಕಿಂಡೆನ್ ಎಡ್ವರ್ಡ್ ಕ್ಲೈವ್ ಬಳಗಕ್ಕೆ ಗೋಲು ಬಿಟ್ಟುಕೊಟ್ಟಿತು. ಮೂರನೇ ಕ್ವಾರ್ಟರ್‌ನಲ್ಲಿ ದಿಲ್‌ಪ್ರೀತ್ ಗಳಿಸಿದ ಗೋಲು ಸ್ವಲ್ಪ ಸಮಾಧಾನ ತಂದಿತು. 2019ರಲ್ಲಿ ಆಸ್ಟ್ರೇಲಿಯಾದ ಗ್ರಹಾಂ ರೀಡ್ ಕೋಚ್ ಆಗಿ ಅಧಿಕಾರ ಸ್ವೀಕರಿಸಿದ ನಂತರ ಭಾರತ ಕಂಡ ಗರಿಷ್ಠ ಅಂತರದ ಸೋಲು ಇದಾಗಿದೆ. ಗೆಲುವಿನೊಂದಿಗೆ ಆಸ್ಟ್ರೇಲಿಯಾ ಎರಡೂ ಪಂದ್ಯಗಳಲ್ಲಿ ಅಜೇಯವಾಗಿ ಉಳಿದಂತಾಗಿದೆ.

ಆರಂಭದಲ್ಲಿ ಭಾರತ ಆಕ್ರಮಣಕಾರಿ ಆಟಕ್ಕೆ ಮುಂದಾಯಿತು. ಎಂಟನೇ ನಿಮಿಷದಲ್ಲಿ ತಂಡಕ್ಕೆ ಪೆನಾಲ್ಟಿ ಕಾರ್ನರ್ ಅವಕಾಶವೂ ದಕ್ಕಿತ್ತು. ಆದರೆ 'ಸೆಟ್‌ಪೀಸ್'ನಲ್ಲಿ ಯಶಸ್ಸು ಗಳಿಸಲು ಹರ್ಮನ್‌ಪ್ರೀತ್ ಸಿಂಗ್ ಅವರಿಗೆ ಸಾಧ್ಯವಾಗಲಿಲ್ಲ. ಎರಡೇ ನಿಮಿಷಗಳ ಅಂತರದಲ್ಲಿ ಆಸ್ಟ್ರೇಲಿಯಾ ತಂಡಕ್ಕೂ ಪೆನಾಲ್ಟಿ ಕಾರ್ನರ್ ಅವಕಾಶ ಲಭಿಸಿತು.

ಗೋಲು ಗಳಿಸಿದ ಆಸ್ಟ್ರೇಲಿಯಾ ಆಟಗಾರರ ಸಂಭ್ರಮ —ರಾಯಿಟರ್ಸ್ ಚಿತ್ರ

ಇದನ್ನು ಗೋಲಾಗಿ ಪರಿವರ್ತಿಸಿದ ನಂತರ ಆ ತಂಡ ಸಂಪೂರ್ಣ ಆಧಿಪತ್ಯ ಸ್ಥಾಪಿಸಿತು. ಹೀಗಾಗಿ ಭಾರತದ ರಕ್ಷಣಾ ವಿಭಾಗದ ಮೇಲೆ ಒತ್ತಡ ಹೆಚ್ಚಿತು. ಮೊದಲ ಕ್ವಾರ್ಟರ್ ಮುಕ್ತಾಯಕ್ಕೆ ಸ್ವಲ್ಪ ಮೊದಲು ದಿಪ್‌ಪ್ರೀತ್ ಸಿಂಗ್ ಅವರಿಗೆ ಗೋಲು ಗಳಿಸಲು ಸುವರ್ಣಾವಕಾಶ ಲಭಿಸಿತ್ತು. ಆದರೆ ಫಲ ಸಿಗಲಿಲ್ಲ. ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ರೂಪಿಂದರ್ ಪಾಲ್ ಸಿಂಗ್ ಕೂಡ ವೈಫಲ್ಯ ಕಂಡರು.

ಮೊದಲ ಕ್ವಾರ್ಟರ್‌ನಲ್ಲಿ ಕೆಲವು ಅಮೋಘ 'ಸೇವ್'ಗಳ ಮೂಲಕ ತಂಡದ ರಕ್ಷಣೆಗೆ ನಿಂತ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಎರಡನೇ ಕ್ವಾರ್ಟರ್‌ನಲ್ಲಿ ಐದು ನಿಮಿಷಗಳ ಅವಧಿಯಲ್ಲಿ ಮೂರು ಗೋಲುಗಳನ್ನು ಬಿಟ್ಟುಕೊಟ್ಟರು. ಈ ಹಂತದಲ್ಲಿ ಪಂದ್ಯ ಭಾರತದ ಕೈಜಾರಿತು. ಐದು ಪೆನಾಲ್ಟಿ ಕಾರ್ನರ್‌ಗಳಲ್ಲಿ ಒಂದನ್ನು ಕೂಡ ಗೋಲಾಗಿ ಪರಿವರ್ತಿಸಲು ಭಾರತಕ್ಕೆ ಸಾಧ್ಯವಾಗಲಿಲ್ಲ. ಎದುರಾಳಿ ತಂಡ ಆರು ಅವಕಾಶಗಳ ಪೈಕಿ ಮೂರರಲ್ಲಿ ಯಶಸ್ಸು ಕಂಡಿತು. ಒಂದು ಪೆನಾಲ್ಟಿ ಸ್ಟ್ರೋಕ್ ಕೂಡ ಆ ತಂಡಕ್ಕೆ ಲಭಿಸಿತು.

ಮಂಗಳವಾರ ಭಾರತ ಸ್ಪೇನ್ ವಿರುದ್ಧ ಸೆಣಸಲಿದೆ. ಮೊದಲ ಪಂದ್ಯದಲ್ಲಿ ಸೋತಿರುವ ಮಹಿಳೆಯರ ತಂಡ ಸೋಮವಾರದ ಹಣಾಹಣಿಯಲ್ಲಿ ಜರ್ಮನಿಯನ್ನು ಎದುರಿಸಲಿದೆ.

ಗೋಲು ಗಳಿಸಿದವರು

ಭಾರತ: ದಿಲ್‌ಪ್ರೀತ್ ಸಿಂಗ್ (34ನೇ ನಿಮಿಷ)

ಆಸ್ಟ್ರೇಲಿಯಾ: ಡ್ಯಾನಿಯಲ್ ಜೇಮ್ಸ್ ಬೀಲ್ (10ನೇ ನಿ), ಜೆರೆಮಿ ಥಾಮಸ್ ಹೇವಾರ್ಡ್ (21ನೇ ನಿ), ಫ್ಲಿನ್ ಆ್ಯಂಡ್ರ್ಯು ಒಗಿಲ್ವಿ (23ನೇ ನಿ), ಜೋಶುವಾ ಬೆಲ್ಟ್ಸ್ (26ನೇ ನಿ), ಬ್ಲೇಕ್ ಗೋವರ್ಸ್ (40, 42ನೇ ನಿ), ಟಿಮ್ ಬ್ರ್ಯಾಂಡ್ (51ನೇ ನಿ).

ಗೋಲು ವಿವರ	
ಆಸ್ಟ್ರೇಲಿಯಾ	7
ಭಾರತ	1

ಕ್ವಾರ್ಟರ್‌ಗಳಲ್ಲಿ ದಾಖಲಾದ ಗೋಲು

ಕ್ವಾರ್ಟರ್	ಭಾರತ	ಆಸ್ಟ್ರೇಲಿಯಾ
ಒಂದು	0	1
ಎರಡು	0	3
ಮೂರು	1	2
ನಾಲ್ಕು	0	1

ನಗುವಿಗೆ 30 ಸೆಕೆಂಡ್!

ಟೋಕಿಯೊ (ಪಿಟಿಐ): ಪದಕ ಗೆಲ್ಲುವ ಕ್ರೀಡಾಪಟುಗಳು ಫೋಟೊಗ್ರಫಿ ಸಂದರ್ಭದಲ್ಲಿ 20 ಸೆಕೆಂಡುಗಳ ಕಾಲ ಮಾಸ್ಕ್ ತೆಗೆಯಲು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಅವಕಾಶ ನೀಡಿದೆ.

ಕ್ರೀಡಾಪಟುಗಳು, ಕೋಚ್‌ಗಳು ಮತ್ತು ಅಧಿಕಾರಿಗಳು ಎಲ್ಲ ಸಂದರ್ಭದಲ್ಲೂ ಮಾಸ್ಕ್ ಧರಿಸಬೇಕು ಎಂದು ಆಯೋಜಕರು ತಿಳಿಸಿದ್ದರು. ಕೋವಿಡ್‌ಗೆ ಸಂಬಂಧಿಸಿದ ಪರಿಷ್ಕೃತ ನಿಯಮಗಳನ್ನು ಭಾನುವಾರ ಜಾರಿಗೆ ತರಲಾಗಿದೆ.

ಗಾಲ್ಫ್: ರಾಹಮ್, ಬ್ರೈಸನ್ ಅಲಭ್ಯ

ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನದಲ್ಲಿರುವ ಸ್ಪೇನ್‌ನ ಜಾನ್ ರಾಹಮ್ ಮತ್ತು ಕಳೆದ ಬಾರಿಯ ಅಮೆರಿಕ ಓಪನ್ ಚಾಂಪಿಯನ್ ಬ್ರೈಸನ್ ಡಿ ಚಾಂಬಿಯೊ ಒಲಿಂಪಿಕ್ಸ್‌ನಿಂದ ಹಿಂದೆ ಸರಿದಿದ್ದಾರೆ. ಬ್ರೈಸನ್ ಬದಲಿಗೆ ಪ್ಯಾಟ್ರಿಕ್ ರೀಡ್ ಕಣಕ್ಕೆ ಇಳಿಯಲಿದ್ದಾರೆ ಎಂದು ಪಿಜಿಎ ಘೋಷಿಸಿದೆ. ರಾಹಮ್ ಅವರು ಗಾಲ್ಫ್ ಸ್ಪರ್ಧೆಯಲ್ಲಿ ಭಾಗವಹಿಸುವುದಿಲ್ಲ ಎಂದು ಸ್ಪ್ಯಾನಿಷ್ ಒಲಿಂಪಿಕ್ ಸಮಿತಿ ತಿಳಿಸಿದೆ.

ಕೆ.ಆರ್.ಇ.ಡಿ.ಎಲ್.

ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ದೇಶದಲ್ಲೇ ಮೊದಲ ಸ್ಥಾನ

ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇಂಧನ ಸಚಿವರು

ನವೀಕರಿಸಬಹುದಾದ ಇಂಧನ-ಪ್ರಗತಿಯ ವರದಿ ಜೂನ್-2021 (ವರೆಗೆ)

ಕ್ರಮ ಸಂಖ್ಯೆ	ನವೀಕರಿಸಬಹುದಾದ ಶಕ್ತಿ ಮೂಲಗಳು	ಸ್ಥಾಪಿತ ಸಾಮರ್ಥ್ಯ (ಮೆ.ವ್ಯಾ.)
1.	ಪವನ ವಿದ್ಯುತ್	4967.34
2.	ಕಿರುಜಲ ವಿದ್ಯುತ್	903.46
3.	ಸಹ ವಿದ್ಯುತ್	1731.16
4.	ಜೈವಿಕ ವಿದ್ಯುತ್	139.03
5.	ಸೌರಶಕ್ತಿ ವಿದ್ಯುತ್	7443.13
	ಒಟ್ಟು	15184.12

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)
KARNATAKA RENEWABLE ENERGY DEVELOPMENT LTD.
(A Government of Karnataka Undertaking)
ನಂ.39, ಶಾಂತಿಗೃಹ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಆವರಣ,
ಅರಮನೆ ರಸ್ತೆ, ಬೆಂಗಳೂರು - 560 001.
ದೂರವಾಣಿ: 080-22282220 ವೆಬ್‌ಸೈಟ್ : www.kredlinfo.in

ನವೀಕರಿಸಬಹುದಾದ ಇಂಧನ ಬಳಸಿ, ದೇಶ ಉಳಿಸಿ

ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸಿ ಬೆಳೆಸುವುದು.
– ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವಾರ್ತಾಸಂ/ಕೆಆರ್‌ಇಡಿಎಲ್/43/2021-22

MOFPI
MINISTRY OF FOOD PROCESSING INDUSTRIES
GOVERNMENT OF INDIA
KAPPEC

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

ಆತ್ಮನಿರ್ಭರ ಭಾರತ ಅಭಿಯಾನ
ಅರ್ಜಿ/ಯೋಜನಾ ಪ್ರಸ್ತಾವನೆಗಳ ಆಹ್ವಾನ
ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ
ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ (PMFME)ಯೋಜನೆ

ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಒಂದು ಜಿಲ್ಲೆಗೆ ಒಂದು ಉತ್ಪನ್ನದ (ODOP) ವಿಧಾನ

ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಅಭಿವೃದ್ಧಿಗೆ
ಕರ್ನಾಟಕ ರಾಜ್ಯದಲ್ಲಿ ಸುವರ್ಣಾವಕಾಶ

ಯೋಜನೆಯ ಘಟಕಗಳು

- **ವ್ಯಕ್ತಿಗತ ಕಿರು ಉದ್ದಿಮೆಗಳಿಗೆ ಬೆಂಬಲ:** ಪ್ರತಿ ಘಟಕಕ್ಕೆ ರೂ.10.00 ಲಕ್ಷದ ಗರಿಷ್ಠ ಮಿತಿಯೊಂದಿಗೆ ಅರ್ಹ ಯೋಜನಾ ವೆಚ್ಚದ ಶೇ 35 ರಷ್ಟು ಮೌಲ್ಯದ ಸಾಲ–ಸಂಪರ್ಕವಿರುವ ಸಹಾಯಧನ.
- **ರೈತ ಉತ್ಪಾದಕರ ಸಂಸ್ಥೆಗಳು (FPOs)/ಉತ್ಪಾದಕ ಸೊಸೈಟಿಗಳಿಗೆ ಸಹಾಯಧನ:** ಅರ್ಹ ಯೋಜನಾ ವೆಚ್ಚದ ಶೇ 35 ರಷ್ಟು ಮೌಲ್ಯದ ಸಾಲ–ಸಂಪರ್ಕವಿರುವ ಸಹಾಯಧನ.
- **ಸ್ವ ಸಹಾಯ ಸಂಘಗಳ ಸದಸ್ಯರಿಗೆ:** ಎಸ್‌ಹೆಚ್‌ಜಿಯ ಪ್ರತಿ ಸದಸ್ಯರಿಗೆ ಕಾರ್ಯನಿರ್ವಹಣಾ ಬಂಡವಾಳ ಹಾಗೂ ಚಿಕ್ಕ ಪರಿಕರಗಳನ್ನು ಖರೀದಿಸಲು ರೂ.40,000/–ಪ್ರಾಥಮಿಕ ಬಂಡವಾಳ.
- **ಸಾಮಾನ್ಯ ಮೂಲಭೂತ ಸೌಕರ್ಯಕ್ಕೆ ಬೆಂಬಲ:** ಅರ್ಹ ಯೋಜನಾ ವೆಚ್ಚದ ಶೇ 35 ರಷ್ಟು ಮೌಲ್ಯದ ಸಾಲ–ಸಂಪರ್ಕವಿರುವ ಸಹಾಯಧನ.
- **ಬ್ರಾಂಡಿಂಗ್ ಹಾಗೂ ಮಾರುಕಟ್ಟೆಗೆ ಬೆಂಬಲ:** ಅರ್ಹ ಯೋಜನಾ ವೆಚ್ಚದ ಶೇ 50 ರಷ್ಟು ಮೌಲ್ಯದ ಸಾಲ–ಸಂಪರ್ಕವಿರುವ ಸಹಾಯಧನ.

ಒಂದು ಜಿಲ್ಲೆಗೆ ಒಂದು ಉತ್ಪನ್ನ (ODOP)

ಹಾಲಿ ಇರುವ ಯಾವುದೇ ಅಸಂಘಟಿತ ಕಿರು ಆಹಾರ ಸಂಸ್ಕರಣಾ ಉದ್ದಿಮೆದಾರರು ಅಥವಾ ಹೊಸ ಉದ್ದಿಮೆದಾರರಾದರೆ ತಮ್ಮ ಜಿಲ್ಲೆಗೆ ಆಯ್ಕೆ ಮಾಡಿರುವ ಒಂದು ಜಿಲ್ಲೆಗೆ ಒಂದು ಉತ್ಪನ್ನದ (ODOP) ಸಂಸ್ಕರಣೆಗೆ ಯೋಜನೆಯಡಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ಸಲ್ಲಿಕೆಗಾಗಿ ಆಯಾ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಿ ಅಥವಾ KAPPEC ಸಂಸ್ಥೆಯ ಯೋಜನಾ ನಿರ್ವಹಣಾ ಘಟಕವನ್ನು ಸಂಪರ್ಕಿಸಿ
ದೂ: 9731201215 / 9844468648

ವೆಬ್‌ಸೈಟ್ ವಿಳಾಸ:
https://pmfme.mofpi.gov.in
https://kappec.karnataka.gov.in

ರಾಜ್ಯ ನೋಡಲ್ ಏಜೆನ್ಸಿ
ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣ ಹಾಗೂ ರಫ್ತು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ.17, ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆ, ಬೆಂಗಳೂರು, ಇಮೇಲ್:kappec1996@gmail.com/pmfmekarnataka@gmail.com

ಕೆಪೆಕ್/ವಾರ್ತಾಸಂ/42/2021–22

ಟಿ20 ಸರಣಿಯ ಮೊದಲ ಪಂದ್ಯ: ಭುವನೇಶ್ವರ ಕುಮಾರ್‌ಗೆ ನಾಲ್ಕು ವಿಕೆಟ್

ಬೆಳಗಿದ ಸೂರ್ಯ: ಭಾರತ ಜಯಭೇರಿ

ಕೊಲಂಬೊ (ಪಿಟಿಐ): ಸೂರ್ಯಕುಮಾರ್ ಯಾದವ್ (50; 34 ಎಸೆತ, 5 ಬೌಂಡರಿ, 2 ಸಿಕ್ಸರ್) ಅವರ ಸ್ಫೋಟಕ ಬ್ಯಾಟಿಂಗ್ ಹಾಗೂ ಭುವನೇಶ್ವರ ಕುಮಾರ್ (22ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಭಾರತ ತಂಡ ಶ್ರೀಲಂಕಾ ಎದುರಿನ ಟಿ20 ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ 38 ರನ್‌ಗಳಿಂದ ಗೆದ್ದಿತು.

ಪ್ರೇಮದಾಸ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ಟಾಸ್ ಸೋತು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ ಐದು ವಿಕೆಟ್ ಕಳೆದುಕೊಂಡು 164 ರನ್ ಗಳಿಸಿತು. ಉತ್ತರವಾಗಿ ಶ್ರೀಲಂಕಾ ಇನ್ನೂ 9 ಎಸೆತಗಳು ಬಾಕಿ ಇರುವಂತೆಯೇ 126 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಆತಿಥೇಯ ತಂಡದ ಚರಿತ ಅಸ್ಲಂಕ (44) ಮಾತ್ರ ಹೋರಾಟದ ಮೊತ್ತ ದಾಖಲಿಸಿದರು.

ಇದಕ್ಕೂ ಮೊದಲು ಪ್ರವಾಸಿ ತಂಡದ ನಾಯಕ ಶಿಖರ್ ಧವನ್ (46; 36 ಎ, 4 ಬೌಂ, 1 ಸಿ) ಮತ್ತು ಸಂಜು ಸ್ಯಾಮ್ಸನ್ (27; 20 ಎ, 2 ಬೌಂ, 1 ಸಿ.) ಅರ್ಧಶತಕದ ಜೊತೆಯಾಟದ ಮೂಲಕ ಇನಿಂಗ್ಸ್ ಕಟ್ಟಿದರು. ಸಂಜು ಔಟಾದ ನಂತರ ಶಿಖರ್ ಜೊತೆಗೆ ಸೂರ್ಯಕುಮಾರ್ ಸೊಗಸಾದ ಇನಿಂಗ್ಸ್ ಕಟ್ಟಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 5ಕ್ಕೆ 164 (ಶಿಖರ್ ಧವನ್ 46, ಸಂಜು ಸ್ಯಾಮ್ಸನ್ 27, ಸೂರ್ಯಕುಮಾರ್ ಯಾದವ್ 50; ದುಷ್ಮಂತ ಚಮೀರ 24ಕ್ಕೆ2, ಚಮಿಕ ಕರುಣರತ್ನೆ 34ಕ್ಕೆ1, ವನಿಂದು ಹಸರಂಗ 28ಕ್ಕೆ2). **ಶ್ರೀಲಂಕಾ:** 18.3 ಓವರ್‌ಗಳಲ್ಲಿ 126 (ಚರಿತ ಅಸ್ಲಂಕ 44, ಆವಿಷ್ಕ ಫರ್ನಾಂಡೊ 26; ಭುವನೇಶ್ವರ ಕುಮಾರ್ 22ಕ್ಕೆ 4, ದೀಪಕ್ ಚಾಹರ್ 24ಕ್ಕೆ 2). **ಫಲಿತಾಂಶ:** ಭಾರತ ತಂಡಕ್ಕೆ 38 ರನ್‌ಗಳ ಜಯ. ಸರಣಿಯಲ್ಲಿ 1–0 ಮುನ್ನಡೆ.

ಸೂರ್ಯಕುಮಾರ್ ಯಾದವ್ –ರಾಯಿಟರ್ಸ್ ಚಿತ್ರ

ಕೊಹ್ಲಿ ಪಡೆಗೆ ಕೋಲ್ಕತ್ತ ಎದುರಾಳಿ

ಐಪಿಎಲ್ ವೇಳಾಪಟ್ಟಿ ಪ್ರಕಟ: ಮೊದಲ ಪಂದ್ಯದಲ್ಲಿ ಮುಂಬೈ–ಚೆನ್ನೈ ಮುಖಾಮುಖಿ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಮುಂದುವರಿದ ಭಾಗವು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಸೆಪ್ಟೆಂಬರ್ 19ರಂದು ಆರಂಭವಾಗಲಿದ್ದು, ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಲಿವೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಭಾನುವಾರ ಈ ವಿಷಯ ತಿಳಿಸಿದೆ.

ಹೋದ ಏಪ್ರಿಲ್–ಮೇನಲ್ಲಿ ಭಾರತದಲ್ಲಿ ಆಯೋಜಿಸಲಾಗಿದ್ದ ಐಪಿಎಲ್‌ನಲ್ಲಿ ಕೆಲವು ಆಟಗಾರರಿಗೆ ಕೊರೊನಾ ಸೋಂಕು ತಗಲಿತ್ತು. ಹೀಗಾಗಿ ಟೂರ್ನಿಯನ್ನು ಅರ್ಧಕ್ಕೆ ಸ್ಥಗಿತಗೊಳಿಸಲಾಗಿತ್ತು.

‘ಕೋವಿಡ್ ಹಿನ್ನೆಲೆಯಲ್ಲಿ ಈ ವರ್ಷದ ಮೇನಲ್ಲಿ ಮುಂದೂಡಲ್ಪಟ್ಟ 14ನೇ ಆವೃತ್ತಿಯ ಐಪಿಎಲ್ ಟೂರ್ನಿಯು ಸೆಪ್ಟೆಂಬರ್ 19ರಂದು ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ನಡುವಣ ಪಂದ್ಯದೊಂದಿಗೆ ದುಬೈನಲ್ಲಿ ಪುನರಾರಂಭಗೊಳ್ಳಲಿದೆ’ ಎಂದು ಬಿಸಿಸಿಐ ಹೇಳಿದೆ.

27 ದಿನಗಳ ಅವಧಿಯಲ್ಲಿ 31 ಪಂದ್ಯಗಳು ನಡೆಯಲಿದ್ದು, ಅದರಲ್ಲಿ ಏಳು ಡಬಲ್ ಹೆಡರ್ (ದಿನಕ್ಕೆ ಎರಡು ಪಂದ್ಯಗಳು) ಇರಲಿವೆ. ಸೆಪ್ಟೆಂಬರ್ 20ರಂದು ವಿರಾಟ್ ಕೊಹ್ಲಿ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ತಂಡಗಳು ಅಬುಧಾಬಿಯಲ್ಲಿ ಸೆಣಸಲಿವೆ.

ಅಕ್ಟೋಬರ್ 10ರಂದು ಮೊದಲ ಕ್ವಾಲಿಫೈಯರ್, ಅಕ್ಟೋಬರ್ 11 ಮತ್ತು 13ರಂದು ಕ್ರಮವಾಗಿ ಎಲಿಮಿನೇಟರ್ ಮತ್ತು ಎರಡನೇ ಕ್ವಾಲಿಫೈಯರ್ ಪಂದ್ಯಗಳು ನಿಗದಿಯಾಗಿವೆ. ಅಕ್ಟೋಬರ್ 15ರಂದು ದುಬೈನಲ್ಲಿ ಫೈನಲ್ ನಡೆಯಲಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ಪಂದ್ಯಗಳು

ದಿನಾಂಕ	ಆರಂಭ	ಎದುರಾಳಿ	ಸ್ಥಳ
ಸೆ.20	ಸಂಜೆ 7.30	ಕೋಲ್ಕತ್ತ ನೈಟ್ ರೈಡರ್ಸ್	ಅಬುಧಾಬಿ
ಸೆ.24	ಸಂಜೆ 7.30	ಚೆನ್ನೈ ಸೂಪರ್ ಕಿಂಗ್ಸ್	ಶಾರ್ಜಾ
ಸೆ.26	ಸಂಜೆ 7.30	ಮುಂಬೈ ಇಂಡಿಯನ್ಸ್	ದುಬೈ
ಸೆ.29	ಸಂಜೆ 7.30	ರಾಜಸ್ಥಾನ ರಾಯಲ್ಸ್	ದುಬೈ
ಅ.3	ಮಧ್ಯಾಹ್ನ 3.30	ಪಂಜಾಬ್ ಕಿಂಗ್ಸ್	ಶಾರ್ಜಾ
ಅ.6	ಸಂಜೆ 7.30	ಸನ್‌ರೈಸರ್ಸ್ ಹೈದರಾಬಾದ್	ಅಬುಧಾಬಿ
ಅ.8	ಸಂಜೆ 7.30	ಡೆಲ್ಲಿ ಕ್ಯಾಪಿಟಲ್ಸ್	ದುಬೈ

ಬಿಎಫ್‌ಸಿಗೆ ಫಾರೂಕ್

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್(ಐಎಸ್‌ಎಲ್) ಫುಟ್‌ಬಾಲ್ ಫ್ರಾಂಚೈಸ್ ಬೆಂಗಳೂರು ಎಫ್‌ಸಿ, ಜಮ್ಮು ಮತ್ತು ಕಾಶ್ಮೀರದ ಆಟಗಾರ ಡ್ಯಾನಿಷ್ ಫಾರೂಕ್ ಅವರನ್ನು ತಂಡಕ್ಕೆ ಸೇರಿಕೊಂಡಿದೆ. ಎರಡು ವರ್ಷಗಳ ಕಾಲ ಅವರು ತಂಡದೊಂದಿಗೆ ಇರಲಿದ್ದಾರೆ.

ಫಾರೂಕ್, ಬಿಎಫ್‌ಸಿ ಜೊತೆ ಒಪ್ಪಂದಕ್ಕೆ ಸಹಿ ಹಾಕಿದ ಜಮ್ಮು ಕಾಶ್ಮೀರದ ಮೊದಲ ಆಟಗಾರ.

ಕೆಡೆಟ್ ವಿಶ್ವಕಪ್ ಕುಸ್ತಿ: ಪ್ರಿಯಾ ಚಿನ್ನಕ್ಕೆ ಪ್ರಚಾರದ ಮೆರಗು!

ಬುಡಾಪೆಸ್ಟ್: ಹಂಗರಿಯಲ್ಲಿ ಎರಡು ದಿನಗಳ ಹಿಂದೆ ನಡೆದಿದ್ದ ವಿಶ್ವ ಕೆಡೆಟ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದ್ದ ಭಾರತದ ಪ್ರಿಯಾ ಮಲಿಕ್ ಅವರ ಸುದ್ದಿಯು ಭಾನುವಾರ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸದ್ದು ಮಾಡಿತು.

ಪ್ರಿಯಾ ಮಲಿಕ್ ಅವರ ಸಾಧನೆಯು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಮೂಡಿಬಂದಿದ್ದು ಎಂಬ ತಪ್ಪುಗ್ರಹಿಕೆಯಿಂದ ಬಾಲಿವುಡ್ ನಟರೂ ಸೇರಿದಂತೆ ಹಲವರು ಟ್ವಿಟರ್, ಫೇಸ್‌ಬುಕ್‌ಗಳಲ್ಲಿ ಶುಭಾಶಯಗಳ ಮಹಾಪೂರವನ್ನೇ ಹರಿಸಿದ್ದಾರೆ. ಕೆಲವರಂತೂ ಶನಿವಾರ ಟೋಕಿಯೊ ಒಲಿಂಪಿಕ್ಸ್‌ನ ಮಹಿಳೆಯರ ವೇಟ್‌ಲಿಫ್ಟಿಂಗ್‌ನಲ್ಲಿ ಬೆಳ್ಳಿ ಜಯಿಸಿದ್ದ ಮೀರಾಬಾಯಿ ಅವರ ಚಿತ್ರದೊಂದಿಗೆ ಪ್ರಿಯಾ ಮಲಿಕ್ ಅವರ ಚಿತ್ರ ಜೋಡಿಸಿ ಪೋಸ್ಟ್ ಮಾಡಿದರು. ಭಾರತದ ನಾರಿಶಕ್ತಿಗೆ ಜಯವಾಗಲಿ ಎಂಬ ಸಂದೇಶಗಳೂ ಹರಿದಾಡಿದವು.

ಭಾನುವಾರ ಬೆಳಿಗ್ಗೆ ಭಾರತ ಸರ್ಕಾರವು ತನ್ನ ಟ್ವಿಟರ್ ಹ್ಯಾಂಡಲ್‌ನಲ್ಲಿ, ‘ಹಂಗೆರಿಯಲ್ಲಿ ನಡೆದ ವಿಶ್ವ ಕೆಡೆಟ್ ಕುಸ್ತಿಯಲ್ಲಿ ಚಿನ್ನ ಗೆದ್ದಿರುವ ಪ್ರಿಯಾ ಮಲಿಕ್ ಅವರು ಭಾರತಕ್ಕೆ ಹೆಮ್ಮೆ ತಂದಿದ್ದಾರೆ. ಅಭಿನಂದನೆಗಳು‘ ಎಂದು ಪೋಸ್ಟ್ ಮಾಡಿತ್ತು. ಅದೇ ಚಿತ್ರವನ್ನು ಬಳಸಿಕೊಂಡು ಟ್ವಿಟರಿಗರು ಶುಭಾಶಯ ಕೋರುವಾಗ, ಒಲಿಂಪಿಕ್ಸ್ ಸಾಧನೆಯೆಂದು ಬಿಂಬಿಸಿದ್ದರು.

‘ಇಷ್ಟು ಪ್ರಚಾರ ಸಿಕ್ಕಿರುವುದು ನನಗೇ ಅಚ್ಚರಿ ಮೂಡಿಸಿದೆ. ನಾನು ಈ ಸಲ ಒಲಿಂಪಿಕ್ಸ್‌ನಲ್ಲಿ ಆಡಿಲ್ಲ. ಜನರ ಶುಭಹಾರೈಕೆಯಿಂದ 2024ರ ಕೂಟದಲ್ಲಿ ಪದಕ ಗೆಲ್ಲುವಂತಾಗಲಿ’ ಎಂದು ಪ್ರಿಯಾ ಮಲಿಕ್ ಇಂಗ್ಲಿಷ್ ವೆಬ್‌ಸೈಟ್‌ಗೆ ಪ್ರತಿಕ್ರಿಯಿಸಿದ್ದಾರೆ.

ಪ್ರಿಯಾ ಮಲಿಕ್

www.tvsxl.com tvsxl
TVS
TVS XL100
ಒಂದಕ್ಕಿಂತ ಒಂದು ಅದ್ಭುತ ವೈಶಿಷ್ಟ್ಯಗಳು!
15% ಅಧಿಕ ಮೈಲೇಜ್+
ET-Fi ECO THRUST
10+ ವೈಶಿಷ್ಟ್ಯಗಳು
ಪ್ರತಿದಿನ ₹49 ರಲ್ಲಿ ಸುಲಭವಾಗಿ ಖರೀದಿಸಿ*
ಕಡಿಮೆ ಬಡ್ಡಿ ದರದಲ್ಲಿ ₹2 500 ವರೆಗೆ ಉಳಿತಾಯ ಮಾಡಿಕೊಳ್ಳಿ##

TVS XL100 ಹೆವಿ ಡ್ಯೂಟಿ ಐ-ಟಚ್ ಸ್ಟಾರ್ಟ್ ವಿನ್ ಎಡಿಷನ್
TVS XL100 ಕಂಫರ್ಟ್ ಐ-ಟಚ್ ಸ್ಟಾರ್ಟ್
ಈಜಿ ಆನ್-ಆಫ್ ಸ್ವಿಚ್
ಮೊಬೈಲ್ ಚಾರ್ಜರ್^
ಆಯ್ಕೆಮಾಡಲು 5 ಮಾಡೆಲ್‌ಗಳು ಲಭ್ಯ
1.5 CRORE HAPPY CUSTOMERS
TVS XL100 ಅನೇಕ ಆಶ್ಚರ್ಯಗಳು
₹41 015^^ ರಿಂದ ಪ್ರಾರಂಭ | ₹7 999 ಕಡಿಮೆ ಡೌನ್‌ಪೇಮೆಂಟ್# | EMIಗಾಗಿ ನಗದು ಹಣವನ್ನೂ ತುಂಬಿಸಬಹುದು# | ಮಿಸ್ಡ್ ಕಾಲ್: 1800 3157 100
+ Based on TVSM internal test conditions. As compared to BS-IV models. T&C apply. ^ Mobile charger is available in select variants. ^^ Ex-showroom price of XL100 Comfort Kick Start variant. # Finance at the sole discretion of the financier. Schemes cannot be clubbed. T&C apply.
*This is not a daily collection / repayment scheme and the EMI for the month will be ₹ 1 470/-. ##Applicable under Low ROI scheme offered by IDFC First Bank. T&C Apply.
TVS 3 YEAR WARRANTY | TVS CREDIT | L&T Financial Services | IDFC FIRST Bank ALWAYS YOU FIRST | SHRIRAM City
FOR ALL INSTITUTIONAL/BULK REQUIREMENTS PLEASE MAIL corporate.customersupport@tvsmotor.com
dentsuindia/pjv blr/04/21

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ಕರ್ನಾಟಕ ಸರ್ಕಾರ
ಜನಸ್ನೇಹಿ ಆಡಳಿತದ 2 ವರ್ಷ
ಸವಾಲುಗಳ ಮೀರಿದ ✦ ಸಾಧನಾ ಪರ್ವ
ಕರ್ನಾಟಕ ಉದ್ಯೋಗ ಮಿತ್ರ

ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಆಕ್ಸಿಜನ್ ಉತ್ಪಾದನಾ ಘಟಕ ಸ್ಥಾಪನೆಗೆ ವಿಶೇಷ ಪ್ರೋತ್ಸಾಹ
ಕರ್ನಾಟಕ ಸರ್ಕಾರ ಹೊಸ ಆಕ್ಸಿಜನ್ ನೀತಿ ಪರಿಚಯಿಸಿದೆ
ಆಮ್ಲಜನಕ ಸ್ವಾವಲಂಬನೆಗೆ ಒತ್ತು, ಉತ್ಪಾದನೆ, ದಾಸ್ತಾನು ಸಾಮರ್ಥ್ಯ ಹೆಚ್ಚಳಕ್ಕೆ ವಿಶೇಷ ರಿಯಾಯಿತಿ.

ಕ್ಯಾಪಿಟಲ್ ಸಬ್ಸಿಡಿ
25% 25 ಮೆಟ್ರಿಕ್ ಟನ್ ಆಮ್ಲಜನಕ ಉತ್ಪಾದನಾ ಘಟಕ ಸ್ಥಾಪನೆಗಾಗಿ ಕನಿಷ್ಠ 10 ಕೋಟಿ ರೂ. ಹೂಡಿಕೆ ಮಾಡುವವರಿಗೆ 5 ಕಂತುಗಳಲ್ಲಿ ಶೇ.25ರಷ್ಟು ಸಹಾಯಧನ
ವಿದ್ಯುತ್ ಬಿಲ್‌ನಲ್ಲಿ ವಿನಾಯಿತಿ
100% ಆಕ್ಸಿಜನ್ ಘಟಕ ಸ್ಥಾಪಿಸಿದ 3 ವರ್ಷಗಳವರೆಗೆ ವಿದ್ಯುತ್ ಶುಲ್ಕದ ಮೇಲಿನ ಸುಂಕಕ್ಕೆ ಶೇ.100ರಷ್ಟು ವಿನಾಯಿತಿ. ಸರ್ಕಾರಕ್ಕೆ ಸರಬರಾಜು ಆಗುವ ಪ್ರತಿ ಮೆಟ್ರಿಕ್ ಟನ್‌ಗೆ ರೂ.1000 ಹೆಚ್ಚುವರಿ ಪವರ್ ಟಾರಿಫ್ ಸಬ್ಸಿಡಿ.
ಸ್ಟ್ಯಾಂಪ್ ಡ್ಯೂಟಿ
100% ಸಾಲ ಮತ್ತು ಭೂ ದಾಖಲೆಯ ನೋಂದಣಿ ಮತ್ತು ಮುದ್ರಾಂಕದ ಸ್ಟ್ಯಾಂಪ್ ಡ್ಯೂಟಿಯಲ್ಲಿ ಶೇ.100 ವಿನಾಯಿತಿ
ನೋಂದಣಿ ಶುಲ್ಕ ವಿನಾಯಿತಿ
1-1K₹ ನೋಂದಣಿ ಶುಲ್ಕಗಳು, ಗುತ್ತಿಗೆ ಪತ್ರಗಳ ರಿಯಾಯಿತಿ- ಪ್ರತಿ 1000 ರೂಪಾಯಿಗೆ 1 ರೂಪಾಯಿ ದರ ನಿಗದಿ
ಭೂ ಪರಿವರ್ತನೆ ಶುಲ್ಕ
100% ಕೃಷಿ ಭೂಮಿಯನ್ನು ಕೈಗಾರಿಕಾ ಬಳಕೆಯ ಭೂಮಿಯಾಗಿ ಪರಿವರ್ತಿಸುವ ಶುಲ್ಕದಲ್ಲಿ ಶೇ.100 ಮರುಪಾವತಿ

ಶ್ರೀ. ಜಗದೀಶ ಶೆಟ್ಟರ್
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು, ಕರ್ನಾಟಕ ಸರ್ಕಾರ

ದಿನವೊಂದಕ್ಕೆ ಆಕ್ಸಿಜನ್ ಉತ್ಪಾದನೆ ಸಾಮರ್ಥ್ಯ 1000 ಮೆಟ್ರಿಕ್ ಟನ್‌ಗೆ ಹೆಚ್ಚಿಸಲು ನೆರವಾಗಲಿದೆ.

“ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು”– ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
www.investkarnataka.co.in
www.ebizkaranataka.gov.in
md@kumbangalore.com
ಡಾ. ರಾಜಕುಮಾರ್ ಖತ್ರಿ, ಭಾ.ಆ.ಸೇ
ಅಪರ ಮುಖ್ಯ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
ಕರ್ನಾಟಕ ಸರ್ಕಾರ
ಶ್ರೀಮತಿ ಗುಂಜನ್ ಕೃಷ್ಣ, ಭಾ.ಆ.ಸೇ
ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಕರ್ನಾಟಕ ಸರ್ಕಾರ